ಹಸಲರ ಸಾಮಾಜಿಕ ಬದಲಾವಣೆ

(ಸಾಗರ ತಾಲ್ಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯ. ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ (ಸಮಾಜಶಾಸ್ತ್ರ) ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ರಂಗನಾಥ

ಮಾರ್ಗದರ್ಶಕರು

ಡಾ. ಹಿ. ಚಿ. ಬೋರಲಿಂಗಯ್ಯ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಹಸಲರ ಸಾಮಾಜಿಕ ಬದಲಾವಣೆ

(ಸಾಗರ ತಾಲ್ಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ (ಸಮಾಜಶಾಸ್ತ್ರ) ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ರಂಗನಾಥ

ಮಾರ್ಗದರ್ಶಕರು
ಡಾ.ಹಿ.ಚಿ.ಬೋರಲಿಂಗಯ್ಯ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯

ಪ್ರಮಾಣ ಪತ್ರ

'ಹಸಲರ ಸಾಮಾಜಿಕ ಬದಲಾವಣೆ' (ಸಾಗರ ತಾಲ್ಲೂಕನ್ನು ಅನುಲಕ್ಷಿಸಿ) ಈ ನಿಬಂಧವನ್ನು ಡಾ.ಹಿ.ಚಿ.ಬೋರಲಿಂಗಯ್ಯ, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 15-10-09

(ರಂಗನಾಥ)

ಸಂಶೋಧಕರು

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

'ಹಸಲರ ಸಾಮಾಜಿಕ ಬದಲಾವಣೆ' (ಸಾಗರ ತಾಲ್ಲೂಕನ್ನು ಅನುಲಕ್ಷಿಸಿ) ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಬುಡಕಟ್ಟು ಅಧ್ಯಯನ ವಿಭಾಗದ ಎಂ.ಫಿಲ್. ಪದವಿಗಾಗಿ **ರಂಗನಾಥ,** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 15-10-09

ಡಾ.ಹಿ.ಚಿ.ಬೋರಲಿಂಗಯ್ಯ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ -೧ : ಪ್ರಸ್ತಾವನೆ ೧ - ೮

೧.೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೨. ಅಧ್ಯಯನದ ವಿಧಾನಗಳು

೧.೩. ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು

ಅಧ್ಯಾಯ -೨ : ಸಾಗರ ತಾಲ್ಲೂಕಿನ ಭೌಗೋಳಿಕ ಪರಿಸರ ೯ - ೨೬

೨.೧. ಐತಿಹಾಸಿಕ ಹಿನ್ನೆಲೆ

೨.೨. ಭೌಗೋಳಿಕ ಹಿನ್ನೆಲೆ

೨.೩. ಹಸಲರ ಪರಿಚಯ

ಅಧ್ಯಾಯ -೩ : ಹಸಲರು ಮತ್ತು ಬದಲಾವಣೆ ೨೭ - ೭೫

೩.೧. ಸಾಮಾಜಿಕ ಬದಲಾವಣೆಯ ಪರಿಕಲ್ಪನೆ

೩.೨. ಹಸಲರ ಸಾಮಾಜಿಕ ಬದಲಾವಣೆ

೩.೩. ಹಸಲರ ಆರ್ಥಿಕತೆಯ ಬದಲಾವಣೆ

೩.೪. ಹಸಲರ ರಾಜಕೀಯ ಬದಲಾವಣೆ

೩.೫. ಹಸಲರ ಧಾರ್ಮಿಕತೆಯ ಬದಲಾವಣೆ

ಅಧ್ಯಾಯ -೪ : ಸಾಮಾಜಿಕ ಬದಲಾವಣೆಗೆ ಕಾರಣವಾದ ಅಂಶಗಳು ೭೬ - ೯೯

೪.೧. ಶಿಕ್ಷಣ

೪.೨. ಸಾಮಾಜಿಕ ಚಳುವಳಿಗಳು

೪.೩. ಆಧುನೀಕರಣ

೪.೪. ಮಾಹಿತಿ ತಂತ್ರಜ್ಞಾನ

೪.೫. ಸ್ವಯಂಸೇವಾ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳು

ಸಮಾರೋಪ ೧೦೦ - ೧೦೬

ಅನುಬಂಧ ೧೦೭ - ೧೨೦

೧. ಕೋಷ್ಟಕಗಳು

೨. ನಕ್ಷೆಗಳು

೩. ಪರಾಮರ್ಶನ ಗ್ರಂಥಗಳು

೪. ತಿಳುವಳಿಕೆದಾರರ ವಿವರ

೫. ಛಾಯಾಚಿತ್ರಗಳು

• • •

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೨. ಅಧ್ಯಯನದ ವಿಧಾನಗಳು

೧.೩. ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು

ಪ್ರಸ್ತಾವನೆ

ಸಾಮಾಜಿಕ ಚಿಂತನೆಯಲ್ಲಿ ಸಾಮಾಜಿಕ ಬದಲಾವಣೆಗೆ ಅಥವಾ ಪರಿವರ್ತನೆಗೆ ತುಂಬಾ ಮಹತ್ವವಿದೆ. ಬದಲಾವಣೆ ಎನ್ನುವುದು ಮಾನವ ಮತ್ತು ಸಮಾಜಗಳ ನಡುವೆ ಪರಿವರ್ತನೆ ಚಲನಶೀಲ ಸಾಧನವಾಗಿದೆ.[೧] ಪ್ರತಿ ಸಮಾಜವು ಸರಳತೆಯಿಂದ ಸಂಕೀರ್ಣತೆಯೆಡೆಗೆ ಮುನ್ನುಗ್ಗುತ್ತಿರುತ್ತದೆ. ಅದು ಜೈವಿಕ ಸಂಸ್ಥೆಯಾದ ಕಾರಣ ಬದಲಾವಣೆ ಕಾಣಿಸಿಕೊಳ್ಳುವುದು ಸಹಜ. ಹಳೆಯ ಪದ್ಧತಿಗಳನ್ನು ಕಳಚಿಕೊಂಡು ಅಥವಾ ಅವುಗಳನ್ನು ಮುಂದುವರೆಸಿಕೊಂಡು ಹಾಗೊ ಪದ್ದತಿಗಳನ್ನು ರೂಪಿಸಿಕೊಂಡು ಸಮಾಜ ಬೆಳೆಯುತ್ತದೆ. ವ್ಯಕ್ತಿಗಳ ಸಂಬಂಧ ಮತ್ತು ಒಡನಾಟದ ಪ್ರಭಾವದಿಂದಾಗಿ ಬದಲಾವಣೆಗಳು ಉಗಮವಾಗುತ್ತವೆ. ಕಾಲಗತಿಯಲ್ಲಿ ಜನರ ವರ್ತನೆಯಲ್ಲಿ ಆಗುವ ವ್ಯತ್ಯಾಸಗಳು ಹಾಗೂ ಹಳೆಯದಕ್ಕೆ ಪ್ರತಿಯಾಗಿ ಹೊಸ ಜೀವನ ವ್ಯವಸ್ಥೆ ರೂಪಗೊಳ್ಳುತ್ತದೆ. ಸಾಮಾನ್ಯವಾಗಿ ಬದಲಾವಣೆ ಭೌತಿಕ ಜೈವಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದಾಗುತ್ತದೆ.[೨] ಭೂಕಂಪ ಪ್ರವಾಹ, ಅತಿವೃಷ್ಟಿ, ಅನಾವೃಷ್ಟಿಗಳು ಭೌತಿಕ ಬದಲಾವಣೆಯನ್ನು ತಂದರೂ ಜನಸಂಖ್ಯೆ ಹೆಚ್ಚಳ ಯುದ್ಧಗಳು, ಮುಷ್ಕರ, ಆರ್ಥಿಕತೆ, ರಾಜಕೀಯ ಶೈಕ್ಷಣಿಕ ಮೊದಲಾದವು ಮಾನವನ ಕ್ರಿಯೆಯಿಂದ ಬದಲಾವಣೆಗೆ ಒಳಪಡುತ್ತವೆ.[೩] ಇವು ಜೈವಿಕ ಬದಲಾವಣೆಗೆ ನಿದರ್ಶನಗಳು, ಯಂತ್ರಗಳು, ಕೈಗಾರಿಕೆ, ಕಾರ್ಖಾನೆ ವಸ್ತುಗಳ ತ್ವರಿತ ಉತ್ಪನ್ನ ಮೊದಲಾದವು ವೈಜ್ಞಾನಿಕ ಬದಲಾವಣೆಗಳಾಗಿವೆ. ನಂತರ ಹೊರಗಿನ ಸಂಸ್ಕೃತಿಗಳ ಸಂಪರ್ಕದಿಂದ ಇಲ್ಲವೇ ಸಮಾಜ ಸುಧಾರಣೆಗಳಿಂದ ಜನರ ಆದರ್ಶ, ಧಾರ್ಮಿಕ ಭಾವನೆಗಳು ನೈತಿಕ ಕಲ್ಪನೆಗಳು ಮೊದಲಾದವುಗಳಲ್ಲಿ ಉಂಟಾಗುವ ವ್ಯಾತ್ಯಾಸಗಳು, ಸಾಂಸ್ಕೃತಿಕ ಬದಲಾವಣೆಗಳು, ಹೀಗೆ ಹಲವಾರು ಕಾರಣಗಳಿಂದ ಸಮಾಜದಲ್ಲಿ ಬದಲಾವಣೆಗಳು ಆಗುತ್ತಿರುತ್ತವೆ. ಇಂಥಹ ಬದಲಾವಣೆಗಳನ್ನೆ ಸಾಮಾಜಿಕ ಪರಿವರ್ತನೆ ಎಂದು ಕರೆಯಲಾಗುತ್ತದೆ.[೪]

ಸಾಮಾಜಿಕ ಬದಲಾವಣೆ ಎಂಬ ಪರಿಕಲ್ಪನೆ ಸಾಮಾಜಿಕ ತತ್ವಜ್ಞಾನಿಗಳಲ್ಲಿ ಮತ್ತು ಚಿಂತಕರಲ್ಲಿ ಗೊಂದಲವನ್ನು ಸೃಷ್ಟಿಸಿದೆ. ಇವರ ಪ್ರಕಾರ ಸಾಮಾಜಿಕ ಪರಿವರ್ತನೆಗೆ ಕಾರಣಗಳು, ವೇಗ, ಗುರಿ, ಅಂತ್ಯ

[illegible]

[illegible]

ಪ್ರಾರಂಭದ ಬಗೆಗಿನ ಪ್ರಶ್ನೆಗಳು ಕಾಡತೊಡಗಿವೆ. ಸಾಮಾಜಿಕ ಪರಿವರ್ತನೆ ಪ್ರಕ್ರಿಯೆ ಎಷ್ಟು ಸರಳವಾಗಿರುತ್ತದೆಯೊ ಅಷ್ಟೇ ಸಂಕೀರ್ಣತೆಯಿಂದ ಕೂಡಿರುತ್ತದೆ.[೫] ಈ ಪ್ರಕ್ರಿಯೆಯ ಅಂತರಾಳವನ್ನು ಆದಿ ಅಂತ್ಯವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಸುಲಭವಾದುದಲ್ಲ. ಅದು ವಿವಿಧ ರೂಪಗಳಲ್ಲಿ ವಿವಿಧ ಕಾರಣಗಳಿಂದಾಗಿ ನಾನಾ ವಿಧಾನಗಳಲ್ಲಿ ಸಂಭವಿಸುವಂತದ್ದು. ಅದು ಎಷ್ಟು ತೀವ್ರವಾಗಿರುತ್ತದೆ ಅಷ್ಟೇ ನಿಧಾನವು ಆಗಿರಬಹುದು. ಶಾಶ್ವತವಾಗಿರುವಂತೆ ಅಲ್ಪಕಾಲಿಕವಾಗಿರಬಹುದು. ಕೆಲವು ಸಂದರ್ಭದಲ್ಲಿ ನಿಯೋಜಿತವಾಗಿರುವಂತೆ ಅನಿಯೋಜಿತವು ಆಗಿರಬಹುದು. ಹೀಗೆ ಸಾಮಾಜಿಕ ಬದಲಾವಣೆಯು ವಿವಿಧ ಮಾದರಿಯಲ್ಲಿ ಉಂಟಾಗುವ ಸಾಧ್ಯತೆ ಪ್ರತಿಯೊಂದು ಸಮಾಜ ಮತ್ತು ಸಮುದಾಯಗಳಲ್ಲಿದೆ.

ಸಾಮಾಜಿಕ ಬದಲಾವಣೆಯನ್ನು ಒಂದು ನಿರ್ಧಿಷ್ಟವಾದ ಅರ್ಥಕ್ಕೆ ತರುವುದು ಇಲ್ಲವೇ ವ್ಯಾಖ್ಯಾನಿಸುವದು ತುಂಬಾ ಸಂಕೀರ್ಣವಾದ ವಿಷಯವಾಗಿದೆ. ಬದಲಾವಣೆಯನ್ನು ಕೇವಲ ಒಂದೇ ಕೋನದಿಂದ ಅಳೆಯುವುದು ಅಸಾಧ್ಯ. ಸಾಮಾಜಿಕ ಬದಲಾವಣೆ ಎಂಬುವದು ಆರ್ಥಿಕ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಪ್ರಕ್ರಿಯೆ ಇದ್ದಂತೆ ಬದಲಾವಣೆ ಏಕರೂಪಿಯಲ್ಲಿ ಅದು ಬಹುಮುಖ ಹೊಂದಿರುವ ಪ್ರಕ್ರಿಯೆಯಾಗಿದೆ. ಮಾನವ ಬದುಕಿನ ಪ್ರತಿ ಹಂತದ ಬದಲಾವಣೆಯನ್ನು ಈ ಪ್ರಕ್ರಿಯೆ ಒಳಗೊಳ್ಳುತ್ತದೆ. ಬದುಕಿನ ಸಾಮಾಜಿಕ ಅಂಶಗಳೊಂದಿಗೆ ಆರ್ಥಿಕ, ರಾಜಕೀಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಪರಿಗಣಿಸಿದಾಗ ಮಾತ್ರ ಸಾಮಾಜಿಕ ಬದಲಾವಣೆಯ ಒಳಗಿನ ಸೂಕ್ಷ್ಮತೆಯನ್ನು ಅರಿಯಲು ಸಾಧ್ಯವಾಗುತ್ತದೆ.[೬]

ಸಮಾಜವು ನಿತ್ಯವು ಪರಿವರ್ತನಾಶೀಲವಾದದ್ದು, ಎಲ್ಲಾ ಸಮಾಜಗಳು ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗಳನ್ನು ಆಹ್ವಾನಿಸುತ್ತಲೆ ಇರುತ್ತವೆ. ಆದಿವಾಸಿ, ಅಲೆಮಾರಿ, ಗ್ರಾಮೀಣ ಹಾಗೂ ಆಧುನಿಕತೆ ಹೀಗೆ ಪ್ರತಿಯೊಂದು ಸಮಾಜದಲ್ಲಿಯೂ ಬದಲಾವಣೆ ಉಂಟಾಗುತ್ತಿರುತ್ತಿದೆ. ಆದರೆ ಬದಲಾವಣೆಯ ಗತಿಯು ಸಮಾಜದಿಂದ ಸಮಾಜಕ್ಕೆ ಸಮುದಾಯದಿಂದ ಸಮುದಾಯಕ್ಕೆ ವ್ಯತ್ಯಾಸಗೊಳ್ಳುತ್ತದೆ. ಹಾಗೆಯೇ ಒಂದೇ ಸಮುದಾಯದ ಜನರು ವಿವಿಧ ಪ್ರದೇಶಗಳಲ್ಲಿ ವಾಸಿಸುವಾಗ ಬದಲಾವಣೆಯ ಗತಿ ವ್ಯತ್ಯಾಸಗೊಳ್ಳುತ್ತದೆ. ಅಂತೆಯೇ ಒಂದೇ ಸಮಾಜದ ವಿವಿಧ ಭಾಗಗಳಲ್ಲಿ ವ್ಯಾತ್ಯಾಸಗೊಳ್ಳುತ್ತಾ ಆದಿವಾಸಿ, ಅಲೆಮಾರಿ, ಸಮಾಜಗಳಲ್ಲಿ ಬದಲಾವಣೆಯ ವೇಗ ನಿಧಾನಗತಿಯದ್ದಾಗಿದ್ದರೆ, ಗ್ರಾಮೀಣದಲ್ಲಿ ಸಾಧಾರಣ ಗತಿಯದ್ದಾಗಿದ್ದು ನಗರ ಸಮಾಜದಲ್ಲಿ ತೀವ್ರಗತಿಯದ್ದಾಗಿರಬಹುದು. ಹೀಗೆ ಸಾಮಾಜಿಕ ಸಾಧಾರಣ ಗತಿಯದ್ದಾಗಿದ್ದು ನಗರ ಸಮಾಜದಲ್ಲಿ ತೀವ್ರಗತಿಯದ್ದಾಗಿರಬಹುದು. ಹೀಗೆ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆ ವಿವಿಧ ಮಾದರಿಗಳಲ್ಲಿ ಕಂಡುಬರುವುದು ಸ್ವಾಭಾವಿಕವಾಗಿದ್ದರು ಸಾಮಾಜಿಕ ಚಿಂತಕರಿಗೆ ಇಂದಿಗೂ ಸಹ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದ ಸಾಮಾಜಿಕ ಪ್ರಕ್ರಿಯೆಯಾಗಿದೆ.[೭] ಈ ಹಿನ್ನೆಲೆಯಲ್ಲಿ ಹಸಲರ ಸಮುದಾಯದಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆಯನ್ನು ಅಧ್ಯಯನಲ್ಲಿ ಚರ್ಚಿಸಲಾಗಿದೆ.

ಹಸಲ ಬುಡಕಟ್ಟು ಸಮುದಾಯದಲ್ಲಿ ಉಂಟಾಗಿರುವ ಸಾಮಾಜಿಕ ಬದಲಾವಣೆಯನ್ನು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದ್ದು, ಆರ್ಥಿಕ ಬದಲಾವಣೆಯಿಂದ ಇವರ ಸಾಂಪ್ರದಾಯಿಕ

[illegible]

[illegible]

[illegible]

ಸಂಸ್ಥೆಗಳು, ಸಾಂಸ್ಕೃತಿಕ ಆಚರಣೆ, ಮೌಲ್ಯಗಳು, ನಂಬಿಕೆ, ವೃತಿ ಇನ್ನು ಮುಂತಾದ ಸಾಮಾಜಿಕ ಜೀವನ ವಿಧಾನದ ವ್ಯವಸ್ಥೆಯಲ್ಲಿ ಉಂಟಾಗಿರುವ ಬದಲಾವಣೆಯನ್ನು ಅಧ್ಯಯನದಲ್ಲಿ ವಿವರಿಸಲಾಗಿದೆ. ಸಮಾಜವನ್ನು ಆರ್ಥಿಕತೆಯ ಚೌಕಟ್ಟಿನಲ್ಲಿ ಚರ್ಚಿಸಿದರೆ ಮತ್ತೊಂದು ರೀತಿಯಲ್ಲಿ ಹಸಲರ ಜೀವನಶೈಲಿಯನ್ನು ಅವರ ಸಾಮಾಜಿಕ ಸಾಂಸ್ಕೃತಿಕ ಸಂಬಂಧಗಳನ್ನೊಳಗೊಂಡು ಚರ್ಚಿಸಲು ಪ್ರಯತ್ನಿಸಲಾಗುತ್ತದೆ. ಇಲ್ಲಿ ಹಸಲರ ಸಾಮಜಿಕ ಸಾಂಸ್ಕೃತಿಕ ರಚನಾಕ್ರಮವನ್ನು ಸಮಾಜ ಶಾಸ್ತ್ರೀಯ ಮತ್ತು ಅಭಿವೃದ್ಧಿಯ ದೃಷ್ಟಿಕೋನದಿಂದ ಅಧ್ಯಯನ ಮಾಡುವ ಅವಶ್ಯಕತೆ ಇರುವುದರಿಂದ ಹಸಲರನ್ನು ಸಮಾಜಶಾಸ್ತ್ರೀಯ ಶಿಸ್ತಿಗೆ ಒಳಪಡಿಸಿ ಅಧ್ಯಯನ ಮಾಡಲಾಗುತ್ತದೆ.

ಈ ರೀತಿಯಾಗಿ ಅಧ್ಯಯನಕ್ಕೆ ಮುಖ್ಯವಾದ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ಸಂಬಂಧಿ ಬದಲಾವಣೆಯನ್ನು ಗುರುತಿಸುವುದು ಮತ್ತು ಸ್ಥಿರ ರೂಪದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಮಾನರೂಪದ ಸಮುದಾಯದಲ್ಲಿ ಸಾಮಾಜಿಕ ಬದಲಾವಣೆಯನ್ನು ಗುರುತಿಸಲು ಉಪಯುಕ್ತವಾಗುವದು. ಸರ್ಕಾರವು ಹಸಲರನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಮಾಡುವ ಪ್ರಯತ್ನ ಯೋಜನೆಗಳ ಫಲಕಾರಿಯಾಗಿವೆಯೇ? ಯಾವ ರೀತಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು.? ಅಭಿವೃದ್ಧಿಗಳೂ ಹಸಲರ ಬದುಕಿಗೆ ವರವಾಗುವಂತಹ ಯೋಜನೆಗಳನ್ನು ರೂಪಿಸಲು ಸಹಕಾರಿಯಾಗುವಂತೆ ಈ ಅಧ್ಯಯನ ಮಾಡಲಾಗುತ್ತದೆ.

ಅಧ್ಯಯನದ ಉದ್ದೇಶಗಳು

* ಹಸಲರ ಸಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳ ನಡುವಿನ ಸಂಬಂಧಗಳನ್ನು ಮತ್ತು ಹಸಲರ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಲು ಸರಕಾರದ ಕಾರ್ಯಕ್ರಮಗಳನ್ನು ಪರಿಶೀಲಿಸಲಾಗಿದೆ.
* ಆರ್ಥಿಕ ಸಂಬಂಧದಿಂದ ಸಾಮಾಜಿಕ ಸಂಘಟನೆ, ಸಾಮಾಜಿಕ ನಿಯಂತ್ರಣ ಸಾಂಪ್ರದಾಯಿಕ ಸಂಸ್ಥೆಗಳ ರೂಪಾಂತರ ಮತ್ತು ಧರ್ಮ ಇವುಗಳಲ್ಲಿ ಉಂಟಾಗಿರುವ ಬದಲಾವಣೆಯನ್ನು ಬದಲಾಗುತ್ತಿರುವ ಧಾರ್ಮಿಕ ನಂಬಿಕೆಗಳು, ಆಚರಣೆಗಳು ಮತ್ತು ಅವುಗಳ ಮೇಲೆ ಉಂಟಾಗಿರುವ ಆರ್ಥಿಕ ಪರಿಣಾಮಗಳನ್ನು ಅಧ್ಯಯನ ಮಾಡಲಾಗಿದೆ.
* ಆರ್ಥಿಕ ಬದಲಾವಣೆಯಿಂದ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳಲು ಎದುರಾಗುವ ಸಮಸ್ಯೆಗಳನ್ನು ಗುರುತಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಕರ್ನಾಟಕ ಬುಡಕಟ್ಟುಗಳಲ್ಲಿ ಹಸಲರ ಸಮುದಾಯವು ಒಂದು ಆದಿವಾಸಿ ಸಮುದಾಯವಾಗಿದ್ದು, ಇದು ಹೆಚ್ಚಾಗಿ ಮಲೆನಾಡು ಪಶ್ಚಿಮಘಟ್ಟಗಳಲ್ಲಿ ವಾಸವಾಗಿರುವದರಿಂದ ಪ್ರಸ್ತುತವಾಗಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹಿರೇಮನೆ, ಕುಡಗುಂಜಿ, ಹೊಸಗದ್ದೆ ಈ ಗ್ರಾಮಗಳ ಹಸಲರನ್ನು ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಈ ನಿಬಂಧ ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲನೇ ಅಧ್ಯಾಯವು ಪ್ರಬಂಧದ ಒಟ್ಟಾರೆ ತಾತ್ವಿಕ ನಿಲುವನ್ನು ಸ್ಥೂಲವಾಗಿ ಪರಿಚಯಿಸುತ್ತದೆ. ಈ ಅಧ್ಯಾಯವು ಪ್ರಸ್ತಾವನೆ ಸ್ವರೂಪ ವ್ಯಾಪ್ತಿ ಅಧ್ಯಯನದ ವಿಧಾನಗಳು ನಂತರ ಹಸಲರ ಕುರಿತು ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳನ್ನು ಪರಿಶೀಲನೆ ಆಧಾರದ ಮೇಲೆ ಹಸಲರ ಪರಿಚಯ ನೀಡುವಂತದಾಗಿದೆ. ಪ್ರಬಂಧದ ಎರಡನೇ ಅಧ್ಯಾಯವು ಪ್ರಬಂಧದ ಶೀರ್ಷಿಕೆಯನ್ವಯ ಸಾಗರ ತಾಲುಕಿನ ಭೌಗೋಳಿಕ ಚಾರಿತ್ರಿಕ ವಿವರಗಳನ್ನು ನೀಡುವ ಜೊತೆಗೆ ಆ ತಾಲೂಕಿನಲ್ಲಿ ವಾಸವಾಗಿರುವ ಹಸಲರ ಬುಡಕಟ್ಟಿನ ಮೂಲ, ಮೂಲದ ಬಗೆಗಿರುವ ಜನಪದ ಕಥೆಗಳು ಕರ್ನಾಟಕದಲ್ಲಿ ಹಸಲರು ನೆಲೆಗೊಂಡಿರುವ ವಿವಿಧ ಸ್ಥಳ ಪರಿಚಯ, ಮುಖ್ಯವಾಗಿ ಅಧ್ಯಯನ ವ್ಯಾಪ್ತಿಗೆ ಸೇರ್ಪಡಿಸಿಕೊಂಡ ಕುಡುಗುಂಜಿ ಹಿರೇಮನೆ, ಹೊಸಗದ್ದೆ ಹಸಲರ ಸಾಂಸ್ಕೃತಿಕ ಪರಿಚಯವನ್ನು ನೀಡುತ್ತದೆ.

ಮೂರನೇ ಅಧ್ಯಾಯವು ಒಟ್ಟಾರೆ ನಿಬಂಧದ ಮಹತ್ವದ ಭಾಗ ಇಲ್ಲಿ ಹಸಲರಲ್ಲಿನ ಸಾಮಾಜಿಕ ಬದಲಾವಣೆ ಕುರಿತು ಚರ್ಚಿಸಲಾಗಿದೆ. ಈ ಅಧ್ಯಾಯವು ಸಾಗರ ತಾಲೂಕಿನ ಹಸಲರ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಬದಲಾವಣೆ ಕುರಿತು ಕೂಲಂಕಷವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

ನಾಲ್ಕನೇ ಅಧ್ಯಾಯವು, ಪ್ರಬಂಧದ ಮಹತ್ವದ ತಿರುಳು ಇಲ್ಲಿ ಹಸಲರ ಬದಲಾವಣೆಗೆ ಕಾರಣವಾದ ಅಂಶಗಳ ಕುರಿತು ಚರ್ಚಿಸಲಾಗಿದೆ. ಅವರ ಪರಿವರ್ತನೆಗೆ ಕಾರಣವಾದ ಶಿಕ್ಷಣ, ಎನ್.ಹುಚ್ಚಪ್ಪ ಮಾಸ್ತರರ ಪಾತ್ರ. ತಂತ್ರಜ್ಞಾನ, ಆಧುನಿಕತೆ ಸ್ವಸಹಾಯ ಗುಂಪುಗಳು, ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳ ಪಾತ್ರದ ಕುರಿತು ವಿಶ್ಲೇಷಣೆ ನೀಡಲಾಗಿದೆ.

ಈ ಪ್ರಬಂಧದ ಸಮಾರೋಪವು ಐದನೇ ಅಧ್ಯಾಯವಾಗಿ ಮೇಲಿನ ಎಲ್ಲ ಅಧ್ಯಾಯಗಳನ್ನು ಇಟ್ಟುಕೊಂಡು ಸಮಸ್ಯೆ ಮತ್ತು ಸವಾಲುಗಳು ಅಧ್ಯಯನ ಆಶಯಗಳು ಕುರಿತು ಸ್ಥೂಲವಾದ ಚಿತ್ರಣ ನೀಡುವಂತ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ವಿಧಾನ

ಹಸಲರ ಬುಡಕಟ್ಟಿಗೆ ಸಂಬಂಧಿಸಿದಂತೆ ಅನ್ವಯಿಸಿದ ಮಾಹಿತಿ ಪಡೆಯಲು ಸಮುದಾಯವು ನೆಲೆಗೊಂಡು ಪ್ರದೇಶಗಳಲ್ಲಿ ಸಂಚರಿಸಿ ವಿಷಯದ ಬಗೆಗಿನ ಮಾಹಿತಿಯನ್ನು ಲೇಖನಗಳಿಂದ ಮತ್ತು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ದೊರೆತ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮತ್ತು ಹಸಲರ ಸಾಂಸ್ಕೃತಿಕವಾದ ಬದುಕನ್ನು ಛಾಯಗ್ರಹಣದ ಮೂಲಕ ಸೆರೆ ಹಿಡಿಯಲಾಗಿದೆ. ಮತ್ತು ಜನಪದ ಕಥೆ ಪುರಾಣಗಳನ್ನು ಧ್ವನಿ ಮುದ್ರಣದ ಮೂಲಕ ಸಂಗ್ರಹಿಸಲಾಗಿದೆ.

ಅವಲೋಕನ ವಿಧಾನ

ಹಸಲರ ಸಮುದಾಯದ ಮಾಹಿತಿ ಸಂಗ್ರಹಿಸಲು ಕ್ಷೇತ್ರಕಾರ್ಯದಲ್ಲಿ ಅವಲೋಕನ ವಿಧಾನ ಅತಿಮುಖ್ಯವಾಗಿರುವದರಿಂದ ರೂಢಿಯಲ್ಲಿರುವ ಎ.ಸಹಭಾಗಿ ಅವಲೋಕನ ಮತ್ತು ಬಿ.ಅಸಹಭಾಗಿ ಅವಲೋಕನ ಎಂಬ ಎರಡು ಪ್ರಕಾರದ ಅವಲೋಕನ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

ಪ್ರಶ್ನಾವಳಿ ವಿಧಾನ

ಸಮುದಾಯದಲ್ಲಿನ ಬದಲಾವಣೆ ಕುರಿತು ಅಧ್ಯಯನವಾಗಿರುವುದರಿಂದ ಬದಲಾವಣೆಗೆ ಸಂಬಂಧಿಸಿದಂತೆ ಪ್ರಸ್ತುತ ಅಂಶಗಳ ಕುರಿತು ಮಹಿಳೆ, ಪುರುಷ, ಮಕ್ಕಳು, ಹಿರಿಯರು, ಸಮುದಾಯದ ಬಗ್ಗೆ ಒಲವಿರುವ ಇತರರಿಂದ ಮಾಹಿತಿ ಸಂಗ್ರಹಿಸುವ ನಿಟ್ಟಿನಲ್ಲಿ ಪ್ರಶ್ನಾವಳಿ ಪಾತ್ರ ಮುಖ್ಯವಾಗಿರುವುದರಿಂದ ವಿವಿಧ ಆಯಾಮಗಳಿಗೆ ಸಂಬಂಧಿಸಿದ ಪ್ರಶ್ನಾವಳಿಯನ್ನು ತಯಾರಿಸಿಕೊಂಡು ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

ಸಂದರ್ಶನ ವಿಧಾನ

ಹಸಲರಲ್ಲಿನ ವೃತ್ತಿ, ಕೃಷಿ, ಸಾಮಾಜಿಕ ಅಂಶಗಳು, ಆರ್ಥಿಕತೆ, ಶೈಕ್ಷಣಿಕ ಮಟ್ಟ, ಸಾಂಸ್ಕೃತಿಕ ಅಂಶಗಳಲ್ಲಿನ ಪರಿವರ್ತನೆಯನ್ನು ತಿಳಿದುಕೊಳ್ಳಲು ಸಮುದಾಯದ ಸದಸ್ಯರನ್ನು ಮತ್ತು ಹಿತೈಷಿಗಳನ್ನು ಸಂದರ್ಶಿಸುವ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಐತಿಹಾಸಿಕ ವಿಧಾನ

ಹಸಲರು ರಾಜ್ಯದಲ್ಲಿ ವೈಶಿಷ್ಟ್ಯತೆಯಿಂದ ಕೂಡಿದ ಸಮುದಾಯವಾಗಿದ್ದು, ಈ ಹಿನ್ನೆಲೆಯಲ್ಲಿ ಐತಿಹಾಸಿಕ ಕಥೆ, ಪುರಾಣಗಳು, ಸಾಹಿತ್ಯ ಕೃತಿಗಳು, ಜನಪದ ಸರ್ಕಾರಿ ಯೋಜನೆಗಳು ಪತ್ರಿಕೆ ಲೇಖನಗಳು ಮತ್ತು ಇತರೆ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಇಲ್ಲಿವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಕರ್ನಾಟಕ ಹಸಲರ ಬಗ್ಗೆ ಇಲ್ಲಿಯವರೆಗೆ ಆಳವಾದ ಅಧ್ಯಯನ ನಡೆದಿರುವುದು ತುಂಬಾ ಕಡಿಮೆ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗುವಂತೆ ಮಾಹಿತಿಯು ಸಾಹಿತ್ಯಕ ಕೃತಿಗಳಿಂದ ಸಿಗುವುದರಿಂದ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳನ್ನು ಪರಿಶೀಲಿಸಲಾಗಿದೆ. ಈ ನಿಟ್ಟಿನಲ್ಲಿ ಪ್ರಥಮವಾಗಿ ೧೮೭೨ರಲ್ಲಿ ಎಂ.ಎ.ಷರಿಂಗ್ ಬರೆದ ಹಿಂದು ''ಟ್ರೈಬ್ಸ್ ಅಂಡ್ ಕ್ಯಾಸ್ಟ್'' ಎಂಬ ಗ್ರಂಥದ ಮೂರನೆ ಸಂಪುಟದಲ್ಲಿ ಹಸಲರ ಬಗ್ಗೆ ಮಾಹಿತಿ ಇದೆ. ಆರ್.ಇ.ಎಂಥೋವನ್ನರು ೧೯೦೨ರಲ್ಲಿ ರಚಿಸಿದ ''ದಿ ಟ್ರೈಬ್ಸ್ ಅಂಡ್ ಕ್ಯಾಸ್ಟ್ ಆಫ್ ಬಾಂಬೆ'' ಎಂಬ ಗ್ರಂಥದ ಎರಡನೇ ಸಂಪುಟದಲ್ಲಿ ಎಚ್.ವಿ.ನಂಜುಡಯ್ಯ ಮತ್ತು ಎಲ್.ಕೆ.ಅನಂತಕೃಷ್ಣ ಅಯ್ಯರರು ೧೯೩೦ರಲ್ಲಿ ಪ್ರಕಟಿಸಿರುವ ''ದಿ ಮೈಸೂರು ಟ್ರೈಬ್ಸ್ ಕ್ಯಾಸ್ಟ್'' ಗ್ರಂಥದ ಮೂರನೇ ಸಂಪುಟದಲ್ಲಿ ಇ ಥರಸ್ಟನ್ ಮತ್ತು ರಂಗಚಾರಿಯವರು ರಚಿಸಿದ ''ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ'' ಎಂಬ ಗ್ರಂಥದಲ್ಲಿ ೧೯೬೧ರ ಜನಗಣತಿಯನ್ನು ಆಧರಿಸಿ ಸರ್ಕಾರ ಪ್ರಕಟಿಸಿದ ''ಎಥ್ನಾಲಜಿಕಲ್

ನೋಟ್ಸ್ ಆಫ್ ಷೆಡ್ಯೂಲ್ಡ್ ಟ್ರೈಬ್ಸ್'' ಎಂಬ ಗ್ರಂಥದಲ್ಲಿ ಸುಮಾರು ೨೦ ಪುಟಗಳಲ್ಲಿ ವಿವರಣೆ ಇದೆ. ೧೯೮೫-೯೦ರ ಎಥ್ನಾಲಾಜಿಕಲ್ ಸರ್ವೆಯನ್ನು ಅವಲಂಬಿಸಿದ ಪೀಪಲ್ಸ್ ಆಫ್ ಇಂಡಿಯಾ ಸರಣಿಯಲ್ಲಿ ಕೆ.ಎಸ್.ಸಿಂಗ್ ಸಂಪಾದಿಸಿರುವ ''ನ್ಯಾಷನಲ್ ಸಿರೀಸ್ ಆಫ್ ಕಮ್ಯುನಿಟೀಸ್ ಡಿಸ್‌ಕ್ರಿಪ್ಟಿವ್'' ಸಂಪುಟ ಎರಡರಲ್ಲಿ ಹಸಲರ ಬಳಿ ಅಳಿಯ ಸಂತಾನದ ಮೂಲಕ ಗುರುತಿಸುವುದು. ಕಾನೂನು ಸರ್ಕಾರದ ಯೋಜನೆ ಇವುಗಳ ವಿಶ್ಲೇಷಣೆ ನೀಡಲಾಗಿದೆ.

ಜೆ.ಎಚ್.ಹಟ್ಟನ್ ಅವರ ''ಕ್ಯಾಸ್ಟ್ ಇನ್ ಇಂಡಿಯಾ'', ೧೯೫೧ರಲ್ಲಿ ಹೊರತಂದ ಗ್ರಂಥದಲ್ಲಿ ಹಸಲರ ಬಗ್ಗೆ ಮಾಹಿತಿ ಇದೆ. ೧೯೧೧ರ ಜನಗಣತಿ ೧೧ನೇ ಸಂಪುಟದ ಮೈಸೂರು ಭಾಗ ಒಂದರಲ್ಲಿ ಹಸಲರ ಬಗ್ಗೆ ಒದು ಪುಟದಷ್ಟು ಮಾಹಿತಿ ಇದೆ. ಎ.ಪಿ.ಲೂಯಿಸ್ ಅವರು ಪ್ರಕಟಿಸಿರುವ ಟ್ರೈಬ್ಸ್ ಆಫ್ ಮೈಸೂರು ಗ್ರಂಥದಲ್ಲಿ ಹಸಲರ ಉಲ್ಲೇಖವಿದೆ. ಕರ್ನಾಟಕ ರಾಜ್ಯ ಗೆಜೆಟಿಯರ್‌ನಲ್ಲಿ ಆಹಾರ ಹುಡುಕುತ್ತ ಅಲೆದಾಡುವ ಜನರು ಹಸಲರ ಬುಡಕಟ್ಟು ಆಗಿರಬಹುದೆಂದು ಹೇಳಲಾಗಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಬೆಳಗಾವಿ, ಧಾರವಾಡ, ಬಳ್ಳಾರಿ ಗೆಜೆಟಿಯರ್‌ನಲ್ಲಿಯೂ ಸಹ ಹಸಲರ ಕುರಿತು ಮಾಹಿತ ಲಭ್ಯವಾಗುತ್ತದೆ. ೧೯೭೭ರಲ್ಲಿ ಎಲ್.ಜಿ ಹಾವನೂರು ಸಿದ್ಧಪಡಿಸಿದ ಕರ್ನಾಟಕದ ಪ್ರಥಮ ಹಿಂದುಳಿದ ಆಯೋಗದ ವರದಿಯಲ್ಲಿಯೂ ಹಸಲರ ಉಲ್ಲೇಖವಿದೆ.

ಡಾ.ಚಂದ್ರಶೇಖರ ಕಂಬಾರರು ಸಂಪಾದಕತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹೊರತಂದ ಕನ್ನಡ ''ಜಾನಪದ ವಿಶ್ವಕೋಶ'' ಎರಡನೇ ಅಧ್ಯಾಯದಲ್ಲಿ ಮಾಹಿತಿ ನೀಡಿದ್ದಾರೆ. ಪಿ.ಕಮಲಾಕರ ಹರಿಜನ-ಗಿರಿಜನ ಸಾಮಾಜಿಕ ಇತಿಹಾಸದಲ್ಲಿ ಜಿ.ಎಸ್.ಭಟ್ಟರ ಅವರ ''ಹಸಲರು'' ಉಪ ಸಂಸ್ಕೃತಿ ಮಾಲೆಯಲ್ಲಿ ಕರ್ನಾಟಕ ರಾಜ್ಯ ವಯಸ್ಕರ ಸಮಿತಿಯವರು ಪ್ರಕಟಿಸಿರುವ ಹುಚ್ಚಪ್ಪ ಮಾಸ್ತರ ''ಹಸಲರು'' ಎಂಬ ಕಿರು ಹೊತ್ತಿಗೆ ಹಸಲರ ಜೀವನ ಮತ್ತು ಹಸಲರ ಓದು ಮತ್ತು ನವಸಾಕ್ಷರರ ಮಾಹಿತಿಸಿಗುತ್ತದೆ. ಡಾ.ಎಸ್.ಆರ್.ನಾಯಕರವರ ಮಹಾಪ್ರಬಂಧ ''ಕಾರವಾರ ಜಿಲ್ಲೆಯ ಜನಪದ ಗೀತೆಗಳು'' ಹಸಲರ ಬಿಂಗಿ ಪದಗಳ ಮಾಹಿತಿಇದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಹೊರತಂದಿರುವ ''ಕರ್ನಾಟಕದ ಜನಪದ ಕಲೆಗಳ ಕೋಶ, ಪ್ರೊ.ಹಿ.ಚಿ.ಬೋರಲಿಂಗಯ್ಯನವರ, ''ಗಿರಿಜನ ನಾಡಿಗೆ ಪಯಣ'' ಎಂಬ ಪ್ರವಾಸ ಕಥನದಲ್ಲಿ ನಾ ಡಿಸೋಜನವರ, ''ಮಂಜನಾಕಾನ ಮತ್ತು ಶಿವನ ಡಂಗುರ'' ಕಾದಂಬರಿಗಳಲ್ಲಿ ''ಅವರು ತುಳಿದ ಹೊಲ ಒಡಿ ಹೋದವನನ್ನು ಹುಡುಕಲು ಹೋದವರು'' ಮುಂತಾದ ಕಥೆಗಳಲ್ಲಿ ಡಾ.ಸಿ.ಆರ್.ಹೆಗಡೆ ಪ್ರಕಟಿಸಿದ 'ಒಗಟುಗಳು ಮತ್ತು ಕಥೆಗಳು' ಎಂಬ ಪುಸ್ತಕದಲ್ಲಿ ಹಸಲರ ಪದ್ಯರೂಪದ ಒಗಟುಗಳನ್ನು ಸಂಗ್ರಹಿಸಿದ್ದಾರೆ. ಜೆ.ಎನ್.ಮೋಹನ್ 'ಹಸಲರ ಬದುಕಿನ ಕೈದೀಪ' ಪ್ರಜಾವಾಣಿಯಲ್ಲಿ ಲೇಖನ ಇನ್ನೂ ಅನೇಕ ಲೇಖನಗಳು, ಕಥೆ, ಕಾದಂಬರಿಗಳ ಮೂಲಕ ಹಸಲರ ಜೀವನ ಪಂಗಡ ಉದ್ಯೋಗ ಇತ್ಯಾದಿಗಳ ಕುರಿತು ಮಾಹಿತಿ ನೀಡಿದ್ದಾರೆ. ಈ ಎಲ್ಲಾ ಕಾದಂಬರಿಗಳ ಕಥೆಗಳು ಗ್ರಂಥಗಳ ಸಂಪುಟಗಳ ಲೇಖನಗಳನ್ನು ಆಧಾರವಾಗಿಟ್ಟುಕೊಂಡು ಹಸಲರಲ್ಲಿ ಕಂಡುಬರುವ ಬದಲಾವಣೆ ಕುರಿತು ಪರಿಶೀಲನೆ ಮಾಡುವ ಮೂಲಕ ಇವುಗಳ ಆಧಾರದ ಮೇಲೆ ಅಧ್ಯಯನ ಮಾಡಲಾಗಿದೆ.

ಅಡಿ ಟಿಪ್ಪಣಿಗಳು

೦೧. ಸುಬ್ರಮಣ್ಯ.ಜಿ., ಭಾರತೀಯ ಸಮಾಜದ ಸಮಾಜಶಾಸ್ತ್ರ ೨೦೦೩, ಪುಟ.೧೫೫

೦೨. ನಂಜಮ್ಮಣಿ.ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ೨೦೦೩, ಪುಟ.೩೩೨

೦೩. ಅದೇ ಪುಟ

೦೪. ಅದೇ ಪುಟ

೦೫. ಪ್ರಶಾಂತ್.ಎಚ್.ಡಿ., ಲಮಾಣಿಗರ ಸಾಮಾಜಿಕ ಬದಲಾವಣೆ, (ಪಿಎಚ್.ಡಿ) ೨೦೦೦, ಪುಟ.೧

೦೬. ಅದೇ ಪುಟ

೦೭. ಅದೇ ಪುಟ

* * *

ಅಧ್ಯಾಯ ಎರಡು

ಸಾಗರ ತಾಲ್ಲೂಕಿನ ಭೌಗೋಳಿಕ ಪರಿಸರ

೨.೧ ಐತಿಹಾಸಿಕ ಹಿನ್ನೆಲೆ

೨.೨. ಭೌಗೋಳಿಕ ಹಿನ್ನೆಲೆ

೨.೩. ಹಸಲರ ಪರಿಚಯ

೨.೧. ಐತಿಹಾಸಿಕ ಹಿನ್ನೆಲೆ

ಪೌರಾಣಿಕ ಹಿನ್ನೆಲೆಯಲ್ಲಿ ವರದಾ ಮಹಾತ್ಮೆ ಹಾಗೂ ಸಹ್ಯಾದ್ರಿ ಖಂಡದ ಪ್ರಕಾರ ಸಾಗರ ತಾಲೂಕಿನ ಹಲವು ಕ್ಷೇತ್ರಗಳು ಪುರಾಣಯುಗವನ್ನು ಸೂಚಿಸುತ್ತವೆ. ಐತಿಹಾಸಿಕ ಕತೆಯೊಂದರ ಪ್ರಕಾರ ಶ್ರೀಮನ್ನಾರಾಯಣ ವರಪ್ರಸಾದದಿಂದ ಉದ್ಭವಿಸಿದ ಭಾಗೀರಥಿಯು ಶಿವನ ಶಿರದಿಂದ ಹೊರಟು ಭಕ್ತರನ್ನ ಪಾವನಗೊಳಿಸಲು 'ವರದಾ' ನದಿಯಾಗಿ ಉದ್ಭವಿಸಿರುವಳೆಂದು ಪ್ರತೀತಿ ಇದೆ. ಭಗವಾನ್ ಶ್ರೀಧರ ಸ್ವಾಮಿಗಳ ತಪೋ ಭೂಮಿಯಾಗಿದ್ದ ವರದಾಪುರವು (ಈಗಿನ ವದ್ನಳ್ಳಿ) ವ್ಯಾಸ ಹಾಗೂ ಅಗಸ್ತ್ಯ ಮುನಿಗಳು ತಪಸ್ಸು ಮಾಡಿದ ಕ್ಷೇತ್ರವೆಂಬ ಐತಿಹ್ಯವಿದೆ. ಸಗರ ಚಕ್ರವರ್ತಿಯಿಂದ ಸಾಗರ ಎಂಬುದಾಗಿ ಉದ್ಭವಿಸುವದಾಗಿ ಉದ್ಗರಿಸಲಾಗಿದೆ. ಗೌಜ ಗ್ರಾಮವು ಗೌತಮ ಕ್ಷೇತ್ರವೆನಿಸಿದ್ದು ಜನಮೇಜಯನ ಸರ್ಪಯಾಗದ ಸಂಗತಿಯನ್ನ ನಿರೂಪಿಸುವಲ್ಲಿ ಸಹಾಯಕವಾಗಿದೆ.[೨] ಈ ತಾಲೂಕು ವ್ಯಾಸ ಮತ್ತು ಅಗಸ್ತ್ಯಾಶ್ರಮವಾಗಿತ್ತೆಂದು ಪೌರಾಣಿಕ ಕಥೆಯೊಂದರ ಮೂಲಕ ತಿಳಿದುಬರುತ್ತದೆ.

ಸಾಗರ ಜಿಲ್ಲೆಯ ಐತಿಹಾಸಿಕತೆ ಮೌರ್ಯರ ಆಳ್ವಿಕೆಯ ಕಾಲದಿಂದಲೂ ಗುರುತಿಸಬಹುದಾಗಿದೆ. ಮೌರ್ಯರ ನಂತರ ದಕ್ಷಿಣ ಭಾರತದ ಶಾತವಾಹನರ ಆಳ್ವಿಕೆಗೆ ಒಳಪಟ್ಟಿರುವದು, ಕ್ರಿ.ಶ.೪ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಬನವಾಸಿಯ ಕದಂಬರ ಆಳ್ವಿಕೆಯಲ್ಲಿ ಶಿವಮೊಗ್ಗ ಜಿಲ್ಲೆಯ ಒಂದು ಭಾಗವಾಗಿರುವದರಿಂದ ಸಾಗರ ತಾಲೂಕು ಕೂಡ ಅವರ ಆಳ್ವಿಕೆಗೆ ಒಳಪಟ್ಟಿತ್ತು. ತಾಲೂಕಿನ ಇತಿಹಾಸ ಕನ್ನಡ ಭಾಷೆಯ ತಾಮ್ರಫಟವೊಂದರ ಪ್ರಕಾರ ಕ್ರಿ.ಶ.೩೫೭ರಲ್ಲಿ ಗಂಗಮಾಧವರ ಕಾಲದೆಂದು ತಿಳಿದುಬರುತ್ತದೆ. ಜೊತೆಗೆ ಕ್ರಿ.ಶ.೮ನೇ ಶತಮಾನದಲ್ಲಿ ಜಿನದತ್ತನಿಂದ ಪೂಜಿಸಲ್ಪಡುತ್ತಿದ್ದ ಅಂದಾಸುರ ಇದನ್ನು ಆಳುತ್ತಿದ್ದನು ಎಂದು ಇದರಿಂದ ತಿಳಿಯುತ್ತದೆ. ಈ ತಾಲೂಕಿನ ಅನೇಕ ಪ್ರದೇಶಗಳು ಚಾಲುಕ್ಯ, ರಾಷ್ಟ್ರಕೂಟರ, ಸಾಂತರು ಹಾಗೂ ಕದಂಬರ ಆಳ್ವಿಕೆಗೆ ಒಳಪಟ್ಟಿತು. ಸಾಂತರ ದೊರೆಗಳ ಸುಮಾರು ೪೭ ಶಾಸನಗಳನ್ನು ಈ ತಾಲೂಕಿನಲ್ಲಿ ದೊರೆಯುತ್ತವೆ. ಇದಕ್ಕೆ ಪೂರಕವಾಗಿ ಹೊಸಗುಂದದಲ್ಲಿರುವ ಅವಶೇಷಗಳು

[illegible]

[illegible]

[illegible]

ಸಾಂತ ದೊರೆಗಳ ರಾಜಧಾನಿಯನ್ನು ಸೂಚಿಸುತ್ತವೆ. ಕ್ರಿ.ಶ ೧೨೭೮ರಲ್ಲಿ ಬರುವ ಸೇತುನಾಡರ ಆಡಳಿತಕ್ಕೂ ಹಲವು ಪ್ರದೇಶಗಳು ಒಳಗೊಂಡಿರುವುದು ಕಂಡುಬರುತ್ತದೆ. ನಂತರ ವರದಾ ದೇವಾಲಯದಲ್ಲಿ ಚಾಲುಕ್ಯರ ಕಾಲದ ಮೂಲ ವಿಗ್ರವೊಂದು ಲಕ್ಷ್ಮೀತೀರ್ಥದಲ್ಲಿ ಮುಳುಗಿರುವುದಾಗಿ ತಿಳಿದುಬರುತ್ತದೆ. ೧೧ನೇ ಶತಮಾನದಲ್ಲಿ ಹೊಯ್ಸಳರ ಕಾಲದಲ್ಲಿ ಕುಂದನಾಡು ಪರಗಣಕ್ಕೆ ಸೇರಿದ ಚಂದ್ರಗುತ್ತಿಗೆ ಸಾಗರದ ಆಡಳಿತಕ್ಕೆ ಒಳಪಟ್ಟಿರುವುದು. ಆ ಕಾಲದಲ್ಲಿ ದೊರೆತ ಸೊರಬದ ೩೭೫ನೇ ಶಾಸನದ ಪ್ರಕಾರ ಬಸವಾಸಿ ೧೨,೦೦೦ ಸೀಮೆಗೆ ರಾಜಧಾನಿಯಾಗಿದ್ದ ಚಂದ್ರಗುತ್ತಿಯು ಹಲವು ಕಾಲದವರೆಗೆ ವಿಜಾಪೂರದ ಅಲಿ ಆದಿಲ್‌ಷಹಾ ಅಧೀನಕ್ಕೂ ಸೇರಿತ್ತು ಎಂಬುದಾಗಿ ತಿಳಿದುಬರುತ್ತದೆ. ೧೨ನೇ ಶತಮಾನದಲ್ಲಿ ಕಲಚೂರಿಗಳ ಅಧೀನಕ್ಕೆ ಒಳಪಟ್ಟರೆ. ವಿಜಯನಗರದ ಚಕ್ರವರ್ತಿಗಳ ಕಾಲದಲ್ಲಿ ಅರಗರಾಜ್ಯದ ಪ್ರಾಂತ್ಯದಲ್ಲಿ ಸಾಗರ ತಾಲೂಕು ವಿಲೀನಗೊಂಡಿತು. ಗೇರು ಸೊಪ್ಪೆಯ ಭೈರವ ರಾಣಿಯು ಇಲ್ಲಿನ ಹಲವು ಪ್ರದೇಶಗಳನ್ನು ಆಳಿರುವುದು ನಂತರದಲ್ಲಿ ಕೆಳದಿ ಅರಸರು ಇದನ್ನು ತಮ್ಮ ಒಡೆತನಕ್ಕೆ ಸೇರಿಸಿಕೊಂಡರು. ವಿಜಯನಗರದ ಸಾಮ್ರಾಜ್ಯದ ಸಾಮಂತರಾಗಿ ಅಧಿಕಾರದ ಚುಕ್ಕಾಣಿ ಹಿಡಿದ ಕೆಳದಿ ನಾಯಕರು ವಿಜಯನಗರದ ಪತನದ ನಂತರ ಸ್ವತಂತ್ರರಾಗಿ ಆಳ್ವಿಕೆ ಪ್ರಾರಂಭಿಸಿದರು. ಇದೇ ವೇಳೆ ಶಿವಮೊಗ್ಗ ಜಿಲ್ಲೆಯಲ್ಲಿ ಬಸವಪಟ್ಟಣ ಎಂಬ ಸಂಸ್ಥಾನ ಕೂಡ ಏಳಿಗೆಗೆ ಬಂದಿರವುದು ತಿಳಿಯುತ್ತದೆ. ಕ್ರಿ.ಶ ೧೫೮೩ ರಿಂದ ೧೬೩೦ರ ವರೆಗೆ ಆಳಿದ ಕೆಳದಿಯ ಅರಸ ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ಸಾಗರವು ಅಸ್ತಿತ್ವಕ್ಕೆ ಬಂದಿತ್ತು ಎಂಬುದಾಗಿ ಮಾಹಿತಿ ಇದೆ. ಕ್ರೀ.ಶ ೧೮ನೇ ಶತಮಾನದ ವೇಳೆಗೆ ಕೆಳದಿಯ ಸಂಸ್ಥಾನವು ಮೈಸೂರಿನ ಹೈದರಾಲಿಯ ಪ್ರಾಬಲ್ಯಕ್ಕೆ ಬಲಿಯಾಗಿ ಟಿಪ್ಪುವಿನ ಮರಣದ ನಂತರ ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತು. ಇನ್ನು ಇತಿಹಾಸದ ಕುರುಹುಗಳಾಗಿ ಹೊಸಗುಂದಿ ಈಳಿ, ಚಿಕ್ಕನೆಲ್ಲೂರು, ಕಂಬಳಿ, ಕೊಪ್ಪ ಮುಂತಾದೆಡೆಯಲ್ಲಿರುವ ಈ ತಾಲೂಕಿನ ಪ್ರಾಚ್ಯ ಸಾಮಗ್ರಿಗಳು ಐತಿಹಾಸಿಕತೆಯನ್ನು ನಿರೂಪಿಸುವಲ್ಲಿ ಸಹಾಯಕಾರಿಯಾಗಿದೆ.

ಸ್ವಾತಂತ್ರ ಸಂಗ್ರಾಮದಲ್ಲಿ ಸಾಗರ ತಾಲೂಕು

ಹೈದರ್ ಮತ್ತು ಟಿಪ್ಪುವಿನ ಆಳ್ವಿಕೆಯ ಕೊನೆಗೊಂಡ ನಂತರ ೧೮ನೇ ಶತಮಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಿಡಿ ವಾಘನ ಬಂಡಾಯದ ಮೂಲಕ ಆರಂಭವಾಯಿತು. ೧೮೩೦-೩೧ರಲ್ಲಿ ಬೂದಿ ಬಸಪ್ಪ ಎಂಬ ಸ್ವಾತಂತ್ರ ಹೋರಾಟಗಾರ ಬಂಡಾಯದ ಕಿಡಿ ಒತ್ತಿಸಿದ ಇತನ ನಿಜವಾದ ನಾಮ ಸಾದರಮಲ್ಲ ಎಂಬುದಾಗಿತ್ತು. ಗ್ರಾಮೀಣ ಪ್ರದೇಶದ ಜನರು ಪಟೇಲರು ರೈತಾಪಿ ವರ್ಗವು ಈತನನ್ನು ಕೆಳದಿ ರಾಜ್ಯದ ನಿರಂಕುಶ ಪ್ರಭು ಎಂದು ಸಾರಿ ನಾಯಕನನ್ನಾಗಿ ರೂಪಿಸಿದರು. ಇತನು ಗುಪ್ತಚಾರರ ಮುಖಾಂತರ ಹಲವಾರು ಕಡೆಗಳಿಂದ ಸಹಾಯವನ್ನು ಬುದಿಬಸಪ್ಪ ಪಡೆದುಕೊಂಡಿದ್ದನು.[೩] ೧೮೩೧ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಹಾಗೂ ಬ್ರಿಟೀಷರ ಮುಖ್ಯ ಸೇನಾನಿ ಕರ್ನಲ್ ಬ್ರಿಗ್ಸ್‌ನ ಮುಂದಾಳತ್ವದಲ್ಲಿ ಮಾರ್ಷಲ್ ಲಾ ಮುಖಾಂತರ ಇತನನ್ನು ನಿಗ್ರಹಿಸುವ ಮೂಲಕ ಸ್ವಾತಂತ್ರ ಸಂಗ್ರಾಮದಲ್ಲಿ ಬೆಂಕಿ ಕಿಡಿ

ಹೊತ್ತಿಸಿದ ಬಸಪ್ಪನನ್ನು ಮೂಲೆಗಂಪು ಮಾಡಲಾಯಿತು, ಬೂದಿ ಬಸಪ್ಪನ ಮುಖ್ಯವಾಗಿ ಬಂಡೆದಿದ್ದು ಸಾಮ್ರಾಜ್ಯಶಾಹಿಗಳ ವಿರುದ್ಧ ಮತ್ತು ಕಂದಾಯ ಹೆಚ್ಚಳದ ವಿರುದ್ದವಾಗಿತ್ತು ಇತನ ಬಂಡಾಯ ಮೈಸೂರು ಸಾಮ್ರಾಜ್ಯದ ಆಳ್ವಿಕೆಯ ದೋಷಗಳನ್ನು ಹೊರಗೆಡವಿತು. ಆ ಮೂಲಕ ಈ ಬಂಡಾಯ ಮೈಸೂರು ಒಡೆಯರ ಸಾಮಾಜ್ರ್ಯದ ಕೊನೆಗೊಳ್ಳಲು ಬ್ರಿಟೀಷ ಸಾಮ್ರಾಜ್ಯವು ಪ್ರಜ್ವಲಿಸಲು ಕಾರಣವಾಯಿತು.

ಹಿಂದೇ ಮೈಸೂರು ಸಾಮ್ರಾಜ್ಯದ ಒಂದು ಭಾಗವಾಗಿದ್ದ ಶಿವಮೊಗ್ಗವು ೨೦ನೇ ಶತಮಾನದಲ್ಲಿ ಆರಂಭವಾದ ಬ್ರಿಟೀಷರ ವಿರುದ್ಧದ ಸ್ವಾತಂತ್ರ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದು ಶ್ಲಾಘನೀಯವಾಗಿತ್ತು. ೧೯೨೭ರಲ್ಲಿ ಮಹಾತ್ಮ ಗಾಂಧಿಯವರ ವ್ಯಕ್ತಿತ್ವದಿಂದ ಪ್ರೇರಿತವಾದ ತಾಲ್ಲೂಕಿನ ರಾಜಗೋಪಾಲಾಚಾರಿ ಗಂಗಾಧರ ರಾವ್ ದೇಶಪಾಂಡೆ ಮುಂತಾದ ಪ್ರಮುಖರು ಸಾಗರ ಪ್ರಾಂತ್ಯದಲ್ಲಿ ಖಾದಿ ಪ್ರಚಾರದ ಸಲುವಾಗಿ ಪ್ರವಾಸ ಕೈಗೊಳ್ಳುವ ಮೂಲಕ ಸ್ವಾತಂತ್ರ ಸಂಗ್ರಾಮ ಹೋರಾಟಕ್ಕೆ ಧುಮುಕಿದರು ಇದೇ ಸಂದರ್ಭದಲ್ಲಿ ಎ.ಆರ್. ಬದರೀನಾರಾಯಣಂ, ಭೂಪಾಳಂ, ಚಂದ್ರಶೇಕರಯ್ಯ, ಎಚ್. ಸಿದ್ದಯ್ಯ ಎಸ್.ವಿ. ಸಿದ್ಧಯ್ಯ, ಎಸ್.ವಿ. ಕೃಷ್ಣಮೂರ್ತಿರಾವ್ ಕೆ.ಜಿ. ಒಡೆಯರ್, ಮೃತ್ಯುಂಜಯ ರಿಲ್‌ಬಪಟ್, ಕೆ. ಹರಿಯಪ್ಪ, ಶಿರವಂತೆ ವೀರಭದ್ರಗೌಡ, ಕೆ.ಎಂ. ನಾರಾಯಣಪ್ಪ ಮುಂತಾದ ಪ್ರಮುಖರು ಮೈಸೂರಿನ ಒಡೆಯರ ಜವಾಬ್ದಾರಿ ಸರಕಾರಕ್ಕೆ ಹೋರಾಟ ನಡೆಸಿರುವದು ಸಂಸ್ಮರಣೀಯವಾಗಿದೆ.

ಕಾಗೋಡು ಸತ್ಯಾಗ್ರಹ ಸಂದರ್ಭದಲ್ಲಿ ಸಾಗರ ತಾಲೂಕು

೧೯೪೭ನೇ ಸ್ವಾತಂತ್ರ ನಂತರ ಮೈಸೂರು ರಾಜ್ಯದ ಭೂ ಸುಧಾರಣಾ ಆಂದೋಲನದಲ್ಲಿ ತಾಲೂಕಿನ ಕಾಗೋಡು ಗ್ರಾಮವು ೧.೪.೧೯೫೧ ರಂದು ರೈತ ಚಳುವಳಿಯೊಂದನ್ನು ಮಾಡಿತು. ಇದು ಅಂದಿನ ಸಂದರ್ಭದಲ್ಲಿ ಅಪೂರ್ವವಾದ ಸಾಮಾಜಿಕ ಕ್ರಾಂತಿಯನ್ನ ಹಬ್ಬಿಸಿತು. ಜಯಪ್ರಕಾಶ ನಾರಾಯಣ ಡಾ. ಲೋಹಿಯಾ ಶಾಂತವೇರಿ ಗೋಪಾಲಗೌಡ ಶ್ರೀಗಣಪತಿಯಪ್ಪನಂತ ನಾಯಕರ ಪ್ರಭಾವಕ್ಕೆ ಒಳಗಾಗಿ ಮುಂತಾದ ಯುವ ನಾಯಕರು ಕಾಗೋಡಿಗೆ ಧಾವಿಸಿ ಸ್ವಯಂ ಪ್ರೇರಿತರಾಗಿ ಚಳುವಳಿಗೆ ಧುಮುಕಿ ಸತ್ಯಾಗ್ರಹ ನಡಿಸಿ ಜಮೀನ್ದಾರಿ ಪದ್ಧತಿಯಂತ ಅನಿಷ್ಟ ಪಿಡುಗಿನ ವಿರುದ್ಧ ಹೋರಾಡಿದರು. ಇದರಲ್ಲಿ ಕಾಗೋಡಿನವರೇ ಆದ ಮುತ್ತಣ್ಣ, ನಾಗಪ್ಪ, ಸವಾಯಿ, ಮಾಸ್ತ್ಯಮ್ಮ ಹಾಗೂ ಹಲವಾರು ಸಣಪುಟ್ಟ ಜಮೀನ್ದಾರರು ರೈತರ ಬಲಿದಾನವಾಯಿತು. ಮುಂದೇ ಇದು ಲೋಹಿಯಾ ಗೋಪಾಲಗೌಡರ ಪ್ರಭಾವದಿಂದಾಗಿ ಕಾಗೋಡು ತಿಮ್ಮಪ್ಪನಂತಹ ಯುವಕರು ಭಾಗವಹಿಸುವ ಮೂಲಕ ದೇಶದ ಭೂ ಸುಧಾರಣಾ ಕ್ರಾಂತಿಯ ಇತಿಹಾಸದಲ್ಲಿ ಯಶಸ್ವಿಗೊಳಿಸಿದರು. ಈ ಸತ್ಯಾಗ್ರಹ ಮುಂದೇ ಕಾಗೋಡು ಸತ್ಯಾಗ್ರಹ ಎಂಬುದಾಗಿ ಹೆಸರಾಯಿತು, ಇತಿಹಾಸದ ಪುಟಗಳಲ್ಲಿ ಈ ಘಟನೆ ಸಂಸ್ಮರಣೀಯವಾಗಿ ಉಳಿದಿದೆ.

[illegible]

[illegible]

ಐತಿಹಾಸಿಕವಾಗಿ ಗುರುತಿಸಿಕೊಂಡಿರುವ ಸಾಗರ ತಾಲೂಕು ಸಾಹಿತ್ಯಿಕವಾಗಿ ತನ್ನದೇ ಆದ ಅಸ್ತಿತ್ವವನ್ನು ಪ್ರಾಚೀನ ಕಾಲದಿಂದಲ್ಲಿ ಇಂದಿನವರೆಗೆ ಉಳಿಸಿಕೊಂಡಿರುವುದು ಕಂಡುಬರುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ಶ್ರೀ ಎನ್.ಆರ್. ಮಾಸೂರು, ಆರ್.ಪಿ. ಜನಾರ್ಧನ, ಎಚ್.ಜಿ. ಶ್ರೀಪತಿ, ಚಂದ್ರಶೇಖರ ಕಂಬಾರ, ಶ್ರೀ ಹುಚ್ಚಪ್ಪ ಮಾಸ್ತರ, ಕೆ.ವಿ. ಸುಬ್ಬಣ್ಣನರಂತ ಹಲವಾರು ಸಾಹಿತಿಗಳು ಕಲಾವಿದರು. ಜಾನಪದ ಕ್ಷೇತ್ರದ ತಜ್ಞರು ಇಲ್ಲಿಂದಲೇ ನಾಡಿಗೆ ನೀಡಿದ ಕೊಡುಗೆ ಅಪಾರ, ಜೊತೆಗೆ ಸಿನಿಮಾ ಕ್ಷೇತ್ರದಲ್ಲಿ ಚೋಮನದುಡಿಯ ಖ್ಯಾತಿಯ ಶ್ರೀಮತಿ ಪದ್ಮಾಕುಮಟ ಹಾಗೂ ಇತರ ಪ್ರಮುಖ ನಟಿಯರಾದ ಪಂಡರಿಬಾಯಿ ಮೈನಾವತಿಯಂತ ಅನೇಕ ನಟರು ನಟಿಯರು ಈ ತಾಲೂಕಿನಿಂದಲೇ ಬಂದು ಒಂದು ಕರ್ನಾಟಕದಲ್ಲಿ ಮೂಡಿಸಿದ ಛಾಪು ಗಮನಾರ್ಹವಾದುದ್ದು.

೨.೨ ಭೌಗೋಳಿಕ ಹಿನ್ನೆಲೆ

ಕರ್ನಾಟಕ ರಾಜ್ಯ ಐತಿಹಾಸಿಕವಾಗಿ ಸಾಂಸ್ಕೃತಿಕವಾಗಿ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಭೌಗೋಳಿಕವಾಗಿ ವಿಶಿಷ್ಟವಾದ ಮೇಲ್ಮೈ ಲಕ್ಷಣವನ್ನು ಹೊಂದಿರುವ ಕರ್ನಾಟಕವು ಭಾರತದೇಶದ ಪ್ರಾಕೃತಿಕ ಸಂಪತ್ತನ್ನು ಹೇರಳವಾಗಿ ಹೊಂದಿರುವ ರಾಜ್ಯಗಳಲ್ಲಿ ಒಂದಾಗಿದೆ. ನೈಸರ್ಗಿಕವಾಗಿ ಶ್ರೀಮಂತಿಕೆ ಹೊಂದಿರುವ ಕರ್ನಾಟಕವು ೨೯ ಜಿಲ್ಲೆಗಳನ್ನು ಒಳಗೊಂಡಿದೆ. ಶಿವಮೊಗ್ಗ ಜಿಲ್ಲೆಯು ೯ನೇ ಜಿಲ್ಲೆಯಾಗಿದೆ.ಶ್ರೀಗಂಧದ ನಾಡು ಬೆಳಕಿನ ಬೀಡು ಎಂದು ಕರೆಯಲ್ಪಡುವ ಶಿವಮೊಗ್ಗ ಜಿಲ್ಲೆಯು ಮಧ್ಯಪ್ರಸ್ಥಭೂಮಿಯ ಮತ್ತು ಡೆಕ್ಕನ್ ಪ್ರಸ್ಥಭೂಮಿಯ ತಗ್ಗು ಪ್ರದೇಶ ಉತ್ತರ ಕರ್ನಾಟಕ ಪ್ರಸ್ಥಭೂಮಿಯ ಮತ್ತು ಹೆಚ್ಚು ಎತ್ತರ ಮೇಲ್ಮೈ ಇರುವ ದಕ್ಷಿಣದ ಪ್ರಸ್ಥಭೂಮಿಗಳ ನಡುವೆ ಇರುವ ಪ್ರದೇಶವನ್ನು ಪ್ರತಿನಿಧಿಸುತ್ತದೆ. ಹೆಚ್ಚು ಕಡಿಮೆ ಈ ಭಾಗವು ತುಂಗಭದ್ರ ಜಲಾನಯನ ಪ್ರದೇಶದ ಮಧ್ಯದಲ್ಲಿ ಬರುತ್ತದೆ. ಈ ಪ್ರದೇಶ ಸಾಧಾರಣವಾದ ಎತ್ತರವು ಸಮುದ್ರ ಮಟ್ಟದಿಂದ ೪೩೦ ರಿಂದ ೭೦೦ಮೀ ನಡುವೆ ಇದೆ.

ಸಂಪದ್ಭರಿತವಾದ ಪರಂಪರೆ ಹೊಂದಿದ ಶಿವಮೊಗ್ಗ ಜಿಲ್ಲೆಯ ರಾಜಧಾನಿ ಕೇಂದ್ರದಿಂದ ಸುಮಾರು ೨೭೪ ಕಿ.ಮೀ. ದೂರ ಇದ್ದು, ಅದು ಶಿವಮೊಗ್ಗ, ಸೊರಬ, ಭದ್ರಾವತಿ, ತೀರ್ಥಹಳ್ಳಿ, ಹೊಸನಗರ, ಸಾಗರ, ಶಿಕಾರಿಪುರ ಎಂಬ ೭ ತಾಲೂಕುಗಳನ್ನು ಒಳಗೊಂಡಿದೆ. ಪ್ರಸ್ತುತ ನನ್ನ ಅಧ್ಯಯನಕ್ಕೆ ಸಾಗರ ತಾಲ್ಲೂಕನ್ನು ಆಯ್ಕೆ ಮಾಡಿಕೊಂಡಿರುವುದರಿಂದ ಅದರ ಭೌಗೋಳಿಕ ಪರಿಸರ ನೀಡುವದು ಸೂಕ್ತವೆನಿಸುತ್ತದೆ.

ಸಾಗರ ತಾಲೂಕು ಶಿವಮೊಗ್ಗ ಜಿಲ್ಲೆಯ ಕೇಂದ್ರದಿಂದ ಸು. ೭೦ ಕೀ.ಮೀ ದೂರದಲ್ಲಿದ್ದು, ಸಾಗರದ ಸುತ್ತಮುತ್ತಲೂ ಪೂರ್ವಕ್ಕೆ ಹೊನ್ನಾವರ ತಾಲೂಕು ಉತ್ತರಕ್ಕೆ ಸೊರಬ ದಕ್ಷಿಣಕ್ಕೆ ಹೊಸನಗರ ಪಶ್ಚಿಮಕ್ಕೆ ಶಿವಮೊಗ್ಗ ಹಾಗೂ ಶಿಕಾರಿಪುರ ತಾಲೂಕುಗಳನ್ನು ಮೇರೆಗಳನ್ನೊಳಗೊಂಡಿದೆ. ತಾಲೂಕು $14^{w}.17^{0}N^{5}$ 75.03^{11} ಪಶ್ಚಿಮದ ರೇಖಾಂಶಗಳಲ್ಲಿ ಬರುತ್ತದೆ. ಸಮುದ್ರಮಟ್ಟದಿಂದ ೫೮೦ ಮೀ ಎತ್ತರವಿದೆ.

ಭಾರತ ಸರಕಾರದ ಅಂಕಿ ಅಂಶಗಳ ಪ್ರಕಾರ ಸಾಗರ ತಾಲೂಕು ಭೌಗೋಳಿಕ ವಿಸ್ತಾರವು ೧೯೪೦ ಚ.ಕೀ.ಮಿ. ಇದ್ದು ಈ ತಾಲೂಕು ೨೦೦೧ರ ಜನಗಣತಿಯ ಪ್ರಕಾರ ೨೦೮೯೫೫ ಜನಸಂಖ್ಯೆಯನ್ನು ಒಳಗೊಂಡಿದೆ

ಪುರುಷರು - ೧೦೮೯೭೭

ಮಹಿಳೆಯರು - ೧೦೦೦೧೮

ನಗರ - ೬೨೭೦೧

ಗ್ರಾಮೀಣ - ೧೩೮೨೪ ರಷ್ಟು ಜನರು ವಾಸವಾಗಿದ್ದಾರೆ.

ತಾಲೂಕಿನ ಶೈಕ್ಷಣಿಕ ಸರಾಸರಿಯು ೭೭.೯೭ ರಷ್ಟಿದ್ದು ೬೯.೬೦ ಮಹಿಳೆಯರು ೮೬.೨೮ ರಷ್ಟು ಪುರುಷ ಸಾಕ್ಷರರಿದ್ದಾರೆ. ಪರಿಶಿಷ್ಟ ಪಂಗಡದ ಸಾಕ್ಷರ ಪ್ರಮಾಣ ೬೪.೯೦ ರಷ್ಟಿದ್ದು ಸುಧಾರಿತ ಮಟ್ಟದಲ್ಲಿದೆ. ತಾಲೂಕಿನ ದಶಕದಲ್ಲಿ ಕಂಡುಬಂದ (೧೯೯೧-೨೦೦೧) ಜನಸಂಖ್ಯೆಯ ಬೆಳವಣಿಗೆ ಧರ ಶೇ.೧೩.೫ ರಷ್ಟಿದ್ದು ತಾಲೂಕಿನ ಲಿಂಗಾನುಪಾತವು ಪ್ರತಿಸಾವಿರ ಪುರುಷರಿಗೆ ಒಟ್ಟಾರೆ ೯೯೧ ಸ್ತ್ರೀಯರ ಪ್ರಮಾಣ ಕಂಡುಬರುತ್ತದೆ. (ನಗರ ೯೯೦, ಗ್ರಾಮೀಣ ೯೯೧ ಸ್ತ್ರೀಯರ ಪ್ರಮಾಣ) ಭ್ರೂಣ ಹತ್ಯೆಯಂತ ಸಾಮಾಜಿಕ ಪಿಡುಗನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ೦-೬ ಮೇಲ್ಪಟ್ಟ ಮಕ್ಕಳ ಲಿಂಗನುಪಾತದಲ್ಲಿ ಸುಧಾರಿತ ಮಟ್ಟದಲ್ಲಿ ಇದೆ. ಸಾಗರ ತಾಲೂಕು ಬೆಂಗಳೂರು ವಿಭಾಗಕ್ಕೆ ಸೇರಿದ ಜಿಲ್ಲೆಯಾಗಿರುವುದರಿಂದ ಇಲ್ಲಿ ಕನ್ನಡ, ತುಳು, ಮರಾಠಿ, ಕೊಂಕಣಿ, ಮಲಯಾಳಂ ಭಾಷೆಗಳ ಆಡುವ ಜನರಿದ್ದಾರೆ. ಸಾಗರ ತಾಲೂಕು ೧೯೩ ಜನಸಾಂದ್ರತೆಯನ್ನು ಹೊಂದಿದ್ದು, ೬ ಹೋಬಳಿಗಳನ್ನು ೨೩೩ ಜನವಸತಿ ಹಳ್ಳಿಗಳನ್ನು ೫ ಜನರಹಿತ ಹಿಂದುಳಿದ ಗ್ರಾಮಗಳನ್ನು ಒಳಗೊಂಡಿದೆ. ಇದು ಅಲ್ಲದೆ ತಾಲೂಕಿನಲ್ಲಿ ೩೫೫ ಪ್ರಾಥಮಿಕ ೩೮ ಪ್ರೌಢ ೧೨ ಪದವಿಪೂರ್ವ ಕಾಲೇಜು, ೨ ಡಿ.ಎಡ್., ೩ ಡಿಗ್ರಿ ಕಾಲೇಜ್, ೩೬ ಗ್ರಾಮ ಪಂಚಾಯತ, ಲೈಬ್ರರಿಗಳನ್ನು ಒಳಗೊಂಡಿದೆ. ಈ ತಾಲೂಕಿನಲ್ಲಿ ಬ್ರಾಹ್ಮಣ, ದ್ರಾವಿಡ ಪಂಚಗ್ರಾಮ ಜೈನರ, ವೀರಶೈವ, ವೈಶ್ಯರು, ಗುಡಿಗಾರರು, ದೈವಜ್ಞರು, ಕ್ರಿಶ್ಚಿಯನ್ನರು ಮುಸ್ಲಿಂ ಕರೇವಕ್ಕಲಿಗರು, ಕೋಟೆ ವಕ್ಕಲಿಗರು, ಬಡಗಿ, ದೀವರು, ತೆಲುಗು, ಬಣಜಿಗರು, ಉಪ್ಪಾರರು, ಘಟ್ಟದ ಕೆಳಗಿನವರು, ಮಡಿವಾಳರು, ಮಲೆಯಾಳಿಗಳು ಹರಿಜನರು. ಮುಂತಾದ ಜನಾಂಗದವರು ಕಂಡುಬರುತ್ತಾರೆ.

ವಿಶೇಷವಾಗಿ ಸಾಗರ ತಾಲೂಕಿನ ಬುಡಕಟ್ಟುಗಳ ಅಧ್ಯಯನ ಮಾಡುತ್ತಿರುವ ಈ ಸಂದರ್ಭದಲ್ಲಿ ಸಾಗರ ತಾಲೂಕಿನಲ್ಲಿ ಬರುವ ಬುಡಕಟ್ಟುಗಳ ಪರಿಚಯ ನೀಡುವದು ಅತ್ಯವಶ್ಯಕವಾಗಿದೆ ಇಲ್ಲಿ. ಹಸಲರು, ಕೊರಗರು, ಕುಣಬಿಗಳು ಮರಾಠಿ ಕುಣಬಿ, ಮೇದರು, ಅಲೆಮಾರಿ ಸಮುದಾಯವಾದ ದೊಂಬರು ಹಕ್ಕಿಪಕ್ಕಿ, ಮಲ್ಲೈಕುಡಿ, ಮಲಸರ್, ಮಲೇರು ವಾಲ್ಮೀಕಿ, ಗೊಂಡರು, ಮರಾಠಿ ನಾಯಕರು, ಮುಂತಾದ ಬುಡಕಟ್ಟುಗಳ ತಾಲೂಕಿನಾದ್ಯಾಂತ ಹರಡಿಕೊಂಡಿದ್ದಾರೆ.

[illegible]

ವಾಯುಗುಣ

ಸಾಗರ ತಾಲೂಕು ಪಶ್ಚಿಮ ಘಟ್ಟಗಳಿಂದ ಆವೃತ್ತವಾಗಿದೆ. ದಕ್ಷಿಣದ ಒಳನಾಡು ಪ್ರದೇಶದ ಒಂದು ಭಾಗವಾಗಿರುವ ಸಾಗರದಲ್ಲಿ ಸಾಮಾನ್ಯವಾಗಿ ಅತಿ ಸೆಕೆಯ ಉಷ್ಣವಲಯದ ಒಣ ವಾತಾವರಣವಿದ್ದರೆ, ಉತ್ತರ ಒಳನಾಡಿನ ಕೆಲವು ಭಾಗಗಳಲ್ಲಿ ಅರೆಶುಷ್ಕ ಉಷ್ಣವಲಯದ ಸ್ಟೆಪ್ಪಿ ವಾಯುಗುಣ ಇದೆ. ಸಾಮಾನ್ಯವಾಗಿ ಈ ತಾಲೂಕು ಎರಡು ಜಿಲ್ಲೆಗಳ ನಡುವಿನ ಸಂಪರ್ಕ ಕೊಂಡಿಯಾಗಿರುವುದರಿಂದ ಎಲ್ಲ ರೀತಿಯಾದ ವಾತವರಣ ಕಂಡುಬರುತ್ತದೆ. ಮಲೆನಾಡು ಮತ್ತು ಪಶ್ಚಿಮ ಘಟ್ಟಗಳ ಸರಣಿಯಲ್ಲಿ ಅಧಿಕ ಮಳೆಯಾಗುವದರಿಂದ ಆರ್ದ್ರತೆಯುಳ್ಳ ವಾತಾವರಣವಿರುತ್ತದೆ.

ಸಾಗರ ತಾಲೂಕಿನಲ್ಲಿ ಚಳಿಗಾಲದಲ್ಲಿ ಕಡಿಮೆ ಉಷ್ಣಾಂಶ ಮತ್ತು ಆರ್ದ್ರತೆ ಅಲ್ಪ ಮಳೆ ಶುಭ್ರವಾದ ಆಕಾಶವಿರುತ್ತದೆ. ಇಲ್ಲಿ ೨೭° ಡಿಗ್ರಿ ಉಷ್ಣಾಂಶ ಕಡಿಮೆಯಾಗಿರುತ್ತದೆ. ಬೇಸಿಗೆಯಲ್ಲಿ ಕಡಿಮೆ ಬಿಸಿಲು, ಮಳೆಗಾಲದ ಮಾನ್ಸೂನ್ ಮಾರುತಗಳು ಶಿವಮೊಗ್ಗ ಜಿಲ್ಲೆಯ ಮೂಲಕ ಹಾದು ಹೋಗುವುದರಿಂದ ಸಾಗರದಲ್ಲಿ ಜುಲೈ ತಿಂಗಳಲ್ಲಿ ಅತ್ಯಧಿಕವಾದ ಮಳೆ ಬರುತ್ತದೆ. ಉಷ್ಣಾಂಶ ಬೇಸಿಗೆಯಲ್ಲಿ ೩೫.೩೭° ಡಿಗ್ರಿ ಸೆಲ್ಸಿಯಸ್, ಚಳಿಗಾಲದಲ್ಲಿ ೧೭.೧೮°. ಡಿಗ್ರಿವರೆಗೆ ಇರುತ್ತದೆ

ಪ್ರಕೃತಿ ಸಂಪತ್ತು

ಸಾಗರ ತಾಲೂಕು ಕರ್ನಾಟಕದ ಮಲೆನಾಡು ಪ್ರದೇಶವಾಗಿರುವದರಿಂದ ಸಹ್ಯಾದ್ರಿ ಪಶ್ಚಿಮ ಘಟ್ಟಗಳಿಂದ ಆವೃತ್ತವಾಗಿದ್ದು ನದಿ, ಬೆಟ್ಟಗಳ, ಕಣಿವೆಗಳ, ಮೈದಾನಗಳ ಅರಣ್ಯಗಳಂತ ಇತರ ಸಂಪನ್ಮೂಲಗಳನ್ನು ಹೊಂದಿದೆ. ತಾಲೂಕಿನ ಅರಣ್ಯದಲ್ಲಿ ಅಮೂಲ್ಯವಾದ ಅಳಿದು ಹೋಗತ್ತಿರುವ ಸಸ್ಯಗಳಾದ ಐಫಿಜಿನಿಯಾ ಸೈಹಾದ್ರಿಕಾ-ಲಿಲೇಸಿ ಕುಟುಂಬ, ಅಗ್ಲಾ ಇಯಾಟೇಲಬೋಟ್ ಟಾರೆನಾ ಆಗುಬೆನ್ಸಿ, ರುಬೇಯೇಸಿ ಎಂಬ ಸಸ್ಯಗಳನ್ನು ಶ್ರೀಗಂಧ, ಭಗನಿ, ಬನ್ನಿ, ಹೊನ್ನೆ, ಆಲ ದಂತಹ ಅಮೂಲ್ಯವಾದ ಮರಗಳನ್ನು ಹೊಂದಿದೆ. ಮೇಘಾನೆ ಗೋವರ್ಧನಗಿರಿಯಂತಹ ಬೆಟ್ಟಗಳು ತಾಲೂಕಿನ ಗಡಿ ಉದ್ದಕ್ಕೂ ವ್ಯಾಪಿಸಿವೆ. ಪ್ರಾಕೃತಿಕವಾಗಿ ಸೌಂದರ್ಯದ ಖನಿಜವಾದ ಸಾಗರವು ಎತ್ತರದ ಶಿಖರಗಳು ಹುಲುಸಾದ ಸಸ್ಯಗಳಿಂದ ಹಸಿರು ಭತ್ತದ ಗದ್ದೆ, ಅಡಿಕೆ ಮರ, ತೆಂಗು, ರಾಗಿ ಮುಂತಾದ ಬೆಳಗಳಿಂದ ತುಂಬಿ ಪ್ರಾಕೃತಿಕವಾಗಿ ಕಂಗುಗೊಳಿಸುತ್ತದೆ.

ಜಲ ಸಂಪತ್ತು

ಸಮಸ್ತ ಜಗತ್ತಿಗೆ ನೀರೆ ಆಧಾರ, ನೀರಿಲ್ಲದೆ ಸಸ್ಯಗಳಿಲ್ಲ, ಅರಣ್ಯವಿಲ್ಲ, ಮಾನವ ಪ್ರಪಂಚವಿಲ್ಲ. ಮಾನವ ಹಾಗೂ ಪ್ರಾಣಿ ಸಂಕುಲಕ್ಕೆ ಅಗತ್ಯವಾಗಿರುವುದು ನೀರೆ ಆಗಿದೆ. ಇಂತಹ ನೀರು ಶಿವಮೊಗ್ಗ ಜಿಲ್ಲೆಯಲ್ಲಿ ಹೇರಳವಾಗಿರುವುದರಿಂದ ಇಲ್ಲಿ ಅತ್ಯಧಿಕ ಮಳೆ ಬೀಳುವದರಿಂದ ಹಲವಾಡಿ ಮತ್ತು ಗೋವರ್ಧನಗಿರಿ, ಕೋಗಾರ ಮುಂತಾದ ಕಡೆಗಳಲ್ಲಿರುವ ಅರಣ್ಯ ಸಂಪತ್ತು ಈ ತಾಲೂಕಿನ ವರದಾನವಾಗಿದೆ.

ಗೋವರ್ಧನಗಿರಿ ಸುಮಾರು ೮೪೪ ಮೀ ಎತ್ತರದಲ್ಲಿದೆ. ವರದಾ ನದಿಯ ೮೫೦ ಚ.ಮೈ ನೀರು ಬರುವ ಪ್ರದೇಶವನ್ನು ಹೊಂದಿದೆ. ತುಂಗ-ಭದ್ರ-ಶರಾವತಿ-ಅಘನಾಶಿನಿ, ಬೇಡ್ತಿ, ನೇತ್ರಾವತಿ, ದಂಡಾವತಿ ಎಂಬ ನದಿಗಳು ತಾಲೂಕಿನ ಮೂಲಕ ಹಾದು ಹೋಗುತ್ತವೆ. ವಿಶೇಷವಾಗಿ ಅನೇಕ ನದಿಗಳ ಆಗರವಾದ ಸಾಗರ ತಾಲೂಕು ಜಲ ಸಂಪತ್ತಿನ ಸ್ಥಿತಿ ಸುಸ್ಥಿತಿಯಲ್ಲಿದೆ. ಶಿವಮೊಗ್ಗ ಜಿಲ್ಲೆಯ ಜಲ ವಿಭಜಕ ರೇಖೆಯು ಪಶ್ಚಿಮ ಘಟ್ಟಗಳನ್ನು ಸರಿಸಿ ಉತ್ತರದಿಂದ ದಕ್ಷಿಣಕ್ಕೂ ಸಾಗರದ ಮೂಲಕ ಕುದುರೆಲಾಳದಾಕರವಾಗಿ ಮುಂದುವರಿದು ಧಾರವಾಡದ ಸಮೀಪ ಪಶ್ಚಿಮಕ್ಕೆ ತಿರುಗಿ ಗೋವ ಗಡಿಯವರೆಗೂ ಮುಂದುವರಿಯುವದು. ಜಲ ವಿಭಾಜಕ ರೇಖೆ ಮತ್ತು ಭೂಸ್ವರೂಪಗಳ ಇಳಿಜಾರನ್ನು ಅನುಸರಿಸಿ ಶಿವಮೊಗ್ಗದಲ್ಲಿ ಹರಿಯುವ ನದಿಗಳ ದಿಕ್ಕನ್ನು ವಿಂಗಡಿಸಲಾಗುತ್ತದೆ. ತಾಲೂಕಿನಲ್ಲಿ ಅನೇಕ ನದಿಗಳು ಹರಿಯುತ್ತವೆ. ಆದ್ದರಿಂದ ಲಿಂಗನಮಕ್ಕಿ ಆಣೆಕಟ್ಟು, ಶರಾವತಿ ಜಲಾನಯನ ಪ್ರದೇಶ ಮುಂತಾದ ಆಣೆಕಟ್ಟುಗಳನ್ನು ನಿರ್ಮಾಣ ಮಾಡುವ ಮೂಲಕ ರೈತರ ಬದುಕಿನ ಆಶಾ ದೀಪಗಳಾಗಿವೆ. ಸಾಗರ ತಾಲೂಕಿನಲ್ಲಿ ವಾರ್ಷಿಕ ಸರಾಸರಿ ೨೫೦೦ ಮಿ.ಮಿ ಕ್ಕೆ ಮಳೆಪ್ರಮಾಣ ಹೆಚ್ಚಿರುತ್ತದೆ. ಆ ಕಾರಣಕ್ಕಾಗಿ ಈ ಪರಿಸರವು ಸದಾ ಹಚ್ಚಹಸಿರಿನಿಂದ ಕಂಗೊಳಿಸುತ್ತಿರುತ್ತದೆ.

ವ್ಯವಸಾಯ

ಸಾಗರ ತಾಲೂಕು ಪ್ರಧಾನವಾಗಿ ವ್ಯವಸಾಯವನ್ನೇ ಅವಲಂಬಿಸಿರುವ ಪ್ರದೇಶವಾಗಿದ್ದು, ಭತ್ತ, ಕಬ್ಬು, ಅಡಿಕೆ ಹಾಗೂ ತೆಂಗಿನ ಬೆಳೆಗಳು ಮತ್ತು ಇತ್ತೀಚೆಗೆ ಅನಾನಸ್, ಗೇರುಬೀಜದಂತ ಬೆಳೆಗಳನ್ನು ಬೆಳೆಯಲು ಅನೂಕೂಲಕರವಾದ ಮಣ್ಣಿನ ಸಾಂದ್ರತೆ ಒಳಗೊಂಡಿದೆ. ಬಹಳಷ್ಟು ಮಳೆ ಬೀಳುವ ಪ್ರದೇಶವಾದ ಸಾಗರದ ಮಣ್ಣು ಜವಳು ಹಾಗೂ ಜವಳಿಬಣ್ಣದ ಲೋಹ ಮತ್ತು ಕಬ್ಬಿಣಾಂಶಗಳನ್ನು ವ್ಯಕ್ತಪಡಿಸುವ ಭೂಮಿಯಾಗಿದೆ.

ವ್ಯವಸಾಯದ ವಿಸ್ತರಣೆಯ ಯೋಜನೆಯ ಅನ್ವಯ ಸಾಗರ ತಾಲೂಕು ಕಸಬಾ, ಆನಂದಪುರ ಮತ್ತು ತಾಳಗುಪ್ಪ ಎಂಬ ಮೂರು ಕಂದಾಯ ವಿಭಾಗಗಳನ್ನು ವಿಂಗಡಿಸಲಾಗಿದ್ದು ತಾಲೂಕಿನಲ್ಲಿ ೧೯೮೫ರ ಒಂದು ವರದಿಯಂತೆ ೩೦,೦೨೪ ಹೆಕ್ಟೇರುಗಳಷ್ಟು ಭೂಮಿ ಸಾಗುವಳಿಗೆ ಲಭ್ಯವಿತ್ತು. ಅದರ ಪ್ರಮಾಣ ಪ್ರಸ್ತುತ ಜಾಸ್ತಿಯಾಗಿರಬಹುದಾಗಿದೆ. ಸುಮಾರು ೮೪೩೬ ಹೆಕ್ಟೇರುಗಳಷ್ಟು ಭೂಮಿ ನೀರಾವರಿಗೆ ಒಳಪಟ್ಟರೆ ಕಾಲುವೆಗಳಿಂದ ಕೆರೆಗಳಿಂದ, ಬಾವಿಗಳಿಂದ ಇನ್ನಿತರ ಮೂಲಗಳಿಂದ ೨೦೦೦ಕ್ಕೂ ಹೆಚ್ಚು ಹೆಕ್ಟೇರುಗಳಷ್ಟು ಭೂಮಿ ನೀರಾವರಿ ಪ್ರದೇಶವಾಗಿದೆ. ಸರ್ಕಾರದ ಅನೇಕ ಪುನರ್-ವಸತಿ ಯೋಜನೆಗಳ ಮತ್ತು ಇನ್ನಿತರ ಅಭಿವೃದ್ಧಿ ಯೋಜನೆಗಳು ಕೃಷಿ ಕಾರ್ಮಿಕರಿಗೆ ಸಣ್ಣ ರೈತರಿಗೆ ಅತಿ ಸಣ್ಣ ರೈತರಿಗೆ ಸಹಾಯ ಹಸ್ತ ಚಾಚುವ ಮೂಲಕ ವ್ಯವಸಾಯಕ್ಕೆ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿದೆ. ಹೀಗಾಗಿ ಸಾಗರ ತಾಲೂಕಿನಲ್ಲಿ ಇಂದು ವ್ಯವಸಾಯದಲ್ಲಿ ತುಂಬಾ ಮಹತ್ತರವಾದ ಬದಲಾವಣೆ ಕಂಡುಬರುತ್ತದೆ. ಸಾಗರ ತಾಲೂಕಿನಲ್ಲಿ ವ್ಯವಸಾಯಕ್ಕೆ ತುಂಬಾ ಪ್ರಾಸ್ತ್ಯವಾದ ಭೂಮಿ ಇರುವ ಜೊತೆಗೆ ಈ ತಾಲೂಕು ಸರ್ಕಾರಕ್ಕೆ ಮತ್ತು ಸಮಾಜಕ್ಕೆ

ಬೆಲೆಬಾಳುವಂತ ತೇಗ, ಶ್ರೀಗಂಧ, ಹೊನ್ನೆ, ಸಿಲ್ವರ್, ಬೀಟೆ ಹಾಗೂ ಇನ್ನಿತರ ಬೆಲೆಬಾಳುವ ಗಿಡ ಮೂಲಿಕೆಗಳಿಗೆ ಸಂಬಂಧಿಸಿದ ಸಸ್ಯ ಸಂಕುಲಗಳಿಂದ ಕೊಡುಗೆಯಾಗಿ ನೀಡಿದೆ. ಅಪ್ಪಟ ಮಲೆನಾಡು ತಾಲೂಕಾಗಿ ಸಾಗರವು ಫಲವತ್ತಾದ ಭೂಮಿ, ಭೂಮಿಗೆ ಅನುಗುಣವಾದ ಬೆಳೆಗಳು ಬೆಳೆಯುವ, ಹೆಚ್ಚು ಇಳುವರಿಯನ್ನು ದೊರಕಿಸಿಕೊಡುವ ಮೂಲಕ ರೈತ, ಕಾರ್ಮಿಕರ ಜೀವನದಲ್ಲಿ ನೆಮ್ಮದಿಯ ಮಂದಹಾಸಕ್ಕೆ ಕಾರಣವಾಗಿದೆ. ಯಾವುದೇ ನೀರಿನ ಸಮಸ್ಯೆ ತಲೆದೋರದೆ ಸಮಾನ ಬದುಕಿಗೆ ಅಗತ್ಯವಾದ ವಾತಾವರಣ ಸೃಷ್ಟಿಯಾಗಿರುವುದು ಈ ತಾಲೂಕಿನ ಹಿರಿಮೆಯಾಗಿದೆ.

ಸಾಗರ ತಾಲೂಕಿನಲ್ಲಿ ಖನಿಜಗಳು ಹೇರಳವಾಗಿ ಸಿಗುತ್ತವೆ. ಗುಡ್ಡಗಳಿಂದ ಆವೃತ್ತವಾದ ಈ ತಾಲೂಕಿನಲ್ಲಿ ಕಬ್ಬಿಣದ ಅದಿರುಗಳಿವೆ. ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರುಗಳು ಪಿಪ್ಸ್, ಫಿಲೈಟ್ ಹಾಗೂ ಸ್ಲೇಟ್ ಶಿಲೆಗಳು ಸಾಕಷ್ಟು ಪ್ರಮಾಣದಲ್ಲಿವೆ. ಸಾಗರ ತಾಲೂಕು ಶ್ರೀಮಂತ ಭೌಗೋಳಿಕ ಸಂಸ್ಕೃತಿಯನ್ನು ಹೇರಳವಾಗಿ ಹೊಂದಿದ್ದು ಒಂದು ಪರಿಪೂರ್ಣ ಉತ್ಪಾದನಾ ಘಟಕವಾಗಿ ಶಿವಮೊಗ್ಗ ಜಿಲ್ಲೆಯು ತನ್ನದೇ ಆದ ಅಸ್ತಿತ್ವವನ್ನು ಉಳಿಸಿಕೊಂಡಿದೆ. ನೈಸರ್ಗಿಕ ಸಂಪತ್ತಿನ ಶ್ರೀಮಂತಿಕೆಯಿಂದ ಕೂಡಿದ ಸಂಪದ್ಭರಿತವಾದ ಭೂಮಿಯನ್ನು, ಪ್ರಕೃತಿ ಸಂಪತ್ತನ್ನು ನೈಸರ್ಗಿಕ ಸಂಪನ್ಮೂಲಗಳನ್ನು ಮಾತ್ರವಲ್ಲದೆ ಕೃಷಿಗೆ ಯೋಗ್ಯವಾದ ಭೂಮಿಯನ್ನು ಹೊಂದಿದೆ. ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ತಾಲೂಕಾಗಿರುವ ಸಾಗರವು ಶ್ರೀಗಂಧದ ಮರಗಳನ್ನ, ಅಡಿಕೆ ಮರಗಳನ್ನು ಜೊತೆಗೆ ಕಾಲಕಾಲಕ್ಕೆ ಉತ್ತಮ ಫಸಲು ನೀಡುವ ಭೂಮಿಯನ್ನು ವಾತಾವರಣದ ಅನುಕೂಲಕ್ಕೆ ತಕ್ಕಂತೆ ಭತ್ತ, ಕಬ್ಬು, ಅಡಿಕೆಗಳ. ಗೇರು ಬೆಳೆ ಅಕೇಶಿಯಂತ ಬೆಳೆಗಳನ್ನು ಬೆಳೆಯುವ ಮೂಲಕ ಸಂಪನ್ಮೂಲತೆಯಲ್ಲಿ ಸುಭದ್ರವಾದ ಸ್ಥಾನವನ್ನು ಹೊಂದಿದೆ.

ಕೃಷಿಗೆ ಯೋಗ್ಯವಾದ ಭೂಮಿಯನ್ನು ಹೊಂದಿರುವ ಈ ತಾಲೂಕು ಬಹುಸಂಖ್ಯಾತ ರೈತಾಪಿ ವರ್ಗವನ್ನು ಹೊಂದಿದೆ. ನಿಸರ್ಗದ ಕೊಡುಗೆಯಾದ ಜಲಸಂಪತ್ತು, ಸಸ್ಯ ಸಂಪತ್ತು ತಾಲೂಕಿನ ಅಭಿವೃದ್ಧಿಗೆ ಪೂರಕವಾಗಿ ನಿಂತಿವೆ. ಈ ತಾಲೂಕಿನ ಜೀವನದಿಗಳಾದ ವರದಾ-ತುಂಗಾ-ಭದ್ರ ಅಘನಾಶಿನಿಗಳ ತಾಲೂಕಿನಾದ್ಯಂತ ಹರಿಯುತ್ತವೆ. ತಾಲೂಕಿನಲ್ಲಿ ಲಿಂಗನಮಕ್ಕಿ, ತಲಕಳಲೆ ಮುಂತಾದ ಜಲಾಶಯಗಳು ವಿದ್ಯುತ್ ಉತ್ಪಾದನೆಯ ಜೊತೆಗೆ ಆರ್ಥಿಕ ಸಂಪನ್ಮೂಲತೆಯ ವೃದ್ಧಿಗೆ ಕಾರಣವಾಗಿವೆ. ಸಾಗರದಲ್ಲಿ ಕೃಷಿಗೆ ಪೂರಕವಾಗುವಂತೆ ಹಲವಾರು ಸರ್ಕಾರಿ ಯೋಜನೆಗಳಿವೆ. ಆ ನಿಟ್ಟಿನಲ್ಲಿ ತಾಲೂಕಿನಲ್ಲಿ ೭೦೫ ಕೆರೆಗಳ ಹಲವಾರು ಜಲಾಶಯಗಳ ಸುಮಾರು ಕೆರೆಗಳಲ್ಲಿ ಮೀನು-ಗಾರಿಕೆಯಂತೆ ಉದ್ಯಮಗಳನ್ನು ಮಾಡುವ ಮೂಲಕ ಆರ್ಥಿಕತೆಯ ಸದೃಡತೆಗೆ ದಾರಿತೋರಿಸಲಾಗಿದೆ. ಕೈಗಾರಿಕೆ ರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಈ ತಾಲೂಕು ೧೯೯೧ರಲ್ಲಿ ವರದಾ ಹಂಚಿನ ಕಾರ್ಖಾನೆ, ಜೋಗದ ಗಾಂಧಿ ವಿದ್ಯುಧಿಕರಣ ಕೇಂದ್ರ, ತಾಳುಗಪ್ಪ, ಇಂಡಿಯ್ ಪ್ಲೆವುಡ್ ಕಾರ್ಖಾನೆ, ರೈತಬಂಧು ಗ್ರಾಮದ್ಯೋಗ, ಅಲ್ಯೂಮಿನಿಯಮ್,

[illegible]

[illegible]

[illegible]

ಕಾಗದ ತಯಾರಿಕೆ, ಹಂಚಿನ ಕಾರ್ಖಾನೆ, ವ್ಯವಸಾಯ ಸಾಮಗ್ರಿ ಉತ್ಪಾದನೆ ಕೈಗಾರಿಕ ಘಟಕಗಳು ಕಾರ್ಯನಿರ್ವಹಿಸುತ್ತವೆ. ಶ್ರೀಗಂಧದ ಘಟಕ, ಅಗರಬತ್ತಿ, ಕಾಗದ ಚೀಲಗಳು ಪ್ಲಾಸ್ಟಿಕ್ ಗುಂಡಿಗಳನ್ನ ತಯಾರಿಸುವ ಹಲವಾರು ಕಾರ್ಖಾನೆಗಳಿವೆ. ಒಟ್ಟಾರೆಯಾಗಿ ತಾಲೂಕಿನ ನಾಡಿಗೆ ಬೆಳಕು ನೀಡುವ ವಿದ್ಯುತ್ ಕೈಗಾರಿಕೆ ಕೇಂದ್ರಬಿಂದುವಾಗಿದೆ. ಈ ಎಲ್ಲ ಅಂಶಗಳು ಸಾಗರ ತಾಲೂಕು ಭೌಗೋಳಿಕತೆಗೆ ಅನುಗುಣವಾಗಿ ಪ್ರಗತಿಯತ್ತ ದಾಪುಗಾಲಿಡುತ್ತಿರುವ ತಾಲೂಕುಗಳಲ್ಲಿ ಒಂದು ವಿಶಿಷ್ಟವಾದುದಾಗಿದೆ.

೨.೩ ಹಸಲರ ಪರಿಚಯ

ಕರ್ನಾಟಕದ ಬುಡಕಟ್ಟು ಜನಾಂಗಗಳಲ್ಲಿ ಹಸಲರು ಒಂದು ಪ್ರಮುಖ ಸಮುದಾಯ ಈ ಬುಡಕಟ್ಟಿನ ಕುರಿತು ಇಲ್ಲಿಯವರೆಗೆ ಅಧ್ಯಯನ ನಡೆದಿರುವುದು ತುಂಬಾ ಕಡಿಮೆ. ಬ್ರಿಟೀಷ ಆಡಳಿತದಲ್ಲಿ ಕರ್ನಾಟಕದಲ್ಲಿ ನಡೆದ ಮಾನವಶಾಸ್ತ್ರ ಅಧ್ಯಯನಗಳು ಸಹ ಹಸಲರ ಬಗ್ಗೆ ಆಳವಾದ ಅಧ್ಯಯನ ಮಾಡದೇ ಇರುವುದು ಕಂಡುಬರುತ್ತದೆ. ಸ್ವಾತಂತ್ರ ಪೂರ್ವದಲ್ಲಿ ಆಂಗ್ಲ ಸರ್ಕಾರದ ಅಧಿಕಾರಿಗಳು, ಪ್ರವಾಸಿಗಳು, ಅವರು ಬರೆದ ದಿನಚರಿ ಪ್ರವಾಸ ಕಥನಗಳು ಕೆಲವು ಪುಸ್ತಕಗಳಲ್ಲಿ ಬುಡಕಟ್ಟು ಸಂಸ್ಕೃತಿ ಮತ್ತು ಜೀವನ ವಿಧಾನ ಕುರಿತ ಅಲ್ಪ ಮಾಹಿತಿ ಕಾಣುತ್ತದೆ. ಬ್ರಿಟೀಷ ಸರ್ಕಾರವು ಅನೇಕ ಸಂಪುಟಗಳಲ್ಲಿ ಹೊರತಂದ ಗೆಜೆಟೆಯರನಲ್ಲಿಯೂ ಕೂಡ ಜನಗಣತಿಯ ವರದಿಯನ್ನು ಆಧರಿಸಿ ಹೊರತಂದ ಸಂಪುಟವಾಗಿತ್ತೆ ವಿನಃ ಅದೊಂದು ಹಸಲರನ್ನು ಪರಿಚಯಿಸುವ ಪೂರ್ಣ ಪ್ರಮಾಣದ ಗ್ರಂಥವಾಗಿರಲಿಲ್ಲ ಸ್ವಾತಂತ್ರದ ನಂತರವು ಕೂಡ ಹಸಲರ ಬಗ್ಗೆ ಆಳವಾದ ಅಧ್ಯಯನ ನಡೆದಿರುವುದು ತುಂಬಾ ವಿರಳ. ಅವರು ಹಸಲರ ಬಗ್ಗೆ ನಡೆದ ಕೆಲವು ಅಧ್ಯಯನಗಳು ಹಸಲರ ಮೂಲವನ್ನು ನೀಡುವ ಪ್ರಯತ್ನ ಮಾಡಿವೆ. ಸಮುದಾಯದ ಪರಿಚಯವನ್ನು ನೀಡಿದ್ದಾರೆ.

ಹಸಲರು ಅಥವಾ ಹಲಸವಾರು ಎಂದು ಹಿಂದೇ ಕರೆಯಲ್ಪಡುತ್ತಿದ್ದ ಹಸಲ ಸಮುದಾಯವು ಹಿಂದಿನ ಕಾಲದಲ್ಲಿ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ, ಆಹಾರ ಹುಡುಕುತ್ತಾ ಅಲೆಯುತ್ತಿದ್ದ ಒಂದು ಪ್ರತ್ಯೇಕ ಬುಡಕಟ್ಟು ಪಂಗಡವಾಗಿತ್ತು. ಇವರು ಸಾಂಪ್ರದಾಯಿಕವಾಗಿ ಗತದಲ್ಲಿ ಬೇಟೆಗಾರರು ಕಾಪಿ ಅಡಿಕೆ ತೋಟಗಳಲ್ಲಿ ಕೂಲಿಗಳಾಗಿ ಕೆಲವರು ಕೃಷಿ ಕಾರ್ಮಿಕರು ಮೀನುಗಾರರು ಆಗಿದ್ದರು. ಮತ್ತು ಜೀತ ನಿರ್ಮೂಲ ಕಾನೂನು ಬರುವವರೆಗೂ ಹುಟ್ಟಾಳುಗಳಾಗಿದ್ದರು ಎಂಬುದಾಗಿ ಎನ್.ಹುಚ್ಚಪ್ಪ ಮಾಸ್ತರ ಕರ್ನಾಟಕ ಬುಡಕಟ್ಟು ಸಂಪುಟ-೧ರಲ್ಲಿ ಬರೆದ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಬುಡಕಟ್ಟಿನ ಹೆಸರು

ಹಸಲ ಎಂಬ ಪದವು ಕನ್ನಡದ 'ಹಸುಳೆ' ಎಂಬುವವರಿಂದ ಬಂದದ್ದಾಗಿದ್ದು 'ಹಸುಳೆ' ಎಂದರೇ ಮಗು ಎಂಬರ್ಥವನ್ನು ಕೊಡುತ್ತದೆ. ಹಸಲರ ಮುಗ್ದತೆ ಮತ್ತು ಸೇವಾ ಕಾರ್ಯದಲ್ಲಿ ತುಂಬಾ ನಿಷ್ಠರಾಗಿರುತ್ತಾರೆ

[illegible]

[illegible]

[illegible]

[illegible]

[illegible]

ಎಂಬ ಕಾರಣಕ್ಕಾಗಿ ಇವರನ್ನು ಹಸಲರು ಎಂದು ಕರೆದಿರಬಹುದು[೫] ಎಂಬ ಕಲ್ಪನೆ ಇದೆ. ಇದರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

೧೮೯೧ರಲ್ಲಿ ಮೈಸೂರು ಜನಗಣತಿಯು ಹಸಲರು ಪಶ್ಚಿಮ ಮಲೆನಾಡಿನಲ್ಲಿ ದಟ್ಟ ಅರಣ್ಯದಲ್ಲಿ ವಾಸವಾಗಿರುವ ಗುಡ್ಡಗಾಡು ಜನಾಂಗ ಎಂದು ಉಲ್ಲೇಖಿಸಲಾಗಿದೆ. ಆ ಸಂದರ್ಭದಲ್ಲಿ ಸಂಖ್ಯೆ ತುಂಬಾ ಕಡಿಮೆಯಾಗಿತ್ತು ಹಸಲರು ತುಂಬಾ ಶಕ್ತಿಶಾಲಿಗಳು ಮಲೆನಾಡಿನ ಅಡಿಕೆ ತೋಟಗಳಲ್ಲಿ ಕೆಲಸ ಮಾಡಲು ದಕ್ಷಿಣದಿಂದ ವಲಸೆಬಂದವರು ಎಂಬ ಮಾಹಿತಿ ಈ ಜನಗಣತಿಯಲ್ಲಿ ನೀಡಲಾಗಿದೆ.

ಬುಡಕಟ್ಟಿನ ಮೂಲ

ಕರ್ನಾಟಕದಲ್ಲಿ ನೆಲೆಸಿರುವ ಹಸಲರ ಬುಡಕಟ್ಟಿನ ಮೂಲದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಸ್ವತಃ ಹಸಲರ ಮೂಲದ ಬಗ್ಗೆ ಹಸಲರಿಗೆ ಗೊತ್ತಿಲ್ಲದೇ ಇರುವುದು ಕಂಡುಬರುತ್ತದೆ. ೧೯೨೨ರಲ್ಲಿ ರಚಿಸಿದ 'ದಿ. ಟ್ರೈಬ್ ಆ್ಯಂಡ್ ಕ್ಯಾಸ್ಟ ಆಫ್ ಬಾಂಬೆ' ಎಂಬ ಗ್ರಂಥದ ಎರಡನೇ ಸಂಪುಟದಲ್ಲಿ ಮುಂಬಯಿ ಪ್ರಾಂತ್ಯಕ್ಕೆ ಸೇರಿದ ಕಾರವಾರದ ಶಿರಸಿ, ಸಿದ್ದಾಪುರ, ಹೊನ್ನಾವರ ತಾಲೂಕುಗಳಲ್ಲಿ ಹಸಲರ ವಾಸ ಕಂಡುಬರುತ್ತದೆ ಎಂದು ಹೇಳಲಾಗಿದೆ.[೬] ೧೮೮೩ರಲ್ಲಿ ಕೆನರಾ ಗೆಜೆಟಿಯರನಲ್ಲಿ ವಾಯುವ್ಯ ಮೈಸೂರು ಪ್ರದೇಶದ ಶಿವಮೊಗ್ಗದಿಂದ ವಲಸೆ ಬಂದವರು ಎಂದು ಉಲ್ಲೇಖಿಸಲಾಗಿದೆ. ೧೯೦೧ರಲ್ಲಿ ಮೈಸೂರು ಗೆಜೇಟಿಯರ್‌ನಲ್ಲಿ ಪ್ರಾನ್ಸಿಸ್ ಹಸಲರನ್ನು ಕೆನರಾದ ಕೃಷಿ ಕಾರ್ಮಿಕರ ಗುಡ್ಡಗಾಡುಗಳಲ್ಲಿ ವಾಸಿಸುವ ಬುಡಕಟ್ಟಿನವರು ಎಂದು ಉಲ್ಲೇಖಿಸಲಾಗಿದೆ. ಧಾರವಾಡ ಜಿಲ್ಲೆ ಗೆಜೆಟಿಯರ್‌ನಲ್ಲಿ ಹಸಲರು ಧಾರ್ಮಿಕಗುರು ಲಿಂಗಾಯತ ಆತ ಶಿಕಾರಿಪುರದ ತೊಗರ್ಸಿಯಲ್ಲಿರುತ್ತಾನೆ. ಹಸಲರು ಹಾನಗಲ್ಲಿನಲ್ಲಿ ಮತ್ತು ಉತ್ತರಕನ್ನಡ ಶಿವಮೊಗ್ಗ ಅಕ್ಕಪಕ್ಕದ ಜಿಲ್ಲೆಗಳಲ್ಲಿರುವುದರಿಂದ ತಾಲೂಕಿನಿಂದ ತಾಲೂಕಿಗೆ ವಲಸೆ ಹೋಗಿರುವ ಸಾಧ್ಯತೆಗಳಿವೇ ಎಂದಿದ್ದಾರೆ. ಎಂ.ಷೆರಿಂಗ್‌ರವರು ''ಹಿಂದೂ ಟ್ರೈಬ್ಸ್ ಮತ್ತು ಕ್ಯಾಸ್ಟ್''ನಲ್ಲಿ ಹಸಲರು ಅಣ್ಯವಾಸಿಗಳು, ಮರಕಡಿಯುವುದೇ ಅವರ ಕಸಬೆಂದು ಉಲ್ಲೇಖಿಸಿದ್ದಾರೆ. ಲೂಯಿಸ್ ರೈಸ್ ''ಟ್ರೈಬ್ಸ್ ಆಫ್ ಮೈಸೂರು'' ಗ್ರಂಥದಲ್ಲಿ ಹಸಲರ ಮತ್ತು ಸೋಲಿಗರ ನಡುವಿನ ಪರಸ್ಪರ ಹೋಲಿಕೆ ಕುರಿತು ಹೇಳಿದ್ದಾರೆ. ಪಶ್ಚಿಮ ಘಟ್ಟದಲ್ಲಿ ಕಂಡುಬರುವ ಹಸಲರು ದಕ್ಷಿಣ ಕನ್ನಡದಿಂದ ಬಂದಿರಬಹುದು ಅವರ ಭಾಷೆ ತುಳು ಆಗಿತ್ತು ಎಂದು ಬರೆದಿದ್ದಾರೆ.

ಈ ಮೇಲಿನ ಅಂಶಗಳ ಮೂಲಕ ಹಸಲರ ಮೂಲದ ಬಗೆಗಿನ ಗೊಂದಲಗಳು ದೂರವಾಗಿ ಹಸಲರು ಮೂಲತ ದಕ್ಷಿಣ ಕನ್ನಡ ಜಿಲ್ಲೆ ಎಂದು ಗೊತ್ತಾಗುತ್ತದೆ. ಆದರೇ ಇನ್ನೊಂದು ಮಾಹಿತಿಯ ಪ್ರಕಾರ ಹಸ್ಲರ್, ಹಲ್ಸರ್, ಹಾಲ್ಸುವಾರ್, ಹಾಸವರ್ ಎಂಬ ಹೆಸರಿನಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ಕಂಡುಬರುತ್ತಾರೆ.[೭] ಆದರೇ ಅಧ್ಯಯನ ಪ್ರಕಾರ ಕಂಡುಕೊಂಡು ಸತ್ಯಾಂಶವೇ ಹಸಲರ

ತಾಯ್ನಾಡು ದಕ್ಷಿಣ ಕನ್ನಡ ಜಿಲ್ಲೆಯ ಆಗಿತ್ತು ಬಹುಶಃ ಅವರು ಕೆಲಸವನ್ನು ಅರಿಸಿಕೊಂಡು ಅಥವಾ ಬೇಟೆಯನ್ನು ಹುಡುಕಿಕೊಂಡು ಪೂರ್ವ ಮತ್ತು ಉತ್ತರದ ಕಡೆ ವಲಸೆ ಹೋಗಿರುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಅಲೆದಾಡುವ ಅಲೆಮಾರಿಗಳಾದ ಇವರು ತಮ್ಮ ಮಾತೃ ಭಾಷೆಯಾದ ತುಳುವನ್ನು ಮರೆತಿರಬಹುದಾಗಿದೆ.

ಹಸಲರು ಮುಖ್ಯವಾಗಿ ಕರ್ನಾಟಕದ ಉತ್ತರ ಕನ್ನಡ ದಕ್ಷಿಣ ಕನ್ನಡ ಶಿವಮೊಗ್ಗ, ಚಿಕ್ಕಮಗಳೂರುಗಳಲ್ಲಿ ಬಹುಸಂಖ್ಯಾತರಾಗಿದ್ದು, ಬೆಳಗಾವಿ, ಬಿಜಾಪುರ, ಹಾಸನ, ಮೈಸೂರು, ಧಾರವಾಡಗಳಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ.

ಹಸಲರ ಮೂಲದ ಬಗೆಗಿರುವ ಜನಪದ ಕತೆ

ಹಿಂದೇ ಹಸಲರು ತಮ್ಮ ಮೂಲದ ಬಗ್ಗೆ ಒಂದು ಪೌರಾಣಿಕ ಕಥೆಯನ್ನು ಹೇಳುತ್ತಾರೆ. ಶ್ರೀ ರಾಮಾಯಣದಲ್ಲಿ ಬರುವ ಒಂದು ಕಥೆಯನ್ನು ಪ್ರಸ್ತಾಪಿಸುವ ಮೂಲಕ ತಮ್ಮ ಮೂಲವನ್ನು ಪರಿಚಯಿಸುತ್ತಾರೆ. ಶ್ರೀರಾಮಚಂದ್ರ ಅಗಸನೊಬ್ಬನ ಮಾತಿನಿಂದ ನೊಂದು ಗರ್ಭಿಣಿಯಾದ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರುತ್ತಾನೆ. ಆ ಸಂದರ್ಭದಲ್ಲಿ ತುಂಬು ಗರ್ಭಿಣಿಯಾದ ಸೀತೆ ಕಾಡಿನಲ್ಲಿ ಮಹರ್ಷಿ ವಾಲ್ಮೀಕಿಯ ಆಶ್ರಮದಲ್ಲಿ ಆಶ್ರಯ ಪಡೆಯುತ್ತಾಳೆ. ಸ್ವಲ್ಪ ದಿನಗಳ ನಂತರ ಸೀತೆ ಲವನೆಂಬ ಪುತ್ರನಿಗೆ ಜನ್ಮನೀಡುತ್ತಾಳೆ. ಲವನ ಜನನದ ಕೆಲವು ದಿನಗಳ ನಂತರ ಕೊಳೆಯಾದ ಬಟ್ಟೆಗಳನ್ನು ತೊಳೆಯಲು ಲವನನ್ನ ತೊಟ್ಟಿಲಲ್ಲಿ ಮಲಗಿಸಿ ನದಿಗೆ ತೆರಳಿದಳಂತೆ ಆ ಸಂದರ್ಭದಲ್ಲಿ ನದಿಯ ದಂಡೆಯ ಮೇಲೆ ವಾನರ ಸೈನ್ಯವೊಂದು ನೀರು ಕುಡಿಯುತ್ತಿದ್ದುದನ್ನು ಕಂಡ ಸೀತೆ ಇದು ಅಪಶಕುನವೆಂದು ಭಾವಿಸಿ ಆಶ್ರಮಕ್ಕೆ ಬಂದು ಲವನನ್ನು ಎತ್ತಿಕೊಂಡು ಪುನಃ ಬಟ್ಟೆಯನ್ನು ಶುಚಿಗೊಳಿಸಲು ಹೋಗುತ್ತಾಳೆ.

ಸ್ವಲ್ಪ ಸಮಯದ ನಂತರ ವಾಲ್ಮೀಕಿ ಮಹರ್ಷಿಯು ಆಶ್ರಮಕ್ಕೆ ಬಂದು ನೋಡಿದಾಗ ತೊಟ್ಟಿಲಲ್ಲಿ ಲವ ಕಾಣದೇ ಇದ್ದಾಗ ಮಹರ್ಷಿ ಕಂಗಾಲಾಗಿ ಯಾವಾಗಲೂ ಸೀತೆ ಮಗನನ್ನು ಹೊರಗಡೆ ಒಯ್ಯುತ್ತಲೆ ಇರಲಿಲ್ಲ ಎಂಬ ಅರಿವಿದ್ದ ಮಹರ್ಷಿ ಲವನನ್ನು ಯಾವುದೋ ದುಷ್ಟಮೃಗಗಳು ಎತ್ತಿಕೊಂಡು ಹೋಗಿರಬಹುದು ಎಂದು ಭಾವಿಸಿ ಸೀತೆಗೆ ಏನು ಹೇಳುವುದು ಎಂದು ತೋಚದೇ ತನ್ನ ಮಂತ್ರ ಶಕ್ತಿಯಿಂದ ದರ್ಬೆಯೊಂದನ್ನು ತನ್ನ ಹಸ್ತದಲ್ಲಿರಿಸಿಕೊಂಡು ಮಗುವಿನ ರೂಪ ನೀಡಿ ಸೃಷ್ಟಿ ಮಾಡಿ ತೊಟ್ಟಿಲಲ್ಲಿ ಮಲಗಿಸುತ್ತಾನೆ. ಮಲಗಿಸಿದ ಕೆಲ ಸಮಯದ ನಂತರ ಆಶ್ರಮಕ್ಕೆ ಕೂಸಿನ ಜೊತೆ ಮರಳಿದ ಸೀತೆ ತೊಟ್ಟಿಲಲ್ಲಿ ಆಡುತ್ತಿದ್ದ ಮತ್ತೊಂದು ಮಗುವನ್ನು ನೋಡುತ್ತಾಳೆ. ಇದರ ಅರಿವು ವಾಲ್ಮೀಕಿಗೆ ಬಂದು. ಆತ ಸೀತೆಗೆ ''ಇದೆಲ್ಲ ನಿನ್ನಿಂದಾಗಿಯೇ ಆದದ್ದು ಆ ಮಗುವನ್ನು ಕೂಡ ನೀನೇ ಸಾಕು'' ಎಂದ ವಾಲ್ಮೀಕಿ ಮಂತ್ರಶಕ್ತಿ ದರ್ಬೆಯಿಂದ ಸೃಷ್ಟಿಸಿದ ಮಗುವಿಗೆ ಕುಶ ಎಂದು ನಾಮಕರಣ ಮಾಡುತ್ತಾರೆ, ಹೀಗೆ ಆಶ್ರಮದಲ್ಲಿ ಲವ ಕುಶರು ಬೆಳೆದರು.

[illegible]

ರಾಮನು ಬಿಟ್ಟ ಕುದುರೆಯನನ್ನು ಬಂಧಿಸಿ ಕಟ್ಟಿಸಿದ ಲವ ಕುಶರು ಸಮರ್ಥರಾಗಿ ರಾಮನೊಂದಿಗೆ ಯುದ್ಧದಲ್ಲಿ ಹೋರಾಡುತ್ತಾರೆ. ಇಲ್ಲಿ ತಮ್ಮದೆ ಕಾಡಿನಲ್ಲಿತಯಾರಿಸಿದ ಬಿಲ್ಲು ಬಾಣಗಳಿಂದ ಹೋರಾಡಿ ವಿಜಯಿಗಳಾಗುತ್ತಾರೆ. ಬಿಲ್ಲು ವಿದ್ಯೆಯಲ್ಲಿ ಪರಿಣತಿ ಪಡೆದ ಇವರಿಗೆ ಭಿಲ್ ಕ್ಷತ್ರಿಯ ಎಂಬ ಹೆಸರು ಬಂತು. ಆ ಕಾರಣಕ್ಕಾಗಿ ಹಸಲರು ತಮ್ಮನ್ನು ಕುಶನ ಸಂತತಿಯವರೆಂದು ಕರೆದುಕೊಳ್ಳುತ್ತಾರೆ. ಹಸ್ತದಿಂದ ಕುಶ ಜನಿಸಿದ್ದರಿಂದ ತಾವು ಹಸಲರು ಎಂದುಕೊಳ್ಳುತ್ತಾರೆ. ರಾಮನ ವಂಶಕ್ಕೆ ಸೇರಿದ ನಾವು ರಾಮಕ್ಷತ್ರಿಯರೆಂದು ಕರೆದುಕೊಳ್ಳುತ್ತಾರೆ. ಕಾಡಿನಲ್ಲಿ ಹುಟ್ಟಿರುವದರಿಂದ ತಾವು 'ಹಾಡಿಯೋರು' ಎಂದು ಸಹ ಕರೆದುಕೊಳ್ಳುತ್ತಾರೆ. ರಾಮ ರಾಜ್ಯದಲ್ಲಿ ಸಮಸ್ತ ಅಧಿಕಾರವು ತಮ್ಮ ಕೈಯಲ್ಲಿತ್ತು ಅನಂತರ ಎಲ್ಲ ಕಿತ್ತುಕೊಂಡರು ಎನ್ನುತ್ತಾರೆ. ಈ ಮೂಲಕ ತಿಳಿಯುವುದೇನೆಂದರೆ ಹಸಲರು ಮೂಲತಃ ರಾಮನ ವಂಶದವರಾಗಿದ್ದು ರಾಮನ ದರ್ಬಾರಿನಲ್ಲಿ ಸೈನಿಕರಾಗಿಯೂ ಸೇವಕರಾಗಿಯು ದುಡಿಯುತ್ತಿದ್ದರು. ಕಾಲಾಂತರದಲ್ಲಿ ವೈರುಧ್ಯಗಳು ತಲೆದೋರಿದಾಗ ಹಸಲರಿಂದ ಅಧಿಕಾರ ಕಿತ್ತುಕೊಂಡ ನಂತರ ಇವರು ಕಾಡಿನ ಉತ್ಪನ್ನಗಳಿಂದ ತಾವೇ ತಯಾರಿಸಿದ ಬಿಲ್ಲು ಬಾಣಗಳ ಜೊತೆಗೆ ಕಾಡನ್ನು ಸೇರಿದರು ಎಂಬುದಾಗಿ ಹಸಲರ ವ್ಯಕ್ತಿ ಕುಡುಗುಂಜಿ ರಾಮಣ್ಣ ಹೇಳುವ ಕಥೆ.

ತಮ್ಮನ್ನು ಬಿಲ್ ಕ್ಷತ್ರಿಯರೆಂದು ರಾಮನ ವಂಶದವರೆಂದೂ ಕರೆದುಕೊಳ್ಳುವ ಹಸಲರು ಅಗ್ನಿಹೊನ್ನಯನ ಮತದರೆಂದು ಕರೆದುಕೊಳ್ಳುತ್ತಾರೆ. ಇವರ ಮೂಲ ಪುರುಷ ಹೊನ್ನಾಪ್ಪ ಇತ ವೀರಶೈವ ಸಂತ ಎಂದು ಹೇಳುತ್ತಾರೆ. ಚೆಲುವಾದಿ ಚನ್ನಯ್ಯ, ಮಡಿವಾಳ ಮಾಚಯ್ಯ, ಮಾದರ ಹರಳಯ್ಯ, ಕುಂಬಾರ ಗುಂಡಪ್ಪ ಇವರ ಸಮಕಾಲೀನರೆಂದು ಹೇಳುತ್ತಾರೆ. ಇದರ ಜೊತೆಗೆ ಮೇದರು ಮತ್ತು ಹಸಲರು ದಾಯಾದಿಗಳು ಬಹಳ ಹತ್ತಿರ ಸಂಬಂಧಿಗಳು ಹೊನ್ನಯ್ಯ ಮತ್ತು ಮೇದಾರ ಮೂಲ ಪುರುಷ ಚನ್ನಯ್ಯ ಸಹೋದರರಾಗಿದ್ದರು ಆದ್ದರಿಂದ ಹಸಲರು ಮೇದರು ದಾಯಾದಿಗಳು ಎಂದು ಹಸಲರು ಹೇಳುತ್ತಾರೆ. ಆದರೇ ಇದನ್ನು ಮೇದರರು ಒಪ್ಪುವುದೇ ಇಲ್ಲ. ಮೇದರ ಚನ್ನಯ್ಯನನ್ನು ಮೂಲ ಪುರುಷ ಎಂದು ಒಪ್ಪಿಕೊಳ್ಳುವುದೇ ಇಲ್ಲ. ಹಸಲರು ಮೇದಾರರೊಂದಿಗಿನ ತಮ್ಮ ಸಂಬಂಧವನ್ನು ದೃಢಪಡಿಸುವ ಸಲುವಾಗಿ ಕಥೆಯೊಂದನ್ನು ಹೇಳುತ್ತಾರೆ. ಒಬ್ಬ ಹಸಲ ಒಂದು ಬಿದಿರು ತುಂಡಿನಿಂದ ಒಂದು ವಸ್ತುಮಾಡಿದ ಆದರೇ ಒಬ್ಬ ಮೇದಾರ ಅದೇ ಬಿದಿರಿನ ತುಂಡಿನಿಂದ ಎರಡು ವಸ್ತುಗಳನ್ನು ಮಾಡಿದ ನಂತರ ಇಬ್ಬರಿಗೂ ಜಗಳವಾಗಿ ಮೇದಾರರವನು ಚಾಕು ಹಿಡಿದುಕೊಂಡು ಹೋದ ಹಸಲರವನು ಆತನನ್ನ ಬೆನ್ನಟ್ಟಿಕೊಂಡು ಹೋದ ನಂತರ ಚಾಕುವಿನ ಹಿಡಿ ಹಸಲನ ಕೈಯಲ್ಲಿ ಹಿಡಿಯಲ್ಲದ ಚಾಕು ಮೇದಾರ ಕೈಯಲ್ಲಿ ಉಳಿಯಿತು. ಆ ಕಾರಣಕ್ಕಾಗಿ ಮೇದಾರರು ತಮ್ಮ ಕೆಲಸದಲ್ಲಿ ಹಿಡಿಯಿರುವ ಚಾಕನ್ನು ಬಳಸುವುದಿಲ್ಲ. ಮೇದಾರರು ಬಿದಿರನ್ನು ತಲೆಯ ಮೇಲೆ ಹೊರುವುದಿಲ್ಲ, ಹೆಗಲ ಮೇಲೆ ಹೊರುತ್ತಾರೆ. ಹಸಲರು ಬಿದಿರನ್ನ ಹೆಗಲಮೇಲೆ ಹೊರುವುದಿಲ್ಲ. ತಲೆಯ ಮೇಲೆ ಹೊರುತ್ತಾರೆ.[೯] ಆದರೆ ಈ ಕಥೆಗೆ ಸಂಬಂಧಿಸಿದಂತೆ ಪೂರಕ ಮಾಹಿತಿ ಅಥವಾ ಯಾವುದೋ

[illegible]

[illegible]

ಆಧಾರಗಳು ಸಿಗುವುದೇ ಇಲ್ಲ. ಹಸಲರ ಮೂಲದ ಬಗ್ಗೆ ಮತ್ತು ಅವರ ಸಾಂಸ್ಕೃತಿಕ ನಾಯಕರ ಬಗ್ಗೆ ಬುಡಕಟ್ಟಿನ ಶೂರರ ಧೈರ್ಯ ಸಾಹಸಗಳನ್ನು ಭಿತ್ತರಿಸುವ ಅನೇಕ ದಂತಕಥೆಗಳು ಹಸಲರಲ್ಲಿವೆ. ಇಲ್ಲಿ ಕೆಲವು ಕಥೆಗಳು ಹಸಲರ ಮೂಲದ ಬಗ್ಗೆ ಸ್ಪಷ್ಟೀಕರಣ ನೀಡುತ್ತವೆ.

ಸಾಗರ ತಾಲೂಕಿನ ಹಸಲರು

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹೀರೆಮನೆ, ಅರೆಹದ್ದೆ, ಹೊಸಗದ್ದೆ ಬೆಳ್ಳೆಣ್ಣೆ, ಗಿಳೀಗಾರು, ಎಳ್ಳೂರು, ಸಸರವಳ್ಳಿ, ಖಂಡಿಕಾ, ಗೀಜಗಾರು, ಕರ್ಕಿಕೊಪ್ಪ, ಬೇಳೂರು, ಬಿಳೆಯೂರು, ಚುಲ್ಮಿಕೆರೆ, ಅರಬಳ್ಳಿ, ತಂಬ್ರಿ, ಮುಪ್ಪನಾ, ಕುಡಗುಂಜಿ ಕಾಳಮಂಜಿ ಮುಂತಾದ ಹಳ್ಳಿಗಳಲ್ಲಿ ಹಸಲರು ನೆಲೆಗೊಂಡಿದ್ದಾರೆ.

೧೯೫೦ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಪಟ್ಟಿಯ ಆದೇಶ ಹಾಗೂ ಪರಿಷ್ಕರಿಸಲ್ಪಟ್ಟ ೧೯೫೬ರ ಆದೇಶದ ಪ್ರಕಾರ ಸಾಗರ ತಾಲೂಕಿನ ಹಸಲರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲಾಗಿದೆ. ಸಾಗರ ತಾಲೂಕಿನ ಹಸಲರು ತಮ್ಮನ್ನು ಬಿಲ್ ಕ್ಷತ್ರಿಯರು ಮತ್ತು ಅಗ್ನಿ ಹೊನ್ನಪ್ಪನ ಮತದವರು ಎಂದು ಕರೆದುಕೊಳ್ಳುವುದಕ್ಕೆ ಹೆಮ್ಮೆ ಪಡುತ್ತಾರೆ.

ಸಾಗರ ತಾಲೂಕಿನ ಹಸಲರೆಲ್ಲ ಹೆಚ್ಚಾಗಿ ಬಾಲೆಬಳಿ, ಗಂಗರ ಬಳಿ, ಶಿರನಬಳಿ, ಶೆಟ್ಟಿಬಳಿ, ಮಲ್ಲಿಗೆ ಬಳಿ, ತೊಳನ ಬಳಿ, ಶಿವನಬಳಿ, ಬಳಿಕೆಯಲ್ಲಿವೇ ಈ ಬಗ್ಗೆ ಯುವಜನಾಂಗವನ್ನು ವಿಚಾರಿಸಿದಾಗ ಬಳಿಗಳನ್ನು ಮರೆತಿರುವುದು ಕಂಡುಬರುತ್ತದೆ. ಮುಖ್ಯವಾಗಿ ಮದುವೆ ಸಂಬಂಧಗಳ ಆಧಾರದ ಮೇಲೆಯೇ ಗೋತ್ರಗಳನ್ನು ನಿರ್ಧರಿಸುವುದು ಕಾರಣಕ್ಕಾಗಿ ಗೋತ್ರ ಬಳಿಗಳ ಅರಿವು ಅವರಿಗಿಲ್ಲದೇ ಇರಬಹುದು.

ಸಾಗರ ತಾಲೂಕಿನ ಹಸಲರು ಕನ್ನಡ ಮಾತನಾಡುತ್ತಾರೆ. ಮತ್ತು ಇಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಕಂಡುಬರುತ್ತದೆ. ಸಾಗರ ತಾಲೂಕಿನಲ್ಲಿನ ಹಸಲರು ಸಾಮಾನ್ಯವಾಗಿ ಏಕಾಂತದ ವಾಸಕ್ಕೆ ಇಷ್ಟಪಡುತ್ತಾರಾದ್ದರಿಂದ ಇವರ ಮನೆಗಳ ನಿರ್ಮಾಣ ಒಂದು ಮನೆಯಿಂದ ಮತ್ತೊಂದು ಮನೆಗೆ ಅಂತರವಿರುತ್ತದೆ. ಕಾಡಿನ ಮದ್ಯೆ ವಾಸಮಾಡಲಿಕ್ಕೆ ಇವರು ತುಂಬಾ ಇಷ್ಟಪಡುತ್ತಾರೆ. ಇವರು ವಾಸಮಾಡುವ ಸ್ಥಳಕ್ಕೆ ಸಾಮಾನ್ಯವಾಗಿ 'ಹಸ್ಲರ್ ಕೇರಿ' ಕಾಲೋನಿ, ಎಂದು ಕರೆಯಲಾಗುತ್ತದೆ. ಇತ್ತೀಚೆಗೆ ಹಸಲರು ವಾಸಿಸುವ ಬಹುತೇಕ ಹಳ್ಳಿಗಳಲ್ಲಿ ಕಾಲೋನಿಗಳನ್ನು ನಿರ್ಮಿಸಿಕೊಂಡಿದ್ದಾರೆ.

ಸಾಗರ ತಾಲೂಕಿನ ಹಸಲರು ಕೃಷಿಯನ್ನೆ ಮುಖ್ಯ ಕಸುಬನ್ನಾಗಿ ಹೊಂದಿರುವ ಜೊತೆಗೆ ಹೆಚ್ಚಿನ ಆದಾಯವನ್ನು ವ್ಯಾಪಾರ, ಕೂಲಿ , ಗಾರೆಯಂತ ಇತರ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವಿವಿಧ ವೃತ್ತಿಗಳಲ್ಲಿ ಪುರುಷ ಮತ್ತು ಸ್ತ್ರೀಯು ಸಮಾನವಾಗಿ ದುಡಿಮೆಯಲ್ಲಿ ತೊಡಗಿಸಿಕೊಂಡಿದ್ದಾರೆ. ದಿನಕ್ಕೆ ೭೦ ರಿಂದ ೮೦ ರೂಪಾಯಿಗಳಿಸುವವರೆಗೆ ದುಡಿಯುವುದು ಇಂದು ಸಾಮಾನ್ಯವಾಗಿದ್ದು ದಿನನಿತ್ಯದ ಆಹಾರ ತಿಂಡಿ ಕಾಪಿಗಳಿಗೆ ೨೦-೩೦ರ ವರೆಗೆ ಖರ್ಚು ಮಾಡುತ್ತಾರೆ. ಬದಲಾದ ಪರಸ್ಥಿತಿಯಲ್ಲಿ ಈ ತಾಲೂಕಿನ

[illegible]

[illegible]

[illegible]

[illegible]

[illegible]

ಹಸಲರು ಪರಂಪರಾಗತ ವೃತ್ತಿಯೊಡನೆ ಬೇರೆ ವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಆರ್ಥಿಕ, ಸಾಂಸ್ಕೃತಿಕ ಜೀವನದಲ್ಲಿ ಸ್ಥಿತ್ಯಂತರಕ್ಕೆ ಒಳಗಾಗಿದ್ದರೂ ಇಂದು ಶ್ರಮಕ್ಕೆ ಹೆಚ್ಚಿನ ಮಹತ್ವ ನೀಡುವ ಹಸಲರು ಬೇಸರವಿಲ್ಲದೇ ಎಲ್ಲಾ ಬೇಸಾಯವನ್ನು ಮಾಡುತ್ತ ಜೀವನ ಮಟ್ಟದಲ್ಲಿ ಸುಧಾರಣೆ ಕಂಡುಕೊಂಡಿದ್ದಾರೆ.

ಸಾಗರ ತಾಲೂಕಿನ ಹಸಲರು ಬದಲಾದ ಪರಿಸ್ಥಿತಿಯಲ್ಲಿ ವಿಭಿನ್ನ ಮಾದರಿಯ ಜೀವನಕ್ರಮವನ್ನು ರೂಢಿಸಿಕೊಂಡಿದ್ದಾರೆ. ಇಲ್ಲಿ ಇವರು ಇಂದು ಚಹಾ ಪಾನೀಯದಂತಹ ದಿನನಿತ್ಯದ ಪಾನೀಯಗಳು ಜನಪ್ರಿಯವಾಗಿವೆ. ಹಿಂದೆ ಇದ್ದ ಕಾಟನ್ ಬಟ್ಟೆಗಳ ಬದಲಾಗಿ ಮಿಲ್ ಬಟ್ಟೆಗಳ ಧೋತಿ, ಸೀರೆಗಳನ್ನು ಧರಿಸುತ್ತಿದ್ದಾರೆ. ಸಾಂಪ್ರದಾಯಿಕವಾದ ಶಿಕ್ಷಣದ ಪ್ರವೇಶ ಪಡೆದವರೇ ಅಲ್ಲದೆ ಇತರರು ಕೂಡ ಮೈಗೆ ಅರೆತೋಳಿನ ಅಂಗಿ, ಪ್ಯಾಂಟ್, ಶರ್ಟ್ ಹಾಕುವದನ್ನ ಹೀರೆಮನೆ, ಕುಡಗುಂಜಿ ಹಸಲರು ರೂಢಿಸಿಕೊಂಡಿದ್ದಾರೆ. ಲಂಗ, ಚೂಡಿಧಾರ, ಮಣಿಸರ ರವಿಕೆ ಒಡವೆಗಳು ''ಕೊಪ್ಪಗ'' ಬದಲಾಗಿ ಯುವಕರು ಛತ್ರಿಗಳನ್ನು ಬಳಸುತ್ತಾರೆ. ಹೆಚ್ಚು ಕಡಿಮೆ ಟಿ.ವಿ., ಮೊಬೈಲ್, ರೇಡಿಯೊ ಮನೆಮನೆಗೆ ವಿದ್ಯುತ್ ದೀಪಗಳಿಂದ ವಿಜೃಂಭಿಸುತ್ತವೆ. ನಗರದ ಪ್ರಭಾವ ದಟ್ಟವಾಗಿ ಇಲ್ಲಿನ ಸಮುದಾಯ ಮೇಲಾಗಿದ್ದು ಸ್ತ್ರೀಯರಲ್ಲಿ ಗಾಜಿನ ಬಳೆಗಳು, ಸಾಬೂನು, ಹಣಿಗೆ, ಸ್ಟಿಕ್ಕರ್, ಚಪ್ಪಲಿ ಮೆಟ್ಟುವವರು ಸಾಮಾನ್ಯವಾಗಿದೆ. ಹಚ್ಚೆ ಹೂಯ್ಯಿಸಿಕೊಳ್ಳುವದು ಮಾಯವಾಗಿದೆ. ಪೆನ್ನು, ಬ್ಯಾಟರಿ, ಕನ್ನಡಕ, ಕ್ಯಾಮೆರ ಮುಬೈಲ್‌ಗಳ ವ್ಯಾಮೋಹ ಹೆಚ್ಚಾಗುತ್ತಿರುವಂತೆ ಕಾಣುತ್ತದೆ. ಒಟ್ಟಾರೆಯಾಗಿ ಸಾಗರ ತಾಲೂಕಿನ ಹಸಲರು ನೂತನ ಮನ್ವಂತರಕ್ಕೆ ಹೊಂದಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಹಸಲರ ನೆಲೆಗಳು

ಕರ್ನಾಟಕದಲ್ಲಿ ಸರ್ಕಾರದ ಪಟ್ಟಿಯಲ್ಲಿ ಪರಿಶಿಷ್ಟ ಪಂಗಡ ಎಂದು ಗುರುತಿಸಲ್ಪಟ್ಟ ಸುಮಾರು ೫೦ ಬುಡಕಟ್ಟು ಸಮುದಾಯಗಳು ನೆಲೆಗೊಂಡಿವೆ. ತಮ್ಮದೆ ಆದ ಆಚಾರ ವಿಚಾರ ರೂಢಿ ಸಂಪ್ರದಾಯ, ನಿರ್ದಿಷ್ಟ ವಾಸಸ್ಥಾನ ಕುಲ ಕಸುಬು, ನ್ಯಾಯ ಪದ್ಧತಿ, ಭಾಷೆ, ವೇಷಭೂಷಣಗಳನ್ನು ಹೊಂದಿ ವಿಶಿಷ್ಟವಾಗಿ ಗುರುತಿಸಿಕೊಂಡಿವೆ. ಬುಡಕಟ್ಟು ಸಮುದಾಯಗಳು ಪ್ರಾರಂಭದಲ್ಲಿ ಅಲೆಮಾರಿ ಅರೆ ಅಲೆಮಾರಿ ಸಮುದಾಯಗಳಾಗಿದ್ದವು ಕಾಲಾಂತರದಲ್ಲಿ ಶಾಶ್ವತ ನೆಲೆ ಕಂಡುಕೊಂಡಿರುವ ಸಮುದಾಯಗಳಾಗಿ, ಮಾರ್ಪಟ್ಟಿವೆ ಕೆಲವು ಸಮುದಾಯಗಳು ಇಂದಿಗೂ ಬೇಟೆ ಪಶುಪಾಲನೆಯನ್ನು ಅವಲಂಬಿಸಿ ಬದುಕುತ್ತಿವೆ. ೫೦ ಬುಡಕಟ್ಟುಗಳ ಪರಿಶಿಷ್ಟ ಪಂಗಡಕ್ಕೆ ಸೇರಿರುವ ಹಿನ್ನೆಲೆಯನ್ನು ನೋಡಿದಾಗ ಬುಡಕಟ್ಟು ಮೂಲ ಅನ್ಯರಾಜ್ಯಗಳಲ್ಲಿ ಕಂಡುಬರುತ್ತದೆ. ವೃತ್ತಿಯ ಕಾರಣಕ್ಕಾಗಿ ಸಾಮಾಜಿಕ, ಆರ್ಥಿಕ ರಾಜಕೀಯ ಕಾರಣಗಳಿಗಾಗಿ ಉದ್ಯೋಗವನ್ನು ಅರಸಿಕೊಂಡು ಪ್ರದೇಶದಿಂದ ಪ್ರದೇಶಕ್ಕೆ ಬಂದವುಗಳಾಗಿವೆ. ಹಾಗೆಯೇ ವಲಸೆಬಂದ

ಬುಡಕಟ್ಟುಗಳಲ್ಲಿ ಒಂದಾದ ಹಸಲರು ಬೇರೆ ಬೇರೆ ಕಾರಣಗಳಿಂದ ಇವತ್ತು ರಾಜ್ಯಾದ್ಯಂತ ವಿಸ್ತಾರಗೊಂಡಿದೆ. ಕರ್ನಾಟಕದಲ್ಲಿ ಹಸಲ ಬುಡಕಟ್ಟುವಿನ ವಿವಿಧ ಜಿಲ್ಲೆಗಳ ವಾಸವಾಗಿರುವ ಜನರ ಆಧಾರದ ಮೇಲೆ ಅವರು ನೆಲೆಗೊಂಡಿರುವ ಸ್ಥಳಗಳನ್ನು ಗುರುತಿಸುವಂತಹ ಪ್ರಯತ್ನ ಮಾಡಲಾಗಿದೆ.

ಹಸಲ ಸಮುದಾಯವು ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ನೆಲೆಕಂಡುಕೊಂಡಿದ್ದು, ಕರ್ನಾಟಕದಲ್ಲಿ ಹಸಲರ ಜನಸಂಖ್ಯೆ ಗಂ, ೧೦,೨೩೭, ಸ್ತ್ರೀ ೧೦,೫೮೩, ಸೇರಿ ಒಟ್ಟು ೨೦,೮೨೦ ಜನಸಂಖ್ಯೆಯನ್ನು ಹೊಂದಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ೧೧,೯೪೯ ಜನಸಂಖ್ಯೆಯನ್ನು ಹೊಂದಿದೆ. ಇದು ರಾಜ್ಯದಲ್ಲಿಯ ಅತಿ ಹೆಚ್ಚು ಹಸಲರನ್ನು ಹೊಂದಿದ ಜಿಲ್ಲೆಯಾಗಿದೆ. ಶಿವಮೊಗ್ಗದ ಸಾಗರ, ತೀರ್ಥಹಳ್ಳಿ, ಸೊರಬ, ಶಿಕಾರಿಪುರ ಹೊಸನಗರ ತಾಲೂಕುಗಳು ಒಳಗೊಂಡಂತೆ ೩,೭೭೮, ಪುರುಷರು ೩,೩೭೬, ಮಹಿಳೆಯರು ಸೇರಿ ಒಟ್ಟಾರೆ ೬,೭೫೪ ಜನಸಂಖ್ಯೆಯನ್ನು ಹೊಂದಿದೆ. ಉತ್ತರ ಕನ್ನಡದಲ್ಲಿ ೧೦೨೨, ಬೆಳಗಾಂ ೧, ಬಾಗಲಕೋಟೆ ೧, ಬಿಜಾಪೂರ ೪, ಗುಲ್ಬರ್ಗಾ ೨೩, ಬೀದರ ೩ ರಾಯಚೂರು ೧, ದಾವಣಗೆರೆ ೫, ಉಡುಪಿ ೧೪೯ ಬೆಂಗಳೂರು ೬೬, ಬೆಂಗಳೂರು ಗ್ರಾಮಾಂತರ ೨, ಹಾಸನ ೭೭೫, ದಕ್ಷಿಣ ಕನ್ನಡ ೬೫, ಜನಸಂಖ್ಯೆಯನ್ನು ಹೊಂದಿದೆ. ಒಟ್ಟಾರೆಯಾಗಿ ಸಮುದಾಯದ ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ೧೦,೬೬೦ ಎಂದು ದಾಖಲಾಗಿದೆ. ೧೯೯೧ರ ಜನಗಣತಿಯ ಪ್ರಕಾರ ೧೬,೭೮೦ ಜನ ಹಸಲರು ಕರ್ನಾಟಕದಲ್ಲಿದ್ದಾರೆ ಎಂದು ದಾಖಲಿಸಲಾಗಿದೆ. ೨೦೦೧ರ ಜನಗಣತಿಯ ಪ್ರಕಾರ, ೨೦,೮೨೦ ಹಸಲರು ಇದ್ದಾರೆ ಎಂದು ದಾಖಲಿಸಲಾಗಿದೆ. ಇದರ ಜೊತೆಯಲ್ಲಿ ಪರಿಶಿಷ್ಟ ಜಾತಿಯಲ್ಲಿ ಕಂಡುಬರುವ ಹಸಲರು ಕರ್ನಾಟಕದ ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಬೆಂಗಳೂರು, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಪರಿಶಿಷ್ಟ ಜಾತಿಯಲ್ಲಿ ಬರುವ ಹಸಲರ ಜನಸಂಖ್ಯೆ ಕರ್ನಾಟಕದಲ್ಲಿ ೬೯೨ ಎಂದು ನಮೂದಿಸಲಾಗಿದೆ.

ಒಟ್ಟಾರೆಯಾಗಿ ಮಲೆನಾಡಿನ ಬುಡಕಟ್ಟುಗಳಲ್ಲಿ ಹಸಲರು ಪ್ರಮುಖರಾಗಿದ್ದು. ಈ ಹಿಂದೆ ಬೇಟೆಗಾರರು, ಜೀತಗಾರರು ಆಗಿದ್ದ ಇವರು ಕಾಫಿ, ಅಡಿಕೆ ತೋಟಗಳಲ್ಲಿ ಕೂಲಿಗಳಾಗಿ ದುಡಿಯುತ್ತಿದ್ದರು. ಇಂದಿಗೂ ಇದೇ ಕಾಯಕದಲ್ಲಿ ಮುಂದುವರಿಯುತ್ತಿದ್ದ ಕೆಲವರು ಕೃಷಿಕೂಲಿ ಕೃಷಿಯೇತರ ಕೂಲಿ ಆಳುಗಳಾಗಿ ದುಡಿಯುತ್ತಿದ್ದಾರೆ. ಒಂದು ನಿರ್ಧಿಷ್ಟವಾದ ಆರ್ಥಿಕ ಮೂಲಗಳಿಲ್ಲದೇ ಅನಿವಾರ್ಯವಾಗಿ ಭೂ ಮಾಲಿಕರ ಕೈಕೆಳಗೆ ಜೀತದಾಳುಗಳಾಗಿ ದುಡಿಯುವ ಅನಿವಾರ್ಯತೆ ನಿರ್ಮಾಣವಾಗಿದೆ. ಸರ್ಕಾರವು ಇತ್ತೀಚಿಗೆ ನೀಡಿರುವ ತುಂಡು ಭೂಮಿ ಹಸಲರಿಗೆ ಲಭಿಸಿದೆ ಆದರೂ ಅದು ಸ್ವತಂತ್ರ ಆರ್ಥಿಕತೆಯನ್ನು ನಿರ್ಧರಿಸುವಲ್ಲಿ ವಿಫಲವಾಗಿದೆ.

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರುವ ಹಸಲರು ಕಂಡುಬರುತ್ತಿದ್ದು ಅವರನ್ನು ಹುಲಸ್ವಾರ್, ಹಲಸ್ವರ್, ಹಲ್ಸರ್, ಹಾಸ್ಲರ್ ಎಂದು ವಿವಿಧ ಹೆಸರುಗಳಿಂದ ಗುರುತಿಸಲ್ಪಡುತ್ತವೆ. ಈ

ಬುಡಕಟ್ಟಿನಲ್ಲಿ ಜನಸಂಖ್ಯೆಯ ಜನಗಣತಿಯ ಆಧಾರದ ಮೇಲೆ ಗಮನಿಸಿದಾಗ ಏರಿಳಿತ ಕಂಡುಬರುತ್ತದೆ. ಏರಿಳಿತಕ್ಕೆ ಮುಖ್ಯ ಕಾರಣ ಪರಿಶಿಷ್ಟ ಜಾತಿಯಲ್ಲಿ ಒಮ್ಮೆ ಇನ್ನುವೆ ಪರಿಶಿಷ್ಟ ಪಂಗಡದಲ್ಲಿ ಗಣಿಸಿದ ಕಾರಣ ಹಸಲರು ಎರಡು ಪಟ್ಟಿಯಲ್ಲಿದ್ದಾರೆ. ಕರ್ನಾಟಕದಲ್ಲಿ ಹಸಲರು ಹಲವಾರು ಪಂಗಡಗಳು ವಿಂಗಡಿಸಲಾಗಿದೆ. ಅವರನ್ನ ೧.ಬಳ್ಳಿ ಹಸಲರು ಅಥವಾ ಬೆಳ್ಳಾಳರು ೨.ಬಗ್ಗಾಲಿನ ಹಲಸರು ಅಥವಾ ಅಂತರ್ಗಾಲು ಹಸಲರು ೩.ನಾಡ ಹಸಲರು ೪.ಮಲೆ ಹಸಲರು ೫.ಕರ ಎಳೆಯುವ ಹಸಲರು ೬.ನಾಮಧಾರಿ ಹಸಲರು ೭.ಗೊಡ್ಡ ಹಸಲರು ೮.ಮುಗೇರ ಹಸಲ ೯.ಉಪ್ಪಾರ ಹಸಲ, ಇತ್ಯಾದಿಗಳ ಪರಿಶಿಷ್ಟ ಜಾತಿಯಲ್ಲಿ ಮಾಗೆರ, ಕೂಸ, ಪಾಲೊ ಎಂಬ ಪ್ರತ್ಯೇಕ ಪಂಗಡಗಳು ಕಂಡುಬರುತ್ತವೆ. ಕರ್ನಾಟಕದ ಹಸಲರಲ್ಲಿ ಇವರೆಗೆ ೨೩ ಬಳಿಗಳನ್ನು ಗುರುತಿಸಲಾಗಿದೆ. ಬಾಲೆ ಬಳಿ, ಗಂಗರಬಳಿ ಶಿರಿಶಿನ ಬಳಿ ಹೊಲೇನ ಬಳಿ, ಕೊಳಗ ಬಳಿ, ಶೆಟ್ಟಿ ಬಳಿ, ದಂಡಿನ ಬಳಿ, ಹದಲಿಗ ಬಳಿ, ಕುಂದಲಬಳಿ, ಮಲ್ಲಿಗೆ ಬಳಿ, ಕಾಡಾಚಿ ಬಳಿ, ಕುಳ್ಳಿಗ ಬಳಿ, ತೋಳನ ಬಳಿ, ಶಿವನ ಬಳಿ, ಆನೆ ಬಳಿ, ಬೆತ್ತನ ಬಳಿ, ನಾದೇಬಳಿ ಇವು ಪ್ರಾಣಿ ಪ್ರಕೃತಿಯನ್ನು ಪ್ರತಿನಿಧಿಸುವಂತವು, ಕರ್ನಾಟಕದ ಹಸಲರಲ್ಲಿ ತಂದೆಯ ಬಳಿಗಳಲ್ಲಿ ವಿವಾಹನಿಷೇಧವಿದ್ದು ತಾಯಿಯ ಬಳಿಗಳಲ್ಲಿ ವಿವಾಹಕ್ಕೆ ಮಾನ್ಯವಿದೆ. ವಧುದಕ್ಷಿಣೆ ಜಾರಿಯಲ್ಲಿದೆ.

ಹಸಲರು ತುಳು ಮತ್ತು ಕನ್ನಡ ಭಾಷೆಯನ್ನಾಡುತ್ತಾರೆ. ಮಾಂಸಹಾರಿಗಳಾದ ಇವರು ಭತ್ತ ಮುಖ್ಯಬೆಳೆಗಳ ಜೊತೆಗೆ ಆಹಾರವು ಕೂಡ ಆಗಿದೆ. ಹಿಂದೂಗಳ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ಮುಖ್ಯವಾಗಿ ಆರಿದ್ರಾಮಳೆ ಹಬ್ಬ, ಯುಗಾದಿ, ದಸರಾ, ದೀಪಾವಳಿ, ಸಂಕ್ರಾಂತಿ ಕೊಡೆ ಅಮಾವಾಸ್ಯೆಗಳನ್ನು ಹಬ್ಬಗಳನ್ನು ಮಾಡುತ್ತಾರೆ. ಕರ್ನಾಟಕದಲ್ಲಿ ಹಸಲರು ಹವ್ಯಕ ಬ್ರಾಹ್ಮಣರಲ್ಲಿ ಮತ್ತು ಲಿಂಗಾಯತರ ಅಡಿಕೆ ತೋಟಗಳಲ್ಲಿ , ಮನೆಗಳಲ್ಲಿ ದುಡಿಯುತ್ತಿರುವುದರಿಂದ ಅವರ ಸಂಸ್ಕೃತಿಯ ಪ್ರಭಾವ ಇವರ ಮೇಲಾಗಿದೆ.

ಇವರು ಚೌಡಿ, ಭೂತ, ಯಕ್ಷಿ, ಮಾಸ್ತಿ, ಚಂದ್ರುಗುತ್ತಿ, ರೇಣುಕಾಂಬೆ, ಗುತ್ತಮ್ಮ, ಕೋಡುರು ಜೇನ್ಕಲ್ಲಪ್ಪಾ, ಕಾರ್ಗಡಿ ಗಣಪ, ಧರ್ಮಸ್ಥಳ ಮಂಜುನಾಥ, ಕುಕ್ಕೆ ಸುಬ್ರಹಣ್ಯ ಇತ್ಯಾದಿ ದೆವರುಗಳನ್ನು ಪೂಜಿಸುತ್ತಾರೆ, ಹೇರಗಳ್ಳಿ ಮಠ, ತರಳಿ ಮಠಗಳು ಇವರು ಧಾರ್ಮಿಕ ಕೇಂದ್ರಗಳಾಗಿವೆ. ಇವರು ಕಲ್ಲೂರ್ತಿ, ಪಂಜೂರ್ಲಿ, ಬೊಬ್ಬಾರಿಯಾ ಜಾತಿಕಾ ಇತ್ಯಾದಿ ಭೂತಗಳನ್ನು ನಂಬುತ್ತಾರೆ.

ಹಸಲರು ಮೂಲತಃ ಬೇಟೆಗಾರಿಕೆ ಹಾಗೂ ಆಹಾರ ಸಂಗ್ರಹಣೆ ಕಸುಬಾಗಿತ್ತು. ಕೂಲಿಗಳಾಗಿ, ಕೃಷಿಕರಾಗಿ ಜೀತದಳುಗಳಾಗಿ, ಗುಂಡಿತೋಡುವ, ಮರ ಕಡಿಯುವ, ಬುಟ್ಟಿಹೆಣೆಯುವ ಮೀನು ಹಿಡಿಯುವ ಕೋಳಿ-ದನ ಸಾಕುವ ಜೇನು ಸಂಗ್ರಹಿಸುವಂತ ಕೆಲಸಗಳನ್ನು ಮಾಡುತ್ತಾರೆ. ಪ್ರಸ್ತುತ ಹಸಲರು ಸ್ವಂತ ಸಾಗುವಳಿ ಮಾಡುತ್ತಿದ್ದಾರೆ. ಇತ್ತಿಚೆಗೆ ವಾಣಿಜ್ಯ ಬೆಳೆಗಳಾದ ಕಾಪಿ, ಏಲಕ್ಕಿ, ಲವಂಗ, ವೆನಿಲಾ, ಅನಾನಸ್ ದಂತಹ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ೧೯೮೧ರ ಅಂಕಿ-ಅಂಶಗಳ ಪ್ರಕಾರ ಒಟ್ಟು ಶೇ.೫೦% ರಷ್ಟು ಕೆಲಸಗಾರರಾಗಿದ್ದಾರೆ

ಶೇ.೪೫.೩೧ ರಷ್ಟು ಜನ ನೆಡು ತೋಪುಗಳಲ್ಲಿ ಹಣ್ಣಿನ ತೋಟಗಳಲ್ಲಿ ಕೂಲಿಗಳಾಗಿ, ಇನ್ನುಳಿದ ಶೇ ೨.೭೮ ರಷ್ಟು ಜನ ಇತರ ಸೇವೆಗಳಲ್ಲಿ ತೊಡಗಿಸಿಕೊಂಡಿರುವರು. ಆಧುನಿಕತೆ, ಜಾಗತಿಕರಣ ಸರ್ಕಾರಿ ಯೋಜನೆಗಳು ಅನ್ಯ ಸಂಘಸಂಸ್ಥೆಗಳ ಪ್ರಭಾವದಿಂದಾಗಿ ಬದಲಾವಣೆ ಕಂಡುಬರುತ್ತದೆ. ನ್ಯಾಯ ತೀರ್ಮಾನಗಳಲ್ಲಿ ಅನ್ಯರ ಪ್ರಭಾವ ರಾಜಕೀಯ ಮಧ್ಯ ಪ್ರವೇಶ ಸರ್ಕಾರ ಪುನರ್ ವಸತಿ ನಿರ್ಮಿಸುವಲ್ಲಿ ತಾರತಮ್ಯ ಹೀಗೆ ಅನೇಕ ವಿಷಯಗಳಲ್ಲಿ ಅವರಲ್ಲಿನ ಸಂಘಟನೆ ವ್ಯವಸ್ಥೆ ಇಲ್ಲದ ಇರುವುದು ಕಾರಣವಾಗಿದೆ. ಕೂಲಿ ಕಾರ್ಮಿಕರಾಗಿ ಜೀವನ ನಿರ್ವಹಿಸುವುದರಿಂದ ಆರ್ಥಿಕ ಅಭದ್ರತೆ, ಎದುರಿಸುತ್ತಿದ್ದಾರೆ. ಆರ್ಥಿಕವಾಗಿ ಪ್ರಗತಿ ಸಾಧಿಸುವ ದಿಸೆಯಲ್ಲಿ ಸರ್ಕಾರವು ಯೋಜನೆಗಳನ್ನು ನೇರವಾಗಿ ಇವರಿಗೆ ತಲುಪಿಸುವಂತ ಕೆಲಸ ಮಾಡಿದಾಗ ಮಾತ್ರ ಹಸಲರ ಬದುಕು ಹಸನಗೊಳ್ಳುತ್ತದೆ.

ಅಡಿಟಿಪ್ಪಣಿಗಳು

೧. ಕೆಳದಿ ಗುಂಡಾ ಜೋಯಿಸ, ಸಾಗರ ತಾಲೂಕ ದರ್ಶನ, ೧೯೮೫, ಪುಟ ೦.೩

೨. ಅದೇ ಪುಟ.೦೭

೩. ಅದೇ ಪುಟ.೦೯

೪. ಜಿ.ಎಸ್.ಭಟ್ಟ, ಹಸಲರ ಸಂಸ್ಕೃತಿ ೧೯೯೩, ಪುಟ.೦೧

೫. ಎನ್. ಹುಚ್ಚಪ್ಪ ಮಾಸ್ತರ, ಕರ್ನಾಟಕದ ಬುಡಕಟ್ಟುಗಳು ಸಂಪುಟ ೦೧, ಪುಟ.೧

೬. ಅದೇ ಪುಟ ೦೪

೭. ಅದೇ ಪುಟ ೦೪

೮. ಅದೇ ಪುಟ ೦೬

೯. ಅದೇ ಪುಟ ೦೭

* * *

[illegible]

[illegible]

ಅಧ್ಯಾಯ ಮೂರು

ಹಸಲರು ಮತ್ತು ಬದಲಾವಣೆ

೩.೧ ಸಾಮಾಜಿಕ ಬದಲಾವಣೆಯ ಪರಿಕಲ್ಪನೆ

೩.೨. ಹಸಲರ ಸಾಮಾಜಿಕ ಬದಲಾವಣೆ

೩.೩. ಹಸಲರ ಆರ್ಥಿಕತೆಯ ಬದಲಾವಣೆ

೩.೪. ಹಸಲರ ರಾಜಕೀಯ ಬದಲಾವಣೆ

೩.೫. ಹಸಲರ ಧಾರ್ಮಿಕತೆಯ ಬದಲಾವಣೆ

೩.೧ ಸಾಮಾಜಿಕ ಬದಲಾವಣೆಯ ಪರಿಕಲ್ಪನೆ

ಬದಲಾವಣೆ ನಿಸರ್ಗದ ನಿಯಮ ಅಂತೆಯೇ ಸಾರ್ವತ್ರಿಕವಾದದ್ದು ಕೂಡ ತಿಳಿದ ಮತ್ತು ತಿಳಿಯದ ಸಮಾಜಗಳು ಬದಲಾಗಿವೆ.[೧] ಇಲ್ಲಿ ವೈಜ್ಞಾನಿಕವಾಗಿ ಯೋಚನೆ ಮಾಡುವ ಸಮಾಜ ಬದಲಾಗಿದೆ. ವೈಜ್ಞಾನಿಕವಲ್ಲದ ಸಮಾಜವು ಬದಲಾಗಿದೆ. ಸಮಾಜ ಹೇಗೆ ನಿರಂತರತೆಯನ್ನು ಒಳಗೊಂಡಿದೆಯೋ ಅದೇ ರೀತಿ ಸ್ಥಿರತೆಯಲ್ಲಿ ಪಲ್ಲಟಕ್ಕೆ ಒಳಗಾಗುತ್ತದೆ. ಬದಲಾವಣೆ ಎನ್ನುವುದು ನೈಸರ್ಗಿಕವಾದದ್ದು ಆಗಿರಬಹುದು. ನೈಸರ್ಗಿಕವಲ್ಲದ್ದು ಆಗಿರಬಹುದು ಅಲ್ಲಿ ಯೋಜಿತ ಉದ್ದೇಶವು ಇರಬಹುದು ಇರದೇ ಇರಬಹುದು ಸ್ಥಿರತೆ ಎನ್ನುವುದು ಭ್ರಮೆ ಎಂಬ ಕಲ್ಪನೆಯ ಹೊರತಾಗಿಯೂ ಸಮಾಜಗಳು ಬದಲಾಗುವದು ಎಂಬುದು ನಿಶ್ಚಿತ ಇಂದಿನ ಪರಿಸ್ಥಿತಿಯಲ್ಲಿ ಸ್ಥಿರತೆಗಿಂತ ಚಲನಶೀಲತೆಯ ಅನಿವಾರ್ಯವಾಗಿದೆ.

''ಬದಲಾವಣೆ ಎನ್ನುವುದಕ್ಕೆ ಆರಂಭ ಮತ್ತು ಅಂತ್ಯವು ಇರದೇ ಅದು ಸಮಯ ಸಂದರ್ಭಗಳಿಗೆ ಅನುಗುಣವಾಗಿ ನಿರಂತರವಾಗಿ ತೇಲಾಡುವಂತ ಪ್ರಕ್ರಿಯೆ ಆಗಿರುತ್ತದೆ'' ಎಂದು ರಾಗರ್ಸ (Rogars) ಎಂಬ ಸಮಾಜಶಾಸ್ತ್ರದ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾನೆ. ಈ ಮೂಲಕ ಬದಲಾವಣೆ ಎನ್ನುವುದು ನಿರಂತರ ಪ್ರಕ್ರಿಯೆ ಮಾನವನ ಆರಂಭದ ಜೀವನದಿಂದ ಹಿಡಿದು ಕೊನೆಯವರೆಗೆ ಬದಲಾವಣೆ ಹಿಂಬಾಲಿಸುತ್ತಲೆ ಇರುತ್ತದೆ. ಇಲ್ಲಿ ಅಂತ್ಯ ಮತ್ತು ಆರಂಭ ಇರದೇ ನಿರಂತರತೆಯನ್ನು ಉಳಿಸಿಕೊಂಡಿರುತ್ತದೆ. ಎರಡು ವಿಭಿನ್ನ ಕಾಲಗಳಲ್ಲಿ ಒಂದೇ ವಸ್ತುವಿನಲ್ಲಿ ಉಂಟಾದ ವ್ಯತ್ಯಾಸವನ್ನು ಸೂಚಿಸಲು ಬದಲಾವಣೆ ಎಂಬ ಕಲ್ಪನೆಯನ್ನು ಹುಟ್ಟುಹಾಕಲಾಗಿದೆ.

ಸಾಮಾಜಿಕ ಬದಲಾವಣೆಯ ಕಲ್ಪನೆಯನ್ನು ಒಂದು ನಿರ್ದಿಷ್ಟವಾದ ಅರ್ಥಕ್ಕೆ ತಂದ ಅನೇಕ ಸಮಾಜಶಾಸ್ತ್ರಜ್ಞರು ತಮ್ಮದೆ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಕೆಂಗ್ಸಲೇ ಡೇವಿಸ್ ಎಂಬ ಸಮಾಜಶಾಸ್ತ್ರಜ್ಞ ಹೇಳುವಂತೆ ಸಾಮಾಜಿಕ ಸಂರಚನೆ ಮತ್ತು ಕರ್ತವ್ಯಗಳಲ್ಲಿ ಅಂದರೆ ಸಾಮಾಜಿಕ ಸಂಘಟನೆಯಲ್ಲಿ ಉಂಟಾದ

[illegible]

[illegible]

[illegible]

[illegible]

ಪರಿವರ್ತನೆಯೆ ಸಾಮಾಜಿಕ ಬದಲಾವಣೆ ಎಂದಿದ್ದಾರೆ. ಇನ್ನೊಬ್ಬ ಸಾಮಾಜಶಾಸ್ತ್ರಜ್ಞ ಎಂ.ಇ. ಜೋನ್ಸ ಪ್ರಕಾರ ಸಾಮಾಜಿಕ ಪ್ರಕ್ರಿಯೆಗಳು, ಸಾಮಾಜಿಕ ಮಾದರಿಗಳು, ಸಾಮಾಜಿಕ ಅಂತರಕ್ರಿಯೆ ಅಥವಾ ಸಂಘಟನೆಯಲ್ಲಿನ ಮಾರ್ಪಾಡುಗಳು ಅಥವಾ ವ್ಯತ್ಯಾಸಗಳನ್ನು ವಿವರಿಸಲು ಸಾಮಾಜಿಕ ಬದಲಾವಣೆ ಕಲ್ಪನೆಯನ್ನು ಬಳಸಲಾಗಿದೆ.[೨] ಅನೇಕ ಸಮಾಜ ವಿಜ್ಞಾನಿಗಳು ಸಾಮಾಜಿಕ ಬದಲಾವಣೆಯನ್ನು ವಿಭಿನ್ನ ದೃಷ್ಟಿಕೋನಗಳ ಸಹಾಯದಿಂದ ಮತ್ತು ಕಲ್ಪನೆಗಳ ಆಧಾರದ ಮೇಲೆ ಸಮಾಜವನ್ನು ವಿಭಿನ್ನ ಕ್ರಮಗಳಿಂದ ಅಭ್ಯಸಿಸುವಂತ ಪ್ರಯತ್ನಮಾಡಿದ್ದಾರೆ. ಬದಲಾವಣೆ ಎಂಬ ಪರಿಕಲ್ಪನೆಯ ಸಮಾಜಶಾಸ್ತ್ರದಲ್ಲಿ ಪ್ರಮುಖವಾಗಿ ಹಲವಾರು ಸೈದ್ಧಾಂತಿಕವಾದ ನೆಲೆಗಟ್ಟಿನ ಮೇಲೆ ಸಾಮಾಜಿಕ ಬದಲಾವಣೆಯನ್ನು ಗುರುತಿಸಲಾಗುತ್ತದೆ. ಮುಖ್ಯವಾಗಿ ಸಮಾಜವನ್ನು ೧. ಸಂರಚನವಾದಿ ನೆಲೆ ೨. ಮಾರ್ಕ್ಸ್‌ವಾದಿ ನೆಲೆ ಎಂಬ ಎರಡು ವಿಭಿನ್ನ ವಾದಗಳ ಮೂಲಕ ಬದಲಾವಣೆಯನ್ನು ನಿರ್ವಚಿಸಲಾಗಿದೆ.[೩]

ಸಂರಚನವಾದಿ ನೆಲೆ: ಮಾನವ ಸಮಾಜದ ರಚನೆ ಸಮಾಜದ ಘಟಕಗಳು ಮತ್ತು ಇವುಗಳ ಕಾರ್ಯಗಳಲ್ಲಿ ಉಂಟಾಗುವ ವ್ಯತ್ಯಾಸವನ್ನು ಸಾಮಾಜಿಕ ಬದಲಾವಣೆ ಎಂದು ನಂಬುತ್ತದೆ. ಆದರೇ ಮಾರ್ಕ್ಸ್‌ವಾದ ಸಮಾಜಶಾಸ್ತ್ರಜ್ಞರು ಸಮಾಜದ ತಳರಚನೆ ಮತ್ತು ಆರ್ಥಿಕ ಸಂಬಂಧಗಳಲ್ಲಿ ಉಂಟಾಗುವ ಬದಲಾವಣೆ ಅದರ ಮೂಲಕ ಮೇಲ್ರಚನೆಯಾದ, ಕಲೆ ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯ ಮೌಲ್ಯಗಳಲ್ಲಿ ಉಂಟಾಗುವ ಬದಲಾವಣೆಯನ್ನು ನಿಜವಾದ ಸಾಮಾಜಿಕ ಬದಲಾವಣೆ ಎಂದು ಪರಿಕಲ್ಪಿಸುತ್ತದೆ.

ಈ ಎರಡು ಸಿದ್ಧಾಂತಗಳು ಸಮಾಜದ ಬಗೆಗಿನ ಅಧ್ಯಯನ ಕಾಳಜಿ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿವೆ. ಆದರೂ ಇಲ್ಲಿ ಸಂರಚನಾದವು ಸಾಮಾಜದ ಆರ್ಥಿಕತೆ ಸಮಾಜದ ತಳರಚನೆಯಲ್ಲಿ ಬದಲಾವಣೆಯನ್ನು ಗುರುತಿಸುವದೇ ಇಲ್ಲ. ಇಲ್ಲಿ ಸಮಾಜಿಕ ಬದಲಾವಣೆ ಕಾರಣವಾಗುವ ಜನಪರ ಚಿಂತನೆ, ಹೋರಾಟ, ಚಳುವಳಿ, ಸಂಘರ್ಷ, ಬಂಡಾಯ ಸಮಾಜದಲ್ಲಿ ಏಕತೆ ಕಡೆಗಣಿಸುವ ಮೂಲಕ ಪ್ರಶ್ನೆಗಳ ಹುಟ್ಟುವಿಗೆ ವಿರಾಮ ಹಾಕುತ್ತದೆ. ಸಂರಚನವಾದವು ಕಡೆಗಣಿಸುವ ಪ್ರಗತಿಪರ ಹೋರಾಟ, ಚಳುವಳಿಗಳ ವಿರುದ್ಧ ಆಯುಧವಾಗಿ ಬಳಸಲ್ಪಡುವುದರಿಂದ ಸಾಮಾಜದಲ್ಲಿನ ಪಾರಂಪರಿಕವಾಗಿ ಸಮಾಜವನ್ನು ಅಳುತ್ತಿದ್ದ ಸ್ತರ ವಿನ್ಯಾಸ ವ್ಯವಸ್ಥೆ, ಧರ್ಮ, ದೇವರು ದೈವದಂತ ಅಮೂರ್ತ ಕಲ್ಪನೆಗಳನ್ನು ಎತ್ತಿ ಹಿಡಿಯುವ ಮೂಲಕ ಸಮಾಜದ ಬದಲಾವಣೆ ಒಂದು ಅಸದೃಶ್ಯ ತಂತ್ರವನ್ನಾಗಿಸುವ ಮೂಲಕ ಕೊನೆಗೊಳ್ಳುತ್ತದೆ. ಸಾಮಾನ್ಯವಾಗಿ ಸಂರಚನವಾದಿ ಅಧ್ಯಯನಗಳು ಪಾಸಿವಿಟಿಸಂ ಪ್ರೇರಿತ ಅನುಭವಾತ್ಮಕ ದೃಷ್ಟಿಕೋನವನ್ನ ಪ್ರಧಾನವಾಗಿರಿಸಿಕೊಂಡು ಅಧ್ಯಯನಕ್ಕೆ ಒಳಪಟ್ಟ ಸಮಾಜದ ಚರಿತ್ರೆ ಮೂಲ ರಾಜಕೀಯ ಆರ್ಥಿಕ ಪರಸ್ಥಿತಿಗಳನ್ನು ಪರಿಗಣಿಸುವುದಿಲ್ಲ ಇದರ ಪರಿಣಾಮವಾಗಿ ಬದಲಾವಣೆ ಪರಿಕಲ್ಪನೆ ಎನ್ನುವುದು ಏಕ-ಮುಖವಾಗಿ ನಿಲ್ಲುವ ಮೂಲಕ ಪರಿಪೂರ್ಣವಾಗದೇ ಯಥಾಸ್ಥಿತಿಯಲ್ಲಿ ಕೊನೆಗೊಳ್ಳುತ್ತದೆ.[೪]

[illegible]

ನೈಜವಾಗಿಯೂ ಬದಲಾವಣೆ ಆರ್ಥಿಕ ತಳರಚನೆಯಲ್ಲಿನ ಪರಿವರ್ತನೆಯ ಆಗಿರುತ್ತದೆ. ತಳಸಮುದಾಯದಲ್ಲಿನ ಬದಲಾವಣೆ ಮೇಲ್ ರಚನೆಯ ಬದಲಾವಣೆಗೆ ಪ್ರೇರಣೆ ಎಂದು ಮಾರ್ಕ್ಸ್‌ವಾದಿ ಸಿದ್ಧಾಂತವು ನಂಬುತ್ತದೆ. ಬದಲಾವಣೆಗೆ ದೈವ, ಧರ್ಮ, ಅಮೂರ್ತ ಕಲ್ಪನೆಯನ್ನು ಕಾರಣವೆನ್ನುವ ಸಂರಚನವಾದಿ ಸಿದ್ಧಾಂತಕ್ಕೆ ವಿರುದ್ಧವಾಗಿ ಹುಟ್ಟಿಕೊಂಡ ಮಾರ್ಕ್ಸ್‌ವಾದಿ ಸಿದ್ಧಾಂತವು ಬದಲಾವಣೆಗೆ ಮಾನವ ಉತ್ಪಾದನೆ ಸಾಧನಗಳು ಮತ್ತು ಉತ್ಪಾದನ ಪರಿಕರಗಳು ಉತ್ಪಾದನೆ ಫಲಿತತೆ ಮೇಲಿನ ಸಂಬಂಧಗಳಲ್ಲಿ ಬದಲಾವಣೆ ಹೊಂದಿದ ಸಮಾಜದ ಇನ್ನಿತರ ಎಲ್ಲ ಅಂಶಗಳಲ್ಲಿ ತನ್ನಷ್ಟಕ್ಕೆ ತಾನು ಬದಲಾಗುತ್ತದೆ ಎಂದು ಮಾರ್ಕ್ಸ್‌ವಾದಿ ಸಿದ್ಧಾಂತವು ಪ್ರತಿಪಾದಿಸುತ್ತದೆ.

ಮಾರ್ಕ್ಸ್‌ವಾದವು ಸಮಾಜದಲ್ಲಿ ಸಂಘರ್ಷವನ್ನು ಹುಟ್ಟು ಹಾಕುವ ಮೂಲಕ ಇಲ್ಲಿಯವರೆಗೆ ಬಹುಸಂಖ್ಯಾತ ಜನ ಸಮುದಾಯವನ್ನು ಸೈದ್ಧಾಂತಿಕವಾದ ಚೌಕಟ್ಟಿನಲ್ಲಿರಿಸಿ ತನ್ನ ಅಧಿಕಾರದ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಅಲ್ಪಸಂಖ್ಯಾತ ಆಳುವ ವರ್ಗ ತನ್ನ ಅಸ್ತಿತ್ವಕ್ಕಾಗಿ ಸೃಷ್ಟಿಸಿಕೊಂಡ ಧರ್ಮ, ಸ್ತರವಿನ್ಯಾಸ, ರಾಜಪ್ರಭುತ್ವ ಮೊದಲಾದವು ಅಧಃಪತನ ಹಾದಿಹಿಡಿದವು. ಆಧ್ಯಾತ್ಮಿಕ ಮತ್ತು ಅಮೂರ್ತ ನೆಲೆಯಲ್ಲಿ ಚಿಂತಿಸುತ್ತಿದ್ದ ಸಂರಚನಾವಾದಿ ಸಿದ್ಧಾಂತಕ್ಕೆ ಮಾರ್ಕ್ಸ್‌ವಾದವು ಸಮಾಜದಲ್ಲಿನ ರಚನೆ ಜನಪರವಾಗಿ ಜನ ಹಿತ ಸರ್ಕಾರ ರಚನೆಯಲ್ಲಿ ಕೊನೆಗಾಣಿಸುವ ಮೂಲಕ ಅಮೂರ್ತ ರೂಪದ ಬದಲಾವಣೆಗೆ ಮುಕ್ತಗೊಳಿಸುವ ಪ್ರಯತ್ನ ಇಳಿಯಿತು.

ಈ ನೆಲೆಯಲ್ಲಿ ಮಾರ್ಕ್ಸ್‌ವಾದವು ಸಮಾಜಶಾಸ್ತ್ರೀಯ ಅಧ್ಯಯನಗಳನ್ನು ಚರಿತ್ರೆ, ರಾಜಕೀಯ ಸಾಮಾಜಿಕ ಪರಸ್ಥಿತಿಗಳನ್ನು ಪ್ರಧಾನ ಮುತುವರ್ಜಿಯನ್ನಿಟ್ಟುಕೊಂಡು ಸಮಾಜವನ್ನು ಸಾಮಾಜಿಕ ವಿದ್ಯಮಾನಗಳನ್ನು ಅಧ್ಯಯನಕ್ಕೆ ಮುನ್ನುಡಿ ಒದಗಿಸಿತು. ಭೂತ, ವರ್ತಮಾನ ಮತ್ತು ಭವಿಷ್ಯದ ಕುರಿತು ಆಶಯದ ಪ್ರತಿರೂಪದಂತೆ ಇದ್ದ ಮಾರ್ಕ್ಸ್‌ವಾದವು ಸಮಾಜದ ಯಥಾಸ್ಥಿತಿಯನ್ನು ಪ್ರತಿಪಾದಿಸುವ ವಾದವನ್ನು ಸ್ಪಷ್ಟವಾಗಿ ನಿರಾಕರಿಸುವ ಮೂಲಕ ಸಮಾಜದಲ್ಲಿನ ಪ್ರಸ್ತುತ ಸಂದರ್ಭದಲ್ಲಿ ಕಂಡುಬರುವ ಸಾಮಾಜಿಕ ವೈರುಧ್ಯಗಳನ್ನು ಗುರುತಿಸಿ. ಸಾಮಾಜಿಕ ಒಳಹರಿವಿನಲ್ಲಿ ಬದಲಾವಣೆಯ ರೂಪವನ್ನು ಗುರುತಿಸುವ ಆಶಯ ಹೊಂದಿದೆ."

ಮಾರ್ಕ್ಸ್‌ನ ಸಿದ್ಧಾಂತಗಳಂತೆ ಇನ್ನೂ ಕೆಲವು ಸಿದ್ಧಾಂತಗಳು ಸಮಾಜವನ್ನು ಅಧ್ಯಯನ ಮಾಡುವ ನಿಟ್ಟಿನಲ್ಲಿ ತೊಡಗಿಸಿಕೊಂಡಿದ್ದವು ಮಾನವ ಮತ್ತು ಸಮಾಜ ನಿರಂತರ ಬದಲಾವಣೆ ಪ್ರಕ್ರಿಯೆಗೆ ಒಳಪಟ್ಟಿದೆ. ಸಮಾಜದ ಹಳೆ ವ್ಯವಸ್ಥೆಗಳನ್ನು ಹೊಸ ವ್ಯವಸ್ಥೆಗಳನ್ನಾಗಿ ಮಾರ್ಪಾಡಿಸಿ ಅಧ್ಯಯನ ಮಾಡುವದು ಸಮಾಜಶಾಸ್ತ್ರದ ಮುಖ್ಯ ಉದ್ದೇಶವಾಗಿರುತ್ತದೆ. ೧೯ನೇ, ೨೦ನೇ ಶತಮಾನದಲ್ಲಿ ಸಮಾಜವು ತೀವ್ರಗತಿಯಲ್ಲಿ ಬದಲಾಗುವುದನ್ನು ಅನೇಕ ಸಮಾಜಶಾಸ್ತ್ರಜ್ಞರು ವಿಶ್ಲೇಷಿಸಿರುವುದು ಕಂಡುಬರುತ್ತದೆ. ಮುಖ್ಯವಾಗಿ

[illegible]

[illegible]

[illegible]

[illegible]

ಆಗಸ್ಟಕೋಮ್ತ ಜೆ.ಎಸ್.ಮಿಲ್. ಹರ್ಬರ್ಟ್‌ಸ್ಪೇನ್ಸರಂತವರು, ಎಮಿಲಿಡರ್ಖಿಮ್, ಪ್ಯಾರಟೊ ಟೋನಿಸ್‌ರಂತವರು ಸಾಮಾಜಿಕ ಬದಲಾವಣೆಯ ಗತಿ ಮತ್ತು ವೇಗವನ್ನು ಅಧ್ಯಯನ ಮಾಡಿ ಸಿದ್ಧಾಂತದ ರೂಪದಲ್ಲಿ ನಿರೂಪಿಸಿದ್ದಾರೆ. ಆ ನಿಟ್ಟಿನಲ್ಲಿ ಸಿದ್ಧಾಂತಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. ಚಕ್ರೀಯ ಸಿದ್ಧಾಂತ

ಸಾಮಾಜಿಕ ಬದಲಾವಣೆಯನ್ನು ಗುರುತಿಸುವಲ್ಲಿ ಚಕ್ರೀಯ ಸಿದ್ಧಾಂತವು ಪ್ರಮುಖವಾದ ಸಿದ್ಧಾಂತವಾಗಿದೆ. ಸಿದ್ಧಾಂತವು ಪ್ರಾಚೀನವೆನಿಸಿದರು ವಿಶ್ವವಿಕಾಸದ ಮತ್ತು ಸಾಮಾಜಿಕ ಬದಲಾವಣೆಯ ಪಕ್ರೀಯೆಗಳನ್ನು ಚಕ್ರದಂತೆ ಅಂತ್ಯವಿಲ್ಲದೇ ನಿರಂತರವಾಗಿರುತ್ತದೆ. ಸಮಾಜ ಎನ್ನುವುದು ಚಕ್ರ ಆಕಾರದಲ್ಲಿ ಸುತ್ತುತ್ತಲೆ ಇರುತ್ತದೆ. ಈ ಸಿದ್ಧಾಂತದಲ್ಲಿ ಭಾರತೀಯ ಶಾಸ್ತ್ರಜ್ಞರು ಕೃತಯುಗ, ತ್ರೇತ್ರಾಯುಗ, ದ್ವಾಪರಯುಗ ಮತ್ತು ಕಲಿಯುಗ ಇವುಗಳ ವಿಕಾಸವನ್ನು ಚಕ್ರೀಯ ಮಾದರಿಯೆಂದು ನಿರೂಪಿಸಿದರೇ ತ್ರೇತ್ರಾಯುಗದಲ್ಲಿನ ಉಳುಮೆಯಿಂದ ಬೆಳೆತೆಗೆಯುವದು. ಇದು ಉತ್ಪಾದನ ಮಾದರಿ ಸಮಾಜವಾದರೇ ದ್ವಾಪರಯುಗದಲ್ಲಿ ಉತ್ಪಾದನೆ ಕುಂಠಿತ ಅಧರ್ಮ ನೆಲೆಯಾದರೆ ಕಲಿಯುಗದಲ್ಲಿ ಪೂರ್ಣ ಅಧರ್ಮವನ್ನು ಸಾರುವ ಯುಗಗಳಾದರೆ ಕಲಿಯುಗದಲ್ಲಿ ಅಂತ್ಯವಾದಾಗ ಪುನಃ ಸಮಾಜ ವಿಕಾಸವು ಪುನರಾವರ್ತನೆಯಾಗುತ್ತದೆ ಎಂದೇಳುತ್ತಾರೆ ಈ ಆಧಾರದ ಮೇಲೆ ಸಮಾಜದಲ್ಲಾದ ಪರಿವರ್ತನೆಯನ್ನು ಗುರುತಿಸುವಂತ ಕಾರ್ಯವನ್ನು ಈ ಸಿದ್ಧಾಂತ ಮಾಡುತ್ತದೆ ಇವಿನ್ ಖಲ್ದಾನ್ ಎಂಬ ೧೪ನೇ ಶತಮಾನದ ಮುಸ್ಲಿಂ ಚಿಂತಕರ ನಾಗರಿಕತೆಗಳನ್ನು ಕುರಿತು ಚಕ್ರೀಯ ಮಾದರಿಯ ಬೆಳವಣಿಗೆಯಲ್ಲಿ ಪ್ರತಿಪಾದಿಸಿದ್ದಾನೆ ಇವನು ಸಾಮ್ರಾಜ್ಯಗಳು ಜೀವಿಗಳಂತೆ ಹುಟ್ಟಿ ಬೆಳೆದು ನಶಿಸುತ್ತವೆ ಎಂದೇಳುತ್ತಾನೆ. ಈ ಮಾತು ಭಾಗಶಃ ಸತ್ಯ ಎನಿಸುತ್ತಿದೆ ಪ್ರತಿಸಾಮ್ರಾಜ್ಯಕ್ಕೆ ೧೨೦ ವರ್ಷಗಳ ನಿಗಧಿಪಡಿಸುವ ೪೦,೪೦ ವರ್ಷದ ಅವಧಿಯ ಮೂರು ಅವಧಿಗಳ ಕುರಿತು ಪ್ರಸ್ತಾಪಿಸಿದ್ದಾರೆ. ಇವನು ಮೊದಲನೆ ಪೀಳಿಗೆಯಲ್ಲಿ ಐಕ್ಯತೆಯಿಂದ ಕೂಡಿದ್ದರೆ ೨ನೇ ಪೀಳಿಗೆ ಭೋಗ ಲಾಲಸೆಗೆ ಬಲಿಯಾಗುತ್ತದೆ ಮೂರನೆಯ ಪೀಳಿಗೆ ಸಂಪೂರ್ಣ ಅಸಮರ್ಥ ಅನರ್ಹ ಹಾಗೂ ಸತ್ವಹೀನ ಸಮರ್ಥ ಹಾಗೂ ಶಕ್ತಿಶಾಲಿಗುಂಪಿನಿಂದ ಹೊರಹಾಕಲಾಗುತ್ತದೆ ಎಂದಿದ್ದಾರೆ. ಇವರ ಪ್ರಕಾರ ಮಾನವನು ಹೆಚ್ಚು-ಹೆಚ್ಚು ಉತ್ಪಾದಿಸಿದಂತೆ ಅವನಲ್ಲಿನ ಭೋಗದಾಸೆಗಳು ಹೆಚ್ಚಾಗಿ ಪರಸ್ಪರ ಯುದ್ಧ-ಸಂಘರ್ಷಕ್ಕೆ ಇಳಿಯುವ ಮೂಲಕ ಸಮಾಜದ ಪರಿವರ್ತನೆಗೆ ಕಾರಣವಾಗುತ್ತದೆ ಎನ್ನುವ ನಿಟ್ಟಿನಲ್ಲಿ ಹೇಳಲಾಗಿದೆ.[೬]

ಈ ನಿಟ್ಟಿನಲ್ಲಿ ಅಸ್ವಾಲ್ ಸ್ಪೆಂಗರ್ ಪಿಟ್ರಿಮ ಸಾರೊಕಿನ್ ಎಂಬ ಸಮಾಜಶಾಸ್ತ್ರಜ್ಞರು ಸಾಮಾಜಿಕ ಬೆಳವಣಿಗೆಯ ವಿವಿಧ ವ್ಯಾಖ್ಯಾನಗಳನ್ನು ನೀಡಿದ್ದಾರೆ, ''ಸೋರಕಿನ್, ನಾಗರೀಕತೆಗಳ ಬೆಳವಣಿಗೆ ಮತ್ತು ವಿಕಾಸಕ್ಕೊಳಗಾಗುವದಕ್ಕಿಂತ'' ಇಂದ್ರಿಯ ಗ್ರಾಹ ಸಂಸ್ಕೃತಿ (Sensate) ಮತ್ತು ಕಲ್ಪನಾತ್ಮಕ ಸಂಸ್ಕೃತಿ

[illegible]

[illegible]

[illegible]

(Idecatiomal) ಇವೆರಡು ಸಂಸ್ಕೃತಿಗಳ ನಡುವೆ ತೇಲಾಡುತ್ತಿರುತ್ತದೆ ಎಂದಿದ್ದಾನೆ. ಇಲ್ಲಿ ಇಂದ್ರಿಯಾಗ್ರಾಹ ಸಂಸ್ಕೃತಿ ಭೌತಿಕ ರೂಪದ ಭೋಗಸಕ್ತಿಯ ಸುಖ ಪ್ರಧಾನ ಲಕ್ಷಣವಾದದ್ದು, ಕಲ್ಪನ ಸಂಸ್ಕೃತಿಯು ನಂಬಿಕೆ, ಭಾವನಾತ್ಮಕತೆ, ಅಮೂರ್ತ ಸ್ವರೂಪದ್ದು ಮಾನವನ ನಂಬಿಕೆ ಮತ್ತು ಅಂತಿಮ ಸತ್ಯದ ಆಧಾರದ ಮೇಲೆ ನಿರ್ಧರಿಸುವಂತದಾಗಿದೆ.[೭] ಪ್ರತಿ ಸಮಾಜದ ಪರಿವರ್ತನೆ ನಾಗರಿಕತೆ ಹುಟ್ಟಿನಿಂದ ಪ್ರಾರಂಭವಾಗಿ ಬೆಳವಣಿಗೆ ಹೊಂದಿ ಪ್ರೌಢತೆ, ಶಿಥಿಲತೆಯತ್ತ ಸಾಗುತ್ತದೆ ಎಂದು ಸಾರೋಕಿನ್ ಅಭಿಪ್ರಾಯದ ಧಾರೆ ಇತಿಹಾಸವು ಚಲನೆಯು ಒಂದೇ ದಿಕ್ಕಿನಲ್ಲಿರದೆ ಅನೇಕ ದಿಕ್ಕುಗಳಲ್ಲಿ ಮುಂದುವರಿಯುವಂತದ್ದು ಇಲ್ಲಿ ಪರಸ್ಪರ ಇಂದ್ರಿಯಾಗ್ರಾಹ್ಯ ಮತ್ತು ಕಲ್ಪನಾತ್ಮಕ ಜಗತ್ತು ಸಂಘರ್ಷಕ್ಕೆ ಇಳಿಯುವ ಮೂಲಕ ಸಮಾಜ ಮತ್ತು ಸಂಸ್ಕೃತಿಗಳು ಸದಾ ಕಾಲವು ಬದಲಾಗುತ್ತಲೇ ಇರುತ್ತವೆ[೮] ಎನ್ನುವುದು ಈ ಸಿದ್ಧಾಂತಗಳು ಪ್ರತಿಪಾದಿಸುತ್ತವೆ.

ಭಾರತದಲ್ಲಿ ಸಾಮಾಜಿಕ ಬದಲಾವಣೆ

ಭಾರತದ ಮಟ್ಟಿಗೆ ಬದಲಾವಣೆ ಎನ್ನುವುದು ಒಂದು ಆಧುನಿಕ ಪ್ರಕ್ರಿಯೆ ಆಗಿದೆ. ಬದಲಾವಣೆ ಜೀವಂತ ಸಮುದಾಯಗಳ ಪ್ರಾಥಮಿಕ ಲಕ್ಷಣ ಎನ್ನುವಂತೆ ಯಾವುದೇ ಬದಲಾವಣೆಯ ಹಿಂದೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹಲವಾರು ಅಂಶಗಳು ಕಾರಣವಾಗಿರುತ್ತವೆ.[೯] ಬದಲಾಗುವ ಕಾಲದ ಲಯಕ್ಕೆ ಸಮುದಾಯಗಳು ತಮ್ಮ ಸಂವೇದನೆಗಳನ್ನು ಹೊಂದಿಸಿಕೊಳ್ಳುವ ಅನಿವಾರ್ಯತೆ ಇರುತ್ತದೆ.[೧೦] ಸಮುದಾಯದಲ್ಲಿನ ಲೌಕಿಕ ಬದುಕಿನ ಬದಲಾವಣೆ ಹಿಂದೇ ಸಮುದಾಯವು ಹೊಸದನ್ನು ಸ್ವೀಕರಿಸುವ ಪ್ರವೃತ್ತಿಯು ಕೂಡ ಪ್ರಮುಖ ಕಾರಣವಾಗಿರುತ್ತದೆ. ಈ ಬದಲಾವಣೆ ಪ್ರಕ್ರಿಯೆಗೆ ಭಾರತೀಯ ಸಮುದಾಯವು ೧೭ನೇ ಶತಮಾನದ ಇತ್ತೀಚಿಗೆ ಕಾನ್ಸಸ್ಟಂಟ್ ನೋಫೆಲ್ ಎಂಬ ಪಾಶ್ಚಿಮಾತ್ಯ ಕಂಪನಿಯ ಮೂಲಕ ಆರಂಭವಾಗುತ್ತದೆ. ಅದಕ್ಕೆ ಮೊದಲು ಭಾರತದಲ್ಲಿ ಬದಲಾವಣೆ ಇಲ್ಲ ಅಂತ ಹೇಳಲಿಕ್ಕೆ ಆಗದು ಬದಲಾವಣೆ ಎನ್ನುವುದು ಮಂದಗತಿಯಲ್ಲಿ ಇತ್ತು. ಯಾವಾಗ ಪಾಶ್ಚಿಮಾತ್ಯರು ಭಾರತವನ್ನು ಪ್ರವೇಶಿಸಿದರೋ ಆಗಿನಿಂದ ಬದಲಾವಣೆ ಸ್ವರೂಪ ತೀವ್ರತೆಯನ್ನು ಪಡೆದುಕೊಂಡಿತು. ಪಾಶ್ಚಾತ್ತೀಕರಣದ ಆರಂಭದೊಂದಿಗೆ ಭಾರತದಲ್ಲಿನ ಜನರ ಜೀವನದಲ್ಲಿ ಹಂತ ಹಂತವಾಗಿ ಸ್ಥಿತ್ಯಂತರ ಹೊಂದುತ್ತ ಹೋಯಿತು. ಈ ಸಂದರ್ಭದಲ್ಲಿ ಹುಟ್ಟಿದ ಜಾಗತೀಕರಣ, ಕೈಗಾರೀಕರಣ, ಆಧುನೀಕರಣ, ನಗರೀಕರಣ ಎಂಬ ಪರಿಕಲ್ಪನೆಗಳು ಭಾರತ ಸಮಾಜವನ್ನು ತ್ರೀವ್ರತರನಾಗಿ ಬದಲಾವಣೆಗೆ ರೂಪಾಂತರಿಸಿದವು. ಪಾಶ್ಚಾತ್ಯರ ಪ್ರವೇಶದಿಂದ ಭಾರತದಲ್ಲಿ ಹೊಸ ನಾಗರೀಕತೆ ಸಂಸ್ಕೃತಿಯ ಪರಿಚಯವಾಯಿತು. ಪಾಶ್ಚಿಮಾತ್ಯರ ನೂತನ ಯೋಚನ ಕ್ರಮಗಳು, ಚಿಂತನಲಹರಿಗಳು ಮತ್ತು ಹೊಸ ಸಂಗತಿಗಳಿಂದಾಗಿ ಭಾರತೀಯ ಸಮಾಜದಲ್ಲಿನ ಸಂಸ್ಥೆಗಳಲ್ಲಿ ಆಚರಣೆಗಳಲ್ಲಿ ಭಾವನೆಗಳಲ್ಲಿ ಬದಲಾವಣೆ ಮನ್ವಂತರಕ್ಕೆ ನಾಂದಿಯಾಯಿತು. ಈ ಮೂಲಕ ಭಾರತೀಯರು ವೈಚಾರಿಕವಾದ ನೆಲೆಯಲ್ಲಿ ಭಾರತದ ಸಮಾಜವನ್ನು ಅಧ್ಯಯನ ಮಾಡಲು ಪ್ರಾರಂಭಿಸಿದರು. ಆ ನಿಟ್ಟಿನಲ್ಲಿ ಭಾರತದಲ್ಲಿ ನಡೆದ

[illegible]

[illegible]

ಸಮಾಜಶಾಸ್ತ್ರದ ಮತ್ತು ಸಾಮಾಜಿಕ ಬದಲಾವಣೆಯ ಚಿಂತನ ಕ್ರಮಗಳು ನೇರವಾಗಿ ಯುರೋಪಿಯನ್ ಮತ್ತು ಅಮೇರಿಕಾದ ಚಿಂತನ ಕ್ರಮಗಳಿಂದ ಪ್ರಭಾವಿಸಲ್ಪಟ್ಟಿದ್ದಾಗಿದ್ದು. ಈ ಕಾರಣಕ್ಕಾಗಿಯೇ ಭಾರತದಲ್ಲಿ ಅದರಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಸಂರಚನವಾದಿ ಅಧ್ಯಯನಗಳು ಪ್ರಮುಖವಾಗಿ ಸಮಾಜದ ಬಗೆಗಿನ ಅಧ್ಯಯನ ಕೈಗೊಂಡವು. ಅದರಲ್ಲಿ ಮುಖ್ಯವಾಗಿ ಎಂ.ಎನ್. ಶ್ರೀನಿವಾಸ್, ಸ್ಕಾರಲೆಟ್, ಎಪಿಸ್ಟಿನ್, ಈಶ್ವರನ್ ಮೊದಲಾದವರು ಸಂರಚನವಾದವನ್ನೇ ನೆಚ್ಚಿಕೊಂಡಿರುವುದರಿಂದ ಕರ್ನಾಟಕದ ಸಾಮಾಜಿಕ ಬದಲಾವಣೆಯನ್ನು ಸಮಗ್ರವಾಗಿ ಗ್ರಹಿಕೆಯ ಕೊರತೆ ಕಂಡುಬರುತ್ತದೆ. ಇದರಲ್ಲಿ ವಿಶೇಷವಾಗಿ ಎಂ.ಎನ್. ಶ್ರೀನಿವಾಸ ಸಂಸ್ಕೃತಾನುಕರಣ ಪರಿಕಲ್ಪನೆ ಮೂಲಕ ಸಮಾಜದಲ್ಲಿನ ಬದಲಾವಣೆಯನ್ನು ಕುರಿತು ಅಧ್ಯಯನ ಕೈಗೊಂಡರು. ಆದರೆ ಈ ಪರಿಕಲ್ಪನೆಗಳ ಹಿಂದೆ ಸಂರಚನಾವಾದಿ ಮತ್ತು ಅಗಸ್ಟಕೋಮ್ಸ್‌ನ ಅಮೂರ್ತ ಕಲ್ಪನೆ, ವೈದಿಕವಾದಿ ಚಿಂತನೆಯನ್ನು ಸಮರ್ಥಿಸುವಂತ ಮತ್ತು ಸಮಾಜದಲ್ಲಿ ಸಂಸ್ಕೃತಿಯನ್ನು ಬಿಟ್ಟು ಮತ್ತೇನು ಬದಲಾಗದು ಎನ್ನುವಂತ ಸ್ವಯಂಧೋರಣೆಯನ್ನು ಹೊಂದಿತ್ತು. ಇಲ್ಲಿ ಸಂಸ್ಕೃತೀಕರಣ ಸಾಮಾಜಿಕ ಸಂರಚನೆ ವ್ಯವಸ್ಥಿತ ವಿಶ್ಲೇಷಣೆ ಮಾಡದೆ ಸ್ಥಾನಿಕ ಬದಲಾವಣೆ ಕುರಿತು ವಿವರಿಸುವ ಮೂಲಕ ಸಾಮಾಜಿಕ ಸಂರಚನೆಯಲ್ಲಿನ ಬದಲಾವಣೆಗೆ ತಡೆ ಹಾಕಲಾಯಿತು. ಮುಖ್ಯವಾಗಿ ಸಂಸ್ಕೃತೀಕರಣ ಒಂದು ಊಹೆ ಕಾಲ್ಪನಿಕ ಕಥೆ ಎಂದು ತಿಳಿದಿತ್ತು. ಸ್ಟೆಟರ್ ಬರ್ಗ್ ಹೇಳುವಂತೆ ''ಇದು ಸತ್ಯ ಅಥವಾ ಸುಳ್ಳಾಗಿರಲು ಸಾಧ್ಯವಿಲ್ಲ'' ಇದು ವಿಕಾರವಾದದ್ದು ಅಥವಾ ನಾಜುಕಾದದ್ದು ಸೂಕ್ತ ಅಥವಾ ಅನೂಸೂಕ್ತವಾದದ್ದು ಪರಿಣಾಮಕಾರಿಯಾದದ್ದು ಅಥವಾ ನಿರಾರ್ಥಕವಾದದ್ದು ಇರಬಹುದಾದರೇ ಎಂದಿಗೂ ಸತ್ಯ ಅಥವಾ ಸುಳ್ಳಾದದ್ದು ಇರಲಾರದು ಎಂದು ಟೀಕಿಸುವ ಮೂಲಕ ಸಂಸ್ಕೃತೀಕರಣ ಪರಿಕಲ್ಪನೆಯಲ್ಲಿನ ಅಮೂರ್ತತೆಯನ್ನು ಪ್ರಶ್ನಿಸಿದ್ದಾರೆ. ಒಂದು ರೀತಿಯಲ್ಲಿ ಎಮ್.ಎನ್. ಶ್ರೀನಿವಾಸ ಮತ್ತು ಇತರ ಸಂರಚನವಾದಿಗಳು ಸಾಮಾಜಿಕ ಬದಲಾವಣೆಯನ್ನು ಏಕ ದೃಷ್ಟಿಕೋನದಲ್ಲಿ ಅಧ್ಯಯನ ಕೈಗೊಳ್ಳುವ ಮೂಲಕ ಬದಲಾವಣೆಯನ್ನು ನೋಡುವ ಬಗೆಯನ್ನು ಮಿತಿಗೊಳಿಸಿದರು. ಈ ವಾದವು ಬಹುಮುಕಿ ಸಂಸ್ಕೃತಿಯನ್ನು ನಿರಾಕರಿಸುವ ಮೂಲಕ ಏಕರೂಪಿ ಸಂಸ್ಕೃತಿಯ ನಿರ್ಮಾಣಕ್ಕೆ ತನ್ನ ಕೈ ಹಾಕುತ್ತದೆ. ಇಲ್ಲಿ ಬಹುಸಂಖ್ಯಾತರ ಅನುಕರಣೆ ಅಲ್ಪಸಂಖ್ಯಾತ ಸಮೂಹದ ಮೇಲಾಗಿದೆ. ಅಲ್ಪ ಸಂಖ್ಯಾತ ಮೇಲ್ವರ್ಗದ ಜನರನ್ನು ಬಹುಸಂಖ್ಯಾತ ಕೆಳ ವರ್ಗದವರು ಅನುಕರಿಸಿದರು ಎಂಬ ವಾದ ಅಥವಾ ಪರಿಕಲ್ಪನೆ ವಿತಂಡವಾದದಂತೆ ಗೋಚರಿಸುತ್ತದೆ. ಕೇವಲ ''ರಿಮೆಂಬರ್ಡ್ ವಿಲೇಜ್'' ಕರ್ನಾಟಕದ ರಾಮಪುರ ಗ್ರಾಮದ ಕ್ಷೇತ್ರಕಾರ್ಯ ಆಧಾರಿತವಾದ ವರದಿ ನೀಡುವ ಎಂ.ಎನ್. ಎಸ್ ರವರು ಅಧಿಕಾರ ಮತ್ತು ಪ್ರಾಬಲ್ಯ ಹೊಂದಿರುವ ಸಾಂಸ್ಕೃತಿಕ ವರ್ಗವನ್ನು ಪ್ರತಿನಿಧಿಸುವ ಪ್ರತಿನಿಧಿ ಎನ್ನುವಂತೆ ತೋರುತ್ತದೆ. ಮೇಲ್ಜಾತಿಯ ಸಂಸ್ಕೃತಿಯನ್ನು ಕೆಳಜಾತಿಯು ಅನುಕರಿಸುವ ಮೂಲಕ ಸಾಮಾಜಿಕ ಶ್ರೇಣಿ ವ್ಯವಸ್ಥೆಯಲ್ಲಿ ಬದಲಾದರು ಎಂದೇಳುವ ಮೂಲಕ ಸಂಸ್ಕೃತಾನುಕರಣವಿಲ್ಲದೇಯು ಕೂಡ ಕೆಳಜಾತಿಯವರ ಸಾಮಾಜಿಕ ಶ್ರೇಣಿಯಲ್ಲಿ ಸಂರಚನೆಯಲ್ಲಿನ ಬದಲಾವಣೆ ಮೂಲಕ ಮೇಲೆರಬಹುದು.

ಸಂಘರ್ಷ ಮತ್ತು ಯುದ್ಧ ಅಧಿಕಾರ ಸಂಪಾದನೆ ಅಥವಾ ನಷ್ಟ ಅಥವಾ ರಾಜಕೀಯ ತಂತ್ರ, ಆರ್ಥಿಕತೆ ಈ ಅಂಶಗಳು ಕೂಡ ಬದಲಾವಣೆಗೆ ಅವಕಾಶ ನೀಡುತ್ತವೆ ಎಂಬ ಅಂಶವನ್ನು ಎಂ.ಎನ್.ಎಸ್‌ರವರು ವ್ಯಕ್ತ ಪಡಿಸದೆ ಟೀಕೆಗೆ ಗುರಿಯಾಗುತ್ತಾರೆ.

ಭಾರತದಲ್ಲಿ ಕೈಗಾರಿಕ ಕ್ರಾಂತಿಯ ನಂತರದಲ್ಲಿ ಉಂಟಾದ ಸಾಮಾಜಿಕ ಬದಲಾವಣೆಯನ್ನು ಸಂರಚನವಾದಿಗಳ ವಿರುದ್ಧ ನೆಲೆಯಲ್ಲಿ ನಿಂತು ಚಿಂತಿಸುವ ಮೂಲಕ ದ್ವಂದ್ವಾತ್ಮಕ ಭೌತವಾದ ತತ್ವಗಳನ್ನು ಅಳವಡಿಸಿಕೊಂಡು ಎ.ಆರ್. ದೇಸಾಯಿಯಂತವರು ಲೋಹಿಯಾ, ಶಾಂತವೇರಿ ಗೋಪಾಲಗೌಡ, ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಪ್ರತಿನಿಧಿಸಿದರು ಈ ನಿಟ್ಟಿನಲ್ಲಿ ಪಾಶ್ಚಿಮಾತ್ಯರ ಪ್ರಭಾವಕ್ಕೆ ಒಳಗಾದ ಅನೇಕ ಭಾರತೀಯ ಸಮಾಜಶಾಸ್ತ್ರಜ್ಞರು ಬದಲಾವಣೆ ಕುರಿತು ತಾತ್ವಿಕವಾದ ಚಿಂತನೆಗಳನ್ನು ಹುಟ್ಟು ಹಾಕುವ ಮೂಲಕ ಸಮಾಜದ ಪರಿವರ್ತನೆಯ ದಿಸೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಯಿತು.

೩.೨ ಹಸಲರಲ್ಲಿ ಸಾಮಾಜಿಕ ಬದಲಾವಣೆ

ಜಾಗತಿಕವಾಗಿ ಆಗುತ್ತಿರುವ ಪರಿವರ್ತನೆ ಪ್ರವಾಹಕ್ಕೆ ಸಿಕ್ಕ ಹಸಲರು ಸಮುದಾಯವು ಸ್ವಾತಂತ್ರ್ಯ ನಂತರ ಭಾರತದಲ್ಲಿ ಕರ್ನಾಟಕದಲ್ಲಿ ಆಗುತ್ತಿರುವ ಬದಲಾವಣೆಗೆ ಸ್ಪಂಧಿಸುವಂತ ಅನಿವಾರ್ಯತೆ ಸೃಷ್ಟಿಯಾಯಿತು. ಆಧುನಿಕ ಪ್ರಕ್ರಮಕ್ಕೆ ಸಿಲುಕಿಕೊಂಡ ಅನೇಕ ಬುಡಕಟ್ಟುಗಳು ತಮ್ಮ ಲಕ್ಷಣಗಳಿಂದ ಹೊರಬರುವಂತದವು, ಜಾಗತೀಕರಣದ ಪ್ರಭಾವದಿಂದಾಗಿ ಮತ್ತು ಅಕ್ಷರ ಮತ್ತು ಸಾಕ್ಷರತೆಯು ಹಸಲರ ಜೀವನ ಮಟ್ಟದಲ್ಲಿ ಸಾಕಷ್ಟು ಸುಧಾರಣೆಗೆ ಕಾರಣವಾಯಿತು, ಗತಕಾಲದಲ್ಲಿನ ಅನೇಕ ಶೋಷಣೆ ಪಾರಂಪರಿಕ ಜಾತಿ ವ್ಯವಸ್ಥೆ ಜೀತಪದ್ಧತಿಯಂತ ವಿಷಮ ವರ್ತುಲದಲ್ಲಿ ಸಿಕ್ಕು ಒದ್ದಾಡುತ್ತಿದ್ದ, ಅನೇಕ ಬುಡಕಟ್ಟುಗಳು ಜಾಗತೀಕರಣ ಪ್ರಭಾವದಿಂದಾಗಿ ಮೂಲತಃ ತಮ್ಮ ಉಡುಗೆ ತೊಡುಗೆಗಳಲ್ಲಿ ಮನೆ ವಸತಿ ನಿರ್ಮಾಣಗಳಲ್ಲಿ ಒಡವೆ ಆಹಾರದಲ್ಲಿ ಮಡಿಕೆ-ಕುಡಿಕೆ ಪಾತ್ರೆಗಳ ರಚನೆಯಲ್ಲಿ ಆರೋಗ್ಯದಲ್ಲಿ ಸುಧಾರಣೆ ಹೊಂದಿದವು,

* ಸಾಮಾಜಿಕ ರಚನೆಯಲ್ಲಿ ಬದಲಾವಣೆ

ಯಾವುದೇ ಬುಡಕಟ್ಟು ತನ್ನ ಸಮುದಾಯವು ಕಾಲ ಕಾಲಗಳಿಂದಲೂ ಅನುಸರಿಸಿಕೊಂಡು ಬಂದ ಪದ್ಧತಿಗಳನ್ನು ಆಚರಣೆಗಳನ್ನು ನಿಯಮಗಳನ್ನು ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಲೆ ಬಂದಿರುತ್ತವೆ. ಆಧುನಿಕ ಸಂದರ್ಭದ ಹೊಸ ಬದುಕಿಗೆ ತಮ್ಮನ್ನು ಸಮರ್ಪಿಸಿಕೊಂಡು ನವೀನತೆಯ ಜೊತೆಗೆ ತನ್ನ ಪಾರಂಪರಿಕವಾದ ಅನನ್ಯತೆಯನ್ನು ಉಳಿಸಿಕೊಂಡಿವೆ. ಅನನ್ಯತೆಯಲ್ಲಿನ ಬದುಕಿನಲ್ಲಿ ಎದುರಾಗುವ ಸವಾಲುಗಳು ಸಮಸ್ಯೆಗಳನ್ನು ಎದುರಿಸುವ ಜೊತೆಗೆ ಸಮುದಾಯವು ಅನುಸರಿಸಿಕೊಂಡು ಬಂದ ಮೌಲ್ಯಗಳನ್ನು ಸಂಪ್ರದಾಯಗಳನ್ನು ರಕ್ಷಿಸಿಕೊಂಡು ಬರುವಲ್ಲಿ ಬುಡಕಟ್ಟುಗಳು ತುಂಬಾ ಮಹತ್ತರವಾದ ಪಾತ್ರ ನಿರ್ವಹಿಸುತ್ತವೆ. ಹೊಸದನ್ನು ಅಪ್ಪಿಕೊಳ್ಳುವ ಮೂಲಕ ಹಳೆಯದನ್ನ ಮರೆಯದಂತೆ ದೇಸಿ

[illegible]

[illegible]

[illegible]

[illegible]

ಸಂಸ್ಕೃತಿಯನ್ನು ಉಳಿಸುವಲ್ಲಿ ಬುಡಕಟ್ಟುಗಳ ಪಾತ್ರ ಗಮನಾರ್ಹವಾದುದಾಗಿದೆ. ಈ ನಿಟ್ಟಿನಲ್ಲಿ ಹಸಲರ ಬುಡಕಟ್ಟು ಆಧುನಿಕತೆಗಳು ತೆಕ್ಕೆಗೆ ಜಾರಿದಾಗಲೂ ತಾಂತ್ರಿಕ ಯುಗದಲ್ಲಿ ತನ್ನ ಸಮುದಾಯದ ರೀತಿ ನೀತಿಗಳು, ನಿಯಮಗಳು, ಸಂಪ್ರದಾಯ ಆಚರಣೆ, ಪದ್ಧತಿ ಕಟ್ಟುಪಾಡುಗಳನ್ನು ಉಳಿಸಿಕೊಂಡು ಬದಲಾದ ಕಾಲಕ್ಕೆ ಸರಿಹೊಂದುವಂತೆ ಜೀವನ ಮಾಡುತ್ತಿದೆ.

ಒಂದು ಕಾಲದಲ್ಲಿ ಸಂಪೂರ್ಣವಾಗಿ ಬುಡಕಟ್ಟಿನ ಗುಣ ಹೊಂದಿದ್ದ ಹಸಲರು ಕಾಡು ಮೇಡುಗಳಲ್ಲಿ ಅಲೆದಾಡುತ್ತ ಆಹಾರ ಸಂಗ್ರಹಣೆ ಬೇಟೆಯನ್ನರಿಸುತ ಕಾಡಿನಿಂದ ಕಾಡಿಗೆ ಅಲೆದಾಡುವ ಅಲೆಮಾರಿ ಜೀವನ ಸಾಗಿಸುತ್ತಿದ್ದರು. ಕಾಲಾಂತರದಲ್ಲಾದ ಜಾಗತೀಕರಣದ ಪ್ರಭಾವದಿಂದಾಗಿ ಅಲೆಮಾರಿ ಜೀವನಕ್ಕೆ ಕೊನೆಹಾಡಿ ನಾಡಿಗೆ ಹೊಂದಿಕೊಂಡು ಜೀವನ ಮಾಡಲು ಪ್ರಾರಂಭಿಸಿದರು ನಾಗರೀಕ ಪ್ರಪಂಚಕ್ಕೆ ಹತ್ತಿರವಾಗುತ್ತಿದ್ದಂತೆ ಹಸಲರ ಬುಡಕಟ್ಟು ಸಮುದಾಯವು ತಮ್ಮ ಗುಣಗಳನ್ನು ತ್ಯಜಿಸುವ ಮೂಲಕ ಹೊಸ ಜೀವನ ವ್ಯವಸ್ಥೆಗೆ ನಾಂದಿ ಹಾಡಿತು.

*** ಕುಟುಂಬ ರಚನೆಯಲ್ಲಿನ ಬದಲಾವಣೆ**

ಒಂದು ಕಾಲದಲ್ಲಿ ಹಸಲರು ಸಂಪೂರ್ಣವಾಗಿ ಬುಡಕಟ್ಟಿನ ಗುಣ ಹೊಂದಿದ್ದರು, ಕಾಡುವಾಸಿಗಳಾಗಿ ಕಾಡು ಮೇಡುಗಳಲ್ಲಿ ಆಹಾರ ಸಂಗ್ರಹಿಸುತ್ತಾ ಬೇಟೆಯನ್ನರಿಸುತ್ತ ಕಾಡಿನಿಂದ ಕಾಡಿಗೆ ಅಲೆದಾಡುವ ಅಲೆಮಾರಿ ಜೀವನದ ಮೊರೆ ಹೋದ ಹಸಲರು ಕಾಲಾಂತರದಲ್ಲಿ ಜಾಗತೀಕರಣ, ನಗರೀಕರಣ, ಉದಾರೀಕರಣದ ಪ್ರಭಾವದಿಂದಾಗಿ ಅಲೆಮಾರಿ ಜೀವನ ತೊರೆದು ತಮ್ಮ ಬುಡಕಟ್ಟಿನ ಕುಲಕಸುಬನ್ನು ತೊರೆದು ನಾಡಿನ ಬದುಕಿಗೆ ಹೊಂದಿಕೊಂಡು ಜೀವನ ಮಾಡಲು ಪ್ರಾರಂಭಿಸಿದರು. ನಾಗರೀಕ ಪ್ರಪಂಚಕ್ಕೆ ಹೊಂದಿಕೊಂಡ ಹಸಲರು ತಮ್ಮ ಬುಡಕಟ್ಟುಗಳ ಗುಣಗಳನ್ನು ಸಂಸ್ಕೃತಿಯನ್ನು ತ್ಯಜಿಸುವ ಮೂಲಕ ಸ್ಥಿರವಾದ ಪ್ರದೇಶದಲ್ಲಿ ನೆಲೆ ನಿಲ್ಲಲು ಆರಂಭಿಸಿದರು.

ಹಸಲರ ಸಮುದಾಯವು ಪರಸ್ಪರ ವಿವಿಧ ಬಗೆಯ ಕುಟುಂಬ ಕುಲ ಸಂಬಂಧವುಳ್ಳ ಜನತೆಯ ಆಂತರೀಕ ವ್ಯವಸ್ಥೆಯಾಗಿರುವುದರಿಂದ ಕಾಲಾಂತರದಲ್ಲಿ ಇತರ ಸಮುದಾಯಗಳ ಪ್ರಭಾವದಿಂದಾಗಿ ತಮ್ಮ ಸಾಂಪ್ರದಾಯಿಕ ಜೀವನ ನಿರ್ವಹಿಸುತ್ತಾ ಹೊಸ ತರದ ಜೀವನ ವ್ಯವಸ್ಥೆಗೆ ಹೊಂದಿಸಿಕೊಳ್ಳುವುದರ ಜೊತೆಗೆ ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ಅಲೆಮಾರಿ ಜೀವನದಿಂದ ಬೇಟೆ ಜೀವನಕ್ಕೆ ಬೇಟೆಯಿಂದ ಕೃಷಿ ಹಂತಕ್ಕೆ ಪಲ್ಲಟಗೊಳ್ಳುವ ಮೂಲಕ ಒಂದು ನಿರ್ಧಿಷ್ಟ ಸ್ಥಳದಲ್ಲಿ ನೆಲೆನಿಂತು ಇತರರೊಂದಿಗೆ ಪರಸ್ಪರ ಸೌಹಾರ್ದತೆ ಸಹಬಾಳ್ವೆಯಿಂದ ಒಟ್ಟಾಗಿ ಬಾಳುವುದರೊಂದಿಗೆ ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಕೆ ಮಾಡಿಕೊಂಡರು. ಇತರ ಸಮುದಾಯದ ಸಹಕಾರ ಭಾವನೆ ಹಸಲರ ಬದುಕಿನಲ್ಲಿ ನೂತನ ಮನ್ವಂತರಕ್ಕೆ ಕಾರಣವಾಯಿತು. ಇದು ಮುಂದೆ ಹಸಲರಿಗೆ ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು

ಪ್ರೇರಣೆಯಾಯಿತು. ಸಾಮಾಜಿಕ ರಚನೆಯಲ್ಲಿ ಪ್ರಾಥಮಿಕ ಘಟಕವಾದ ಕುಟುಂಬ ವ್ಯವಸ್ಥೆಯಲ್ಲಿ, ರಚನೆಯಲ್ಲಿ ಕಾರ್ಯಗಳಲ್ಲಿ ಬದಲಾವಣೆ ಕಂಡುಕೊಂಡರು. ಹಿಂದೆ ಕುಟುಂಬವೊಂದರಲ್ಲಿ ಅಜ್ಜಅಜ್ಜಿ, ತಂದೆ ತಾಯಿ, ಮಕ್ಕಳು ಎಂದು ಹಲವಾರು ಪೀಳಿಗೆಗಳನ್ನು ಹೊಂದಿದಂತ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಇತ್ತು. ಇದು ಅವಿಭಕ್ತ ಕುಟುಂಬವು ಆಗಿತ್ತು. ಕುಟುಂಬವನ್ನು ಮುನ್ನೆಡೆಸುವದು ಕುಟುಂಬದಲ್ಲಿನ ಹಿರಿಯನ ಕಾರ್ಯವಾಗಿತ್ತು. ಒಂದು ವೇಳೆ ಹಿರಿಯನ ಆಕಸ್ಮಿಕ ಮರಣ, ಅವನ ನಂತರ ಹಿರಿಯನಿಗೆ ವಹಿಸಿಕೊಡಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಕುಟುಂಬದ ಹಿರಿಯನ ನಂತರದಲ್ಲಿ ಯಾರು ಜವಾಬ್ದಾರಿ ನಿರ್ವಹಿಸಲು ಅಥವಾ ಅವರು ಇನ್ನೂ ಅಪ್ರಾಪ್ತ ವಯಸ್ಕರಾಗಿದ್ದಾರೇ ಅನಿವಾರ್ಯವಾಗಿ ತಾಯಿಯಾದಂತಹವಳು ಕುಟುಂಬ ಜವಾಬ್ದಾರಿ ಹೊರುತ್ತಿದ್ದಳು. ಸಾಮಾನ್ಯವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಅದರಲ್ಲಿ ಮುಖ್ಯವಾಗಿ ಭಾರತೀಯ ಸಮಾಜವು ಪಿತೃಪ್ರಧಾನ ಸಮಾಜವಾಗಿರುವುದರಿಂದ ಇಲ್ಲಿ ಸ್ತ್ರೀಗಿಂತ ಪುರುಷನ ಪ್ರಾಶಸ್ತ್ಯ ಹೆಚ್ಚಿರುತ್ತದೆ. ಪಿತೃಪ್ರಧಾನ ಪರಿಕಲ್ಪನೆಯಲ್ಲಿ ತಾಯಿ ಪಾತ್ರಕ್ಕೂ ವಿಶೇಷವಾಗಿ ಸ್ತ್ರೀಯು ವಿಶೇಷವಾದ ಆಧಾರಗಳಿಗೆ ಮತ್ತು ಗೌರವಗಳಿಗೆ ಪಾತ್ರಳಾಗುತ್ತಾಳೆ. ಹಸಲರಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದ ಪ್ರಕಾರ ಇಂದು ಅವಿಭಕ್ತ ಕುಟುಂಬಗಳು ಕಂಡುಬರುವುದು ತುಂಬಾ ವಿರಳವೇ ಆಗಿದೆ. ಇವತ್ತಿಗೂ ಇವರ ಕುಟುಂಬ ವ್ಯವಸ್ಥೆ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಾಗಿದ್ದು, ಮುಖ್ಯವಾಗಿ ಹಬ್ಬ ಹರಿದಿನ, ಮದುವೆ ಆಚರಣೆಗಳಲ್ಲಿ ಅವಿಭಕ್ತ ಕುಟುಂಬದ ಛಾಯೆ ಉಳಿಸಿಕೊಂಡಿರುವುದು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ತಿಳಿಯುವ ಸತ್ಯ ಸಂಗತಿಯಾಗಿದೆ.

ಹಸಲರ ಸಮುದಾಯವು ತಮ್ಮ ಸುತ್ತ ಮುತ್ತಲಿನ ಸಮುದಾಯಗಳ ಒಡನಾಟದಿಂದ ಇವರ ಸಂಪ್ರದಾಯ ಧಾರ್ಮಿಕತೆ, ಕೌಟುಂಬಿಕ ಜೀವನದ ವ್ಯವಸ್ಥೆಯಲ್ಲಿ ವಸತಿ ವ್ಯವಸ್ಥೆಯಲ್ಲಿ ಬದಲಾವಣೆಗಳಾಗಿವೆ. ಆಧುನಿಕರಣದ ಸೆಳೆತಕ್ಕೆ ಸಿಕ್ಕ ಹಸಲರ ಕುಟುಂಬಗಳು ಜಾಗತೀಕರಣದ ಪ್ರಭಾವದಿಂದಾಗಿ ವಿಭಕ್ತ ಕುಟುಂಬಗಳಾಗಿ ಅಣು ವಿಭಕ್ತ ಕುಟುಂಬಗಳಾಗಿವೆ. ಆದರೇ ಸಮುದಾಯದಲ್ಲಿನ ಸಂಬಂಧಗಳು ಇಂದಿಗೂ ಕೂಡ ಅವಿಭಕ್ತ ಕುಟುಂಬದ ನೆರಳಲ್ಲಿಯೆ ಬದುಕುತ್ತಿರುವುದು ಕ್ಷೇತ್ರಕಾರ್ಯ ಅಧ್ಯಯನದ ಸಂದರ್ಭದಲ್ಲಿ ತಿಳಿದು ಬಂದ ವಿಚಾರ, ಹಸಲರು ಇದಕ್ಕೆ ಪೂರಕವೆಂಬಂತೆ ಅವರು ಆಚರಿಸುವ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಾಮಾನ್ಯವಾಗಿ ಕುಟುಂಬದ ಎಲ್ಲ ಸದಸ್ಯರು ಒಂದೇ ಕಡೆ ಸೇರುವ ಮೂಲಕ ಅವಿಭಕ್ತ ಕುಟುಂಬವನ್ನು ಪುನಃ ನೆನಪಿಸುತ್ತಾರೆ. ಇಲ್ಲಿ ಮುಖ್ಯವಾಗಿ ಕುಟುಂಬದ ಎಲ್ಲ ಸದಸ್ಯರು ಎಲ್ಲಿಯೇ ನೆಲೆಸಿರಲಿ ಹಬ್ಬದ ದಿನದಲ್ಲಿ ಎಲ್ಲರೂ ಒಟ್ಟಾಗಿ ಸೇರಿ ಆಚರಿಸುವುದು ವಿಶೇಷವಾಗಿರುತ್ತದೆ. ಭಾರತೀಯ ಕೌಟುಂಬಿಕ ವ್ಯವಸ್ಥೆಯು ಮುಖ್ಯವಾಗಿ ಎರಡು ಪ್ರಕಾರಗಳಾಗಿ ಗುರುತಿಸಿಕೊಳ್ಳುತ್ತೇವೆ. ಪಿತೃಪ್ರಧಾನ ಕುಟುಂಬ, ಮಾತೃಪ್ರಧಾನ ಕುಟುಂಬ, ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಹಸಲರಲ್ಲಿ ಕಂಡುಬರುತ್ತದೆ. ಮದುವೆ, ಸಂಸ್ಕಾರ, ಆಚರಣೆ, ಸಂಪ್ರದಾಯಗಳ ವಿಷಯದಲ್ಲಿ ಕುಟುಂಬದ ಕರ್ತನ ತೀರ್ಮಾನ

[illegible]

ಅಂತಿಮವಾಗಿರುತ್ತದೆ. ಇಲ್ಲಿ ಯಜಮಾನ ತನಗೆ ಅಗತ್ಯವೆನಿಸಿದಾಗ ಮನೆ ಒಡತಿಯ ಅಥವಾ ಮಕ್ಕಳ ಸಲಹೆ ಕೇಳುವ ಮೂಲಕ ಸಾಮೂಹಿಕ ತೀರ್ಮಾನವನ್ನು ಕೈಗೊಳ್ಳಲಿಕ್ಕೆ ಅವಕಾಶ ಕೂಡ ಇರುತ್ತದೆ. ಹಸಲರು ಕುಟುಂಬದಲ್ಲಿನ ಜನ ದೈಹಿಕವಾಗಿ ದೂರ ದೂರವಾಗಿದ್ದರೂ ಆಂತರಿಕವಾಗಿ ತುಂಬಾ ಸಾಮಿಪ್ಯ ಕಂಡುಬರುತ್ತದೆ. ಹಲವಾರು ಕುಟುಂಬಗಳಲ್ಲಿನ ಸಂಬಂಧಗಳು ಆಧುನಿಕವಾಗಿ ಪರಿವರ್ತನೆಯಾದಾಗಲೂ ಕೂಡ ಮೂಲಕುಟುಂಬ ಸ್ವರೂಪದಲ್ಲಿನ ಕರ್ತನ ಪಾತ್ರಕ್ಕೆ ವಿಧೇಯರಾಗಿ ಉಳಿದಿರುವುದು ಕಂಡುಬರುತ್ತಿದೆ. ಇಲ್ಲಿ ಕುಟುಂಬಗಳು ಬೇರೆಯಾದರೂ ಕೂಡ ಕೆಲವು ತೀರ್ಮಾನಗಳನ್ನು ಮೂಲ ಕರ್ತೃವಿನ ನೇತೃತ್ವದಲ್ಲಿ ನಡೆಯುತ್ತವೆ. ಕುಟುಂಬದಲ್ಲಿನ ಹಿರಿಯನಿಗೆ ಗೌರವ ನೀಡುವ ಜೊತೆಗೆ ತಮ್ಮ ಕುಟುಂಬದಲ್ಲಿನ ಕೆಲವು ವ್ಯಾಜ್ಯಗಳನ್ನು ಮತ್ತು ಸಲಹೆಗಳನ್ನು ನೀಡುವ ಅಧಿಕಾರ ಕರ್ತನಾದವನಿಗೆ ಇರುತ್ತವೆ. ಈ ಸಂದರ್ಭದಲ್ಲಿ ಕರ್ತನಾದವನು ತನ್ನ ವಂಶವಾಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವ, ನಿಯಮಗಳನ್ನು ಪಾಲಿಸುವಂತೆ ಹೇಳುವ ಪ್ರಮುಖ ಜವಾಬ್ದಾರಿ ಯಜಮಾನ ಹೊಂದಿರುತ್ತಾನೆ.

ಪರಿವರ್ತನೆ ಸೆಲೆಗೆ ಸಿಲುಕಿದ ಅನೇಕ ಹಸಲರ ಕುಟುಂಬಗಳು ಸ್ವಪರಿಪೂರ್ಣತೆ ಹೊಂದಿದ ಕುಟುಂಬಗಳಾಗಿ ರೂಪುಗೊಂಡಿವೆ ಸ್ವಯಂ ಪರಿಪೂರ್ಣತೆಯ ಜೊತೆಗೆ ಆಧುನಿಕ ಪ್ರಭಾವದಿಂದ ಕುಟುಂಬದಲ್ಲಿನ ಹಿರಿಯರಿಗೆ ಗೌರವ ಮನ್ನಣೆಗಳಿಗೆ ಕೊರತೆ ಉಂಟಾಗಿರುವುದು ತುಂಬಾ ವಿರಳವೆಂದೇ ಹೇಳಬಹುದು. ಬದಲಾದ ಕಾಲದ ಪರಿಸರಕ್ಕೆ ತಕ್ಕಂತೆ ಕುಟುಂಬಗಳು ಬದಲಾದಾಗಲೂ ತಮ್ಮ ಪಾರಂಪರಿಕ ಆಚರಣೆಗಳು ಪದ್ಧತಿಗಳು ಕುಟುಂಬದಲ್ಲಿನ ಎಲ್ಲರಿಗೂ ಗೌರವಾಧರಗಳನ್ನು ನೀಡುವಲ್ಲಿ ಬದಲಾಗದೆ ಹಿಂದಿನ ಛಾಯೆಗಳನ್ನು ಉಳಿಸಿಕೊಂಡಿರುವುದು ಕಂಡುಬರುತ್ತದೆ.

*** ಆಚರಣೆಗಳಲ್ಲಿ ಬದಲಾವಣೆ**

ಬುಡಕಟ್ಟುಗಳಲ್ಲಿರುವ ಆಚರಣೆಗಳು ಸಂಪ್ರದಾಯಗಳು ಸಂಸ್ಕೃತಿಯು ಶ್ರೀಮಂತಿಕೆ ಹೊಂದಿದೆ ಎಂಬ ಕಾರಣಕ್ಕಾಗಿ ಅದರ ರಕ್ಷಣೆ ಆಗಲೇಬೇಕು ಅವರ ಆಚರಣೆಗಳು ಕಾಲ್ಪನಿಕ ಕಥೆಗಳು ತಮ್ಮ ಮೂಲದ ಬದುಕಿನ ಸ್ಥಿತಿಯನ್ನು ಬಿಂಬಿಸುವಂತ ಆಚರಣೆಗಳು ಬುಡಕಟ್ಟುಗಳ ಮೂಲನಂಬಿಕೆಗಳಾಗಿವೆ. ಆ ನಂಬಿಕೆಗಳಿಗೆ ಧಕ್ಕೆಯಾಗದಂತೆ ಆಧುನಿಕ ಸ್ವರೂಪದ ಸ್ಪರ್ಶ ನೀಡುವುದರ ಮೂಲಕ ಅದನ್ನು ರಕ್ಷಣೆ ಮಾಡಲೇಬೇಕು ಅವರ ಆಚರಣೆಗಳಲ್ಲಿ ದೈವಾಚರಣೆ, ಹಬ್ಬ ಆಚರಣೆ, ಉಡುಗೆ, ತೊಡುಗೆ, ಕಲೆಗಳ ಉಳಿಯುವಂತಾಗಬೇಕು. ಹಸಲರು ಬದಲಾಗಬೇಕೆಂದರೆ ಬದಲಾಗಬೇಕಾಗಿರುವುದು ಅವರ ಜೀವನ ವ್ಯವಸ್ಥೆ ಆದರೆ ಅವರ ಆಚರಣೆಗಳು ಸಮುದಾಯದ ಅಭಿರುಚಿಗೆ ತಕ್ಕಂತೆ ಬದಲಾಗುತ್ತಲೆ ಉಳಿಯುವಂತ ಕ್ರಮಗಳನ್ನ ಕೈಗೊಳ್ಳಬೇಕು. ಅವರ ಅನನ್ಯತೆಯನ್ನು ಕಾಪಾಡಿಕೊಂಡು ಆಧುನಿಕತೆಯನ್ನ ರೂಢಿಸಿಕೊಂಡು ಬದಲಾಗಬೇಕು.[೧೯] ಆ ನಿಟ್ಟಿನಲ್ಲಿ ಹಸಲರ ಆಚರಣೆಗಳು ಬದಲಾಗಿವೆ ಅಲ್ಲಿ ಅನನ್ಯತೆಯನ್ನು

[illegible]

ಉಳಿಸಿಕೊಂಡಿದ್ದಾರೆಯೋ ಎಂಬುದಾಗಿ ತಿಳಿಯುವ ಅಗತ್ಯತೆ ಇರುವುದರಿಂದ ಆಚರಣೆಗಳಲ್ಲಿನ ಬದಲಾವಣೆಯನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ.

ಜನನ ಸಂಸ್ಕಾರ

ಜನನ ಪ್ರತಿ ಸಮುದಾಯಕ್ಕೆ ಖುಷಿ ನೀಡುವಂತದ್ದು ಮಾನವನ ಹುಟ್ಟಿನಿಂದ ಸಾವಿನವರೆಗೂ ಅನೇಕ ಸಂಸ್ಕಾರಗಳನ್ನು ಮಾಡುತ್ತಾರೆ ಸಂಸ್ಕಾರ ಆಚರಣೆ ಪ್ರತಿಯೊಂದು ಸಮಾಜದ ವಿಶಿಷ್ಟ ಸಂಪ್ರದಾಯ ಎನಿಸಿಕೊಳ್ಳುತ್ತದೆ. ಮದುವೆ ಎಂಬ ಸಂಸ್ಕಾರದ ಮೂಲಕ ಒಂದಾದ ಜೋಡಿಗೆ ಗರ್ಭದಾನ ಸಂಸ್ಕಾರದ ಮೂಲಕ ಹಸಲರಲ್ಲಿನ ಆಚರಣೆಗಳು ಆರಂಭವಾಗುತ್ತವೆ. ತಿಂಗಳ ಋತುಚಕ್ರದ ನಂತರ ಗರ್ಭಿಣಿಯಾದವಳನ್ನು ಗುರುತಿಸುವ ಮೂಲಕ ಆ ಸಂದರ್ಭದಲ್ಲಿ ಬಸುರಿಗೆ ವಿಶೇಷವಾದ ಕಾಳಜಿ ನೀಡಿ ಆರೈಕೆ ಮಾಡಲಾಗುತ್ತದೆ. ಏಳನೇ ತಿಂಗಳಲ್ಲಿ ಸೀಮಂತ ಎಂಬ ಕಾರ್ಯಕ್ರಮದ ಮೂಲಕ ಗರ್ಭಿಣಿ ಸ್ತ್ರೀಯನ್ನು ಸಂತಸದಿಂದಿಡಲು ಎಲ್ಲ ಬಂಧು ಭಾಂಧವರು ಸೇರಿ ಆಚರಿಸುತ್ತಾರೆ. ಇದನ್ನು ಹಸಲರಲ್ಲಿ ಬಯಕೆ ಸಮಾನ ಎಂದು ಕರೆಯುತ್ತಾರೆ. ಕೆಲವು ಕಡೆ ಹೂ ಮುಡಿಸುವ ಸಂಸ್ಕಾರವೆಂದು ಕೂಡ ಕರೆಯುತ್ತಾರೆ. ಏಳು ತಿಂಗಳ ನಂತರ ಸ್ತ್ರೀಯನ್ನು ತವರುಮನೆಗೆ ಕರೆಸಿಕೊಳ್ಳಲಾಗುತ್ತದೆ. ತವರು ಮನೆಯಲ್ಲಿ ಹೆರಿಗೆ ಕಾರ್ಯವನ್ನು ಮಾಡಿಸುತ್ತಾರೆ. ಹೆರಿಗೆ ವಿಷಯಕ್ಕೆ ಬಂದಾಗ ಹಸರಲ್ಲಿ ಹಿಂದೇ ಮನೆಗಳಲ್ಲಿ ಸೂಲಗಿತ್ತಿ ನೆರವಿನಿಂದ ಮಾಡಿಸಲಾಗುತ್ತಿತ್ತು. ಇಂದು ಜಾಗತೀಕರಣದ ಮತ್ತು ಹೆರಿಗೆ ಸಮಯದಲ್ಲಿ ಯಾವ ತೊಂದರೆಯಾಗದಿರಲಿ ಎಂಬ ಕಾರಣಕ್ಕೆ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವುದು ಸಾಮಾನ್ಯವಾಗಿದೆ. ಹಿಂದೇ ಇದ್ದ ಸೂತಕದಂತ ಮೈಲಿಗೆಗಳನ್ನು ಇವತ್ತಿಗೂ ಪಾಲಿಸುತ್ತಾರಾದರೂ ಹಿಂದೇ ಇದ್ದ ನಿರ್ಬಂಧಗಳು ಸ್ವಲ್ಪಮಟ್ಟಿಗೆ ಸಡಿಲಗೊಂಡಿವೆ. ೧೧ ದಿನಗಳವರೆಗೆ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಹೆರಿಗೆ ೧೧ನೇ ದಿನದ ನಂತರ ಮನೆಯನ್ನು ಶುಚಿಗೊಳಿಸುವ ಮೂಲಕ ಮಗುವಿನ ತಾಯಿ ಗಂಗೆ ಪೂಜೆಮಾಡಿಸುವ ಮೂಲಕ ಪವಿತ್ರಳಾದ ಮೇಲೆ ಮನೆಯಲ್ಲಿ ಕರೆಸಿಕೊಳ್ಳುತ್ತಾರೆ. ಸೂತಕ ಕಳೆದ ಮೇಲೆ ಕೂಡ ಬಾಣಂತಿಗೆ ಮನೆಯಿಂದ ಹೊರಗೆ ಬರದಂತೆ ನೋಡಿಕೊಳ್ಳಲಾಗುತ್ತದೆ. ಪಥ್ಯದ ವಿಷಯದಲ್ಲಿ ಜೀರಿಗೆ ಕಷಾಯ, ಓಮ, ಶುಂಠಿ ಇವುಗಳನ್ನು ಮಾತ್ರ ಆಹಾರವನ್ನಾಗಿ ಕೊಡಲಾಗುತ್ತದೆ. ಈ ಮೂಲಕ ಆಧುನಿಕತೆ ಜಾಗತೀಕರಣ ಪ್ರಭಾವದಿಂದ ಹಸಲರ ಜನನ ಸಂಸ್ಕಾರಗಳನ್ನು ಉಳಿಸಿಕೊಂಡು ಬಂದಿರುವುದು ವಿಶಿಷ್ಟವಾದುದಾಗಿದೆ.

ನಾಮಕರಣ

ನಾಮಕರಣ ಸಂಸ್ಕಾರವು ಮಗುವಿನ ಗುರುತಿಸುವಿಕೆಗೆ ಇರುವ ಚಹರೆ. ಇಲ್ಲಿ ಸಾಮಾನ್ಯವಾಗಿ ಹೆಸರಿಡುವ ಪದ್ದತಿ ಎಂದು ಕರೆಯುವ ಈ ಸಂಸ್ಕಾರವನ್ನು ಹಸಲರಲ್ಲಿ ೧೬ನೇ ದಿನಕ್ಕೆ ಅಲಂಕರಿಸಿದ ತೊಟ್ಟಿಲಲ್ಲಿ ಮಗುವಿನ ಹಾಕುವ ಮೂಲಕ ಆಚರಿಸುತ್ತಾರೆ. ಹಿಂದೆ ಗಂಡು ಮಕ್ಕಳಿಗೆ ಇಡುತ್ತಿದ್ದ ಹೆಸರುಗಳು ಭೀರ,

ಗಣಪ, ದ್ರಾಪ, ಚೌಡ, ಈರ, ಹನುಮ, ಜಟ್ಟ ಎಂಬುದಾಗಿತ್ತು ಆದರೆ ಇಂದು ಪ್ರಶಾಂತ, ವಿನೋದ, ಆಕಾಶ, ಅರುಣ್, ಪವನ್ ಮಂಜುನಾಥ, ಅಂತ ಹೆಸರುಗಳನ್ನಿಡುತ್ತಾರೆ. ಹೆಣ್ಣುಮಕ್ಕಳಿಗೆ ಸೀತವ್ವ, ಗುತ್ತೆವ್ವ, ಚೌಡವ್ವ ಹೆಸರುಗಳ ಬದಲಾಗಿ, ಚೈತ್ರಾ, ಚಾಂದಿನಿ, ಚೇತನಾ, ಸುಧಾ, ಚಂದ್ರಪ್ರಭಾ, ಶೈಲಜಾನಂತ ಆಧುನಿಕವಾದ ಹೆಸರುಗಳನ್ನಿಡುವ ಮೂಲಕ ಹಸಲರು ಮೇಲ್ವರ್ಗದ ಹೆಸರುಗಳನ್ನು ಅನುಕರಿಸಿರುವರು ಕಂಡುಬರುತ್ತದೆ. ಈ ಮೂಲಕ ಹಸಲರು ಸ್ಥಳೀಯ ಮೇಲ್ವರ್ಗದ ಸಂಸ್ಕೃತಿಯ ಸಂಕರಕ್ಕೆ ಸಿಲುಕಿದ್ದಾರೆಂಬುದು ತಿಳಿಯುತ್ತದೆ. ಹಿಂದೆ ಇದ್ದ ಅಜ್ಜ ಅಜ್ಜಿ ಹೆಸರನ್ನೆ ಅಜ್ಜನ ಹೆಸರನ್ನೂ ಇಡುವ ಪದ್ಧತಿ ಇಂದು ಹಸಲರಲ್ಲಿ ಕಂಡುಬರುವುದೇ ಇಲ್ಲ.

ಋತುಮತಿ

ಹೆಣ್ಣು ಬಾಲ್ಯ ಕಳೆದು ಯೌವ್ವನಕ್ಕೆ ಕಾಲಿಡುವ ಸಂದರ್ಭದಲ್ಲಿ ಘಟಿಸುವ ಒಂದು ನೈಸರ್ಗಿಕ ಕ್ರಿಯೆ, ಪ್ರತಿ ಸಮಾಜವು ಹೆಣ್ಣು ಪ್ರೌಢ ವ್ಯವಸ್ಥೆಗೆ ಬಂದಾಗ ಅವಳಲ್ಲಿ ಉಂಟಾಗಬಹುದಾದ ದೈಹಿಕ ಬದಲಾವಣೆ ಗುರುತಿಸುವ ಸಾಂಪ್ರದಾಯಿಕ ಆಚರಣೆಯನ್ನು ಮಾಡುವ ಮೂಲಕ ಲೌಕಿಕ ಪ್ರಪಂಚಕ್ಕೆ ಪರಿಚಯಿಸಲಾಗುತ್ತದೆ. ಮೊದಲ ಋತುಸ್ರಾವ ಅವಳಲ್ಲಿ ಅನೇಕ ಬದಲಾವಣೆಗೆ ಕಾರಣವಾಗಿರುತ್ತದೆ. ಆ ಕಾರಣಕ್ಕಾಗಿ ಅಲ್ಲಿ ವಿಶೇಷವಾದ ಹಾರೈಕೆ ಇರುತ್ತದೆ. ಹಸಲರ ಸಮುದಾಯದಲ್ಲಿ ಋತುಮತಿಯಾದ ಸುದ್ಧಿಯನ್ನು ಸೋದರಮಾವನಿಗೆ ತಲುಪಿಸುವ ಮೂಲಕ ಪ್ರಾರಂಭವಾಗುತ್ತದೆ. ರಜಸ್ವತಿಯಾದ ಹುಡುಗಿಯನ್ನು ಪ್ರತ್ಯೇಕವಾಗಿ ಒಂದು ಕೋಣೆಯಲ್ಲಿ ಮೂಲೆಯಲ್ಲಿ ಚಾಪೆಯ ಮ್ಯಾಲೆ ಕೂಡಿಸಿ ೪ ರಿಂದ ೮ ದಿನಗಳವರೆಗೆ ಆಶುದ್ಧಳೆಂದು ಭಾವಿಸಲಾಗುತ್ತದೆ. ಪ್ರತಿದಿನ ಹಿರಿಯ ಸ್ತ್ರೀಯೊಬ್ಬಳು ಸ್ನಾನ ಮಾಡಿಸುತ್ತಾಳೆ ಇಲ್ಲಿ ಹೆಣ್ಣಿನ ಕೈಯಲ್ಲಿ ಯಾವುದೇ ಕೆಲಸಮಾಡಿಸುವುದಿಲ್ಲ. ಆದರೆ ಬದಲಾದ ಕಾಲಮಾನದಲ್ಲಿ ಹಸಲರು ಋತುಮತಿ ವಿಷಯದಲ್ಲಿ ತುಂಬಾ ಬದಲಾಗಿದ್ದಾರೆ. ಇಂದು ಹಿಂದೆ ಇದ್ದ ಅಶುದ್ಧ ಭಾವನೆ ಮಾಯವಾಗಿದೆ.

ವಿವಾಹ

ಮಾನವನ ಜೀವನದಲ್ಲಿ ಮದುವೆಯೆನ್ನುವುದು ಮಹತ್ವದ ಘಟ್ಟ. ವಿವಾಹವು ಕೂಡ ಕುಟುಂಬ ವ್ಯವಸ್ಥೆಯಂತೆ ಬಹಳ ಪ್ರಾಮುಖ್ಯತೆ ಪಡೆದಿದೆ. ಮಾನವನ ಲೈಂಗಿಕ ತೃಷೆಯನ್ನು ಈಡೇರಿಸಿಕೊಳ್ಳಲು ಕ್ರಮಬದ್ಧವಾದ ವ್ಯವಸ್ಥೆ ಅವಶ್ಯಕತೆ ಎನಿಸಿದಾಗ ಮದುವೆಯ ಪ್ರಸ್ತಾಪ ಉಂಟಾಯಿತು, ಹಲವಾರು ಉದ್ದೇಶಗಳನಿಟ್ಟುಕೊಂಡು ಒಂದು ಸಾರ್ವತ್ರಿಕ ಸಂಸ್ಕಾರವು ಎಲ್ಲ ಸಮುದಾಯಗಳಲ್ಲಿ ಅಸ್ತಿತ್ವದಲ್ಲಿರುವುದು ಸಂಬಂಧಗಳನ್ನು ಅಥವಾ ಬಾಂಧವ್ಯಗಳನ್ನು ಏರ್ಪಡಿಸುವುದು ಸಮುದಾಯವೊಂದರ ಪವಿತ್ರ ಕಾರ್ಯ, ವ್ಯಕ್ತಿಯೋರ್ವನಿಗೆ ಜವಾಬ್ದಾರಿ ಬರಬೇಕಾದರೆ ಮೊದಲು ''ಗಂಟು ಹಾಕಬೇಕು'' ಎಂಬ ಮಾತು ತುಂಬಾ ಚಾಲ್ತಿಯಲ್ಲಿರುವಂತದ್ದು, ಒಂದು ಜವಾಬ್ದಾರಿಯುತವಾದ ವ್ಯಕ್ತಿತ್ವದ ನಿರ್ಮಾಣಕ್ಕೆ ವಿವಾಹದ ಅವಶ್ಯಕತೆ

[illegible]

[illegible]

[illegible]

ಇದ್ದೆ ಇದೆ. ಸಮುದಾಯವೊಂದು ನಿತ್ಯವು ನೂತನ ಮನ್ವಂತರಗಳಿಗೆ ಒಳಗಾಗುವದು ಸರ್ವಸಾಮಾನ್ಯ ಆ ನಿಟ್ಟಿನಲ್ಲಿ ಪ್ರತಿ ಸಮುದಾಯವು ಕೂಡ ಅನನ್ಯತೆಯ ಜೊತೆಯಲ್ಲಿ ಮಗ್ಗಲು ಬದಲಾಯಿಸುವುದು ಅನಿವಾರ್ಯವಾಯಿತು. ದಿನದಿಂದ ದಿನಕ್ಕೆ ಮದುವೆಗಳು ಹೆಚ್ಚು ಹೆಚ್ಚು ಆಡಂಬರವೆನಿಸಿಕೊಂಡವು, ಮದುವೆಗಾಗಿ ನೂತನ ವಸ್ತುಗಳನ್ನು ಕೊಳ್ಳುವುದು. ಮಾರುವದು ಹೆಚ್ಚಾಗಲಾರಂಭಿಸಿತು. ಮನುಷ್ಯನ ನಾಗರಿಕತೆ ಹೆಚ್ಚು ಹೆಚ್ಚು ಆಧುನಿಕತವಾಗುತ್ತಿದ್ದಂತೆ ಮಾನವನ ಮುಂದಿನ ಬದುಕಿನ ಆರಂಭಕ್ಕೆ ಬದಲಾವಣೆ ಸೂಕ್ತವೆನಿಸಿತ್ತು ಆ ಕಾರಣಕ್ಕಾಗಿ ಮಾನವ ನಾವಿನ್ಯತೆಯನ್ನು ಸ್ವೀಕರಿಸುವುದು ಸೂಕ್ತವೆನಿಸಿತು. ಆ ನಿಟ್ಟಿನಲ್ಲಿ ಹಸಲರಲ್ಲಿನ ಮದುವೆಗಳ ವಿಷಯಕ್ಕೆ ಬಂದಾಗ ಶರವೇಗದಲ್ಲಿ ಪಾರಂಪರಿಕವಾದ ಸಂಪ್ರದಾಯಗಳನ್ನು ಆಚರಣೆಗಳನ್ನು ಉಳಿಸಿಕೊಳ್ಳುವ ಜೊತೆಗೆ ನಾಗರೀಕತೆಯ ನೂತನ ಸ್ಥಿತ್ಯಂತರಕ್ಕೆ ಉನ್ನತಿಗೊಳಿಸುವ ಮೂಲಕ ಸಂಪ್ರದಾಯಗಳು ಬದಲಾಯಿಸಿತು.

ಹಸಲರಲ್ಲಿನ ವಿವಾಹದ ವಿಷಯಕ್ಕೆ ಬಂದಾಗ ಹಿಂದೇ ಇದ್ದ ಪಾವಿತ್ರ್ಯತೆ ಭಾವನೆ ಇವತ್ತು ಇಲ್ಲದೆ ಇರುವುದು ಕಂಡುಬರುತ್ತದೆ. ಅವರಲ್ಲಿ ಹಿಂದೇ ವಿವಾಹ ಪೂರ್ವ ಲೈಂಗಿಕತೆ ಪಾಪವೆಂದು ಭಾವಿಸಲಾಗುತ್ತಿತ್ತು ಆ ಭಾವನೆ ಇಂದಿಗೂ ಮುಂದುವರಿದಿದೆ. ಸಾಮಾನ್ಯವಾಗಿ ಹೊಸಗದ್ದೆಯ ಚೌಡಪ್ಪ ಬೆಳ್ಳೆಣ್ಣೆ ನೀಡಿದ ಮಾಹಿತಿ ಪ್ರಕಾರ ಹೆಣ್ಣು ಋತುಮತಿಯಾದ ಬಳಿಕ ವಿವಾಹದ ಪ್ರಸ್ತಾಪ ಮಾಡುತ್ತಾರೆ. ಈ ವಿಷಯದಲ್ಲಿ ಹಸಲರಲ್ಲಿ ದಶಕಗಳ ಹಿಂದೇ ಬಾಲ್ಯವಿವಾಹ ಪದ್ಧತಿ ಇತ್ತಂತೆ. ಅದು ಇಂದು ಇಲ್ಲ ಅತಿಚಿಕ್ಕ ವಯಸ್ಸಿನಲ್ಲಿನ ವಿವಾಹವನ್ನು ವಿರೋಧಿಸುವದು ಚೌಡಪ್ಪನವರ ಮಾತಿನಲ್ಲಿಯೆ ವ್ಯಕ್ತವಾಗುತ್ತಿತ್ತು. ವಿವಾಹಗಳು ಸೋದರಮಾವನ ಬಳಿಗೆ ಸಂಬಂಧಿಸಿದಂತೆ ವಿವಾಹಗಳು ನಡೆಯುತ್ತವೆ. ಇಲ್ಲಿ ಬಳಿಗಳು ವಿಷಯಕ್ಕೆ ಬಂದಾಗ ಇಂದಿನ ಯುವಕರಿಗೆ ಯುವತಿಯರಿಗೆ ಬಳಿಗಳ ಬಗ್ಗೆ ಗೊತ್ತಿಲ್ಲದೇ ಇರುವದು ಸೋಜಿಗವೆನಿಸಿದರು ನಿಜವಾಗಿತ್ತು. ಯುವಕರನ್ನು ಬಳಿಗಳು ಮತ್ತು ಗೋತ್ರಗಳ ವಿಷಯ ಕೇಳಿದಾಗ ಅವರು ತನ್ನ ತಂದೆಯನ್ನು ತಾಯಿಯನ್ನು ವಿಚಾರಿಸುವುದು ಕಂಡುಬರುತ್ತಿತ್ತು. ಇಲ್ಲಿ ಆಧುನಿಕತೆಯ ಪ್ರಭಾವದ ಛಾಯೆ ಕಂಡುಬರುತ್ತದೆ. ಇಲ್ಲಿ ಹಸಲರ ಸಮುದಾಯಗಳು ಸಾಮಾನ್ಯವಾಗಿ ತಮ್ಮ ತಮ್ಮ ಹತ್ತಿರದ ಸಂಬಂಧಗಳಲ್ಲಿ ವಿವಾಹ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವದರಿಂದ ಗೋತ್ರಬಳಿಗಳ ಬಗೆಗಿನ ಪರಿಜ್ಞಾನ ಮಾಯವಾಗಿರಬಹುದಾಗಿದೆ, ಹಸಲರಲ್ಲಿ ಇಂದಿನ ವಿವಾಹಗಳು ತುಂಬಾ ವಿಳಂಬವಾಗಿ ಆಗುವುದು ಕಂಡುಬರುತ್ತದೆ. ಹಿಂದೆ ಹೆಣ್ಣು ೧೪-೧೮ ವರ್ಷದೊಳಗಡೆ ಪುರುಷ ೨೪-೨೮ ವರ್ಷಗಳಲ್ಲಿ ವಿವಾಹವಾಗುತ್ತಿದ್ದರು. ಇಂದು ಈ ಅಂತರ ಜಾಸ್ತಿಯಾಗಿದೆ ಎಂಬುದು ತಿಳಿಯುತ್ತದೆ. ಸ್ತ್ರೀ ಸಾಮಾನ್ಯವಾಗಿ ೨೦ ರಿಂದ ೨೫ ವರ್ಷದ ನಂತರ ವಿವಾಹವಾದರೆ ಪುರುಷ ೨೫ ರಿಂದ ೩೦ ವರ್ಷದ ನಂತರ ವಿವಾಹವಾಗುತ್ತಾರೆ. ಇದು ಬದಲಾವಣೆಗೆ ಹಿಡಿದ ಕನ್ನಡ ಎನಿಸಿದರು ಇದರ ಹಿಂದೆ ಕರಾಳ ಸ್ವರೂಪವಿದೆ. ಹಸಲರಲ್ಲಿ ಒಳ ಬಂಧುತ್ವ ವಿವಾಹ ಬೇರೆ ಪ್ರಾಂತ್ಯದ ವಾಸಮಾಡುವ ಹಸಲರು ಸಂಬಂಧಗಳನ್ನು ಬೆಳೆಸದೆ

ಇರುವದು ವಿಭಿನ್ನ ಪ್ರಾಂತ್ಯಗಳಲ್ಲಿ ನಾವೇ ಮೇಲು ಅವರು ಕೀಳು ಎನ್ನುವ ಭಾವನೆ ಹಸಲರಲ್ಲಿ ಇದೆ. ಆ ಕಾರಣಕ್ಕಾಗಿ ಪೂರ್ವ ಒಪ್ಪಂದಗಳಾದಂತೆ ತಮ್ಮ ತಮ್ಮಲ್ಲಿ ವಿವಾಹವಾಗುವದು ಸಾಮಾನ್ಯವಾಗಿದೆ. ಹಸಲರಲ್ಲಿ ಇತರ ಸಮುದಾಯಗಳಲ್ಲಿ ಇರುವಂತೆ ಅನೇಕ ಸಂಸ್ಕಾರಗಳನ್ನು ನೆರವೇರಿಸುವ ಪದ್ಧತಿ ಇಂದೂ ಕೂಡ ಇದೆ. ನಿಶ್ಚಿತಾರ್ಥ, ನಿಶ್ಚಾತಾರ್ಥ ಸಂದರ್ಭದಲ್ಲಿ ಸ್ತ್ರೀಗೆ ಆಭರಣಗಳಿಂದ ಅಲಂಕರಿಸುವುದರ ಜೊತೆಗೆ ಅಲ್ಲಿ ಸಮುದಾಯದ ಹಿರಿಯರ ಮಾತನಾಡುವ ಪದ್ಧತಿಯೂ ಇದೆ. ಅವರೇ ಹಿಂದೆ ವರನಾದವನು ವಧುವಿನ ತಾಯಿಗೆ ೫೦ ರಿಂದ ೨೦೦ ವರೆಗೆ ತೆರಕೊಡುವ ಪದ್ಧತಿ ಇತ್ತು. ಇದು ಇಂದು ಸಂಪೂರ್ಣ ಮಾಯವಾಗದೆ. ತನ್ನ ಅಸ್ತಿತ್ವ ಉಳಿಸಿಕೊಂಡು ವರದಕ್ಷಿಣೆಯಾಗಿ ಮಾರ್ಪಾಡಾಗಿದೆ. ವರದಕ್ಷಿಣೆ ಪದ್ಧತಿ ಜಾರಿಗೆ ಬಂದಿದೆಯಾದರೂ ಹಸಲರಲ್ಲಿ ತುಂಬಾ ವಿರಳವಾಗಿದೆ.

ಹಸಲರು ವಿವಾಹ ಸಂದರ್ಭದಲ್ಲಿ ಜಾತಕ-ಭವಿಷ್ಯಕ್ಕೆ ಜೋತಿಷ್ಯಶಾಸ್ತ್ರದ ಮೇಲೆ ದೃಡವಾದ ನಂಬಿಕೆ, ಆ ಕಾರಣಕ್ಕಾಗಿ ಇದನ್ನು ಉಳಿಸಿಕೊಳ್ಳುವ ಜೊತೆಗೆ ಎಲ್ಲ ಕಾರ್ಯಕ್ರಮಗಳನ್ನು ಭವಿಷ್ಯ ಜೋತಿಷ್ಯದ ಪ್ರಕಾರ ನೆರವೇರಿಸಲಾಗುತ್ತದೆ. ಇಲ್ಲಿ ಆಧುನಿಕತೆಯ ಪ್ರಭಾವ ಇವರ ಮೇಲಾಗಿಲ್ಲ ಎಂದು ಹೇಳಲಾಗದು. ಇಲ್ಲಿಯೂ ಆಧುನಿಕತೆಯ ಪರಿವರ್ತನೆಯ ಛಾಯೆ ಕಂಡುಬರುತ್ತದೆ. ನಿಶ್ಚಿತಾರ್ಥದಿಂದ ಹಿಡಿದು ಹಳೆಯ ಸಂಪ್ರದಾಯಗಳನ್ನು ಉಳಿಸಿಕೊಂಡು ಸಂಪ್ರದಾಯಬದ್ಧವಾಗಿ ಮಾಡುತ್ತಾರೆ. ಬಂಧು-ಬಾಂಧವರೆಲ್ಲರೂ ಸೇರಿ ಮದುವೆ ಕಾರ್ಯವನ್ನು ನೆರವೇರಿಸುತ್ತಾರೆ. ವಿಜೃಂಭಣೆಯಿಂದ ಆಧುನಿಕ ಶೈಲಿಯಲ್ಲಿ ವಧು ವರರನ್ನು ಶೃಂಗರಿಸಿ ವಿವಾಹಗಳನ್ನು ಮಾಡುವದು ಸರ್ವೆಸಾಮಾನ್ಯವಾಗಿದೆ. ಆ ಕಾರಣಕ್ಕಾಗಿ ಸಮುದಾಯದಲ್ಲಿನ ವಿವಾಹ ಸಮಾರಂಭಗಳ ಮೇಲೆ ಇತರ ಸಮುದಾಯಗಳ ಪ್ರಭಾವದಿಂದಾಗಿ ವಿವಾಹ ವಿಷಯದಲ್ಲಿ ತನ್ನ ಪಾರಂಪರಿಕ ವಲಯದಿಂದ ಸಹಜವಾಗಿ ವರ್ತಮಾನದ ಕಡೆಸಾಗುತ್ತದೆ. ವರ್ತಮಾನದಲ್ಲಿನ ಇತರ ಸಮುದಾಯಗಳ ಸಾಮಾಜಿಕ ಬದುಕನ್ನ ಅನುಕರಿಸುವ ಮೂಲಕ ತನ್ನ ಸಾಂಪ್ರದಾಯಿಕತೆ ಚಹರೆಯಿಂದ ಕಳಚಿಕೊಂಡು ನೂತರ ಬದಲಾವಣೆಯ ದಿಕ್ಕಿನತ್ತ ಮುನ್ನುಗ್ಗುತ್ತಿದೆ. ಹಸಲ ಸಮುದಾಯದಲ್ಲಿ ಇಂದು ಪ್ರೇಮವಿವಾಹಗಳು, ಸರಳ ವಿವಾಹಗಳು, ದುಂದುವೆಚ್ಚಕ್ಕೆ ಕಡಿವಾಣ ಹಾಕುವ ಮೂಲಕ ಮದುವೆಯನ್ನು ನೆರವೇರಿಸುವುದು ಕ್ಷೇತ್ರಕಾರ್ಯದಲ್ಲಿ ವಕ್ತೃ ನೀಡಿದ ಮಾಹಿತಿಗಳ ಪ್ರಕಾರ ತಿಳಿಯುತ್ತದೆ.

ಸಮುದಾಯದಲ್ಲಿ ವಿವಾಹಗಳು ಹಿಂದೂ ವ್ಯವಸ್ಥೆಗೆ ಸಂಬಂಧಿಸಿದಂತೆ ನಡೆಯುತ್ತದೆ. ಸ್ವಾತಂತ್ರ ನಂತರದಲ್ಲಿ ವಿವಾಹ ಸಂಬಂಧಗಳಲ್ಲಿ ಗಣನೀಯ ಪರಿವರ್ತನೆಯಾಗಿದೆ. ಹಸಲರ ವಿವಾಹದ ಹಿನ್ನೆಲೆಯಲ್ಲಿರುವ ಧಾರ್ಮಿಕ ಆಚರಣೆಗಳು ನಂಬಿಕೆಗಳು, ಇನ್ನು ಶಿಥಿಲವಾಗಿಲ್ಲದೆ ಇದ್ದರೂ ಅದರ ಆಚರಣೆ ಪ್ರಕಾರ ಹಾಗೂ ನಿಯಮಗಳಲ್ಲಿ ಬದಲಾವಣೆಗಳಾಗಿವೆ. ಈ ನಿಟ್ಟಿನಲ್ಲಿ ವಿವಾಹಗಳು ಪರಂಪರಾಗತವಾಗಿ ಆಚರಿಸಿಕೊಂಡ ಬಂದ ಪದ್ಧತಿಗಳು ಸ್ವಲ್ಪ ಮಟ್ಟಿಗೆ ಸಡಿಲಗೊಂಡಿದ್ದು ಸಾಕಷ್ಟು ಸರಳ ವಿವಾಹಕ್ಕೆ ಆದ್ಯತೆ ಇದೆ. ಸಮುದಾಯದಲ್ಲಿ ಹಿಂದಿನಿಂದ ಕಂಡುಬರುತ್ತಿದ್ದ ಪಾರಂಪರಿಕ ವಿವಾಹಗಳು ಬದಲಾಗುವ ಜೊತೆಗೆ ತೀರಾ

ಅಪರೂಪವಾಗಿ ಕಂಡುಬರುತ್ತವೆ. ಏಕಪತ್ನಿ ವಿವಾಹ ಪದ್ಧತಿಯ ಮೊದಲಿನಿಂದಲೂ ವ್ಯಾಪಕವಾಗಿ ಆಚರಣೆಯಲ್ಲಿರುವಂತದ್ದು, ಸಾಂಪ್ರದಾಯಿಕ ಹಿಂದೂ ವಿವಾಹವು ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಮಾಡಲಾಗುತ್ತದೆ. ಮುಖ್ಯವಾಗಿ ಅದರಲ್ಲಿ ಪುತ್ರಸಂತಾನ, 'ಧರ್ಮಾಚರಣೆ' ಆಧುನಿಕ ಸಂದರ್ಭದಲ್ಲಿ ಮರೆಯಾಗಿ ಜೀವನ ಪರ್ಯಂತ ಸಾಂಗತ್ಯವನ್ನು ಬಯಸುವುದು ವಿವಾಹದ ಉದ್ದೇಶಗಳಲ್ಲಿ ಒಂದಾಗಿದೆ.

ಸಾಮಾನ್ಯವಾಗಿ ಹಸಲರು ಜೀವನ ಸಂಗಾತಿಯ ಆಯ್ಕೆಯಲ್ಲಿ ಹಿರಿಯರೆಲ್ಲರು ಮಾರ್ಗದರ್ಶನದಲ್ಲಿ ಆಯ್ಕೆ ಮಾಡುತ್ತಿದ್ದರು ಪ್ರಸ್ತುತವಾಗಿ ಕನ್ಯೆಯ ಆಯ್ಕೆ ಮತ್ತು ವಧುವಿನ ಆಯ್ಕೆಯಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಸ್ವತಂತ್ರ ನೀಡುವ ಮೂಲಕ ಪಾರಂಪರಿಕ ಪದ್ಧತಿಯಿಂದ ಬದಲಾಗಿದ್ದರೆ ವಧುವಿನ ಆಯ್ಕೆ ಮತ್ತು ವರನ ಆಯ್ಕೆ ಪ್ರಸ್ತುತ ಸಂದರ್ಭದಲ್ಲಿ ವಿಸ್ತಾರವಾಗಿದೆ. ಆ ಕಾರಣಕ್ಕಾಗಿ ಸಮುದಾಯದಲ್ಲಿ ಅಂತರ್ಜಾತಿಯ ವಿವಾಹಗಳಾದ ಉದಾಹರಣೆಗಳಿವೆ. ವಧುವಿನ ಆಯ್ಕೆಯಲ್ಲಿ ಯುವಕರಿಗೆ ಸಂಪೂರ್ಣ ಸ್ವಾತಂತ್ರವಿದೆ. ಯುವಕ-ಯುವತಿಯರು ಪರಸ್ಪರ ಒಪ್ಪಿಗೆಯಿಂದ ನಡೆಯುವ ಹಾಗೂ ಪ್ರೇಮ ವಿವಾಹಗಳು ಸಮುದಾಯದಲ್ಲಿ ಕಂಡುಬರುತ್ತವೆ. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯಂತೆ ಒಬ್ಬ ಬ್ರಾಹ್ಮಣ ಹುಡುಗಿ, ಹಸಲರ ಹುಡುಗ ವಿವಾಹವಾಗಿ ಚೆನ್ನಾಗಿ ಇದ್ದರೆ, ಇನ್ನೊಂದು ಕಡೆ ಉಪ್ಪಾರ ಹುಡುಗಿ, ಹಸಲರ ಹುಡುಗ ಮದುವೆಯಾಗಿದ್ದಾರೆ. ಹೀರೆಮನೆಯಲ್ಲಿಯೂ ಕೂಡ ಒಂದು ಜೋಡಿ ಪ್ರೇಮವಿವಾಹವಾಗಿ ಸುಖವಾಗಿದ್ದಾರೆಂದು ಇಲ್ಲಿ ಒಳ ಜಾತಿಯಲ್ಲಿಯೆ ಪ್ರೇಮ ವಿವಾಹಗಳು ಕೂಡ ಆಗಿವೆ. ಇದರ ಜೊತೆಯಲ್ಲಿ ಕುಡುಗುಂಜಿ ರಾಮಣ್ಣ ನೀಡಿದ ಮಾಹಿತಿ ಸಾಮಾಜಿಕ ಸಂಬಂಧಗಳ ವಿರುದ್ಧವಾಗಿತ್ತು. ಕೆಲವು ಪ್ರೇಮವಿವಾಹಗಳು ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳ ನಡುವೆ ಏರ್ಪಟ್ಟಿವೆ. ಸಮುದಾಯದ ಒಪ್ಪಂದ ಮೇರೆಗೆ ಆ ವಿವಾಹಗಳನ್ನು ಕೂಡ ಮಾಡಲಾಯಿತು. ಅವರು ಇವತ್ತು ಸುಖವಾಗಿದ್ದಾರೆಂದು ಹೇಳಿದರು. ಪ್ರೇಮ ವಿವಾಹಗಳು ಸಮುದಾಯದ ಎಲ್ಲರ ಒಪ್ಪಿಗೆ ಮೇರೆಗೆ ಮಾಡಿರುವ ಉದಾಹರಣೆಗಳುಂಟು. ಇನ್ನು ಕೆಲವೊಂದು ಸಂದರ್ಭದಲ್ಲಿ ಪ್ರೀತಿಸಿದ ಜೋಡಿಗಳ ಪರಾರಿಯಾಗಿ ಮದುವೆ ಆಗಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹಸಲರು ವಿವಾಹದ ವಿಷಯದಲ್ಲಿನ ಹಿಂದಿನ ಪದ್ಧತಿಗಳ, ಆಚರಣೆಗಳ, ಸಂಸ್ಕಾರಗಳ, ನಿಯಮಗಳು ಸಡಿಲಗೊಂಡಿವೆ. ಆದರೂ ಸಂಪೂರ್ಣವಾಗಿ ಬದಲಾಗದೆ ಪೂರ್ವದ ಪದ್ಧತಿಗಳ ತಳಹದಿಯಲ್ಲಿಯೆ ಮುಂದುವರೆದಿವೆ. ವಿವಾಹದ ಭದ್ರತೆಗೆ ಸಂಬಂಧಿಸಿದಂತೆ ಬದಲಾಗಿದೆ. ವಿಚ್ಛೇಧನದಂತ ಪ್ರಕರಣಗಳು ಮತ್ತು ಮರುವಿವಾಹ ವಿಧವಾ ವಿವಾಹಕ್ಕೆ ಶಾಸನಗಳಲ್ಲಿ ಅವಕಾಶಗಳು ಇರುವ ಕಾರಣಕ್ಕಾಗಿ ಪರಂಪರಾಗತವಾಗಿ ಸಂಪೋಷಿಸಿಕೊಂಡು ಬಂದ ಪಾತಿವ್ರತ್ಯದ ಮೌಲ್ಯಕ್ಕೆ ಸವಾಲನೊಡ್ಡಿದೆ. ಪಾತಿವ್ರತ್ಯದ ಮೌಲ್ಯವು ದುರ್ಬಲಗೊಳ್ಳುತ್ತಿದ್ದು ಸ್ತ್ರೀ-ಪುರುಷ ಸಮಾನತೆ ಕಲ್ಪನೆಯ ಒಡಮೂಡಿದೆ. ಕೈಗಾರಿಕೀಕರಣ, ನಗರೀಕರಣ, ಶಿಕ್ಷಣ, ಇವಗಳು ವಿವಾಹದ ಮೇಲೆ ಬೀರಿರುವ ಪ್ರಭಾವ ನಾನಾರೀತಿಯಾದ ಶಿಕ್ಷಣದ ಕಾರಣದಿಂದಾಗಿ ಯುವತಿಯರ ಮೇಲೆ ಅವರಿಗೆ ಒಲ್ಲದ ವಿವಾಹವನ್ನು ಹೇರುವಂತಿಲ್ಲ. ಹಸಲ ಸಮುದಾಯದಲ್ಲಿನ

[illegible]

ವಿವಾಹದಲ್ಲಿ ಆಚರಣೆಗಳ ಪದ್ಧತಿಗಳು ಬದಲಾಗಿವೆ. ಆದರೂ ವೈವಾಹಿಕ ಸಂಬಂಧದಲ್ಲಿ ನಾನು ನಿನ್ನನ್ನು ನನ್ನ ಜೀವನದ ಸಂಗಾತಿಯಾಗಿ ಸ್ವೀಕರಿಸುತ್ತೇನೆ ಎಂಬ ವೇದಕಾಲೀನ ಆದರ್ಶಕ್ಕೆ ಮತ್ತುಷ್ಟು ಬದ್ಧರಾಗಿಯೇ ಇದ್ದಾರೆ.

ಮರಣ

ಸಾವು ಮಾನವ ಜೀವನದ ಅಂತಿಮ ಘಟ್ಟ. ಹುಟ್ಟಿದವನು ಸಾಯಲೇಬೇಕು. ಹಸಲರಲ್ಲಿ ಸಾಮಾನ್ಯವಾಗಿ ಹಿಂದಿನಿಂದಲೂ ಸತ್ತವರನ್ನು ಹೂಳುವ ಮತ್ತು ಸುಡುವ ಎರಡು ಪದ್ಧತಿಗಳಿವೆ. ಮುಖ್ಯವಾಗಿ ವಿವಾಹಿತರಾದಂತವರು ಮರಣ ಹೊಂದಿದಾಗ ಸುಟ್ಟರೆ, ಅವಿವಾಹಿತರು ಸತ್ತರೆ ಹೂಳುವಂತೆ ಪದ್ಧತಿ ರೂಢಿಯಲ್ಲಿದೆ. ಸಾವಿನ ಅಥವಾ ಮರಣ ನಂತರ ತಮ್ಮ ಹತ್ತಿರದ ಸಂಬಂಧಿಗಳಿಗೆ ಸುದ್ದಿ ಮುಟ್ಟಿಸುವ ಗೋಸ್ಕರ ಹಿಂದೆ ಸ್ವಯಂ ಸೇವಕರಿಗೆ ದುಡ್ಡು ಕೊಟ್ಟು ಕಳುಹಿಸಲಾಗುತ್ತಿತ್ತು. ತಂತ್ರಜ್ಞಾನದ ಬೆಳವಣಿಗೆಯಾದ ಈ ಕಾಲದಲ್ಲಿ ಪೋನಿನ ಮೂಲಕ ತಲುಪಿಸಲಾಗುತ್ತದೆ. ಮರಣದ ನಂತರ ಶವಕ್ಕೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳಿಂದ ಅಲಂಕರಿಸಿ ನೆಲದ ಮೇಲೆಯೆ ಮಲಗಿಸಲಾಗುತ್ತದೆ. ಬಂದ ಎಲ್ಲ ಬಂಧು ಬಾಂಧವರು ಸತ್ತ ವ್ಯಕ್ತಿ ಹಿರಿಯವನಾದರೆ ನಮಸ್ಕರಿಸುವ ಮೂಲಕ ಅಂತಿಮ ನಮನ ಸಲ್ಲಿಸುತ್ತಾರೆ. ಹಸಲರಲ್ಲಿ ಶವಸಂಸ್ಕಾರದ ನಂತರ ಸೂತಕವನ್ನು ೧೧ ರಿಂದ ೧೨ ದಿನಗಳವರೆಗೆ ಕಟ್ಟು ನಿಟ್ಟಾಗಿ ಆಚರಿಸುತ್ತಾರೆ. ಸಾಮಾನ್ಯವಾಗಿ ಮರಣದ ನಂತರದ ಎಲ್ಲ ವಿಧಿ-ವಿಧಾನಗಳನ್ನು ಸಮುದಾಯದವರೆಲ್ಲರೂ ಸೇರಿ ಆಚರಿಸುವುದು ರೂಢಿಯಲ್ಲಿದೆ. ಹಸಲರು ಸಂಸ್ಕಾರ ವಿಧಿ-ವಿಧಾನಗಳು ಬ್ರಾಹ್ಮಣರ ರೀತಿಯಲ್ಲಿ ಮಾಡುತ್ತಾರೆ.

ಹಸಲರಲ್ಲಿ ಸಾವಿನ ನಂತರ ಭೂತದ ಕಲ್ಪನೆ ಇದೆ. ಆ ಕಾರಣಕ್ಕಾಗಿ ಸತ್ತ ವ್ಯಕ್ತಿಯನ್ನು ಸಂತೃಪ್ತಗೊಳಿಸುವ ಸಲುವಾಗಿ ಅಜಲು ಅನ್ನ ಹಾಕುವ ಪದ್ಧತಿ ಇದೆ. ನೆಂಟರು, ಬಂಧು-ಬಾಂಧವರು ಸತ್ತ ವ್ಯಕ್ತಿಗೆ ಇಷ್ಟವಾದ ಹಲವಾರು ತಿಂಡಿ-ತಿನಿಸುಗಳನ್ನು ತಂದಿರುತ್ತಾರೆ. ಅವುಗಳನ್ನು ಒಂದು ಬುಟ್ಟಿಗೆ ಹಾಕಿ ಮರಣದ ಮೂರನೇ ದಿನ ಕಾಗೆಗಳಿಗೆ ಅರ್ಪಿಸುವ ಮೂಲಕ ಕಾಗೆಯ ರೂಪದಲ್ಲಿ ಸತ್ತ ವ್ಯಕ್ತಿ ಆಗಮಿಸಿತ್ತಾನೆ ಎನ್ನುವ ನಂಬಿಕೆ ಇದೆ. ಉಳಿದ ಭಾಗವನ್ನು ನದಿಗೊ-ಹೊಳೆಗೊ ಅಥವಾ ಆಕಳಿಗೆ ಇಡುವ ಪದ್ಧತಿ ಇದೆ. ಸತ್ತ ವ್ಯಕ್ತಿಯ ಆತ್ಮ ಸಂತರ್ಪಣೆಗಾಗಿ ದೀಪಾವಳಿಯ ಸಂದರ್ಭದಲ್ಲಿ ಅವನನ್ನ ಹಿರಿಯರಲ್ಲಿ ಸೇರಿಸಿಕೊಳ್ಳುವ ಕಾರ್ಯಮಾಡುತ್ತಾರೆ. ಇಂತಹ ಸಾವಿನ ನಂತರದ ಎಲ್ಲ ವಿಧಿ-ವಿಧಾನಗಳಲ್ಲಿ ಬಹುಪಾಲು ಬದಲಾವಣೆ ಆಗಿದೆ.

ಉಡುಗೆ-ತೊಡುಗೆ

ಮಾನವ ಬದುಕಿಗೆ ಗಾಳಿ, ನೀರು, ಉಸಿರು ಎಷ್ಟು ಮುಖ್ಯವೋ ಅಷ್ಟೇ ಅವಶ್ಯಕವಾದದ್ದು ಉಡುಗೆ-ತೊಡುಗೆ ಅವಶ್ಯಕತೆ ಹೆಚ್ಚು ನೈಸರ್ಗಿಕವಾದದ್ದು. ಯಾವುದೇ ಸಮಾಜದ ಅಥವಾ ಸಮುದಾಯದ ಉಡುಗೆ-

ತೊಡುಗೆಗಳು ಆ ಸಮುದಾಯದ ಗುರುತಿಸುವಿಕೆಗೆ ಸಹಾಯಕವಾಗುವ ಬಾಹ್ಯ ಚಿನ್ಹಗಳು, ಸಮುದಾಯವೊಂದರಲ್ಲಿ ಉಡುಗೆ-ತೊಡುಗೆಗಳ ವಿಷಯಕ್ಕೆ ಬಂದಾಗ ಲಿಂಗ, ವಯಸ್ಸು, ಸಾಮಾಜಿಕ ಅಂತಸ್ತು, ವೃತ್ತಿ ಇವುಗಳನ್ನು ಆಧರಿಸಿ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುತ್ತದೆ. ಉಡುಗೆ-ತೊಡುಗೆಗಳು ಸಾಮಾಜಿಕ ಅಂತಸ್ತಿಗೆ ತಕ್ಕಂತೆ ಬದಲಾಗುತ್ತ ಹೋಗುತ್ತವೆ. ಆ ವಿಷಯಕ್ಕೆ ಬಂದಾಗ ಹಸಲರು ಕೃಷಿಯನ್ನು ಮತ್ತು ಕೂಲಿಯನ್ನೇ ಅವಲಂಬಿಸಿ ಬದುಕುವ ಜನರಾಗಿರುವದರಿಂದ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವದರಿಂದ ಆಧುನಿಕತೆಯ ಸಂಕಷ್ಟಕ್ಕೆ ಒಳಗಾದಾಗಲೂ ಕೆಲವು ಕಡೆ ಮೂಲ ಸ್ವರೂಪವನ್ನು ಉಳಿಸಿಕೊಂಡಿದೆ.

ವಸಾಹತು ಶಾಹಿ ಕಾಲಘಟ್ಟಕ್ಕಿಂತ ಮೊದಲು ಹಸಲರು ಕಾಡುಗಳಲ್ಲಿ ಅಲೆದಾಡುತ್ತಿದ್ದ ಸಂದರ್ಭದಲ್ಲಿ ಕೇವಲ ಕಾಸೆ ಕಟ್ಟಿಕೊಂಡು ಜೀವನ ಮಾಡುತ್ತಿದ್ದರಂತೆ ಆದರೂ ಬದಲಾದ ಕಾಲದ ವೇಗದ ಲಯದಲ್ಲಿ ಲಂಗೋಟಿ, ದೋಟುಪಂಚೆ, ಸೊಂಟಕ್ಕಿರುವ ದಟ್ಟಿ, ದಟ್ಟಿಯ ಹಿಂಭಾಗದಲ್ಲಿನ ಕಬ್ಬಿಣಕೊಂಡಿ ಮಾಯವಾಗಿ ಅಲಂಕಾರಿತ ಅಂಗಿ, ಕೆಲಸದ ವೇಳೆಯಲ್ಲಿ ಟೋಪಿ ಧರಿಸುವುದನ್ನು ಮತ್ತು ಹೆಗಲ ಮೇಲೊಂದು ಕಂಬಳಿಕೊಪ್ಪೆ, ಸಂಚಿಚೀಲ ಇವು ತಮ್ಮ ಮೂಲದ ಕುರುಹಗಳಾಗಿದ್ದರೆ, ಆಧುನಿಕತೆ ಬರಸಿಡಿಲು ಹಸಲರ ವಸ್ತ್ರವಿನ್ಯಾಸದಲ್ಲಿ ತುಂಬಾ ಬದಲಾವಣೆ ಬಂದಿರುವದು ಕ್ಷೇತ್ರಕಾರ್ಯದಲ್ಲಿ ಅವರನ್ನು ನೋಡಿದಾಗ ತಿಳಿಯುವ ಸಾಮಾನ್ಯ ವಿಷಯ, ಆಧುನಿಕತೆ ಪ್ರತೀಕಗಳಾಗಿ ಹಸಲರ ಯುವಕರು, ಪ್ಯಾಂಟ್, ಶರ್ಟ್, ಸ್ಯಾಂಡಲ್ಸ್, ವಿವಿಧ ಬಗೆಯ ಬೂಟುಗಳು, ಯುವತಿಯರು ನೈಟಿ, ಚೂಡಿದಾರ, ಗಾಗ್ರ, ಸಾರಿ, ಬೆಂಡೋಲೆ, ಎಸಳು, ಲವಂಗದ ಕಡ್ಡಿ ಟಿಕಳಿ (ಸ್ಟಿಕ್ಸ್) ಪೌಡರ್ ಸ್ನೋ, ರಿಂಗ್, ಬೈತಲೆ ಬಂಗಾರ, ಮಲ್ಲಿಗೆ ಮೊಗ್ಗು ಚಂದ್ರಬಿಲ್ಲೆ ಇಂತಹ ಅನೇಕ ಆಭರಣಗಳು ಹಸಲರ ಗಂಡಸರ ಮತ್ತು ಹೆಂಗಸರ ವೇಷ ಭೂಷಣಗಳಲ್ಲಿ ಮಾರ್ಪಾಡು ತಂದಿವೆ. ಆಧುನಿಕತೆ ಹಸಲರನ್ನು ತುಂಬಾ ಬದಲಾಯಿಸಿದೆ. ಮಾನವನ ಸೌಂದರ್ಯ ಕಲ್ಪನೆ ವೈವಿಧ್ಯಮಯವಾದ ವೇಷ ಭೂಷಣಗಳ ಜನ್ಮತಾಳಲು ಕಾರಣವಾಗಿವೆ. ಪ್ರಕೃತಿಯ ಮತ್ತು ನಿಸರ್ಗದ ಮಡಿಲಲ್ಲಿ ವಾಸಿಸುವ ಹಸಲರು ವಸ್ತ್ರ ವಿನ್ಯಾಸದಲ್ಲಿ ಮತ್ತು ಉಡುಗೆ-ತೊಡುಗೆಗಳಲ್ಲಿ ಬುಡಕಟ್ಟು ಲಕ್ಷಣಗಳಿಂದ ಹೊರ ಬಂದ ಸಮುದಾಯ ಎಂದರೆ ತಪ್ಪಾಗಲಾರದು. ಹಿಂದೆ ಇದ್ದ ಕಾಸೆ, ಕಾಚ್, ತಲೆಗೆ ಟೊಪ್ಪಿ, ಸೊಂಟದಪಟ್ಟಿ, ಕಬ್ಬಿಣದ ಕೊಂಡಿ, ಕಂಬಳಿಕೊಪ್ಪೆ, ಸಂಚಿಚೀಲ ಇವು ಕೆಲಸದ ವೇಳೆಯಲ್ಲಿ ಮಾತ್ರ ಧರಿಸುತ್ತಾರಾದರೂ ಇದು ಎಲ್ಲರಿಗೂ ಅನ್ವಯಿಸುವುದಿಲ್ಲ. ಮದುವೆ ಸಂದರ್ಭದಲ್ಲಿ ಬಂಧುಗಳ ಮನೆಗೆ ಹೋಗುವ ಸಂದರ್ಭದಲ್ಲಿ ಕಚ್ಚೆ ಪಂಚೆ ಉಡದೆ, ಲುಂಗಿಯನ್ನು ಉಡುತ್ತಿದ್ದಾರೆ. ತುಂಬ ತೋಳಿನ ಮತ್ತು ಅರ್ಧ ತೋಳಿನ ಅಂಗಿಗಳನ್ನು ಧರಿಸುತ್ತಾರೆ. ಮಧ್ಯಮ ವರ್ಗದವರು ಹೆಗಲ ಮೇಲೆ ವಲ್ಲಿಯನ್ನ ಕೂಡ ಹಾಕಿಕೊಂಡಿರುತ್ತಾರೆ. ಕಾಲಿಗೆ ಚಪ್ಪಲಿ ಮೆಟ್ಟಿರುವುದು ಕಂಡುಬರುತ್ತದೆ.

ಹೆಂಗಸರ ವೇಷ ಭೂಷಣಗಳು ಈಗ ಸಾಕಷ್ಟು ಮಾರ್ಪಾಡಾಗಿವೆ. ಹಿಂದೆ ಗೊಬ್ಬೆಹಾಕಿ ಸೀರೇ ಉಡುವ ಪದ್ಧತಿ ಕ್ಷೀಣಿಸುತ್ತಿದ್ದು, ಹಸಲರ ಮಧ್ಯವಯಸ್ಕರೆಲ್ಲರು ಮೇಲ್ ಸೆರಗು ಹಾಕಿ ಸೀರೇ ಉಡುತ್ತಾರೆ. ಯುವತಿಯರು ಸಾಮಾನ್ಯವಾಗಿ ಆಧುನಿಕತೆಗೆ ಮೊರೆ ಹೋದಂತೆ ಇದೆ. ಆಧುನಿಕವಾಗಿ ತೊಡುವ ಎಲ್ಲ ವಸ್ತ್ರಗಳನ್ನು ಉಡುಪುಗಳನ್ನು ಸ್ತ್ರೀಯರು ಯಾವುದೇ ಸಂಕೋಚವಿಲ್ಲದೆ ತೊಡುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಮಗೆ ಸಹಾಯ ಮಾಡಿದ ಸುಧಾ ಎಂಬ ಹಸಲ ಯುವತಿ ಚೂಡಿದಾರ, ನೈಟಿ ಡ್ರೆಸ್, ಕಾಲಿಗೆ ಸ್ಯಾಂಡಲ್, ಹವಾಯಿ ಚಪ್ಪಲಿಗಳನ್ನ ಮೆಟ್ಟುವ ಮೂಲಕ ಆಧುನಿಕತೆಯ ಪ್ರತಿರೂಪದಂತಿದ್ದಳು. ಸಾಮಾನ್ಯವಾಗಿ ಅಲಂಕಾರ ಪ್ರಿಯಳಾದ ಸ್ತ್ರೀ ಕೇಶಾಲಂಕಾರಕ್ಕೆ ಹೆಚ್ಚಿನ ಒತ್ತುಕೊಡುವದರ ಜೊತೆಗೆ ಮೂಗುತಿ, ಕಿವಿಓಲೆ, ಕೈಕಾಲಿನ ಆಭರಣಗಳನ್ನು ಧರಿಸುತ್ತಾರೆ. ಕೆಳಗಿವಿಗೆ ಬೆಂಜೋಲೆ, ಮೆಲ್ಗಿವಿಗೆ ಬೆಂಡೋಲೆ ಲವಂಗದ ಕಡ್ಡಿ ಕೈಯಲ್ಲಿ ಬಳೆ, ಕೊರಳಲ್ಲಿಸರ, ಮಾಂಗಲ್ಯ, ಕಾಲುಂಗುರ, ಬೈತಲೆ ಬಂಗಾರ, ಸೊಂಟಕ್ಕೆ ಡಾಬು, ಮಲ್ಲಿಗೆ ಮೊಗ್ಗು, ಕುಚ್ಚ ಚಂದ್ರಬಿಲ್ಲೆ ಅನೇಕ ತರಹದ ಆಭರಣಗಳಿಂದ ಅಲಂಕರಿಸಿಕೊಳ್ಳುವುದು ಹಸಲರಲ್ಲಿ ಕಂಡುಬರುವ ಮಹತ್ತರ ಬದಲಾವಣೆ ಗತದಲ್ಲಿನ ವಯೋವೃದ್ಧರ ಉಡುಪುಗಳ ಮತ್ತು ಮಧ್ಯವಯಸ್ಕ ಯುವಕರ ಮತ್ತು ಮಕ್ಕಳ ಉಡುಪುಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿದೆ.

ಆಹಾರ ಪದ್ಧತಿ

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಬಹುಮುಖ್ಯವಾದುದ್ದು ಆಹಾರ. ಇದು ಮನುಷ್ಯನ ಜೀವನಾಧಾರ ಮಲೆನಾಡು ಅತ್ಯಧಿಕ ಮಳೆ ಬೀಳುವ ಪ್ರದೇಶವಾಗಿರುವುದರಿಂದ ಇಲ್ಲಿ ಭತ್ತವನ್ನ ಸ್ವಲ್ಪಮಟ್ಟಿಗೆ ಬೆಳೆಯುತ್ತಾರೆ. ಅಕ್ಕಿರೊಟ್ಟಿಯು ಸಾಮಾನ್ಯವಾಗಿ ದಿನನಿತ್ಯದ ಆಹಾರವನ್ನಾಗಿ ಸೇವಿಸುತ್ತಾರೆ. ಹಿಂದೆ ಅರಣ್ಯವಾಸಿಗಳಾದ ಹಸಲರು ಮೂಲತಃ ಮಾಂಸಹಾರಿಗಳಾಗಿದ್ದರು ಮಾಂಸಹಾರ ದೊರೆಯದ ಸಂದರ್ಭದಲ್ಲಿ ಅರಣ್ಯ ಪ್ರದೇಶದಲ್ಲಿ ದೊರೆಯುವ ಗಡ್ಡೆ-ಗೆಣಸುಗಳೆ ಇವರ ಆಹಾರಗಳಾಗಿರುತ್ತಿದ್ದವು. ಮಾಂಸಹಾರಿಗಳಾದ ಇವರು ಹಿಂದೆ ಕಾಡು ಪಕ್ಷಿಗಳಾದ ಮೊಲ, ಕಬೆಕ್ಕು, ಬುರ್ಲಿ, ಮುಳ್ಳುಹಂದಿ, ಮುಂಗುಸಿ, ಕಾಡುಕೋಳಿ ಕೋಳಿ ಇತ್ಯಾದಿಗಳನ್ನು ತಿನ್ನುತ್ತಿದ್ದರು. ಪ್ರಾಣಿಗಳಲ್ಲಿ ಕಾಡು ಹಂದಿಯನ್ನು ಕೂಡ ತಿನ್ನುತ್ತಿದ್ದರಾದರೂ ಕಾಡು ಹಂದಿಯ ಮಾಂಸವನ್ನು ಮನೆಯಲ್ಲಿ ಬೇಯಿಸದೇ ಹೊರಗಡೆ ಗವಲಗಡಿಗೆಯಲ್ಲಿ ಬೇಯಿಸುತ್ತಿದ್ದರು ಉಳಿದ ಕುರಿ, ಮೇಕೆ ಪ್ರಾಣಿಗಳ ಮಾಂಸವನ್ನು ಮನೆಯಲ್ಲಿ ತಯಾರಿಸಲು ಅಡ್ಡಿ ಇರಲಿಲ್ಲ. ಇನ್ನು ಹಿಂದಕ್ಕೆ ಹೋಗಿ ನೋಡಿದಾಗ ಹಸಲರು ಗತಕಾಲದಲ್ಲಿ ಭಗಿನಿ ಮರದ ಹಿಟ್ಟಿನಿಂದ ತಯಾರಿಸಿದ ಗಂಜಿಯನ್ನು ಸೇವಿಸುವ ಮೂಲಕ ತಮ್ಮ ಹಸಿವನ್ನು ತಾತ್ಕಾಲಿಕವಾಗಿ ನೀಗಿಸಿಕೊಳ್ಳುತ್ತಿದ್ದರು. ಇದು ಹಸಿವೆಯನ್ನ ತಾತ್ಕಾಲಿಕವಾಗಿ ನೀಗಿಸುತ್ತಿತ್ತೇ ಹೊರತು ದೈಹಿಕ ಯಾವುದೇ ಪೌಷ್ಠಿಕತೆ ಅಥವಾ ಶಕ್ತಿಯನ್ನು ಒದಗಿಸುತ್ತಿರಲಿಲ್ಲ. ಬದಲಾದ ಸಾಮಾಜಿಕ ಜೀವನದಲ್ಲಿ ಹಸಲರು ಮಾಂಸಹಾರಕ್ಕಿಂತ ಹೆಚ್ಚಿನ ಮಹತ್ವ ಸಸ್ಯಹಾರಕ್ಕೆ ನೀಡಿರುವದು ಕಂಡುಬರುತ್ತದೆ.

[illegible]

[illegible]

ಹಸಲರು ಇಂದು ಮುಖ್ಯವಾಗಿ ಅಕ್ಕಿ, ರಾಗಿ, ಜೋಳ, ಹಲಸಂದಿಗಳನ್ನು ಆಹಾರವನ್ನಾಗಿ ಬಳಸುತ್ತಾರೆ. ಸರ್ಕಾರವು ನೀಡಿದ ಅರೆ ತುಂಡು ಭೂಮಿಗಳನ್ನು ಹೊಂದಿರುವುದರಿಂದ ಅತಿಯಾದ ಮಳೆ ಬೀಳುವ ಪ್ರದೇಶವಾದರಿಂದ ಮಳೆಗಾಲದಲ್ಲಿ ಭತ್ತ ಬೆಳೆಯುತ್ತಾರೆ. ಇವತ್ತಿನ ಕೃಷಿ ಕ್ಷೇತ್ರದಲ್ಲಾದ ಕ್ರಾಂತಿಕಾರಿ ಬದಲಾವಣೆಯಿಂದ ನೀರಾವರಿ ಸೌಕರ್ಯದ ಫಲವಾಗಿ ಬೆಳೆದ ಭತ್ತ, ಜೋಳ, ಶೇಂಗಾ ಬೆಳಗಳನ್ನ ದಿನ ನಿತ್ಯದ ಆಹಾರವನ್ನಾಗಿ ಬಳಸುತ್ತಾರೆ. ಹಸಲರು ಇಂದು ಅಕ್ಕಿ, ರಾಗಿ, ಜೋಳವನ್ನು ಯಥೇಚ್ಛವಾಗಿ ಬಳಸುತ್ತಾರೆ. ಕ್ಷೇತ್ರಕಾರ್ಯದಲ್ಲಿ ನಾವು ಗಮನಿಸಿದಾಗ ಹೀರೆಮನೆಯ ಹಸಲರು ತುಂಬಾ ಸುಧಾರಿಸಿದ್ದಾರೆ. ಇವರು ಹಬ್ಬ ಹರಿದಿನಗಳಲ್ಲಿ ಹೋಳಿಗೆ, ದೋಸೆ, ಕಡಬು, ಪಾಯಸಗಳನ್ನು ಮಾಡುತ್ತಾರೆ. ದಿನ ನಿತ್ಯವು ಇವರು ಬಸಳೆಸೊಪ್ಪು, ತೊಂಡೆಕಾಯಿ, ನುಗ್ಗೆಕಾಯಿ, ಅಸೆ ಮಾಡುವದು ಕಂಡುಬರುತ್ತದೆ. ಕುಡುಗುಂಜಿಯಲ್ಲಿನ ಹಸಲರಲ್ಲಿಯೂ ಕೂಡ ಆಹಾರ ವಿಷಯದಲ್ಲಿ ತುಂಬಾ ಬದಲಾಗಿದ್ದಾರೆ. ಹಿಂದೆ ಸೇವಿಸುತ್ತಿದ್ದ ಮಾಂಸಹಾರ, ಮೀನು, ಕಾರೇಡಿ, ಬಿಳೇಡಿಗಳನ್ನು ಹಿಡಿದು ಸಾರು ಸೇವಿಸುತ್ತಿದ್ದ ಅವರು ಅಲ್ಲಿನ ಹವ್ಯಕ ಬ್ರಾಹ್ಮಣರ ಪ್ರಭಾವದಿಂದಾಗಿ ಆಹಾರದ ಕ್ರಮವನ್ನು ಬದಲಾಯಿಸಿಕೊಂಡಿದ್ದಾರೆ. ಅವರು ಕೂಡ ಇತರರಂತೆ ಸಸ್ಯಹಾರವನ್ನು ಹೆಚ್ಚಾಗಿ ಉಪಯೋಗಿಸುವ ಮೂಲಕ ಬ್ರಾಹ್ಮಣರ ಪಕ್ಕಾ ಆಹಾರದ ಮಾದರಿಯಲ್ಲಿ ತಮ್ಮ ಆಹಾರವನ್ನು ತಯಾರಿಸಿಕೊಳ್ಳುತ್ತಿದ್ದಾರೆ. ವಿಶೇಷವಾಗಿ ಇವರು ಹಬ್ಬ ಹರಿದಿನಗಳಲ್ಲಿ ಇತರರಂತೆ ಹೋಳಿಗೆ, ದೋಸೆ, ಅನ್ನ, ಸಾಂಬರ್, ಕಡುಬು, ಪಾಯಸ, ಉಪ್ಪಿನಕಾಯಿ, ಸಂಡಿಗೆ ಇವುಗಳನ್ನು ಸೇವಿಸುತ್ತಾರೆ.

ವಸತಿ ವ್ಯವಸ್ಥೆ

ಮೂಲತಃ ಅಲೆಮಾರಿಗಳಾಗಿ ಅರಣ್ಯದಿಂದ ಅರಣ್ಯಕ್ಕೆ ಅಲೆದಾಡುತ್ತಿದ್ದ ಹಸಲರು ಕಾಲಾಂತರದಲ್ಲಿ ಪಶುಸಂಗೋಪನೆ ಕೃಷಿ, ಕೃಷಿಯೇತರ ಕಾರ್ಯಗಳ ಜೊತೆಗೆ ಕೂಲಿ, ಕಾರ್ಮಿಕರಾಗಿ ನೆಲೆಕಂಡುಕೊಂಡು ನಂತರ ತಮ್ಮ ಸಮುದಾಯದವರೆಲ್ಲರೂ ಸೇರಿ ಕಾಡಿನಿಂದ ನಾಡಿಗೆ ಬಂದು ಕಾಡಿನ ಅಂಚಿನಲ್ಲಿ ಊರಿನಿಂದ ದೂರದಲ್ಲಿ ಚಿಕ್ಕ ಪುಟ್ಟ ಹಳ್ಳಿಗಳನ್ನು ನಿರ್ಮಿಸಿಕೊಂಡು ಶಾಶ್ವತವಾಗಿ ನೆಲೆನಿಂತಿರುವುದು ಕಂಡುಬರುತ್ತದೆ. ಹಸಲರು ಹಿಂದೆ ಏಕಾಂತ ವಾಸವನ್ನು ಇಷ್ಟಪಡುತ್ತಿದ್ದರು. ಆ ಕಾರಣಕ್ಕಾಗಿ ಸಣ್ಣ ಪುಟ್ಟ ಗುಡಿಸಲುಗಳನ್ನು ನಿರ್ಮಿಸಿಕೊಂಡು ತುಂಬಾ ಚಿಕ್ಕದಾದ ಬಾಗಿಲುಗಳ ಜೋಪಡಿಗಳಾಗಿರುತ್ತಿದ್ದವು. ಮಲೆನಾಡು ಹಸಲರು ಪ್ರಮುಖವಾಗಿ ಆದ ಬದಲಾವಣೆಯೆಂದರೆ ಕಾಡಿನಿಂದ ನಾಡಿಗೆ ಬಂದು ವಾಸಮಾಡಲು ಪ್ರಾರಂಭಿಸಿದರು. ಇವರು ವಾಸಿಸುವಂತ ಪರಿಸರದಲ್ಲಿರುವ ಗುಡಿಸಲು ತುಂಬಾ ಸರಳವಾಗಿ ರಚನೆ ಮಾಡಿಕೊಂಡಿರುವುದು ಕಾಣಬಹುದು. ನಿಸರ್ಗದತ್ತವಾಗಿ ಮಲೆನಾಡಿನಲ್ಲಿ ದೊರೆಯುವ ಕೆಂಪು ಹೆಂಡೆಗಳನ್ನು ಒಳಗೊಂಡ ಮಣ್ಣಿನ ಗೋಡೆ ಹಾಗೂ ಅಡಿಕೆ ದಬ್ಬೆವನ್ನ ಹೊಂದಿರುವ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಹಸಲರ ಮನೆಗಳ ತ್ರಿಕೋನ ಆಕೃತಿಯಲ್ಲಿ ನಿರ್ಮಿಸಿಕೊಂಡಿದ್ದು ಇತ್ತೀಚಿಗೆ ಸರ್ಕಾರದ ಪುನರ್ ವಸತಿ ಯೋಜನೆಯನ್ವಯ ಹೀರೆಮನೆಯಲ್ಲಿ ಹಸಲರಿಗಾಗಿ ಪ್ರತ್ಯೇಕ ವಸತಿಗಳು ನಿರ್ಮಿಸಲಾಗಿದೆ. ಈ ಮನೆಗಳು

[illegible]

[illegible]

ಕಲ್ಲಿನ ಗೋಡೆಗಳಿಂದ ಮಣ್ಣಿನಿಂದ ನಿರ್ಮಾಣವಾಗಿವೆ. ಇದಕ್ಕೆ ಪೂರಕವಾಗುವಂತೆ ಕ್ಷೇತ್ರಕಾರ್ಯದಲ್ಲಿನ ನಮಗೆ ಮಾಹಿತಿ ನೀಡಿದ ಸುಧಾ ಎಂಬ ಯುವತಿಯ ಮನೆಯು ತುಂಬಾ ಆಧುನಿಕವಾಗಿ ರಚನೆಯಾದ ಮನೆ ಎನಿಸಿಕೊಳ್ಳುತ್ತಿತ್ತು. ಮನೆಯನ್ನು ಸಿಮೆಂಟ್‌ನಿಂದ ಕಟ್ಟಲಾಗಿದ್ದು ಮೇಲೆ ಮಂಗಳೂರು ಹೆಂಚುಗಳ ಮೂಲಕ ದಬ್ಬ ಹಾಕಲಾಗಿದೆ. ಈ ಮನೆಯಲ್ಲಿ ಮುಂಭಾಗದಲ್ಲಿ ಹಾಗೂ ಹಿಂಭಾಗದಲ್ಲಿ ಕೈ ತೋಟಗಳ ಇತರೆ ತರಕಾರಿಗಳನ್ನು ಬೆಳೆದರೆ, ಮನೆಯು ಮೂರು ಸುಸಜ್ಜಿತವಾದ ಕೋಣೆಗಳನ್ನು ಒಳಗೊಂಡು ಸ್ನಾನದ ಮನೆ ಮತ್ತು ಅಡಿಗೆ ಕೋಣೆ ಒಂದೇ ಕಡೆ ನಿರ್ಮಾಣ ಮಾಡಿರುವದು ಆಧುನಿಕತೆಗೆ ಕನ್ನಡಿಯಾಗಿದೆ. ಹಿಂದೆ ಹಸಲರು ಗೋಡೆ ಮೇಲೆ ಭಿತ್ತಿ ಚಿತ್ರಗಳನ್ನ ಇಳಿಸುತ್ತಿದ್ದರು ಆದರೆ ಇಂದು ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಹಸಲರು ತಾವೇ ತಯಾರಿಸಿದ ಸೌಂದರ್ಯ ವರ್ಧಕ ಸಲಕರಣೆಗಳ ಮನೆಬಾಗಿಲು, ಗೋಡೆಗಳಲ್ಲಿ ನೇತು ಹಾಕಿರುವುದು ಕಂಡುಬರುತ್ತದೆ.

೩.೩. ಹಸಲರ ಆರ್ಥಿಕತೆಯ ಬದಲಾವಣೆ

ಆರ್ಥಿಕತೆ ಎನ್ನುವುದು ಒಬ್ಬ ವ್ಯಕ್ತಿಯ ಸಮುದಾಯದ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ಬಹುಮುಖ್ಯವಾದ ಪಾತ್ರ ನಿರ್ವಹಿಸುತ್ತದೆ. ಸಮಾಜ ಎಂಬುವದು ಉಳ್ಳವರು, ಇಲ್ಲದವರು, ಬಡವ, ಶ್ರೀಮಂತ, ಎಂಬ ಸ್ತರವಿನ್ಯಾಸ ವ್ಯವಸ್ಥೆ ಮಾದರಿಯಲ್ಲಿ ರಚಿತವಾಗಿರುವಂತದ್ದು. ಶತಮಾನಗಳ ಹಿಂದೆ ಕಾಡು ಮೇಡುಗಳಲ್ಲಿ ಅಲೆದಾಡುತ್ತ ಅಲೆಮಾರಿ ಜೀವನದ ಮೊರೆ ಹೋಗಿದ್ದ ಹಲಸರು ಕಾಡಿನಲ್ಲಿ ದೊರೆಯುವ ಸಂಪತ್ತನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದರು. ಹಸಲರಿಗೆ ಅರಣ್ಯ ಮೂಲಭೂತ ಅಗತ್ಯಗಳನ್ನು ಒದಗಿಸುವ ಆರ್ಥಿಕತೆಯ ಕೇಂದ್ರಬಿಂದುವಾಗಿತ್ತು. ಅಲ್ಲಿ ದೊರೆಯುವ ಹಣ್ಣುಗಳು ಸೊಪ್ಪುಗಳು, ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುತ್ತಾ ಜೇನು ಗೆಡ್ಡೆಗೆಣಸುಗಳನ್ನು ಸಂಗ್ರಹಿಸುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಅರಣ್ಯವಾಸಿಗಳಾಗಿದ್ದ ಸಂದರ್ಭದಲ್ಲಿ ಹಲಸರು ಒಂದು ರೀತಿಯಲ್ಲಿ ಸ್ವಾವಲಂಬ ಜೀವನ ನಡೆಸುವವರಾಗಿದ್ದರು. ಎಂದೂ ಆರ್ಥಿಕ ಉತ್ಪನ್ನಗಳ ಮೇಲೆ ಬ್ರಿಟೀಷರ ಭಾರತವನ್ನಾಳುವ ಮೂಲಕ ಪ್ರಾಬಲ್ಯ ಸ್ಥಾಪನೆ ಮಾಡಿದರೋ ಅಂದಿನಿಂದ ಹಸಲರ, ಸಾಮಾಜಿಕ ರಚನೆ ಬದಲಾವಣೆಯತ್ತ ಸಾಗಿತು. ಭಾರತದಲ್ಲಿ ವಸಾಹತುಶಾಹಿ ವ್ಯವಸ್ಥೆ ಸೃಷ್ಟಿಸಿದ ಅವಾಂತರಗಳ ಫಲವಾಗಿ ಕಾಡಿನ ನಡುವೆ ಸಾರಿಗೆ ಸಂಪರ್ಕ ಅಭಿವೃದ್ಧಿ, ಅರಣ್ಯ ಕಾನೂನುಗಳು ಎಂಬ ನಿಯಮಗಳು ಅಭಿವೃದ್ಧಿ ಹೆಸರಿನಲ್ಲಿ ವಿಜೃಂಭಿಸಲು ಪ್ರಾರಂಭಿಸಿದವು. ಕಾಡುಗಳಲ್ಲಿ ಸ್ವಚ್ಛಂದ ಜೀವನಕ್ಕೆ ಕಡಿವಾಣ ಹಾಕುವ ದಿಸೆಯಲ್ಲಿ ಬ್ರಿಟೀಷ ಸರ್ಕಾರವು ಯಶಸ್ವಿಯಾಯಿತು. ಇದರಿಂದ ಅವರ ಸ್ವಚ್ಛಂದ ಬದುಕಿಗೆ ಅಸ್ಥಿರಗೊಳ್ಳಲಾರಂಬಿಸಿತ್ತು. ಅಭಿವೃದ್ಧಿಗಳು ಅವರನ್ನು ಒಕ್ಕಲೆಬ್ಬಿಸುವ ಮೂಲಕ ಕಾಡಿನಿಂದ ನಾಡಿಗೆ ಬಂದು ವಾಸಿಸುವಂತೆ ಮಾಡಿದವು. ನಾಡಿಗೆ ಬಂದ ಹಸಲರು ತಮ್ಮ ಜೀವನ ನಿರ್ವಹಣೆಗಾಗಿ ಅನಿವಾರ್ಯವಾಗಿ ಮೂಲ ವೃತ್ತಿಯಿಂದ ಪಲ್ಲಟಗೊಂಡು ಸುತ್ತಲಿನ ಸಮುದಾಯಗಳ ಜೊತೆ ಬೆರೆಯುವ ಮೂಲಕ ಕೂಲಿಗಾಗಿ

ಸುತ್ತಲಿನ ಸಮುದಾಯಗಳ, ಶ್ರೀಮಂತರ, ಬಂಡವಾಳಶಾಹಿಗಳ, ಹವ್ಯಕ ಬ್ರಾಹ್ಮಣರ, ರೈತರನ್ನು ಅವಲಂಬಿಸಬೇಕಾದ ಪರಸ್ಥಿತಿ ನಿರ್ಮಾಣವಾಯಿತು. ಇದು ಅರ್ಥಿಕ ಸ್ವಾತಂತ್ರವನ್ನು ಪರಾಧೀನಗೊಳಿಸುವ ಮೂಲಕ ಅರ್ಥವ್ಯವಸ್ಥೆಯ ಸ್ಥಿತ್ಯಂತರಕ್ಕೆ ಒಳಗಾಗಲೇಬೇಕಾಯಿತು. ಹೀಗಾಗಿ ಅಭಿವೃದ್ಧಿ ಹೆಸರಿನಲ್ಲಿ ಬಂದ ಅನೇಕ ಯೋಜನೆಗಳು ಹಸಲರನ್ನು ದುರ್ಬಲಗೊಳಿಸುವ ಮೂಲಕ ಆರ್ಥಿಕತೆಯ ಹಿನ್ನೆಡೆಗೆ ಕಾರಣವಾಗುವಂತೆ ಮಾಡಲಾಯಿತು. ಆಧುನಿಕ ಪ್ರಕಿಯೆ ಮತ್ತು ಆಧುನೀಕರಣದ ಹೆಸರಿನ ಮೇಲೆ ಬಂದ ಅನೇಕ ಯೋಜನೆಗಳು ಆಧುನಿಕತೆ ಎಂಬ ಅಷಾಢಭೂತಿತನ ಹಸಲ ಸಮುದಾಯದಲ್ಲಿನ ಆರ್ಥಿಕತೆಯ ಪಲ್ಲಟಕ್ಕೆ ಪ್ರಮುಖ ಕಾರಣವಾಯಿತು. ಅನಿವಾರ್ಯವಾಗಿ ಒಲ್ಲದ ಮನಸ್ಸಿನಲ್ಲಿ ಇದನ್ನು ಸ್ವೀಕಾರ ಮಾಡುವಂತ ಸ್ಥಿತಿ ನಿರ್ಮಾಣವಾಯಿತು. ಇದೇ ಕಾರಣಕ್ಕೆ ತಮ್ಮ ವೃತ್ತಿಗಳಲ್ಲಿ ಬದಲಾವಣೆಯನ್ನು ಬಯಸತೊಡಗಿದರು. ಕಾಲಕ್ರಮೇಣ ಹಸಲರು ತಾವು ಅನುಸರಿಸುತ್ತಾ ಬಂದ ಆರ್ಥಿಕತೆ ಚಟುವಟಿಕೆಗಳನ್ನು ತೊರೆಯುವ ಮೂಲಕ ನೂತನ ಆರ್ಥಿಕತೆ ಕಡೆ ಮುಖಮಾಡಿ ನಿಂತರು. ಒಂದು ರೀತಿಯಲ್ಲಿ ಬ್ರಿಟೀಷ್ ಸರ್ಕಾರದ ಸುಧಾರಣಾ ಮತ್ತು ಕಲ್ಯಾಣ ಕಾರ್ಯಕ್ರಮಗಳ ಪ್ರಭಾವದಿಂದಾಗಿ ಹಸಲರು ಸಮಾಜದ ಮುಖ್ಯವಾಹಿನಿಯ ಸಂಪರ್ಕದಿಂದಾಗಿ ಕೆಲ ದಿನಗಳಲ್ಲಿ ಆರ್ಥಿಕ ಸ್ಥಿತ್ಯಂತರಕ್ಕೆ ಒಳಗಾದರು.

ಹಸಲರ ತಮ್ಮ ಪಾರಂಪರಿಕ ವೃತ್ತಿಯಾದ ಬೇಟೆಯನ್ನು ಆಹಾರ ಉತ್ಪನ್ನಗಳನ್ನು ಸಂಗ್ರಹಣೆ ವೃತ್ತಿಯನ್ನು ತ್ಯಜಿಸುವ ಮೂಲಕ ಕೂಲಿ ಜೀವನದಲ್ಲಿ ಸ್ಥಿರವಾಗಿ ನೆಲೆನಿಲ್ಲುವಂತೆ ಮಾಡಿತು. ಕೃಷಿ ಮತ್ತು ಕೃಷಿಕೂಲಿ ಮತ್ತು ಇತರೆ ಉಪಕಸುಬುಗಳಲ್ಲಿ ನಿರತರಾದರು. ಜೀವನ ನಿರ್ವಹಣೆಗಾಗಿ ಹಲವಾರು ಕಸುಬುಗಳನ್ನು ಅವಲಂಬಿಸಿರುವದು ಬದಲಾದ ಆರ್ಥಿಕತೆಯ ರೂಪವೇ ಆಗಿತ್ತು. ಸಾಮಾನ್ಯವಾಗಿ ಕಾಡು ಮೇಡುಗಳಲ್ಲಿ ಅಲೆದಾಡುತ್ತಿದ್ದ ಹಸಲರು ಹಂದಿ, ಗೂಡಿನಂತ ಮನೆಗಳಲ್ಲಿ ವಾಸವಾಗಿರುತ್ತಿದ್ದರು. ಆ ಕಾರಣಕ್ಕೆ ಇಂತಹ ಚಿಕ್ಕ ಚಿಕ್ಕ ಬಾಗಿಲುಗಳು ಇರುವ ಜೋಪಡಿಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು ಎಂದೇಳಲಾಗುತ್ತದೆ. ಪ್ರಸ್ತುತ ಇವರ ಮನೆಗಳ ನಿರ್ಮಾಣ ವ್ಯವಸ್ಥೆ ಅವರ ಉಡುಗೆ ತೊಡುಗೆಗಳು, ಇವರ ಆರ್ಥಿಕ ಸ್ಥಿತಿಯನ್ನು ಸುಲಭವಾಗಿ ನಿರ್ಧರಿಸುವಂತಿದ್ದವು. ಇಂದು ಇವರು ಕೂಲಿಯನ್ನು ಮಾತ್ರ ನಂಬಿ ಬದುಕದೆ, ಕೃಷಿಕರಾಗಿ ಪರಿವರ್ತತರಾಗುತ್ತಿದ್ದಾರೆ. ಸರಕಾರಿ ನೌಕರಿ, ಕೃಷಿಯೇತರ ಕೂಲಿ, ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಕೂಡ ಇದ್ದಾರೆ. ಈ ಎಲ್ಲಾ ಕಸುಬುಗಳು ಕಾರಣದಿಂದಾಗಿ ಅವರ ಆರ್ಥಿಕತೆ ಸ್ಥಿತಿ ಉತ್ತಮಗೊಂಡಿದೆ ಎಂಬುದನ್ನು ಸೂಚಿಸುತ್ತದೆ. ಕೃಷಿಗೆ ಯೋಗ್ಯವಾದ ಭೂಮಿ ಸಿಗದೆ ಇದ್ದಾಗಲೂ ಕೂಡ ಸರ್ಕಾರವು ಒದಗಿಸಿದ ನೀರಾವರಿ ಸೌಕರ್ಯ ಕೆಲವರಿಗೆ ಮಾತ್ರ ದೊರೆಯುತ್ತಿದ್ದರೂ ಬಹುಪಾಲು ಜನರು ಮಳೆಯಾಧರಿತ ಕೃಷಿಯನ್ನು ಅವಲಂಬಿಸುವ ಮೂಲಕ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿದ್ದಾರೆ. ಹಿಂದೆ ಹಂದಿ ಗೂಡಿನಂತ ಮನೆಗಳಲ್ಲಿ ವಾಸವಾಗಿರುತ್ತಿದ್ದ ಹಸಲರು ಸರ್ಕಾರದ

ಆರ್ಥಿಕತೆಯ ನೆರವಿನಿಂದಾಗಿ ಮತ್ತು ಯೋಜನೆಗಳ ಫಲವಾಗಿ ಅಂಬೇಡ್ಕರ್ ಆಶ್ರಯ ಮನೆ, ಜನತಾಮನೆ, ಇಂದಿರಾ ಅವಾಸ್ ಮನೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ಮಿಸಿಕೊಂಡಿದ್ದಾರೆ. ಆರ್ಥಿಕವಾಗಿ ಸಬಲರಾದ ಕೆಲವರು ವಸತಿಗಳನ್ನು ತುಂಬಾ ಸುಂದರವಾಗಿ ಕಟ್ಟಿಸಿಕೊಂಡಿದ್ದಾರೆ ಇದು ಅವರ ಆರ್ಥಿಕತೆ ಸುಭದ್ರತೆಯನ್ನು ಸೂಚಿಸುವಂತದ್ದಾಗಿದೆ.

ನಾವು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಹೊಸಗದ್ದೆಯ ಚೌಡಪ್ಪ ಎಂಬುವರನ್ನು ಹಸಲರ ಆರ್ಥಿಕತೆಯ ಕುರಿತು ಪ್ರಶ್ನಿಸಿದಾಗ ನಮ್ಮಲ್ಲಿ ಎಲ್ಲ ಬದಲಾಗಿದೆ ಆ ಬದಲಾವಣೆಗೂ ನೇರವಾಗಿ ಸರ್ಕಾರವು ಕಾರಣವಾದಗಲೂ ಕೂಡ ಅದರ ಹಿಂದೆ ನಮ್ಮ ಪ್ರಯತ್ನ ಮತ್ತು ಶ್ರಮವು ಕೂಡ ಇದೆ. ಸರ್ಕಾರಿ ಯೋಜನೆಗಳು ನಮ್ಮನ್ನು ಬದಲಾಯಿಸಿವೆ ಎಂದೇಳಲಾಗದು. ಏಕೆಂದರೆ ಸರ್ಕಾರವು ಉಳ್ಳವರಿಗೆ ಮಾತ್ರ ಇಲ್ಲದವರಿಗೆ ಅವು ಸಿಗುವದೇ ಇಲ್ಲ. ಯೋಜನೆಗಳು ನಾಮ ಮಾತ್ರಕ್ಕೆ ಇವೇ. ಮುಖ್ಯವಾಗಿ ಮೇಲ್ವರ್ಗದ ಬಲಿಷ್ಟ ಮತ್ತು ಬಹುಸಂಖ್ಯಾತ ಮಧ್ಯಮವರ್ಗದ ಜನ ತಮ್ಮ ಸ್ವಾರ್ಥಲಾಲಸೆಗಾಗಿ ತಮ್ಮ ಕುಟುಂಬಗಳ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳುತ್ತಾರೆ. ವಿನಃಹ ಇಲ್ಲದವರ ಪರ ಅವರ ಅನುಕಂಪ ಎಳ್ಳಷ್ಟು ಇಲ್ಲ. ಪರರ ವಿಷಯದಲ್ಲಿ ಪರರಿಗೆ ಸಹಾಯ ಮಾಡುವ ಮನೋಭಾವನೆ ಅವರಲ್ಲಿಲ್ಲ. ಇಂತಹ ಹಲವಾರು ತೊಡುಕುಗಳು ಹಸಲರಲ್ಲಿನ ಆರ್ಥಿಕ ಬದಲಾವಣೆಯ ತಡೆಗೆ ಕಾರಣವಾಗಿದೆ ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದರು. ಇವರ ಮಾತಿನಲ್ಲಿ ಇತರ ವರ್ಗದ ಜನರು ನಮಗೆ ಸಿಗುವಂತ ಸೌಲಭ್ಯಗಳನ್ನು ವಾಮಮಾರ್ಗದ ಮೂಲಕ ಪಡೆಯುತ್ತಾರೆ ಎಂಬ ಅಳಲು ವ್ಯಕ್ತವಾಗುತ್ತಿತ್ತು. ಸುಮಾರು ವರ್ಷಗಳಿಂದ ಇಂತಹ ಶೋಷಣೆಗಳಿಗೂ ನಾವು ಒಳಗಾಗುತ್ತಲೇ ಬಂದಿದ್ದೇವೆ ನಾವು ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸುಧಾರಣೆಯಾಗಿದ್ದೇವೆ ಆದರೆ ಅದು ನಮ್ಮ ಪರಿಶ್ರಮದಿಂದ ಮಾತ್ರ ಎಂಬುದಾಗಿ ಅಭಿಪ್ರಾಯ ಪಟ್ಟರು.

ಹಸಲರ ಆರ್ಥಿಕತೆ ನಿರ್ಧರಿಸುವ ಕೃಷಿ ವ್ಯವಸ್ಥೆ

ಸಮಾಜಗಳ ಮತ್ತು ಸಮುದಾಯಗಳ ಬೆಳವಣಿಗೆ ಆರಂಭವಾಗಿರುವದು ಮಾನವ ಅಲೆಮಾರಿತನದ ಜೀವನದ ಕೊನೆಯಾದ ನಂತರದಲ್ಲಿ. ಕೃಷಿಯನ್ನು ಮಾಡಲು ಪ್ರಾರಂಭಿಸಿದಾಗ ಉತ್ಪಾದನೆ ವಿಧಾನವನ್ನು ಸುಧಾರಿಸಿದಾಗ ಸಮುದಾಯಗಳ ಬುಡಕಟ್ಟು ವ್ಯವಸ್ಥೆ ಕೃಷಿ ವ್ಯವಸ್ಥೆಯಾಗಿ ಪರಿವರ್ತಿತವಾಯಿತು. ಆರಂಭಿಕವಾಗಿ ಭೂಮಿ ಉಳಲು ಪ್ರಾರಂಭಿಸಿದ ಮಾನವ ಕಾಲದ ವೇಗಕ್ಕೆ ತಕ್ಕಂತೆ ಕೃಷಿ ವಿಧಾನವನ್ನು ಬದಲಾಯಿಸುತ್ತಾ ಹೋದ ಅವನು ಬಳಸುವ ಉಪಕರಣ, ಗೊಬ್ಬರಗಳ ಬಳಕೆ, ಉತ್ತಮ ಬೀಜಗಳ ಆಯ್ಕೆ ಕೆರೆ ನಿರ್ಮಾಣ ಮುಂತಾದ ವಿಚಾರಗಳಲ್ಲಿ ಬದಲಾವಣೆ ಕಂಡುಕೊಂಡ ತನ್ನ ಸಾಂಪ್ರದಾಯ ಉಳಿಮೆಯನ್ನು ತೊರೆಯುತ್ತ ಕೃಷಿಯಲ್ಲಿ ಹೊಸ ತಾಂತ್ರಿಕತೆಯ ಅಳವಡಿಕೆ ಮಾಡಿಕೊಳ್ಳುತ್ತಾ ಹೆಚ್ಚುವರಿ ಉತ್ಪಾದನೆ ಮಾಡಲು ಪ್ರಾರಂಭಿಸಿದೆ.

[illegible]

[illegible]

[illegible]

[illegible]

ಹಸಲ ಸಮುದಾಯವು ಪ್ರಸ್ತುತ ಪಾರಂಪರಿಕ ವೃತ್ತಿಯನ್ನು ಭಾಗಶಃ ತೊರೆದು ಕೃಷಿ ಕಾರ್ಮಿಕತನಕ್ಕೆ ಅಂಟಿಕೊಂಡಿದೆ. ಆದರೆ ಇಲ್ಲಿ ಸಂಪೂರ್ಣ ಎಲ್ಲ ಹಸಲರು ರೈತರಾಗಿ ಉಳಿದಿಲ್ಲ. ಸರ್ಕಾರವು ನೀಡಿದ ಬಗರ್‌ಹುಕುಂ ಭೂಮಿ ಒಂದು ಎಕರೆ, ಎರಡು ಎಕರೆ ಇದೆ. ಅದನ್ನು ನಂಬಿ ಬದುಕು ಸಾಗಿಸುವದು ತುಂಬ ಕಠಿಣ. ಸರ್ಕಾರ ನೀಡಿದ ಆ ಭೂಮಿಯಲ್ಲಿ ನೀರಾವರಿ ವ್ಯವಸ್ಥೆ ಇಲ್ಲ. ಇದ್ದರೂ ಹಸಲರಿಗೆ ಮಾತ್ರ ಪಂಸಹೌಸಗಳನ್ನು ಪಂಪಸೆಟ್‌ಗಳನ್ನೂ ಸ್ಥಾಪಿಸಲಾಗಿದೆ. ಆದರೆ ಅವುಗಳ ಮೂಲಕ ನೇರವಾಗಿ ಹಸಲರ ಭೂಮಿಗಳಿಗೆ ನೀರು ತಲುಪುವದೇ ಇಲ್ಲ. ಸರ್ಕಾರವು ಯಾವುದೇ ಒಂದು ಗುಡ್ಡದ ಪಕ್ಕದ ಜಮೀನನ್ನು ಹಸಲರಿಗೆ ನೀಡಿದೆ. ಅದು ಸವಕಳಿ ಭೂಮಿಯಾಗಿರದೆ ಇಳಿಜಾರು ಭೂಮಿ. ಅಲ್ಲಿ ಭತ್ತ, ರಾಗಿಯಂತ ಬೆಳೆಗಳನ್ನು ಬೆಳೆಯಲು ಸಾಧ್ಯವೇ ಇಲ್ಲ. ಬೆಳೆದರು ಅದು ಕೈಗೆಟುಕದಂತ ಸ್ಥಿತಿ ಮಳೆಯಾಧರಿತ ಬೆಳೆಯಾಗಿರುವದರಿಂದ ಹಸಲರಿಗೆ ಅಲ್ಲಿ ಬರುವ ಲಾಭಕ್ಕಿಂತ ನಷ್ಟವೇ ಹೆಚ್ಚು. ಇನ್ನೊಂದು ಕಡೆ ಸರ್ಕಾರವೂ ಮುಂದೆ ನಿಂತು ತಾನು ನೀಡಿದ ಸವಕಳಿಯಲ್ಲದ ಭೂಮಿಯಲ್ಲಿ ಗೇರು ಗಿಡಗಳನ್ನು ಆಕೇಶಿ ಗಿಡಗಳನ್ನು ಬೆಳಸುವಂತೆ ಪ್ರೇರಣೆ ನೀಡಿ ತಾನೇ ಸಸಿಗಳನ್ನು ನೀಡುತ್ತದೆ ಆ ಸಸಿಗಳ ರಕ್ಷಣೆಗೆ ರೋಗಗಳಿಂದ ಮುಕ್ತಿಗೆ ಔಷಧಗಳನ್ನು ಒದಗಿಸುವದೇ ಇಲ್ಲ. ಕಾಡುಗಳ ರಕ್ಷಣೆಗಾಗಿ ಬೇಕಾದ ತಂತಿಬೇಲಿಯನ್ನಾಗಲಿ, ಮುಳ್ಳುತಂತಿಯನ್ನಾಗಲಿ ನೀಡುವದೇ ಸ್ವತ ತಾನೇ ರಕ್ಷಿಸಬೇಕಾದವರನ್ನು ಭಕ್ಷಕವಾಗಿ ಕೃಷಿ ಮಾಡದಂತೆ ತಡೆಯುತ್ತದೆ. ಹಸಲರ ಆರ್ಥಿಕತೆಗೆ ತೊಂದರೆಯಾಗಿರುವದು ತಮ್ಮ ಸುತ್ತಮುತ್ತಲಿನ ಮೇಲ್ವರ್ಗ ಜನರೇ ಆಗಿದ್ದಾರೆ ಎಂಬುವದು ಹೀರೇಮನೆ ಹಸಲರ ಯುವಕ ಸುರೇಶನ ಅಳಲು, ಸರ್ಕಾರವು ನಮಗಾಗಿ ನೀಡಿದ ಸೌಲಭ್ಯಗಳು ಬಹುಸಂಖ್ಯಾತ ವರ್ಗದ ಜನರು ಕುತಂತ್ರದಿಂದ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ನಮ್ಮ ಗಾಗಿಯೇ ಇರುವ ಪಂಸಹೌಸ, ಪಂಪಸೆಟ್‌ಗಳನ್ನು ಕಳವು ಮಾಡಿಸುವ ಮೂಲಕ ನಾವು ಕೃಷಿಕರಾಗಿ ಸುಧಾರಣೆಯಾಗದಂತೆ ಮೇಲ್ವರ್ಗದ ಜನರು ತಡೆಹಿಡಿಯುತ್ತಿದರೆ ಎಂಬುವದು ಅವರ ಅಳಲಾಗಿತ್ತು.

ಕೃಷಿಯನ್ನೇ ನಂಬಿ ಜೀವನ ನಡೆಸುವದು ತುಂಬಾ ಕಷ್ಟ. ಆ ಕಾರಣಕ್ಕಾಗಿ ನಾವು ಕೂಲಿ ಕೆಲಸ ಮಾಡುವ ಅನಿವಾರ್ಯತೆ ಇದೆ. ಕೂಲಿ ಕೆಲಸ ಬಿಟ್ಟು ಕಾಡು ಉತ್ಪನ್ನಗಳನ್ನು ಸಂಗ್ರಹಿಸಲು ಹೋದರೆ ಅರಣ್ಯಾಧಿಕಾರಿಗಳು ವಿನಃ ಕಾರಣ ನಮ್ಮ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರಿಸುವ ಮೂಲಕ ನಮ್ಮ ಹಕ್ಕುಗಳನ್ನು ಕಿತ್ತುಕೊಂಡಿದ್ದಾರೆ. ಕಾಡು ನಮ್ಮ ನಡುವೆ ತುಂಬಾ ಅನೊನ್ಯವಾಗಿತ್ತು. ಕಾಡನ್ನು ನಾಶ ಮಾಡದೆ ಅದಕ್ಕೆ ಪೂರಕವಾಗಿ ನಾವು ಜೀವನವನ್ನು ಕಂಡುಕೊಂಡಿದ್ದೇವೆ. ವಿಪರೀತವಾದ ಕಾಡು ಸುರಕ್ಷ ಕ್ರಮಗಳು ನಮಗೆ ಕಾಡಿಗೆ ಪ್ರವೇಶಿಸದಂತೆ ನಿರ್ಭಂಧಗಳನ್ನು ಹೇರುವ ಮೂಲಕ ನಮ್ಮ ಹಕ್ಕುಗಳನ್ನು ಕಸಿದುಕೊಂಡರು ಎಂಬುದಾಗಿ ಕುಡುಗುಂಜಿ ಯುವಕ ಗುರುಮೂರ್ತಿ ಪೂರ್ವದ ತಮ್ಮ ಆರ್ಥಿಕತೆಯ ಚಿತ್ರಣವನ್ನು ತೆರದಿಟ್ಟರು.

ಹಸಲರು ಸರಕಾರದ ಭೂಮಿಯನ್ನು ತಮ್ಮ ಊಳುಮೆಗೆ ಪಡೆದ ನಂತರ ಇಲ್ಲಿನ ಪ್ರತಿ ಕುಟುಂಬವು ಸಹ ಕಾನೂನು ಯಾದಿಯಲ್ಲಿ ಭೂಮಿ ಹೊಂದಿತು. ಆ ಭೂಮಿಯನ್ನು ಉಳುಮೆ ಮಾಡಲು ಪ್ರಾರಂಭಿಸಿದರು. ಈ ಭೂಮಿ ಅವರಲ್ಲಿ ತಾತ್ಕಾಲಿಕವಾಗಿ ಬಡತನವನ್ನು ದೂರಸರಿಸಿತು, ಹೊರತು ಅವರ ದೈನಂದಿನ ಸ್ಥಾನ ಮಾನಗಳಲ್ಲಿ ಬದಲಾವಣೆಯಾಗಲಿಲ್ಲ. ಭೂಮಿ ಹಂಚಿಕೆಯಿಂದ ಅವರು ನಿರೀಕ್ಷಿಸಿದಂತೆ ಉತ್ಪಾದನೆ ಕೈಗೆಟುಕಲೇ ಇಲ್ಲ. ಬೆಳೆದ ಬೆಳೆಗಳ ಮಾರಾಟದ ಮಾರುಕಟ್ಟೆ ವ್ಯವಸ್ಥೆಯಿಂದ ಹಿಡಿದು ನೀರಾವರಿಯವರಿಗೆ ಹಲವಾರು ತೊಡುಕುಗಳು ಉಂಟಾದವು ಉತ್ಪಾದನೆ ವಿಧಾನ, ಉತ್ಪಾದಿಸಿದ ಬೆಳೆ ಧಾರಣೆ, ಇಂತಹ ಹತ್ತು ಹಲವಾರು ಸಮಸ್ಯೆಗಳ ತಲೆದೋರಿದವು. ಕೇವಲ ಪಾಣಿ, ಪಟ್ಟಾ ರಸೀದಿಗಳಲ್ಲಿ ಮಾತ್ರ ಅವರ ಹೆಸರು ಉಳಿಯುವಂತೆ ಆಯಿತು. ಆದರೆ ಸಂಪೂರ್ಣವಾಗಿ ಹಸಲರು ಪೂರ್ಣ ಪ್ರಮಾಣದ ರೈತರಾಗಿ ಮಾರ್ಪಾಡಾಗಲೇ ಇಲ್ಲ. ಬ್ರಿಟೀಷ ಕಾಲದಲ್ಲಿ ಭಾರತದ ಕೃಷಿ ವ್ಯವಸ್ಥೆ ರೂಪ ಬದಲಾಗದೆ ಅದೇ ಸ್ಥಿತಿಯಲ್ಲಿ ಉಳಿದುಕೊಂಡಿತ್ತು. ಭೂ ಸುಧಾರಣೆಯಂತಹ ಕ್ರಮಗಳು ಇದ್ದವರಿಗೆ ಮಾತ್ರವಾಗಿದ್ದು ಇಲ್ಲದವನಿಗೆ ಸ್ಪಂದಿಸುವ ಮನೋಭಾವನೆ ಪ್ರಸ್ತುತ ಸರ್ಕಾರಗಳಿಗೂ ಇಲ್ಲವೇ ಇಲ್ಲ. ಆದಿಮ ಕಾಲದಲ್ಲಿ ವಸಾಹತುಶಾಹಿ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ಇಂದಿಗೂ ಹಸಲರು ಎದುರಿಸುತ್ತಾರೆ. ಹಸಲರು ಅಸ್ಪೃಶ್ಯರು ಅವರು ಭೂಮಿಯನ್ನು ಉಳುಮೆಮಾಡಿದರೆ ಅನಿಷ್ಟ ಎನ್ನುವ ಭಾವನೆ ಮೇಲ್ವರ್ಗದ ಬಹುಸಂಖ್ಯಾತರ ಜನರು ಹೊಂದಿದ್ದಾರೆ ಆ ಕಾರಣಕ್ಕಾಗಿಯೇ ನಾವು ಉಳಿಮೆ ಮಾಡಿದಂತ ಬೆಳೆಗಳನ್ನು ದನಕರಗಳನ್ನು ಬಿಟ್ಟು ನೀರು ಬರದಂತೆ ತಡೆಹಿಡಿದು ಪಂಪ್‌ಸೆಟ್‌ಗಳನ್ನು ಆಳುಮಾಡುವ ಮೂಲಕ ಕೆರೆಗಳ ನೀರು ನಮಗೆ ಬರದಂತೆ ನೋಡಿಕೊಳ್ಳಲಾಗುತ್ತದೆ.ನ್ಯಾಯಯುತವಾಗಿ ನಮಗೆ ಸಿಗಬೇಕಾದ ಸೌಲಭ್ಯಗಳನ್ನು ಅವರೇ ನಮ್ಮಲ್ಲಿನ ಜನರಲ್ಲಿ ಬಿರುಕು ಮೂಡಿಸುವ ಮೂಲಕ ತಮ್ಮ ವಶಮಾಡಿಕೊಂಡಿದ್ದಾರೆ ಎಂಬುದಾಗಿ ಸಾಮಾನ್ಯವಾಗಿ ಅನೇಕ ಹಸಲರ ಅಭಿಪ್ರಾಯವಾಗಿತ್ತು. ಈ ವ್ಯವಸ್ಥೆಗೆ ಪೂರಕವಾಗಿರುವಂತೆ ಒಂದು ಘಟನೆಯನ್ನು ಹಸಲರ ಹಿರಿಯರೊಬ್ಬರು ತೆರೆದಿಟ್ಟರು. ಸಾಗರ ತಾಲ್ಲೂಕಿನಲ್ಲಿ ಬರುವ ಕಾರ್ಗಲ್‌ನಲ್ಲಿ ಒಂದು ಪ್ರದೇಶದಲ್ಲಿ ಹಸಲ ಕುಟುಂಬವೊಂದು ವಾಸವಾಗಿತ್ತು. ಯಾವುದೋ ಒಂದು ಕೆಟ್ಟ ಗಳಿಗೆಯಲ್ಲಿ ಕುಟುಂಬದಲ್ಲಿನ ಒಂದು ಚಿಕ್ಕಮಗು ತೀರಿಕೊಂಡಿತ್ತಂತೆ ಮಗುವಿನ ಸಾವಿನಿಂದ ಭಯಾಭೀತರಾದ ಆ ಕುಟುಂಬದ ಸದಸ್ಯರು ಭಟ್ಟರ ಮೊರೆ ಹೋದರು. ಜ್ಯೋತಿಷಿಯಾದ ಶ್ಯಾಮ್ ಎಂಬುವವರು ಮಗುವಿನ ಸಾವನ್ನು ಮುಂದಿಟ್ಟುಕೊಂಡು ಭೂಮಿಯನ್ನು ಪಡೆಯುವದಕ್ಕಾಗಿ ಅಸ್ಪೃಶ್ಯರಿಗೆ ನೀವು ವಾಸಿಸುತ್ತಿರುವ ಭೂಮಿ ನಿಮ್ಮಗೆ ಒಲಿಯುವದೇ ಇಲ್ಲ. ಅಂತದರಲ್ಲಿ ನೀವು ಆ ಭೂಮಿಯಲ್ಲಿ ವಾಸವಾಗಿದ್ದೀರಿ, ಇನ್ನೂ ಮುಂದೆ ನೀವು ಅಲ್ಲಿಯೇ ವಾಸವಾಗಿದ್ದೆ ಆದರೆ ಕುಟುಂಬದಲ್ಲಿನ ಅನೇಕ ಅನಿಷ್ಟಗಳಿಗೆ ನೀವೇ ಕಾರಣರಾಗುತ್ತೀರಿ ಅಲ್ಲಿ ವಾಸಿಸುವದಕ್ಕಿಂತ ಆ ಭೂಮಿಯನ್ನು ತೊರೆಯುವದೇ ಸೂಕ್ತ. ಎಂದೇಳಿ ಜ್ಯೋತಿಷಿಯು ಅವರನ್ನು ಆ ಜಾಗದಿಂದ ವಕ್ಕಲೆಬ್ಬಿಸಿ ಅಲ್ಲಿ ತನ್ನ ಅಸ್ತಿತ್ವ ಕಂಡುಕೊಂಡು ಇವತ್ತು ಅಲ್ಲಿ

[illegible]

ಬ್ರಾಹ್ಮಣ ಕುಟುಂಬ ನೆಲೆಗೊಂಡಿದೆ. ಅಸ್ಪೃಶ್ಯರಾದ ನಮಗೆ ಬಂದ ಸಾವುಗಳು ಅವರಿಗೇಕೆ ಬರುವದಿಲ್ಲ. ಎಂಬ ಪ್ರಶ್ನೆ ಆ ಹಿರಿಯನದಾಗಿತ್ತು. ಸಾಮಾನ್ಯವಾಗಿ ಮೌಢ್ಯತೆ, ನಂಬಿಕೆ, ಮೂಢನಂಬಿಕೆಗಳನ್ನು ಜಾಸ್ತಿಯಾಗಿ ಸ್ವೀಕರಿಸುವ ಹಸಲರನ್ನು ಮೇಲ್ವರ್ಗದ ಜನರು ಭೂಮಿಯ ಬಣ್ಣವನ್ನು ದುರ್ಗಾದೇವಿ ಬಣ್ಣ, ಮಾರೆಮ್ಮನ ಬಣ್ಣ, ಇಲ್ಲಿ ಜೌಡೇಶ್ವರಿ ನೆಲೆಗೊಂಡಿದ್ದಳು ಚೌಡಿಯ ಶಾಪ ನಿಮಗೆ ತಟ್ಟುತ್ತದೆ. ಎಂಬ ನಂಬಿಕೆಗಳಿಗೆ ಕಲ್ಲು ಬಂಡೆಯನ್ನೇ ಗಿಡವನ್ನ ದೇವರು ಎಂದು ಸೃಷ್ಟಿಸುವ ಮೂಲಕ ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ಬುದ್ಧಿಜೀವಿಗಳೆಂದು ಕರೆಸಿಕೊಳ್ಳುವ ಇವರು ಇತರನ್ನು ಶ್ವಾನಗಳಿಗಿಂತ ಕಡೆಯಾಗಿ ನೋಡುವ ಮೂಲಕ ದುರ್ಬಲರನ್ನು ಅತಿ ದುರ್ಬಲರನ್ನಾಗಿ ಮಾಡುವ ವ್ಯವಸ್ಥಿತ ಸಂಚು ರೂಪಿಸುತ್ತಿವೆ ಎಂಬ ನೋವು ಹಸಲರಲ್ಲಿ ಸರ್ವೇಸಾಮನ್ಯವಾಗಿತ್ತು.

ಭೂಮಿಗೆ ಒಂದು ಕಡೇ ಬಹುಸಂಖ್ಯಾತ ಮಾಲಿಕತ್ವ ಹೊಂದಿರುವ ಪ್ರಬಲರೊಡನೆ ಸ್ಪರ್ಧೆಗೆ ಇಳಿದಿರುವ ಕೆಲವೇ ಕೆಲವು ಹಸಲ ಕುಟುಂಬಗಳ ಕೃಷಿ ಕೂಲಿಗಳಾಗಿ ತಮ್ಮ ಆರ್ಥಿಕತೆಯನ್ನು ಬದಲಾಯಿಸಿಕೊಂಡಿದ್ದಾರೆ. ಕೂಲಿ ಬದುಕಿನಲ್ಲಿ ೫೦ ರಿಂದ ೭೫ ರೂಪಾಯಿ ವರೆಗೆ ಕೂಲಿ ಪಡೆಯುವ ಜೊತೆಗೆ ಅಡಿಕೆ ಮರಗಳನ್ನ ಹತ್ತಿ ಅಡಿಕೆ ಕೀಳುವಂತವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಸರಿಯಾದ ಕೂಲಿ ಸಿಗುತ್ತಿಲ್ಲ ಮತ್ತು ಪ್ರಾಣಕ್ಕೆ ಅಪಾಯ ಎನ್ನುವ ಕಾರಣ ನೀಡುತ್ತರಾದರೂ ಅನಿವಾರ್ಯವಾಗಿ ಇಂತಹ ಕೆಲಸದಲ್ಲಿ ಅಧಿಕ ಸಂಭಾವನೆ ಅಧಿಕ ಕೂಲಿ ಕೊಡುತ್ತಾರೇ ಎನ್ನುವ ಕಾರಣಕ್ಕೆ ಅಡಿಕೆ ಮರಗಳನ್ನು ಹತ್ತಿ ಅಡಿಕೆ ಕೀಳುವ, ಔಷಧ ಸಿಂಪರಣೆ ಮಾಡುವ ಕೆಲಸಗಳನ್ನು ಮಾಡುತ್ತಾರೆ. ಇಲ್ಲಿ ಇವರಿಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ಕಾರಣಕ್ಕೆ. ೨೫೦ ರಿಂದ ೫೦೦ ವರೆಗೂ ಕೂಲಿ ಪಡೆಯುತ್ತಾರೆ. ಇದು ವರ್ಷ ಪೂರ್ತಿ ಪಡೆಯಲು ಸಾಧ್ಯವಿಲ್ಲ ಮತ್ತೊಂದು ಕಡೆ ಕೃಷಿ ಕೂಲಿಯನ್ನೇ ಮಾಡುತ್ತಾ ತಮ್ಮ ಸ್ವ ಭೂಮಿಯನ್ನ ಊಳುಮೆ ಮಾಡುತ್ತಾರೆ. ಭೂಮಿಯಲ್ಲಿ ಒಂದು ಕಾಲದಲ್ಲಿ ಆಹಾರದ ಬೆಳೆಗಳನ್ನು ಬೆಳೆಯುತ್ತಿದ್ದನ್ನು ತೊರೆದು ಗೇರುಬೀಜ, ಅನಾನಸ್, ಅಡಿಕೆ, ಹರಿಶಿಣ, ಲವಂಗ ದಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಮೂಲಕ ಆರ್ಥಿಕತೆಯಲ್ಲಿ ಬದಲಾವಣೆ ಹೊಂದಿದ್ದಾರೆ.

ಆಧುನಿಕರಣಗೊಂಡ ಹಸಲ ಸಮುದಾಯದ ಇಂದಿನ ಆರ್ಥಿಕತೆ ಬಹುಮುಖ್ಯವಾಗಿ ಕೃಷಿಯೆನ್ನವದು ಪ್ರಧಾನ ಪಾತ್ರ ನಿರ್ವಹಿಸುತ್ತದೆ. ಕಳೆದ ದಶಕಗಳ ಹಿಂದೇ ಆರ್ಥಿಕವಾಗಿ ದುರ್ಬಲರಾಗಿದ್ದ ಇವರು ಇತರ ಸಮುದಾಯಗಳ ಒಡನಾಟದ ಫಲವಾಗಿ ಜಾಗತೀಕರಣ ಪ್ರಭಾವದಿಂದಾಗಿ ಸರ್ಕಾರಿ ಯೋಜನೆಗಳ ಫಲವಾಗಿ ಭೂಮಿಯನ್ನ ಮತ್ತು ಮನೆಯನ್ನು ವ್ಯವಸ್ಥಿತನಾಗಿ ರಚಿಸಿಕೊಂಡಿರುವ ರೀತಿಯನ್ನೇ ನೋಡಿ ಅವರ ಆರ್ಥಿಕತೆ ಬದಲಾವಣೆಯನ್ನು ಗುರುತಿಸಬಹುದಾಗಿದೆ. ಈ ನಿಟ್ಟಿನಲ್ಲಿ ಸಮುದಾಯವು ಇತರ ಸಮುದಾಯಗಳಿಗೆ ಹೋಲಿಕೆ ಮಾಡಿ ನೋಡಿದಾಗ ಹಸಲರು ಇಂದಿಗೂ ಶ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಲಿಂಗ, ವಯಸ್ಸುಗಳ ಅಂತರವಿಲ್ಲದೇ ಎಲ್ಲರು ಸಮಾನರಾಗಿ ದುಡಿಯುತ್ತಾರೆ. ಕೆಲವು ಪರಿಸ್ಥಿತಿಗಳ ಅನುಗುಣವಾಗಿ

[illegible]

[illegible]

[illegible]

ಶ್ರಮವಿಭಜನೆಯ ನಿಯಮಗಳು ಬದಲಾಗುತ್ತಲೇ ಇದೇ ಪುರುಷ ಸಾಗುವಳಿಯಲ್ಲಿ ಹೆಚ್ಚಿನ ಕೆಲಸ ಮಾಡುತ್ತನಾದರು ಮಹಿಳೆಗೆ ಸರಿಸಮಾನಾಗಿ ನಿಲ್ಲುವದೇ ಇಲ್ಲ. ಮಹಿಳೆ ಮನೆಗೆಲಸದ ಜೊತೆಗೆ ಅಡಿಕೆ, ಮಕ್ಕಳ ಪೋಷಣೆ ಮುಂತಾದ ದೈಹಿಕ ಬಲಕ್ಕೆ ಒಗ್ಗುವಂತ ಕೆಲಸಗಳನ್ನು ಕೂಡ ಮಾಡುತ್ತಾಳೆ. ಸ್ಥಿತ್ಯಂತರಕ್ಕೆ ಒಳಗಾದ ಅವರ ಬದುಕು ಇಂದು ಕೃಷಿ, ಹೊಲ, ಗದ್ದೆ, ನೌಕರಿ, ಅರಣ್ಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅದರ ಜೊತೆಗೆ ಸರ್ಕಾರದ ಕೂಲಿಗಾಗಿ ಕಾಳು ಯೋಜನೆ, ಉದ್ಯೋಗ ಖಾತ್ರಿಯೋಜನೆ ಇತ್ಯಾದಿಗಳು ಹಸಲರ ಕೌಟುಂಬಿಕ ನಿರ್ವಹಣೆಗೆ ಸಹಾಯಕವಾಗಿ ನಿಲ್ಲುವ ಮೂಲಕ ಅವರನ್ನು ಪರಿವರ್ತಿಸುವಲ್ಲಿ ಪ್ರಮುಖ ಪಾತ್ರ ನಿಭಾಯಿಸುತ್ತಿವೆ.

ಆರ್ಥಿಕತೆಯ ಸವಾಲುಗಳು

ಸಮುದಾಯವು ತನ್ನ ಪಾರಂಪರಿಕ ಆರ್ಥಿಕ ಚಟುವಟಿಕೆಗಳಿಂದ ಲಾಭಕ್ಕಿಂತ ನಷ್ಟವೇ ಹೆಚ್ಚಾಯಿತು. ಅವರು ಹಿಂದೆ ಕಾಡು ಉತ್ಪನ್ನಗಳ ಸಂಗ್ರಹಣೆ, ಅಡಿಕೆ ಕೀಳುವಂತ ವೃತ್ತಿಗಳನ್ನು ತೊರೆದು ಕೃಷಿಯತ್ತ ಮುಖ ಮಾಡಿ ನಿಲ್ಲುವ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ಹೊಂದಿವೆ. ಕಾಲ ಕ್ರಮೇಣ ಕೈಗಾರೀಕರಿಣ ನಗರೀಕರಣ, ಜಾಗತೀಕರಣದಂತ ಪ್ರಭಾವಕ್ಕೆ ಒಳಗಾದ ಸಮುದಾಯ ದಿನದಿಂದ ದಿನಕ್ಕೆ ಬದಲಾವಣೆ ಹೊಂದುತ್ತ ಬಂದಿತು. ಆಧುನಿಕ ಪ್ರಕ್ರಿಯೆಯ ಮೇಲೆ ಬಂದ ಅನೇಕ ಯೋಜನೆಗಳು ಸರ್ಕಾರ ಮತ್ತು ಸಂಸ್ಥೆಗಳ ವಿಜ್ಞಾನ ತಂತ್ರಜ್ಞಾನಗಳು ಹಸಲರಿಗೆ ಸವಾಲುಗಳಾಗಿ ನಿಂತವು. ಅಭಿವೃದ್ಧಿ ಹೆಸರಿನ ಮೇಲೆ ಉಂಟಾದ ಕ್ರಾಂತಿ ಇಡೀ ಜಗತ್ತಿನಾದ್ಯಂತ ವಿಸ್ತರಿಸಿತು. ಕೈಗಾರಿಕ ಕ್ರಾಂತಿಯ ಫಲವಾಗಿ ಹುಟ್ಟಿದ ಹಬೇಶಕ್ತಿ, ತೈಲಗಳು, ವಿದ್ಯುತ್‌ಗಳು, ಅಣುಗಳ, ಕಂಪ್ಯೂಟರ್, ತಂತ್ರಜ್ಞಾನ ಕಾರ್ಖಾನೆಗಳು ಗಿರಣಿಗಳಂತ ಬೃಹತ್ ಉದ್ಯಮಗಳು ನಿರ್ಮಾಣ ಆಗುವ ಮೂಲಕ ಉತ್ಪಾದನೆ ಕ್ರಮವನ್ನ ಪರೋಕ್ಷವಾಗಿ ನಿಯಂತ್ರಿಸಿದವು. ಇದರ ಫಲವಾಗಿ ಸಾವಿರ ಜನರ ಮಾಡುವ ಕೆಲಸ ಕೇವಲ ಕೆಲವೇ ಕ್ಷಣದಲ್ಲಿ ಯಂತ್ರದಿಂದ ಮಾಡಿ ಮುಗಿಸಲಾಯಿತು. ಇಂತಹ ಯಂತ್ರ ಕೌಶಲ್ಯದ ಮುಂದೇ ಮಾನವ ದೈಹಿಕ ಶ್ರಮ ಮತ್ತ ಅವನ ಕೌಶಲ್ಯತೆಗೆ ಬೆಲೆ ಇಲ್ಲದಂತಾಯಿತು. ತಾನೇ ತನ್ನ ಉತ್ಪಾದನೆಯ ಸಾಧನವಾಗಿ ತಯಾರಿಸಿದ ಯಂತ್ರ ತನ್ನ ಕೆಲಸವನ್ನೇ ಆಹುತಿ ತೆಗೆದುಕೊಳ್ಳಲು ಪ್ರಾರಂಭಿಸಿತು. ಅವನ ಅಸಹಾಯಕ ಸ್ಥಿತಿಗೆ ತಾನೇ ಮರಗುವಂತಾಯಿತು ಮಾನವ ಶ್ರಮ ಕೇವಲ ಒಂದು ಯಂತ್ರದ ಆಹುತಿಗೆ ಬಲಿಯಾಯಿತು. ಇಂದು ಒಂದು ರೀತಿಯಲ್ಲಿ ಬುಡಕಟ್ಟು ಕೆಳ ಪಾರಂಪರಿಕ ವೃತ್ತಿಗೆ ತೊಡಕಾಗಿ ಅವರನ್ನು ಪಾರಂಪರಿಕ ವೃತ್ತಿಯನ್ನ ಬಿಟ್ಟು ಪರ್ಯಾಯ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತ ಅನಿವಾರ್ಯತೆ ಸೃಷ್ಟಿಯಾಯಿತು. ಕೈಗಾರೀಕರಣದ ಫಲವಾಗಿ ಹಸಲರ ಒಂದೊತ್ತಿನ ಊಟಕ್ಕೆ ಪರದಾಡುವಂತೆ ಸ್ಥಿತಿ ನಿರ್ಮಾಣವಾಗಿದೆ ಹೆಚ್ಚಾಗಿ ಅಡಿಕೆ ತೋಟಗಳಲ್ಲಿ ಕೆಲಸ ಮಾಡುವ ಹಸಲರು ಅಡಿಕೆಗೆ ಕೊಳೆ ರೋಗ ಬಂದಾಗ ಕೊಟ್ಟೆ ಕಟ್ಟುವಂತ, ಔಷದ ಸಿಂಪಡಿಸುವಂತ.

ಅಡಿಕೆ ಸಸಿ ನಡುವಂತ, ಅಡಿಕೆ ಕೊನೆ ಇಳಿಸುವಂತ ವೃತ್ತಿಗಳನ್ನು ಮಾಡುತ್ತಿದ್ದರು ಮಹಿಳೆಯರು ಅಡಿಕೆ ಸುಲಿಯುವದು. ತೋಟದ ಕಳೆ ತೆಗೆಯುವದು, ನಾಟಿ ಮಾಡುವದು ಮಾಡುತ್ತಿದ್ದರು. ಆದರೆ ಇಂದಿನ ಜಾಗತೀಕರಣದ ಪ್ರಭಾವದಿಂದಾಗಿ ಅಡಿಕೆ ಮರಗಳು ನಾಶವಾಗಿ ನುಸಿ ಪೀಡೆಯಂತ ರೋಗಗಳಿಗೆ ಬಲಿಯಾಗಿ, ಮತ್ತು ಅಡಿಕೆಗೆ ಮಾರುಕಟ್ಟೆಯಲ್ಲಿ ಇಲ್ಲದೆ ಬೆಲೆ ಅನೇಕ ರೈತರು ಅಡಿಕೆ ಮರಗಳನ್ನು ನಾಶಪಡಿಸಿದರು ಇನ್ನೂ ಕೆಲವು ಉಳ್ಳವರು ಜಾಗತೀಕರಣದ ಪ್ರಭಾವದಿಂದಗಾಗಿ ಅಡಿಕೆ ತೋಟಗಳನ್ನು ಕಾಫಿ, ಎಷ್ಟೇಟುಗಳನ್ನಾಗಿಸಿ ವೆನಿಲಾದಂತ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಮೂಲಕ ಹಸಲರ ಕೂಲಿ ಬದುಕಿಗೆ ಸವಾಲು ಸೃಷ್ಟಿಸಿದವು ಇಲ್ಲಿ ಜಮೀನ್ದಾರರು, ಬಂಡವಾಳಶಾಹಿಗಳು ಜಾಗತೀಕರಣದ ಹಿತಾಸಕ್ತಿಗೆ ಬಲಿಯಾಗಿ ದುರ್ಬಲರನ್ನ ಮತ್ತಷ್ಟು ದುರ್ಬಲಗೊಳಿಸುತ್ತಿದ್ದಾರೆ. ಪ್ರಸ್ತುತ ಹಸಲರ ಬದುಕು ಉದ್ಯೋಗವನ್ನ ಹರಿಸಿಕೊಂಡು ನಗರಗಳಿಗೆ ಬರುವಂತ ಪರಿಸ್ಥಿತಿ ನಿರ್ಮಾಣವಾಗಿದೆ ನಗರದಲ್ಲಿನ ಕೂಲಿಯನ್ನ ನಂಬಿಕೊಂಡು ಬದುಕುವದು ತುಂಬಾ ಕಷ್ಟ ಆ ನಿಟ್ಟಿನಲ್ಲಿ ಆರ್ಥಿಕತೆಯನ್ನು ನಿರ್ಧರಿಸುವ ವೃತ್ತಿಗಳನ್ನು ಉಳಿಸಿಕೊಳ್ಳುವದು ಸವಾಲಾಗಿದೆ.

ಹಸಲ ಸಮುದಾಯವು ಪ್ರಸ್ತುತ ಸಂದರ್ಭದಲ್ಲಿ ಆಧುನೀಕರಣ ಪ್ರಕ್ರಿಯೆ ಎಂಬ ಮಾಯದ ಜ್ವಾಲೆಯಲ್ಲಿ ಸಿಕ್ಕ ತೋಳಲಾಡುವಂತ ಪರಸ್ಥಿತಿ ನಿರ್ಮಾಣವಾಗಿದೇ ಇಂತಹ ಸಂದರ್ಭದಲ್ಲಿ ಸಮುದಾಯವು ನೂತನ ಯೋಜನೆಗಳ, ತಂತ್ರಜ್ಞಾನ, ಪ್ರಭಾವದಿಂದ ಬದಲಾವಣೆ ಘಟ್ಟಕ್ಕೆ ಬಂದು ನಿಂತಿದೆ ಆದರೂ ದೈನಂದಿನ ಜೀವನದ ವ್ಯವಸ್ಥೆಯ ಮೇಲೆ ಘಾಡವಾದ ಪರಿಣಾಮ ಬೀರಿದೆ. ಪ್ರಸ್ತುತವಾಗಿ ಕೂಲಿಯನ್ನೇ ನಂಬಿ ಬದುಕುತ್ತಿರುವ ಸಮುದಾಯವು ಕೈಗಾರೀಕರಣದ ಪ್ರಭಾವದಿಂದ ಕೂಲಿಯು ವಂಚಿತವಾಗುತ್ತಿದೆ ಕೂಲಿಸಿಕ್ಕರು ಅದಕ್ಕೆ ತಕ್ಕದಾದ ವೇತನ ಸಿಗದೇ ಇರುವದು ದೊಡ್ಡ ಸವಾಲೇ ಆಗಿದೆ. ಭೂಮಿಗಳಲ್ಲಿ ಕುಂಠಿತ ಉತ್ಪಾದನೆ ಕಡಿಮೆ ಬೆಲೆ, ಫಲವತ್ತಲ್ಲದ ಫಸಲುಗಳು ಅನೇಕವುಗಳ ಆಧುನಿಕ ಸವಾಲುಗಳಾಗಿವೆ.

ಸ್ವಾತಂತ್ರ ನಂತರದ ಭಾರತದಲ್ಲಿ ಪಾರಂಪರಿಕ ಕುಲಕಸಬುಗಳನ್ನ ಉಳಿಸಿಕೊಳ್ಳುವದು ಸವಾಲಾಗಿತ್ತು. ದೇಶಿ ಉತ್ಪಾದನೆ ವಿಧಾನಕ್ಕೆ ಮಾರುಕಟ್ಟೆ ಇಲ್ಲದಂತೆ ಮಾಡಲಾಯಿತು. ನಂತರ ಸರ್ಕಾರದ ಯೋಜನೆಗಳು ಆರ್ಥಿಕ ಯೋಜನೆಗಳ, ದೇಶಿ ತಂತ್ರಜ್ಞಾನದ ವಿಧಾನಗಳನ್ನೇ ಕಡೆಗಾಣಿಸಿ ಕೈಗಾರಿಕಾ ಕ್ರಾಂತಿಯ ಪೊಳ್ಳು ಮಾದರಿ ಅನುಕರಿಸುವ ಮೂಲಕ ಸಮುದಾಯಗಳ ಆರ್ಥಿಕ ವ್ಯವಸ್ಥೆಯನ್ನು ದುರ್ಬಲಗೊಳಿಸಿತು. ಆರ್ಥಿಕ ಯೋಜನೆಗಳು ಅವರಿಗೆ ತಲುಪಿಸುವುದು ಮತ್ತು ಆ ಯೋಜನೆಗಳು ಸ್ವೀಕರಿಸುವದು ಹಸಲ ಸಮುದಾಯಕ್ಕೆ ಸವಾಲಿನ ಕೆಲಸವಾಗಿತ್ತು. ಜನಗತ್ತಿನ ಪರಿಚಯಿಸಿದ ನೂತನ ಅರ್ಥವ್ಯವಸ್ಥೆಗೇ ಹೊಂದಿಸಿಕೊಳ್ಳುವಂತ ಯಾವುದೇ ತರಬೇತಿಯನ್ನಾಗಲಿ, ಸಿದ್ಧತೆನ್ನು ಮಾಡಿಕೊಳ್ಳುವ ನಿಟ್ಟಿನಲ್ಲಿ ಕೆಳಜಾತಿಗಳ ಸಮುದಾಯಗಳಿಗೆ ಸವಾಲಿನ ಕೆಲಸವಾಗಿತ್ತು ಆರ್ಥಿಕ ಅಭದ್ರತೆ, ಸುರಕ್ಷತೆ ಇಲ್ಲದ ಸಂದರ್ಭದಲ್ಲಿಯೂ ಕೂಡ ಹಸಲರು ಪರ್ಯಾಯ ಮತ್ತು ಆರ್ಥಿಕವಾಗಿ ಸಬಲರಾಗುವಂತ ಆರ್ಥಿಕ ಮೂಲಗಳನ್ನ ಕಂಡುಕೊಳ್ಳುವದು

[illegible]

ಸವಾಲಾಗಿತ್ತು. ತಾವು ಮಾಡುವ ಕೃಷಿಯಲ್ಲಿ ವೃತ್ತಿಯಲ್ಲಿ, ಜೀವನಧಾರ ಮಾಡುವದು ಮಾತ್ರ ಸರ್ಕಾರದಿಂದ ಸಿಗುವ ಆರ್ಥಿಕ ಸಹಾಯ ಪಡೆಯುವಲ್ಲಿ ಮತ್ತು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಮತ್ತು ಕಡಿಮೆ ಬಡ್ಡಿ ಧರದಲ್ಲಿ ಹಣಕಾಸು ನೆರವು ಪಡೆಯಲು ಅಸಾಧ್ಯವಾಗಿದೆ. ಇವರಿಗೆ ಸಿಗುವ ಸೌಲಭ್ಯಗಳು ಬಹುಸಂಖ್ಯಾತರ ರಾಜಕೀಯ ಮತ್ತು ಬಂಡವಾಳಶಾಹಿ ವರ್ಗ, ಜಾಗೀರದಾರ, ಜಮೀನ್ದಾರ ವರ್ಗದ ವಶವಾಗುತ್ತವೆ. ಹೆಚ್ಚುತ್ತಿರುವ ಖಾಸಗಿ ಸಾಲಕ್ಕೆ ಬಡ್ಡಿ ಕಟ್ಟುವಲ್ಲಿಯೆ ತನ್ನ ದಿನವನ್ನು ದೂಡುತ್ತಿದ್ದನು. ಸರ್ಕಾರ ಮತ್ತು ಬ್ಯಾಂಕ್‌ಗಳು ನೀಡುವ ಸಹಾಯ ಧನ ಪಡೆಯುವದೇ ಒಂದು ದೊಡ್ಡ ಸವಾಲಾಗಿದೆ.

ಕೂಲಿಯನ್ನೇ ನಂಬಿ ಬದುಕುವಂತ ಸುಮಾರು ಕುಟುಂಬಗಳು ಕುಡಗುಂಜಯಲ್ಲಿ ಹೀರೆಮನೆಯಲ್ಲಿ ಹೊಸಗದ್ದೆಯಲ್ಲಿ ಇವೆ, ಯೋಜನೆಗಳು ಭೂರಹಿತ ಕಾರ್ಮಿಕರಾಗಿದ್ದಾರೊ ಅಂತವರನ್ನೇ ಗುರುತಿಸಿ ಅವರಿಗೆ ಆಗತ್ಯ ಭೂಮಿ ಒದಗಿಸಬೇಕಾಗಿದೆ. ಆದರೆ ಕೂಲಿಯಿಂದ ಕೃಷಿಗೆ ತನ್ನ ಹೊಂದಿಸಿಕೊಳ್ಳುವಂತ ಸಂದರ್ಭದಲ್ಲಿ ಭೂಮಿ ಉಳುಮೆಗೆ ನೀರಾವರಿ ಸೌಕರ್ಯ ಪಡೆಯಲು ಯಾವುದೇ ತರಬೇತಿ ಮತ್ತು ಸಿದ್ಧತೆ ಇಲ್ಲದ ಕಾರಣಕ್ಕಾಗಿ ಭೂಮಿಯನ್ನು ಕಳೆದುಕೊಳ್ಳುವಂತ ಭೀತಿ ಎದುರುಸುತ್ತಾರೆ. ಇಂತಹ ಸಂದರ್ಭದಲ್ಲಿ ಯಾವ ಫಸಲು ಬೆಳೆಯದೆ ಮಳೆಯಾಧರಿತ ಬೆಳೆಯನ್ನ ನಂಬಿ ಸಾಲ ಮಾಡಿದ ರೈತ ಭೂಮಿಗಾಗಿ ತನ್ನ ರಕ್ತ ಸುರಿದು ದುಡಿದರು ಫಸಲು ಕೈಗೆಟುಕುವುದಿಲ್ಲ. ಇಂತಹ ಸಂದರ್ಭದಲ್ಲಿ ಸಾಲವನ್ನ ತೀರಿಸುವುದು ಭೂಮಿಯನ್ನ ಉಳಿಸಿಕೊಳ್ಳುವದು ಸವಾಲಾಗಿರುತ್ತದೆ. ಇಲ್ಲಿ ಅವನು ಮಾನಸಿಕ ತೋಳಲಾಟಕ್ಕೆ ಸಿಲುಕುತ್ತಾನೆ. ಕೃಷಿ ಭೂಮಿಯಲ್ಲಿ ಹಲವಾರು ಸುಧಾರಣೆಗಳು ಆಗಬೇಕಾಗಿರುತ್ತದೆ. ಅವನಿಗೆ ನೂತನ ಆಧುನಿಕ ಉಪಕರಣ ರಸಗೊಬ್ಬರಗಳ, ಬೀಜಗಳ ಸಾಲ, ನೀರಾವರಿ ಸೌಲಭ್ಯಗಳು ಪಡೆಯವದೇ ಒಂದು ಸವಾಲು ಒಂದು ವೇಳೆ ಇವೆಲ್ಲವೂ ಅವರು ಪಡೆದಿದ್ದ ಆದರೇ ಅಲ್ಲಿ ಬಳಕೆಯ ವಿಷಯಗಳ ಸಮಸ್ಯೆಗಳನ್ನು ಎದರಿಸುವಂತ ಸ್ಥಿತಿ ನಿರ್ಮಾಣವಾಗುತ್ತದೆ. ಸರ್ಕಾರವು ನೀಡುವ ಈ ಸೌಲಭ್ಯಗಳ ನೇರವಾಗಿ ಇವರಿಗೆ ಸಿಗದೇ ಮಧ್ಯವರ್ತಿಗಳ ಪಾಲಾಗುವದೇ ಜಾಸ್ತಿ ಮಟ್ಟಿಗೆ ಕಂಡುಬರುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ ಕುಟುಂಬದ ಅರ್ಥಿಕ ನಿರ್ವಹಣೆ ಪುರುಷನದಾಗಿರುತ್ತದೆ ಸಾಕಷ್ಟು ತಾನು ದುಡಿದ ಹಣವನ್ನು ಉಳಿಸುವ ಮನೋಭಾವನೆ ಅವನಲ್ಲಿರಲಾಗದು ದುಡ್ಡನ್ನು ಯಥೆಚ್ಛವಾಗಿ ಖರ್ಚುಮಾಡುವ ಮೂಲಕ ದುಶ್ಚಟಗಳ ದಾಸನಾಗಿರುತ್ತಾನೆ. ದುಶ್ಚಟಗಳಿಂದ ಪಾರಾಗಿ ಹಣ ಉಳಿಸುವುದು ಸವಾಲಾಗಿರುತ್ತದೆ. ಹೀಗೆ ಸಮುದಾಯವು ಮಾಸಾಶನ, ಯೋಜನೆಗಳ, ಸಹಾಯಧನ, ಜಮೀನ, ಕೂಲಿ, ಪಡೆಯುವದು ದೈನಂದಿನ ಜೀವನದಲ್ಲಿ ಎದುರಿಸುವ ಸವಾಲುಗಳಾಗಿವೆ.

ಈ ಸವಾಲುಗಳಿಂದ ಹಸಲ ಸಮುದಾಯವು ಹೊರಬೇಕಾದರೆ ಅವರಿಗೆ ಯೋಜನೆಗಳು, ಸೌಲಭ್ಯಗಳ ಸಾಲಗಳು, ಶಿಕ್ಷಣ, ಉದ್ಯೋಗ, ಕೂಲಿ, ಯೋಗ್ಯ ಕೃಷಿ ಅಗತ್ಯವಾದ ಭೂಮಿ, ಶಲಕರಗಳು, ಸಾಧನಗಳ,

[illegible]

ಆಧುನಿಕ ಸಮಾಜದೊಂದಿಗೆ ಸ್ಪರ್ಧಿಸುವಂತ ಮನೋಭಾವನೆ, ಆರ್ಥಿಕ ಸಹಾಯ ಮಾಡುವ ಮೂಲಕ ಇತರರಂತೆ ಅವರು ಬದುಕುವಂತೆ ಮಾಡಬೇಕು.

ಸಮುದಾಯದ ಆರ್ಥಿಕತೆಯನ್ನ ಸುಧಾರಿಸುವ ನಿಟ್ಟಿನಲ್ಲಿ ಬೆಳೆದ ಬೆಳೆಗಳಿಗೆ ಸೂಕ್ತವಾದ ಮಾರುಕಟ್ಟೆ, ಬೆಲೆ, ಧಾರಣೆ, ಅಭಿವೃದ್ಧಿ ಕೆಲಸಗಳನ್ನು ಮಾಡುವದರ ಜೊತೆಗೆ ಕಾಲೋನಿಗಳಿಗೆ ನಗರ ಸಂಪರ್ಕ ಮತ್ತು ನಗರ ಒಡನಾಟ , ಸರ್ಕಾರಿ ಇಲಾಖೆಗೆ ಪರಿಚಯ, ಉದ್ಯೋಗದ ಮಾಹಿತಿ, ಸಾರಿಗೆ ಸಂಪರ್ಕದ ವ್ಯವಸ್ಥೆ ಕಲ್ಪಿಸಿ, ಅಭಿವೃದ್ಧಿ ಮಾಡಬೇಕಾಗಿದೆ. ಅಭಿವೃದ್ಧಿಯ ಮೂಲಕ ನಾವು ಬದಲಾಗುತ್ತವೆ ಹೊರತು ಸರ್ಕಾರದ ಯೋಜನೆಗಳಿಂದ ಅವು ಹೆಸರಿಗೆ ಮಾತ್ರ ಅವು ಬಡವರ ಪರವಲ್ಲ, ಶ್ರೀಮಂತರ ಪರ ಇದ್ದಾಗ ನಾವು ಇದೇ ಸ್ಥಿತಿಯಲ್ಲಿಯೇ ಉಳಿಯಲೇಬೇಕಾಗುತ್ತದೆ ಎಂಬುವುದು ಹಸಲರ ಯುವಕ ಸುರೇಶ ಹೀರೆಮನೆ ತಮ್ಮ ಹಿಂದುಳಿದಿರುವಿಕೆ ಕುರಿತು ನೋವು ತೋಡಿಕೊಂಡರು. ಶೈಕ್ಷಣಿಕವಾಗಿ ಸಮುದಾಯವು ಸುಧಾರಣೆಯಾಗಿದೆ ಆದರೂ ಅರ್ಹತೆಗೆ ತಕ್ಕಂತೆ ಉದ್ಯೋಗಗಳ ಅವಕಾಶವೇ ಇಲ್ಲ ಉದ್ಯೋಗ ಅಥವಾ ಸ್ವ ಉದ್ಯೋಗಕ್ಕೆ ಸರ್ಕಾರವು ಆರ್ಥಿಕ ಸಹಾಯಧನ ನೀಡಿದಲ್ಲಿ ಆರ್ಥಿಕವಾಗಿ ಬದಲಾಗಲು ಸಾಧ್ಯ. ಆಗ ಸಮುದಾಯದ ಸಾಮಾಜಿಕ ಸ್ತರ ವಿನ್ಯಾಸದ ವ್ಯವಸ್ಥೆಯಲ್ಲಿ ಮೇಲ್ ಅಂತಸ್ತಿಗೆ ಹೋಗಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರವು ತನ್ನ ಯೋಜಗಳನ್ನು ಸಮುದಾಯಕ್ಕೆ ತಲುಪಿಸುವಂತೆ ಕಾರ್ಯ ಮಾಡಲೇಬೇಕಾಗಿದೆ.

೩.೪ ಹಸಲರ ರಾಜಕೀಯ ಬದಲಾವಣೆ

ಇಡಿ ವಿಶ್ವದಲ್ಲಿ ಅಸಂಖ್ಯ ಜೀವರಾಶಿಗಳಲ್ಲಿ 'ಮಾನವ' ಅತ್ಯಂತ ವಿಶಿಷ್ಟವಾದ ಹಾಗೂ ಪ್ರತ್ಯೇಕವಾದ ಪ್ರಾಣಿ. ಆತನಿಗೆ ನಿಸರ್ಗದ ಕೊಡುಗೆಯಾಗಿ ಯೋಚನಾಶಕ್ತಿ, ಬುದ್ಧಿಶಕ್ತಿ ಬಂದಿವೆ. ಯೋಚನಾಶಕ್ತಿಯ ನೆರವಿನಿಂದ ಮಾನವ ನಿರಂತರವಾಗಿ ಬದಲಾಗುತ್ತ ಬಂದ, ಸಮುದಾಯಗಳು ಆ ದಿನಗಳಿಂದಲೂ ಇಂದಿನ ತಂತ್ರಜ್ಞಾನದ ಅಡಿಪಾಯದ ಬುನಾದಿಯ ಮೇಲೆ ನಿಂತು. ಭೂಮಿಯನ್ನಲ್ಲದೆ ಇಡಿ ಸೌರಮಂಡಲದಲ್ಲಿ ವಿವಿಧ ಗ್ರಹಗಳ ಮೇಲೆಯೆ ತನ್ನ ಪ್ರಭುತ್ವ ಸ್ಥಾಪಿಸಿದ್ದಾನೆ. ಆ ಪ್ರಭುತ್ವ ಸ್ಥಾಪಿಸುವ ದಿಸೆಯಲ್ಲಿ ಮಾನವನ ಪ್ರಯತ್ನ ಶತಶತಕಗಳ ಹಿಂದಿನದು. ಅಷ್ಟೇ ಏಕೇ ಕೇವಲ ದಶಕದಿಂದಿರುವ ವ್ಯವಸ್ಥೆ ಪ್ರಸ್ತುತ ಇಲ್ಲವೇ ಇಲ್ಲ ಆಧುನಿಕ ಸಮಾಜ ಸಮಗ್ರ ದೃಷ್ಟಿಕೋನ ಬದಲಾಗಿದೆ, ಸಮಾಜದ ಸಂಕೀರ್ಣ ಪರಿಸ್ಥಿತಿ ತಿಳಿಯಾಗಿದೆ. ಸಮುದಾಯದ ರಾಜ್ಯದ ರಾಷ್ಟ್ರದ ಹಾಗೂ ಅನಿವಾರ್ಯ ಪ್ರಭಾವಗಳ ಕಾರ್ಯದಿಂದಾಗಿ ರಾಜಕೀಯ ವ್ಯವಸ್ಥೆಯನ್ನುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ತಿತ್ವಕ್ಕೆ ಬಂದಿತು.

ಭಾರತ ದೇಶದ ಮಟ್ಟಿಗೆ ಹೇಳುವುದಾದರೇ ನಮ್ಮ ಭವ್ಯ ಪರಂಪರೆ ಹಾಗೂ ಮಹತ್ವ ಪೂರ್ಣ ಸಂಸ್ಕೃತಿ ಹಾಗೂ ಉಜ್ವಲ ಇತಿಹಾಸ ಪಡೆದಿರುವ ಈ ನಾಡು ಎಷ್ಟೋ ಒಳ್ಳೆಯ ಹಾಗೂ ಅನುಕರಣೀಯ ಮತ್ತು ಸಕಾರಾತ್ಮಕ ಅಂಶಗಳ ತವರೂರು, ಬೃಹತ್ ದೇಶವಾದ ಭಾರತದ ಸಮಾಜದಲ್ಲಿ ಸಾಮಾನ್ಯವಾಗಿ

ಶೋಷಣೆ, ರಚನೆಯಲ್ಲಿನ ಕಾರ್ಯಗಳಲ್ಲಿನ ಲೋಪದೋಷಗಳ ಕುಂದು ಕೊರತೆಗಳು ಮೂಡಿಬಂದು ಸಾಮಾಜಿಕ ಆಂದೋಲನದ ಚಾಲನೆಯಾಯಿತು. ಅನರ್ಹವಾದ ಸಾಮಾಜಿಕ ನ್ಯೂನ್ಯತೆಗಳನ್ನು ತೊಡೆದು ಹಾಕುವಲ್ಲಿ ಆಗಿನ ಸಂದರ್ಭದಲ್ಲಿ ಅಗತ್ಯತೆ ಇರುವ ಕಾರಣಕ್ಕೆ ಸಮಾಜಕ್ಕೆ ಒಂದೂ ಸ್ಥೂಲವಾದ 'ಪ್ರಜಾಪ್ರಭುತ್ವ' ವ್ಯವಸ್ಥೆಯ ಮೂಲಕ ಸಮಾಜವನ್ನು ಬದಲಾಯಿಸಲಿಕ್ಕಾಗಿಯೇ 'ಸಂವಿಧಾನ' ಒಂದು ಭಾಗವಾಗಿ ರಾಜಕೀಯವನ್ನು ಪ್ರಸ್ಥಾವನೆ ಮಾಡಲಾಯಿತು.

೧೯೪೭ನೇ ಇಸ್ವಿಯವರೆಗೆ ಪರಕೀಯ ದಾಸ್ಯದಿಂದ ವಿಮೋಚನೆ ಪಡೆದ ದೇಶಕ್ಕೆ ಸ್ವರ್ವತಂತ್ರ ಸ್ವತಂತ್ರ ರಾಷ್ಟ್ರವಾಗಬೇಕು ಎಂಬ ಮಹಾತ್ವಾಕಾಂಕ್ಷೆಯಿಂದ ತನ್ನ ರಾಜಕೀಯ ಸ್ವರೂಪವನ್ನು, ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಸಮಾಜದಲ್ಲಿನ ವಿವಿಧ ಆಯಾಮಗಳನ್ನು ಬದಲಾಯಿಸುವ ದಿಸೆಯಲ್ಲಿ ಸಮಾಜದ ರಕ್ಷಣೆಗಾಗಿ, ಜನರಲ್ಲಿ ರಾಜಕೀಯ ಪ್ರಜ್ಞೆ, ನಾಯಕತ್ವ, ಮುಖಂಡ ಗುಣ ವರ್ಚಸ್ಸು ವ್ಯಕ್ತಿತ್ವ ಸಮಸ್ಯೆಗಳು, ಕಲ್ಯಾಣ ಕಾರ್ಯಗಳ ಇತ್ಯಾದಿಗಳ ಸ್ಪಷ್ಟ ಹಾಗೂ ದಿಟ್ಟವಾದ ನೀತಿಗಳನ್ನು ರೂಪಿಸಲು ಭಾರತ ಸಂವಿಧಾನವನ್ನು ಅಸ್ತಿತ್ವಕ್ಕೆ ತಂದಿತು. ಆ ಮೂಲಕ ದೇಶದ ಪ್ರಗತಿಗೆ ಸಂವಿಧಾನದ ಒಂದು ಭಾಗವಾದ ರಾಜಕೀಯದ ಮೂಲಕ ಶ್ರಮಿಸುವಂತ ಕೆಲಸ ಮಾಡಲಾಯಿತು.

ಸ್ವಾತಂತ್ರ ಮುನ್ನವೇ ರಾಜಕೀಯದ ಪರಿಕಲ್ಪನೆ ಹೊಂದಿದ ಭಾರತವು ದೇಶದ ನೇತಾರರುಗಳು ಬಹುಸಂಖ್ಯಾತ ಜನರ ಆಶೋತ್ತರಗಳಿಗೆ ಅನುಗುಣವಾಗಿ ಪ್ರಗತಿಪರ ಧೋರಣೆಗಳನ್ನು ಪ್ರತಿಬಿಂಬಿಸುವ ಮತ್ತು 'ಸರ್ವಸಮ್ಮತವಾದ'ವನ್ನು ನಿರೂಪಿಸುವ ನವಸಮಾಜದ ಕಲ್ಪನೆ ಕಟ್ಟಿಕೊಂಡಿದ್ದರು ಎಂಬವುದು ಚರಿತ್ರೆಯ ಮೂಲಕ ತಿಳಿಯುವಂತದ್ದು ಸ್ವಾತಂತ್ರ ಸಂಗ್ರಾಮದ ಹಿನ್ನೆಲೆಯಲ್ಲಿ ಸ್ಪೂರ್ತಿಯ ಪಡೆದ ಭಾರತದ ಮೇಧಾವಿಗಳ ಪಡೆ ಅಂದಿನ ಸಂದರ್ಭದಲ್ಲಿ ಮೂಡಿಬಂದಿದ್ದ ಹಲವಾರು ಸ್ವಾಲಂಬನೆಯ ವಿವಿಧ ಮಜಲುಗಳಲ್ಲಿದ್ದ ಸನ್ನಿವೇಶವನ್ನು ಅರ್ಥಗರ್ಭಿತ ಆದೇಶಗಳನ್ನು ಒಳನೊಡಿಸಿಕೊಂಡ ಪ್ರಯುಕ್ತ ದೇಶದ ವಿಮೋಚನೆಗೆ ಬಹು ಸಮಯಕ್ಕೆ ಮುನ್ನವೇ ಹೊಸ ಸಮಾಜದ ರೂಪರೇಷಗಳ ಬಗ್ಗೆ ಸುಧೀರ್ಘ ಹಾಗೂ ಸಮರ್ಪಕ ವಿಚಾರ ವಿನಿಮಯ ಹಾಗೂ ಚಿಂತನೆಯೂ ಸಹ ಆಗಿತ್ತು.

ಅದೇ ಸಮಯ ಅಂದಿನ ಸಮಾಜದಲ್ಲಿ ಸ್ವಾತಂತ್ರದ ಸಿಹಿ ಅನುಭವ ಮಾತ್ರವಲ್ಲದೆ ಸಮಾಜದಲ್ಲಿ ಬೇರೂರಿದ್ದ ಹಲವಾರು ಅನಿಷ್ಟ ಸಂಪ್ರದಾಯಗಳ ಹಾಗೂ ಹಾನಿಕಾರಕ ಸಂಗತಿಗಳ ಬಗ್ಗೆ ಸಾಕಷ್ಟು ಜಿಜ್ಞಾಸೆ ಹಾಗೂ ಸಾರ್ವಜನಿಕ ವಿಚಾರ ವಿನಿಮಯಗಳಾಗಿದ್ದು ಅಂತಹ ಹಲವಾರು ನಿರ್ಧಿಷ್ಟ ಜಿಜ್ಞಾಸೆ ಹಾಗೂ ಸಾರ್ವಜನಿಕ ವಿಚಾರವಿನಿಮಯಗಳಾಗಿದ್ದು ಅಂತಹ ಹಲವಾರು ನಿರ್ಧಿಷ್ಟ ಸಾಮಾಜಿಕ ಅವ್ಯವಹಾರಗಳನ್ನ ತೊಡೆದುಹಾಕಿ. ಅದರ ಸ್ಥಾನದಲ್ಲಿ ಹೊಸದಾದ ಹಾಗೂ ನ್ಯಾಯಯುತ ಮತ್ತು ಪ್ರಗತಿಪರ ಚಿಂತನೆ ಸತ್‌ಸಂಪ್ರದಾಯಗಳನ್ನು ಅಳವಡಿಸಬೇಕೆಂಬ ಸಾಮೂಹಿಕ ಅಭಿಪ್ರಾಯ ಸ್ಪಷ್ಟವಾಗಿ ಮನವರಿಕೆ ಆಗತೊಡಗಿತು.

[illegible]

ಈ ಸ್ವಾಗತಾರ್ಹ ಸಾಮಾಜಿಕ ಅಭಿಪ್ರಾಯಗಳ ಉದಾಹರಣೆಗಾಗಿ ಈ ಶತಮಾನದ ಆದಿಯಿಂದ ತೀಕ್ಷ್ಣಗೊಂಡ ಹಲವಾರು ಶಾಂತಿಯುತ ಕ್ರಾಂತಿಕಾರಿ ವಿಚಾರಧಾರೆಗಳು ನಮಗೆ ಕಾಣುತ್ತವೆ. ನಮ್ಮ ದೇಶಗಳಲ್ಲಿರುವ 'ಅಸ್ಪೃಶ್ಯ'ರು ಎಂದೆನಿಸಿಕೊಳ್ಳಲ್ಪಡುತ್ತಿದ್ದ ಆ ಅನ್ಯಾಯಕರ ಮತ್ತು ಅಸಮಾನತೆಯ ವರ್ತನೆಗಳ ಪ್ರಕೂಪಕ್ಕೆ ಶತಮಾನಗಳಿಂದ ಸಿಲುಕಿ, ಹೇಳಲಸಾಧ್ಯವಾದ ಪರಿಪರಿಯ ಸಾಮಾಜಿಕ, ಆರ್ಥಿಕ ಮತ್ತು ಇನ್ನಿತರ ಶೋಷಣೆಗಳಿಂದ ಗುರಿಯಾಗುತ್ತಿದ್ದ ಜನರ ಬಗ್ಗೆ, ಹೊಸ ವಿಚಾರ ಮೂಡಿ ಬರತೊಡಗಿತು. ಹಿಂದೆ ಕಳೆದ ಹಲವು ಶತಮಾನಗಳಿಂದ ಅಂತಹ ಬೃಹತ್ ಸಮಸ್ಯೆ ಭಾರತದ ಸಾಮಾಜಿಕ ಪಿಡುಗಾಗಿ ಮಾರ್ಪಾಡಾಗಿತ್ತು. ಅದನ್ನು ತೊಡೆದು ಹಾಕಲು ಹಲವಾರು ಮತೀಯ ಮುಂದಾಳುಗಳು ದಾರ್ಶನಿಕರು. ಚಿಂತಕರು ಹಾಗೂ ರಾಜಕೀಯ ಪಟುಗಳ ಶ್ರಮಿಸುವ ಮೂಲಕ ಆ ಪದ್ಧತಿಗಳನ್ನ ತೊಡೆದು ಹಾಕುವಂತ ಪ್ರಯತ್ನಗಳಾದವು. 'ಅಸ್ಪೃಶ್ಯ'ರೆಂದೆನಿಸಿಕೊಳ್ಳುತ್ತಿದ್ದ ಅನೇಕ ವರ್ಗಗಳಿವೆ ಅಥವಾ ಜನಾಂಗಗಳಿಗೆ ಸಾಮಾಜಿಕ ಚಟುವಟಿಕೆಗಳಲ್ಲಿ ನಿಕೃಷ್ಟವಾದ ಸ್ಥಾನ ಕೊಡಲಾಗಿತ್ತು. ಸಾರ್ವಜನಿಕ ಜೀವನದಲ್ಲಿ ಅವರುಗಳಿಗೆ ಯಾವುದೇ ಅವಕಾಶವು ಇರುತ್ತಿರಲಿಲ್ಲ. ಅವರುಗಳಿಗೆ ಮತೀಯ ಚಟುವಟಿಕೆಗಳಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ದೇವಸ್ಥಾನಗಳ ಸಾರ್ವಜನಿಕ ಸಂಸ್ಥೆಗಳ ಪ್ರವೇಶಕ್ಕೆ ನಿಷೇಧವಿತ್ತು. ಈ ಸಮಸ್ಯೆಯ ಕರಾಳ ಛಾಯೆ ನಾನಾ ರೀತಿಯಲ್ಲಿ ಸಮಾಜವನ್ನು ಕಾಡುತ್ತಿತ್ತು. ಈ ಶತಮಾನದ ಆದಿಯಿಂದ ಅಂಥಹ ಅನ್ಯಾಯಕರ, ಅಮಾನವೀಯ ಹಾಗೂ ಸಮಾಜದ ವಿರೋಧಿ ಧೋರಣೆಯಲ್ಲಿ ನೊಂದು ಬೆಂದು ಅನೇಕ ಸಮುದಾಯಗಳನ್ನು ರಾಜಕೀಯ ಎಂಬ ಪ್ರಯತ್ನದ ಮೂಲಕ ಸಮಾಜದಲ್ಲಿನ ನಿಲುವುಗಳನ್ನು ಬದಲಾಯಿಸುವ ಮೂಲಕ ಒಂದು ನೂತನ ಮನ್ವಂತರಕ್ಕೆ ಸಂವಿಧಾನದ ಅಡಿಯಲ್ಲಿ ತರುವಂತ ಪ್ರಯತ್ನಗಳಾದವು.

ಕಾಲಚಕ್ರದ ದೃಷ್ಟಿಕೋನದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಬದಲಾವಣೆ ಆಂದೋಲನದ ರೂವಾರಿಯಾಗಿ, ಸರ್ವ ಸಮತಾವಾದದ ಪ್ರತೀಕವಾದ ಹೊಸ ಸಮಾಜ ನಿರ್ಮಾಣದ ಕಾರ್ಯದಲ್ಲಿ ಕಳೆದ ಐದು ದಶಕಗಳಿಂದ ರಾಜಕೀಯದಲ್ಲಾದ ಬದಲಾವಣೆಗಳು ಮಹತ್ತರವೆನಿಸಿವೆ, ಒಂದು ದೃಷ್ಟಿಯಲ್ಲಿ ಹನಿಹನಿಯಾಗಿ ಆರಂಭವಾದ ಸಾಮಾಜಿಕ ಕ್ಷೇತ್ರದಲ್ಲಿನ ಆಂತರೀಕ ವಿಚಾರ ಆಚಾರಗಳು, ಕಾಲಕ್ರಮೇಣ ರಭಸದಿಂದ ಪ್ರವಾಹೋಪಾದಿಯಲ್ಲಿ ಮೂಡಿದ ಬದಲಾವಣೆಯ ಅಲೆಗಳಾಗಿದ್ದು, ಅವು ಮೂಲಭೂತವಾಗಿ ಸಮುದಾಯಗಳ ರಾಜಕೀಯ ಪೂಜೆಯನ್ನು ಎಚ್ಚರಿಸಿ ಅದಕ್ಕೆ ಜೀವ ಪೋಷಣೆ ನೀಡಿದ ಅಂಶ ವಾಸ್ತವಾಗಿದೆ. ಇಂದಿನ ಭಾರತದ ಭವಿಷ್ಯದ ಕಲ್ಪನೆಯ ಗುರಿಯನ್ನು ಗಮನದಲ್ಲಿಟ್ಟುಕೊಂಡು ಭಾರತದಲ್ಲಿ ರಾಜಕೀಯ ಕ್ಷೇತ್ರದಲ್ಲಿನ ಬದಲಾವಣೆಯ ಕುರಿತು ಚರ್ಚಿಸುವ ಅಗತ್ಯತೆ ಇದೆ.

ಭಾರತದ ಇತಿಹಾಸ ವಿಶಿಷ್ಟವಾದದ್ದು ಸು. ೫೦೦೦ ವರ್ಷಗಳ ಇತಿಹಾಸ ಹೊಂದಿರುವ ಭಾರತದ ಮಣ್ಣಿನ ಗುಣವೊ ಸಾಂಸ್ಕೃತಿಕ ಚೈತನ್ಯದ ಫಲವೂ ಶತಶತಮಾನಗಳಿಂದಲೂ ವಿಶ್ವದ ಹಲವೆಡೆಗಳಿಂದ

ನಾನಾ ಕಾರಣಗಳಿಗಾಗಿ ಬಂದ ಜನಸಮೂಹಗಳು ಶಾಶ್ವತವಾಗಿ ಇಲ್ಲಿಯ ನೆಲೆಕಂಡುಕೊಂಡರು. ಹತ್ತನೇ ಶತಮಾನದಿಂದಲೇ ಭಾರತ ವಿದೇಶಿಯರ ಪ್ರಬಲದಾಳಿಗಳಿಗೆ ಒಳಗಾಗಿ ಅವರ ಹೊಸ ಪ್ರಭಾವಗಳಿಗೆ ಒಳಗಾಗಿ ಬದಲಾದದ್ದು ಚರಿತ್ರೆಯಿಂದ ತಿಳಿಯುವ ಸತ್ಯ ಸಂಗತಿ. ಮೊಗಲರು, ಅಪಘನ್ನರು, ಟರ್ಕಿಗಳು ನಂತರ ವಾಣಿಜ್ಯ ವಿನಿಮಯಮೂಲ ಉದ್ದೇಶ ಹೊಂದಿ ಬಂದ ಯುರೋಪಿನ ಡಚ್ಚರು ಫ್ರೆಂಚರು, ಪೋರ್ಚುಗಿಸರ ಬ್ರಿಟೀಷರು ಶತಮಾನಗಳ ಕಾಲ ಭಾರತದಲ್ಲಿಯ ನೆಲೆಯೂರಿದರು. ಈಸ್ಟ ಇಂಡಿಯಾ ಕಂಪನಿಯ ಮೂಲಕ ವಿಕ್ಟೋರಿಯಾ ರಾಣಿಯ ನೇರ ಉಸ್ತುವಾರಿಯಲ್ಲಿ ಭಾರತವನ್ನಾಳಲು ಪ್ರಾರಂಭಿಸಿದ ಬ್ರಿಟೀಷ ಸಾಮ್ರಾಜ್ಯ ರಾಜಕೀಯ ಪ್ರಾಬಲ್ಯ ಸ್ಥಾಪಿಸಿತ್ತು, ಆಗಿನ ಸಂದರ್ಭದಲ್ಲಿನ ಕೃಷಿ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಇದ್ದ ಭಾರತ ರಾಜಕೀಯ ದೃಷ್ಟಿಯಿಂದ ನೂತನ ಹಪಾಹಪಿಗೆ ಪ್ರಯತ್ನಿಸಿತು. ಆ ದಿಸೆಯಲ್ಲಿ ೧೭ನೇ ಶತಮಾನದಲ್ಲಿ ಮೊದಲನೇ ಸ್ವಾತಂತ್ರ ಸಂಗ್ರಾಮ ಎಂದು ಕರೆಯಲ್ಪಡುವ 'ಸಿಪಾಯಿ ದಂಗೆ' ರಾಜಕೀಯದಲ್ಲಿ ಹೊಸತನದ ಯೋಚನೆಗಳ ಹುಟ್ಟುವಿಗೆ ಕಾರಣವಾಯಿತು. ಸಿಪಾಯಿದಂಗೆಯ ಮೂಲಕ ಬ್ರಿಟೀಷರೊಂದಿಗೆ ಸಂಘರ್ಷಕ್ಕೆ ಇಳಿದ ಭಾರತ ಬಿಳಿಯರ ಕಪಿಮುಷ್ಠಿಯಿಂದ ಬಿಡುಗಡೆ ದುಸಾಧ್ಯವಾಗಿತ್ತು. ಆದರೂ ಸಹ ಆ ವೇಳೆಗೆ ಪ್ರಾನ್ಸಿನ ಕ್ರಾಂತಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಸ್ವಾತಂತ್ರದ ಹಿನ್ನೆಲೆಯಲ್ಲಿ ಮಾನವ ಕುಲಕ್ಕೆ ವರದಾನವಾಗಿ ಪರಿಣಮಿಸಿತು. ಈ ಕ್ರಾಂತಿಗಳು ಮೂಡಿಸಿದ ಸ್ವಾತಂತ್ರ ಸಮಾನತೆ ಹಾಗೂ ವಿಶ್ವ ಭಾತೃತ್ವ ಭಾವನೆಗಳ ಅಗಾಧ ಪ್ರಭಾವ ವಿಶ್ವದಾದ್ಯಂತಪಸರಿಸಿತು. ಇವುಗಳ ಕಾರಣಗಳಿಗಾಗಿ ಭಾರತದಲ್ಲಿನ ಅಸಂಖ್ಯರಲ್ಲಿ ಹೊಸ ಕಲ್ಪನೆಗಳ ಹೊಸ ಕನಸುಗಳ ಕಾಣುವಂತೆ ಮಾಡಿತು. ಅದಕ್ಕಿಂತ ಹೆಚ್ಚಾಗಿ ಭಾರತದಲ್ಲಿ ರಾಜಕೀಯ ಪ್ರಜ್ಞೆ ಜನಸಾಮಾನ್ಯರಲ್ಲಿ ಒಡಮೂಡಲು ಪ್ರಾರಂಭಿಸಿತು. ಅಪಾರ ಜನಸ್ತೋಮದ ರಾಜಕೀಯ ಆಸೆ ಚಿಗುರೊಡಿಯಿತು.

ಆ ಕಾಲದಲ್ಲಿ ರಾಜಕೀಯ ನಾಯಕರಾಗಿ ಮತ್ತು ಸಮಾಜದ ಸುಧಾರಕರಾಗಿ ಮಹಾತ್ಮ ಗಾಂಧಿ, ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ್, ಜೆ. ಸಿಂಹರು, ಮೌಲಾನ್ ಆಜಾದ್ ಕಲಾಮ್, ರಾಜಾಜಿ ಮುಂತಾದವರ ಜನರಲ್ಲಿ ಸುಪ್ತವಾಗಿದ್ದ ಆಲೋಚನೆಗಳಿಗೆ ಜೀವ ತುಂಬಿ ಭಾರತದ ಸ್ವಾತಂತ್ರ ಸಂಗ್ರಾಮದ ಶಾಂತಿಯುತ ಬೇಡಿಕೆಗಳಿಗೆ ಪೋಷಣೆ ನೀಡುವ ಮೂಲಕ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಿದರು, ರಾಜಕೀಯ ಹೋರಾಟದ ಫಲವಾಗಿ ಭಾರತವು ಮುಕ್ತ ಸರ್ವತಂತ್ರ ಸ್ವತಂತ್ರವಾದ ರಾಷ್ಟ್ರವಾಯಿತು. ಆಗಸ್ಟ ೧೫, ೧೯೪೭ರಲ್ಲಿ ಸ್ವಾತಂತ್ರ ಪಡೆದ ಭಾರತ ೨೬ ಜನವರಿ ೧೯೫೦ ''ಪ್ರತ್ಯೇಕವಾದ ಸಂವಿಧಾನವನ್ನು ಡಾ. ಬಿ.ಆರ್. ಅಂಬೆಡ್ಕರ್ ನೇತೃತ್ವದಲ್ಲಿ ಅಸ್ತಿತ್ವಕ್ಕೆ ತರಲಾಯಿತು. ಇದು ರಾಜಕೀಯ ಜೀವನದಲ್ಲಿ ಅತಿದೊಡ್ಡ ಹಾಗೂ ಮಹತ್ತರವಾದ ಬೆಳವಣಿಗೆಗೆ ಕಾರಣವಾಯಿತು. ಸಂವಿಧಾನವು ೩೯೫ ಅನುಚ್ಛೇದಗಳು, ೨೨ ಭಾಗಗಳ ಹಾಗೂ ೯ ಅನುಸೂಚಿಗಳ ಒಳಗೊಳಗಿನ ಮೂಲಕ ಭಾರತದ ಎಲ್ಲ ಅಸಮಾನತೆಗಳನ್ನ ಹೋಗಲಾಡಿಸುವಂತ ಪ್ರಯತ್ನ ಮಾಡಲಾಯಿತು. ಪ್ರತಿ ಪ್ರಜೆಗೆ

[illegible]

ಧಾರ್ಮಿಕ ಸ್ವಾತಂತ್ರ ಏಕತೆ, ಭಾವೈಕ್ಯತೆ, ಅಖಂಡತೆ ವ್ಯಕ್ತಿ ಗೌರವ ರಾಜಕೀಯ ಪ್ರಜ್ಞೆ ಅಧಿಕಾರ ವೃದ್ಧಿಗೊಳಿಸುವಂತ ದೃಢಸಂಕಲ್ಪಮೂಡಿತು, ಸರ್ವಸಮ್ಮತವಾದುದು ಪ್ರತೀಕವಾದ ಭಾರತದ ಸಂವಿಧಾನ ತನ್ನ ಪ್ರಸ್ತಾವನೆಯಲ್ಲಿ ಹೇಳಿರುವಂತೆ ಮಾನವ ಉದಾತ್ತ ಧ್ಯೇಯಗಳನ್ನು ಮೌಲ್ಯಗಳನ್ನು ಒದಗಿಸುವ ಮೂಲಕ ರಾಜಕೀಯ ದೃಷ್ಟಿಕೋನದಲ್ಲಿ ಬದಲಾವಣೆ ಕಂಡುಕೊಂಡಿತು, ಇದು ದೇಶದ ಸಮಗ್ರ ಏಕತೆ ಸಾಮಾಜಿಕ ಮೌಲ್ಯಗಳ ನ್ಯಾಯ ಹಾಗೂ ಸಮಾನತೆಯ ವಿವಿಧ ಆಯಾಮಗಳ ಹಾಗೂ ಸಮುದಾಯಗಳ ನಿರ್ದಿಷ್ಟ ಗುರಿಯ ಸಾಗುವಂತಾಗಿದೆ. ಯಾವಾಗ ಭಾರತಕ್ಕೆ ಒಂದು ಪ್ರತ್ಯೇಕವಾದ ಸಂವಿಧಾನ ಅಸ್ತಿತ್ವಕ್ಕೆ ಬಂತು. ಅದರ ಹಿಂದೇ ಪ್ರತಿ ಪ್ರಜೆಗೆ ತನ್ನ ರಾಜಕೀಯ ಪ್ರಭುತ್ವತೆ ಸಾರುವ ಸಲುವಾಗಿ ಮತದಾನದ ಹಕ್ಕು ನೀಡಲಾಯಿತು. ಓರ್ವ ವ್ಯಕ್ತಿ ಒಂದೇ ಮತ ಎಂಬ ಧೋರಣೆಯನ್ನ ಅನುಷ್ಠಾನಗೊಳಿಸುವ ಮೂಲಕ ಭಾರತದ ಸಾರ್ವಭೌಮತ್ವದ ಪರಿಕಲ್ಪನೆಗೆ ಇಂಬುಕೊಟ್ಟಿತು ಈ ಬದಲಾವಣೆ ರಾಜಕೀಯ ದೃಷ್ಟಿಯಿಂದ ಐತಿಹಾಸಿಕವಾದದ್ದು. ಏಕೆಂದರೇ ಅಲ್ಲಿಯವರೆಗೆ ಸಮಾಜದಲ್ಲಿ ಅಸಮಾನತೆ ಇತ್ತು ಸ್ತ್ರೀ-ಪುರುಷ ನಡುವೆ ಬಡವ-ಶ್ರೀಮಂತ ನಡುವೆ ಸ್ಪೃಶ್ಯ ಅಸ್ಪೃಶ್ಯರ ನಡುವೆ ಸಮಾನತೆಗೆ ಕಾರಣವಾಯಿತು.

ಸಮಾಜದಲ್ಲಿ ಸಮುದಾಯಗಳಲ್ಲಿ ವಿಶಾಲ ದೃಷ್ಟಿಯನ್ನು ತರುವ ಮೂಲಕ ಭಾರತೀಯ ಪ್ರಜೆಗಳಿಗೆ ಯಾವುದೇ ಮತ, ಜಾತಿ, ಕುಲ ಧರ್ಮ, ಲಿಂಗಬೇಧವಿಲ್ಲದೇ ಏಕರೀತಿಯಾಗಿ ರಾಜಕೀಯ ಹಕ್ಕುಗಳನ್ನು ನೀಡುವ ಮೂಲಕ ಜನಪ್ರತಿನಿಧಿ ಸರ್ಕಾರವನ್ನು ಸ್ಥಾಪಿಸುವ ಚಿಂತನೆ ಪ್ರಾರಂಭವಾಯಿತು. ಆ ಮೂಲಕ ಸಮಾಜದ ಜನಸಾಮಾನ್ಯ ಸಮುದಾಯಗಳ ಆದಿವಾಸಿ ಸಮುದಾಯಗಳ ಬುಡಕಟ್ಟುಗಳ ಆಶಾದೀಪವಾಗಿ 'ಸಂವಿಧಾನ' ಎಂಬ ಸಂಸ್ಥೆಯ ಮೂಲಕ ರಾಜಕೀಯ ವ್ಯವಸ್ಥೆಯ ಸ್ಥಾಪಿಸುವ ಜೊತೆಗೆ ದೇಶದಲ್ಲಿ ಅತ್ಯಂತ ಗಮನಾರ್ಹ ಹಾಗೂ ಪರಿಣಾಮಕಾರಿಯಾದ ಸಾಮಾಜಿಕ ಬಲಾವಣೆಗೆ ಕಾರಣವಾಯಿತು. ಪ್ರಸ್ತುತ ಸಂದರ್ಭದಲ್ಲಿ ರಾಜಕೀಯ ನ್ಯಾಯ ಮತ್ತು ಸಮಾನತೆಯ ಆಶೋತ್ತರಗಳ ಸಾಕಾರಗೊಳಿಸುವಲ್ಲಿ ಹಾಗೂ ಆ ದಿಶೆಯಲ್ಲಿ ಭಾರತದ ಸಮಾಜವನ್ನು ಕೊಂಡೊಯ್ಯುವ ಸಾಮಾಜಿಕ ಬದಲಾವಣೆಯ ಪಥದಲ್ಲಿ ರಾಜಕೀಯ ಅತ್ಯಂತ ಪ್ರಭಾವಿ ಅಂಶ ಹಾಗೂ ಆಧುನಿಕ ಸಂದರ್ಭದಲ್ಲಿ ಸಮಾಜವನ್ನು ಬದಲಾಯಿಸುವ ಅವಿಭಾಜ್ಯ ಅಂಗ ಕೂಡ ಆಗಿದೆ.

ಬುಡಕಟ್ಟುಗಳಲ್ಲಿ ರಾಜಕೀಯ ಪ್ರಜ್ಞೆ

ಆಧುನಿಕ ಸಂದರ್ಭದಲ್ಲಿ ಬದಲಾವಣೆಯ ಒಂದು ರೂಪವಾಗಿ ಬಂದ ರಾಜಕೀಕರಣ ಅಥವಾ ರಾಜಕೀಯ ಬುಡಕಟ್ಟು ಜನರು ಪ್ರಾರಂಭದಿಂದಲೂ ಅಸ್ತಿತ್ವದಲ್ಲಿರುವಂತದ್ದು ಅಲ್ಲಿ ಸ್ಥಳೀಯ ಪಂಚಾಯತ್ ವ್ಯವಸ್ಥೆ ನ್ಯಾಯಾಲಗಳು ಇದ್ದವು ಅವುಗಳಿಗೆ ನ್ಯಾಯ ಪಂಚಾಯತಿ, ದೈವದ ಮನೆ, ದೈವದ ಚಾವಡಿ. ಪಂಚಾಯ್ತಿ ಕಟ್ಟೆ ಹೀಗೆ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಇವು ಅಚ್ಚ ರಾಜಕೀಯದ ಅಂಗಗಳಂತ

[illegible]

ಕಾರ್ಯನಿರ್ವಹಿಸುತ್ತಿದ್ದವು. ಬುಡಕಟ್ಟುಗಳಲ್ಲಿ ಪಂಚಾಯತ ಅಥವಾ ರಾಜಕೀಯ ವ್ಯವಸ್ಥೆ ಒಂದು ಭಾಗವಾಗಿ ಸಮುದಾಯಗಳಲ್ಲಿ ಉಂಟಾಗುವ ಸಮಸ್ಯೆಯೆನ್ನುವುದು ಬುಡಕಟ್ಟುಗಳಲ್ಲಿ ಪಂಚಾಯತ ರಾಜ್ಯ ವ್ಯವಸ್ಥೆಯ ರೂಪದಲ್ಲಿ, ನ್ಯಾಯ ಪಂಚಾಯತಿಗಳು ಕಾರ್ಯ ನಿರ್ವಹಿಸುತ್ತಿದ್ದವು. ಇವು ಥೇಟ ಇಂದಿನ ಚುನಾಯಿತ ಪ್ರತಿನಿಧಿಗಳಿಂದ ಕೂಡಿರುವಂತ ವ್ಯವಸ್ಥೆ ಆಗಿತ್ತು. ಸಮುದಾಯದ ಹಿರಿಯ ಮುಖಂಡರನ್ನ ಸೇರಿಸಿ ಅಥವಾ ಸಮುದಾಯದ ಒಪ್ಪಂದದ ಮೇರೆಗೆ ಪಂಚರನ್ನು ನೇಮಕಗೊಳಿಸಲಾಗುತ್ತಿತ್ತು. ನೇಮಕಗೊಂಡು ಸದಸ್ಯರ ಅಧಿಕಾರಕ್ಕೆ ಅವಧಿಗಳನ್ನು ಗುರುತುಪಡಿಸುವ ಮೂಲಕ ಅವರ ಅಧಿಕಾರದ ವ್ಯಾಪ್ತಿಗೆ ಬರುವ ವ್ಯಾಜ್ಯಗಳನ್ನು-ನ್ಯಾಯಗಳನ್ನು ಬಗೆಹರಿಸುವಂತ ಕಾರ್ಯಗಳಾಗುತ್ತಿದ್ದವು. ನ್ಯಾಯ ನಿರ್ಣಯವನ್ನು ಪಂಚರು ಸೇರಿ ಜನರ ಸಮ್ಮುಖದಲ್ಲಿಯೆ ತೀರ್ಪನ್ನು ನೀಡಲಾಗುತ್ತಿತ್ತು. ಆ ತೀರ್ಪನ್ನ ಸಮುದಾಯದ ಎಲ್ಲರು ಚಾಚುತಪ್ಪದೇ ಪಾಲಿಸಲೇಬೇಕು. ಇಲ್ಲದೇ ಹೋದಲ್ಲಿ ಪಂಚರು ಜಾತಿ ಬಹಿಷ್ಕಾರದಂತ ಶಿಕ್ಷೆಗಳನ್ನು ನೀಡುವ ಮೂಲಕ ಸಮಾಜದಲ್ಲಿನ ಜನರನ್ನು ಅಥವಾ ವ್ಯವಸ್ಥೆಯನ್ನು ನಿಯಂತ್ರಿಸಲಾಗುತ್ತಿತ್ತು. ನಿಯಂತ್ರಣಕ್ಕೆ ಸಮುದಾಯಕ್ಕೆ ರಾಜಕೀಯ ರಕ್ಷಣೆ ನೀಡುವಂತ ವ್ಯವಸ್ಥೆಯೆ ಆಗಿತ್ತು. ಪ್ರಸ್ತುತ ಸಂದರ್ಭದಲ್ಲಿ ಸ್ವಾತಂತ್ರ ಮತ್ತು ಪೌರ ಹಕ್ಕುಗಳು ಕಾಪಾಡಿಕೊಳ್ಳುವಂತ ವ್ಯವಸ್ಥೆ ಬುಡಕಟ್ಟುಗಳಲ್ಲಿ ಹಿಂದಿನಿಂದಲೂ ಇತ್ತು. ಬುಡಕಟ್ಟು ಸ್ವಾಯತ್ತತೆ ಮತ್ತು ನಾಗರೀಕ ಹಕ್ಕುಗಳನ್ನು ಕಾಪಾಡಿಕೊಳ್ಳಲು ಮೇಲ್ಜಾತಿ ಮೇಲ್ವರ್ಗದ ಜನರಿಂದ ರಕ್ಷಣೆ ಪಡೆಯಲು ಈ ವ್ಯವಸ್ಥೆ ಶಾಸಕಾಂಗದ ಒಂದು ಭಾಗದಂತೆ ಕೆಲಸಮಾಡುತ್ತಿತ್ತು. ತಮ್ಮ ಸಂವಿಧಾನದಂತಿರುವ ನ್ಯಾಯ ವ್ಯವಸ್ಥೆ ಅಥವಾ ಪಂಚಾಯತ್ ವ್ಯವಸ್ಥೆ ಒಂದು ಆಧುನಿಕ ಸಂವಿಧಾನದ ಪ್ರತಿರೂಪದಂತಿರುವ ವ್ಯವಸ್ಥೆಯೆ ಆಗಿತ್ತು. ಈ ವ್ಯವಸ್ಥೆಯ ಮೂಲಕ ಸಮುದಾಯವು ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುವ ಸಾಮಾಜಿಕ ಹೊಣೆಭರಿತ ಜೀವನವನ್ನ ನಡೆಸಲಿಕ್ಕೆ ಅವಕಾಶ ಕಲ್ಪಿಸುತ್ತಿತ್ತು.

ಬುಡಕಟ್ಟುಗಳಲ್ಲಿ ರಾಜಕೀಯ ಪ್ರಜ್ಞೆ ಎನ್ನುವುದು ಗುಂಪುಗಾರಿಕವಾಗಿತ್ತು, ಸಾಮುದಾಯಿಕವಾಗಿರುತ್ತಿತ್ತು. ಮಾನವ ಸಮುದಾಯದಲ್ಲಿ ಮುಖ್ಯವಾಗಿ ರಾಜಕೀಯ ಪ್ರಜ್ಞೆ ಎನ್ನುವುದು ಉತ್ಪಾದನ ವಿಧಾನದ ಆಧಾರದ ಮೇಲೆ ಆರ್ಥಿಕ ವ್ಯವಸ್ಥೆಯ ಆಧಾರದ ಮೇಲೆ ನಿರ್ಧರಿತವಾಗುವಂತದ್ದು, ಯಾವಾಗ ಮಾನವ ಉತ್ಪಾದನೆಯ ಫಲಿತತೆ ಹೆಚ್ಚಳವಾಯಿತೊ, ಆಗ ಅವನಲ್ಲಿ ಸ್ಪರ್ಧೆ ಏರ್ಪಟ್ಟಿತು. ಸ್ಪರ್ಧೆ ಒಂದರ್ಥದಲ್ಲಿ ಮೇಲು ಕೀಳು ಎನ್ನುವ ಭಾವನೆ ಹುಟ್ಟಿಸಿತ್ತು. ಇದೆ ಕಾರಣಕ್ಕೆ ಬಲಿಷ್ಠವಾದ ಅಥವಾ ಚಾಣಾಕ್ಷನಾದ ವ್ಯಕ್ತಿ ಸಮಾಜವನ್ನು ಸಮುದಾಯವನ್ನು ಆಳಲಿಕ್ಕೆ ಪ್ರಾರಂಭಿಸಿದೆ. ಹೀಗೆ ಆಳುವದು ಒಂದು ರೀತಿಯಲ್ಲಿ ಅವನಲ್ಲಿ ರಾಜಕೀಯ ಮನೋಭಿಲಾಷೆಯನ್ನು ಬೆಳೆಸಿತ್ತು. ಹೆಚ್ಚಿನ ಅಧಿಕಾರ ವ್ಯಕ್ತಿಯನ್ನು ಸಮಾಜದ ಮೇಲೆ ಪ್ರಭುತ್ವ ಸಾಧಿಸುವ ನಿಟ್ಟಿನಲ್ಲಿ ಪ್ರಯತ್ನಿಸುವಂತೆ ಮಾಡಿತು. ಈ ಹಿನ್ನೆಲೆಯಲ್ಲಿ ಬುಡಕಟ್ಟುಗಳಲ್ಲಿ ರಾಜಕೀಯ ಪ್ರಜ್ಞೆ ಎನ್ನುವುದು ಸಾಮೂದಾಯಿಕವಾಗಿತ್ತು ಸಮುದಾಯದಲ್ಲಿ ಅವನನ್ನು ಹಿರಿಯ, ಮುಖಂಡ. ಸಮುದಾಯ ಒಪ್ಪಿತ ನಾಯಕ ಅಥವಾ ವ್ಯಕ್ತಿ ಎಂದು ಗುರುತಿಸಲಾಗುತ್ತಿತ್ತು. ಇವನು ರಾಜಕೀಯದಲ್ಲಿ ಜನರ ಸಮ್ಮತಿ ಮೇರೆಗೆ ಆಯ್ಕೆ

ಆಗುತ್ತಿದ್ದ, ಜನರ ಕಷ್ಟಗಳಿಗೆ ಸಮಸ್ಯೆಗಳಿಗೆ ಸ್ಪಂಧಿಸುವ ಮೂಲಕ ನಾಯಕನಾಗಿ ಹೊರಹೊಮ್ಮುತ್ತಿದ್ದ, ಸಮುದಾಯದ ಹಿರಿಯನಾದ ಆ ವ್ಯಕ್ತಿಯು ತೆಗೆದುಕೊಳ್ಳುವ ತೀರ್ಮಾನಗಳು ಇಡಿ ಸಮುದಾಯವು ಸ್ವೀಕರಿಸುತ್ತಿತ್ತು. ಈ ನಿಟ್ಟಿನಲ್ಲಿ ೧೭ನೇ ಶತಮಾನರ ಬ್ರಿಟೀಷರ ಒಡೆದು ಆಳುವ ನೀತಿ ಬುಡಕಟ್ಟು ಸಮುದಾಯಗಳಲ್ಲಿನ ರಾಜಕೀಯ ಪ್ರಜ್ಞೆಯನ್ನು ಅಸ್ಥಿರಗೊಳಿಸಿದವು. ಸಮುದಾಯಗಳಲ್ಲಿ ಮುಖಂಡ ನಾಯಕ ಎಂದು ಗುರುತಿಸಿಕೊಳ್ಳುತ್ತಿದ್ದ ವ್ಯಕ್ತಿ ವೈಯಕ್ತಿಕ ಹಿತಾಸಕ್ತಿಯಾಗಲಿ ಕೌಟುಂಬಿಕ ರಕ್ಷಣೆ, ಸ್ವಾರ್ಥ ಮನೋಭಿಲಾಷೆ ಹೊಂದಿರುತ್ತಿರಲಿಲ್ಲ. ಅವನು ಸಮುದಾಯ ಒಪ್ಪಿತ ಮುಖಂಡನಾಗಿರುತ್ತಿದ್ದ ಎನ್ನುವ ಕಾರಣಕ್ಕೆ ಅವನು ತಪ್ಪು ಮಾಡಿದಾಗಲೂ ತೀರ್ಪಿಗೆ ವಿಧೇಯರಾಗಿ ಶಿಕ್ಷೆ ಅನುಭವಿಸುತ್ತಿದ್ದ. ಯಾವಾಗ ಬ್ರಿಟೀಷರ ಒಡೆದು ಆಳುವ ನೀತಿ ಬುಡಕಟ್ಟುಗಳ ನಡುವೆ ಬಂತು ಅಂದಿನಿಂದ ನ್ಯಾಯಯುತ ರಾಜಕೀಯ ಪ್ರಜ್ಞೆಗೆ ಪೆಟ್ಟಾಯಿತು. ಬ್ರಿಟೀಷರು ತಮ್ಮ ಸಾಮ್ರಾಜ್ಯದ ವಿಸ್ತರಣೆಗಾಗಿ ದೊಡ್ಡ ಸವಾಲಾಗಿದ್ದ ಬುಡಕಟ್ಟುಗಳನ್ನ ವ್ಯವಸ್ಥಿತವಾಗಿ ಒಕ್ಕಲೆಬ್ಬಿಸುವ ಕಾರ್ಯಕ್ಕೆ ನಿಂತವು. ಒಕ್ಕಲೆಬ್ಬಿಸುವ ಮೂಲಕ ಅವರು ಪಾರಂಪರಿಕ ನ್ಯಾಯ ಪದ್ಧತಿ, ಪಂಚಾಯತ ವ್ಯವಸ್ಥೆ ಸಮುದಾಯಿಕ ನ್ಯಾಯ, ಗ್ರಾಮೀಣ, ಪಂಚರು ಎಂಬ ವಿವಿಧ ಸಾಮಾಜಿಕ ನಿಯಂತ್ರಣ ಸಂಸ್ಥೆಗಳನ್ನು ತಮ್ಮ ನೂತನವಾದ ಕಾನೂನು, ಶಾಸನ, ರಾಜಕೀಯ, ಆಡಳಿತದ ಮೂಲಕ ನಿಯಂತ್ರಿಸಿದರು. ಅಭಿವೃದ್ಧಿ ಹೆಸರಿನಲ್ಲಿ ಬುಡಕಟ್ಟು ಹಾಡಿಗಳನ್ನು ಪ್ರವೇಶಿಸಿದ ಬ್ರಿಟೀಷದೊರೆಗಳೆ ರಸ್ತೆ ಸಂಪರ್ಕ ಕಲ್ಪಿಸುವ ನೆಪದಲ್ಲಿ ಕಾಡುಗಳಲ್ಲಿ ಕಾಪಿ ಎಸ್ಟೇಟ್‌ಗಳಾಗಿ ಕಾರ್ಖಾನೆಗಳನ್ನೊ ಕೈಗಾರಿಕೆಗಳನ್ನೊ ತಮಗೆ ಅನುಕೂಲವಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪರಿಸರ ಸಂರಕ್ಷಣೆಯಂತಹ ಕಾನೂನುಗಳನ್ನು ಜಾರಿಗೆ ತರುವ ಮೂಲಕ ಕಾಡುಗಳನ್ನು ನಾಡಾಗಳಾಗಿ ಪರಿವರ್ತಿಸಲಾಯಿತು. ಹಾಡಿಗಳಲ್ಲಿನ ಬುಡಕಟ್ಟುಗಳ ಸ್ವಚ್ಛಂಧವಾದ ಜೀವನಕ್ಕೆ ಕಡಿವಾಣ ಹಾಕಲಾಯಿತು. ಪ್ರಾರಂಭದಲ್ಲಿ ಬ್ರಿಟೀಷರ ವಿರುದ್ಧ ಸಿಡಿದು ನಿಂತ ಬುಡಕಟ್ಟುಗಳು ಆಧುನಿಕತೆ ಮತ್ತು ಜಾಗತೀಕರಣದ ಪರಿಣಾಮವಾಗಿ ತಂತ್ರಜ್ಞಾನದ ಬೆಳವಣಿಗೆಗೆ ಕಾರಣಕ್ಕಾಗಿ ಬ್ರಿಟೀಷರಲ್ಲಿದ್ದ ಸುಧಾರಿತ ಯುದ್ಧ ಸಾಮಗ್ರಿಗಳ, ಶಸ್ತ್ರಾಸ್ತ್ರಗಳನ್ನು ಮೆಟ್ಟಿನಿಲ್ಲುವಲ್ಲಿ ಬುಡಕಟ್ಟುಗಳು ವಿಫಲವಾದವು ಅದೇ ಕಾರಣಕ್ಕೆ ಅನಿವಾರ್ಯವಾಗಿ ಬ್ರಿಟೀಷ ಸರ್ಕಾರದ ನೂತನ ಕಾನೂನುಗಳು, ಕಾಯ್ದೆಗಳನ್ನು ಶಾಸನಗಳನ್ನು ಒಪ್ಪಲೇಬೇಕಾದಂತ ಪರಿಸ್ಥಿತಿ ನಿರ್ಮಾಣವಾಯಿತು. ಈ ವ್ಯವಸ್ಥೆ ಬುಡಕಟ್ಟುಗಳಲ್ಲಿ ರಾಜಕೀಯ ಬದಲಾವಣೆ ಪ್ರಮುಖ ಅಸ್ತ್ರವಾಗಿ ಹೊರಹೊಮ್ಮಿತು.

ಬ್ರಿಟೀಷರ ಕಾಲದಲ್ಲಿ ಭಾರತದಲ್ಲಿ ರಾಜಕೀಯ ವ್ಯವಸ್ಥೆಯೆನ್ನುವುದು ಇದ್ದವರ ಅಥವಾ ಉಳ್ಳವರ ಕೈಗೊಂಬೆಯಾಯಿತು. ಭಾರತದಲ್ಲಿನ ಕೆಳಸ್ತರದ ತಳಸಮುದಾಯಗಳನ್ನು ನಿಯಂತ್ರಿಸುವ ಸಲುವಾಗಿಯೆ ನೂತನ ವ್ಯವಸ್ಥೆಯೊಂದನ್ನು ಹುಟ್ಟುಹಾಕುವ ಮೂಲಕ ಅವರಿಗೆ ಕಡಿವಾಣ ಹಾಕಲಾಯಿತು. ಅಪರಾಧಿಕಾಯ್ದೆ, ಕಾನೂನುಗಳು, ಶಾಸನಗಳು, ಕಾಯ್ದೆಗಳು, ಪರಿಸರಕಾಯ್ದೆ, ಸಂರಕ್ಷಣೆಕಾಯ್ದೆ. ತಾವು ಹೊರಡಿಸಿದ ಆಜ್ಞೆಯಗಳನ್ನು ಉಲ್ಲಂಘಿಸಿದರೇ ಅದಕ್ಕೊಂದು ಕಾನೂನು, ಕಂದಾಯ, ಕರ, ಬಂಡವಾಳ ಹೀಗೆ ಹೆಜ್ಜೆ

ಹೆಚ್ಚಿಗೂ ಕಾನೂನುಗಳನ್ನು ಕಾಯ್ದೆಗಳನ್ನು ಜನರ ಮೇಲೆ ಹೇರುವ ಮೂಲಕ ಅವರಲ್ಲಿನ ಹಿಂದಿನ ರಾಜಕೀಯ ಪ್ರಜ್ಞೆ ಮರೆಯಾಗುವಂತೆ ಮಾಡಲಾಯಿತು, ಇಲ್ಲಿ ಬುಡಕಟ್ಟುಗಳಲ್ಲಿ ಸುಧಾರಿತ ಬುಡಕಟ್ಟುಗಳನ್ನು ತಮ್ಮ ರಾಜಕೀಯದ ಲಾಲಸೆಗೆ ಬಲಿತೆಗೆದುಕೊಳ್ಳಲಾಯಿತು. ಸಮುದಾಯಗಳ ವಿರುದ್ಧ ಸಮುದಾಯಗಳನ್ನು ಎತ್ತಿ ಕಟ್ಟುವ ಮೂಲಕ ಸಮುದಾಯಗಳನ್ನು ಸಂಘರ್ಷಕ್ಕೆ ಇಳಿಸಿದವು. ಮತಾಂತರ. ಸೈನಿಕ ಸೇವೆ, ನೌಕರಿಯಂತಹ ಆಮಿಷಗಳನ್ನು ತೋರಿಸುವ ಮೂಲಕ ಕೆಲವು ಸಮುದಾಯಗಳನ್ನು ಸಂಪೂರ್ಣವಾಗಿ ತಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಳ್ಳುವುದರಿಂದ ಅವರಲ್ಲಿನ ಸಾಮುದಾಯಿಕ ಭಾವನೆಯನ್ನು ಒಡೆದುಹಾಕಿ ಸ್ವಾರ್ಥ, ವೈಯಕ್ತಿಕ ಹಿತಾಸಕ್ತಿಗಳಿಗೆ ಬಲಿಯಾಗುವಂತೆ ಮಾಡಲಾಯಿತು. ಅಲ್ಲಿಯವರೆಗೆ ಸಮುದಾಯಗಳು ಒಪ್ಪಿತ ನಾಯಕರಾಗಿದ್ದ ಮುಖಂಡರು ಬ್ರಿಟೀಷ ಒಪ್ಪಿತ ನಾಯಕರಾಗುವ ಮೂಲಕ ತಾವೇ ಮಾಡಿಕೊಂಡ 'ಪಂಚಾಯತ್ ವ್ಯವಸ್ಥೆ'ಯನ್ನು ತಾನೇ ನೀಡಿದ ತೀರ್ಪುಗಳನ್ನು, ವ್ಯಾಜ್ಯಗಳನ್ನು ಮುರಿದು ಬ್ರಿಟೀಷ್ ಸರ್ಕಾರದ ಕೋರ್ಟ್ ಕಛೇರಿ ಪೋಲಿಸ್ ವ್ಯವಸ್ಥೆಗಳ ಸ್ವೀಕರಣಕ್ಕೆ ಮುಂದಾದ. ಹೀಗೆ ಪ್ರಜೆಗಳ ಹೆಸರಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತಂದು ಬ್ರಿಟೀಷರು ಭಾರತವನ್ನು ರಾಜ್ಯಗಳ ಪ್ರಾಂತ್ಯಗಳ, ವಿಭಾಗಗಳ ಜಿಲ್ಲಾ ತಾಲೂಕು, ಹೋಬಳಿ ಗ್ರಾಮಗಳನ್ನಾಗಿ ವಿಂಗಡಿಸಿ ಆಳಲಾರಂಭಿಸಿದರು. ಇಲ್ಲಿ ತಮ್ಮಗೆ ಅನುಕೂಲಸ್ಥರನ್ನು ಮುಖಂಡರನ್ನಾಗಿ ನೇಮಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದ್ದರು. ಯಾರು ಬ್ರಿಟೀಷರಿಗೆ ವಿಧೇಯರಾಗಿರುತ್ತಾರೇ ಅವರು ಅಧಿಕಾರ ಹೊಂದುವ ಮೂಲಕ ತನ್ನದೇ ಸಮುದಾಯದ ವಿರುದ್ಧ ಶೋಷಣೆ, ದೌರ್ಜನ್ಯ ನೀಡಲು ಪ್ರಾರಂಭಿಸಿದ ಇದು ಬ್ರಿಟೀಷರ ಒಡೆದ ಆಳುವ ನೀತಿಗೆ ಒಂದು ಉದಾಹರಣೆ ಈ ಮೇಲಿನ ಸಂಸ್ಥೆಗಳನ್ನು ಸ್ವಾಯತ್ತತೆ ಸಂಸ್ಥೆಗಳನ್ನಾಗಿ ರೂಪಿಸುವ ನೆವದಲ್ಲಿ ಸಾಮಾಜಿಕ ಅಧಿಕಾರ ನೆವದಲ್ಲಿ ಬ್ರಿಟೀಷ್ ಅಧಿಕಾರವನ್ನು ಸ್ಥಾಪಿಸಲಾಯಿತು. ಈ ಹಿನ್ನೆಲೆಯಲ್ಲಿ ಬುಡಕಟ್ಟುಗಳು ಆಧುನಿಕ ರಾಜಕೀಯ ಸ್ಥಿತ್ಯಂತರಕ್ಕೆ ಒಳಗಾಗಿ ಪಾರಂಪರಿಕ ಕೇಂದ್ರೀಕೃತ ರಾಜಕೀಯ ಪ್ರಜ್ಞೆ ಮಾಯವಾಗಿ ವಿಕೇಂದ್ರಿಕೃತ ರಾಜಕೀಯ ಅಸ್ತಿತ್ವಕ್ಕೆ ಬಂತು. ವಿಕೇಂದ್ರೀಕರಣ ರಾಜಕೀಯ ವ್ಯವಸ್ಥೆ ಅವರನ್ನು ಎಷ್ಟರ ಮಟ್ಟಿಗೆ ಸುಧಾರಿಸಿದೆ. ಎಷ್ಟರ ಮಟ್ಟಿಗೆ ಸಮುದಾಯಗಳ ಆಶೋತ್ತರಗಳನ್ನು ಇಡೇರಿಸುವಲ್ಲಿ ನೂತನ ವ್ಯವಸ್ಥೆ ಎಷ್ಟು ಸಫಲವಾಗಿದೆ? ಎನ್ನುವುದು ವಿಮರ್ಶಿಸಬೇಕಾದ ಅಗತ್ಯತೆ ಒದಗಿಬಂದಿರುವುದು ಮತ್ತು ಬುಡಕಟ್ಟುಗಳ 'ರಾಜಕೀಯ ಪ್ರಜ್ಞೆ' ರಕ್ಷಣೆಯಲ್ಲಿ ನೂತನ ವ್ಯವಸ್ಥೆ ಹೇಗೆ ಕಾರ್ಯನಿರ್ವಹಿಸುತ್ತಿದೆ ಎನ್ನುವುದು ಚರ್ಚಿಸುವ ಅವಶ್ಯಕತೆ ಇದೆ.

ಆಧುನಿಕ ರಾಜಕೀಯ ರೂಪ

ಅರಿಸ್ಟಾಟಲ್ ಎಂಬ ರಾಜ್ಯಶಾಸ್ತ್ರಜ್ಞ ಹೇಳುವಂತೆ 'ಮಾನವ ಎರಡು ಕಾಲಿನ ರಾಜಕೀಯ ಜಂತು' ಒಬ್ಬನೆ ಇದ್ದಾಗ ಚಿಂತನೆ ಇಬ್ಬರಿದ್ದಾಗ ವಾಗ್ವಾದ, ಮೂವರಿದ್ದಾಗ ರಾಜಕೀಯ ವ್ಯವಹಾರ ಕುದುರುವದು ಸಹಜ.

ಮಾನವ ಮಾತು ಕಲಿತಾಗಿನಿಂದ ಈ ಪ್ರಕ್ರಿಯೆ ಪ್ರಾರಂಭವಾಗುತ್ತಿದೆ. ಪ್ರತಿದೇಶದಲ್ಲಿಯೂ ಅಲ್ಲಲ್ಲಿಯ ಪರಿಸರ, ಸಂಪ್ರದಾಯ, ಪದ್ಧತಿ ಶಿಕ್ಷಣಕ್ಕನುಗುಣವಾಗಿ ರಾಜಕೀಯ ಚಿಂತನ ಮಾಡಲಾಗುತ್ತದೆ. ಅದು ನಿಸರ್ಗ ಸಹಜವಾದ ವ್ಯಾಪಾರ, ಭಾರತದಲ್ಲಿ ದೇಶದಲ್ಲಿ ಪ್ರಾಚೀನ ಕಾಲದಿಂದ ರಾಜಕೀಯ ಚಿಂತನೆ ನಡೆಯುತ್ತಿದೆ. ಯಾವುದೋ ವ್ಯವಸ್ಥೆಯಲ್ಲಿ ರಾಜ್ಯಾಡಳಿತ ನಡೆಯುತ್ತಿತ್ತಷ್ಟೆ. ಅದು ಒಮ್ಮೆ ಹಿಂದೂ ಧರ್ಮದ ಭಾಗವಾಗಿ ಮತ್ತೊಮ್ಮೆ ದಂಡನೀತಿಯೂ, ಅರ್ಥಶಾಸ್ತ್ರವೂ ಆಗಿ ಪ್ರಚಾರವಾಗುತ್ತಿತ್ತು. ರಾಜ್ಯ ಧರ್ಮ, ಕ್ಷಾತ್ರವಿದ್ಯೆ, ರಾಜ್ಯಶಾಸ್ತ್ರ ಎಂಬ ಹೆಸರುಗಳ ಆ ವ್ಯವಸ್ಥೆಗೆ ಅನ್ವಯವಾಗುತ್ತಿದ್ದವು. ಈ ಹೆಸರುಗಳು ಕಾನೂನುಗಳನ್ನು ನಿರ್ದೇಶಿಸುತ್ತಿದ್ದವೆಂದೂ ತೋರುತ್ತದೆ. ಒಟ್ಟಿನಲ್ಲಿ ದುಷ್ಟ, ಶಿಷ್ಟ ರಕ್ಷಣ, ಬಾಹ್ಯ ಶತೃಗಳ ದಮನ, ಶಾಂತಿ ಪಾಲನೆ, ದಂಡ ನೀತಿಯ ಗುರಿಯಾಗಿತ್ತು ನಿರ್ಭಯವಾಗಿ ಜನ ತಮ್ಮ ಜೀವನವನ್ನು ಪಾಲಿಸಬೇಕೆಂಬುವದು ರಾಜನೀತಿಯ ಉದ್ದೇಶವಾಗಿತ್ತು.[೧೨]

ಮನುಷ್ಯ ಹುಟ್ಟು ಪ್ರಾರಂಭವಾದಾಗಿನಿಂದ ರಾಜಕೀಯ ಚಿಂತನೆಯೂ ಮೊಳೆದೋರಿದೆಯೆಂಬುದು ಸುಸ್ಪಷ್ಟ. ಅರಿಸ್ಟಾಟಲ್, ಮೆಕೆವಲ್ಲಿ, ಕೌಟಿಲ್ಯರಿಂದ ಮೊದಲಗೊಂಡು, ಮಾರ್ಕ್ಸ್, ಸ್ಟಾಲಿನ್, ಮಾವೊ, ಲಿಂಕನ್ ಗಾಂಧೀಜಿಯವರೆಗೆ ರಾಜಕೀಯ ಚಿಂತನೆ ಜೀವನದಷ್ಟೇ ವೈವಿಧ್ಯಮಯವಾಗಿ ವಿಸ್ತಾರವಾಗಿ ಬೆಳೆದಿದೆ ಎಂಬುವದು ಜಗತ್ತು ಬಲ್ಲದು. ನಿಸರ್ಗದಂತೆ, ಜೀವನದಂತೆ, ಬುದ್ಧಿಯಂತೆ, ಜ್ಞಾನ ವಿಜ್ಞಾನಗಳಂತೆ ರಾಜಕೀಯವು ನಿತ್ಯವು ಚಲನ ಹಾಗೂ ಪರಿವರ್ತನಶೀಲವಾದದ್ದು, ಆಯಾಯ ಕಾಲದ ಪರಿಸ್ಥಿತಿ ಅಗತ್ಯಗಳಿಗೆ ಅನುಗುಣವಾಗಿ ರಾಜಕೀಯ ಪದ್ಧತಿಗಳ ತಲೆಯೆತ್ತುತ್ತವೆ. ನಶಿಸುತ್ತವೆ ಹೊಸ ಪದ್ಧತಿಗಳು ಆಕ್ರಮಿಸಿಕೊಳ್ಳುತ್ತವೆ. ಆದಿಮಾನವ ಪದ್ಧತಿ, ಊಳಿಗಮಾನ್ಯ ಪದ್ಧತಿ, ಪಾಳೆಗಾರಿಕೆ, ಬಂಡವಾಳಗಾರಿಕೆ, ರಾಜ್ಯಪದ್ಧತಿ, ಗಣರಾಜ್ಯ ಪದ್ಧತಿ, ಶ್ರೀಮಂತ ಪ್ರಭುತ್ವ, ದೈವ ಪ್ರಭುತ್ವ, ಜಮೀನ್ದಾರಿ ಪದ್ಧತಿ, ನಿರಂಕುಶ ಪ್ರಭುತ್ವ, ಅರಾಜಕತ್ವ, ಪ್ಯಾಸಿಸಮ್, ಸಾಮ್ರಾಜ್ಯಸಾಹಿ, ಸರ್ವಾಧಿಕಾರಿ ಮೊದಲಾದ ಪದ್ಧತಿಗಳು ಕೊನೆಗೊಂಡು ಅಧ್ಯಕ್ಷೀಯ ಪದ್ಧತಿ, ಸಮ್ಯವಾದ, ಪ್ರಜಾಪ್ರಭುತ್ವಗಳು ಕೂಡುದಾರಿಯಲ್ಲಿ ಬಂದು ಜಗತ್ತು ನಿಂತಿದೆ, ಕೇಂದ್ರೀಕರಣಕ್ಕಿಂತ ವಿಕೇಂದ್ರೀಕರಣದ, ಗ್ರಾಮ ಸ್ವರಾಜ್ಯ, ಸರ್ವೋಧಯ, ವ್ಯಕ್ತಿ ಸ್ವಾತಂತ್ರಗಳ ಕಡೆಗೆ ಮಾನವನ ದೃಷ್ಟಿ ಹರಿದಿದೆ. ಹಳೆಯ ವಸಹಾತುಶಾಹಿ ಮತ್ತೆ ಜಾಗತೀಕರಣವೆಂಬ ನವ ಹೊಸಹಾತುಶಾಹಿ ರೂಪದಲ್ಲಿ ಜಗತ್ತಿಗೆ ಪರಿಚಯಿಸುವ ತವಕ ನಡೆಯುತ್ತಿದೆ.[೧೩]

ಆಧುನಿಕ ರಾಜಕೀಯ ಸಂದರ್ಭದಲ್ಲಿ ಹಸಲರಲ್ಲಿನ ಬದಲಾವಣೆ

''ಯಾವುದೇ ಸಮುದಾಯವಾಗಲಿ, ಬುಡಕಟ್ಟುಗಳೇ ಆಗಿರಲಿ, ಅವುಗಳಿಗೆ ರಾಜಕೀಯ ರಕ್ಷಣೆ ಇಲ್ಲದಿದ್ದರೇ ಅವರ ಸ್ವಾತಂತ್ರ ಮತ್ತು ಪೌರ ಹಕ್ಕುಗಳು, ಮೂಲಭೂತ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಕಷ್ಟವಾಗುತ್ತದೆ. ಕೆಳಸಮುದಾಯಗಳ ರಾಜಕೀಯ ಹಕ್ಕುಗಳಿಂದ ಮೇಲ್ಜಾತಿ ಮೇಲ್ವರ್ಗದ ಜನರು

ದೂರವಿಡುತ್ತಿದ್ದರು. ಅಧಿಕಾರದ ವಿಕೇಂದ್ರೀಕರಣ ಮತ್ತು ಗ್ರಾಮಸ್ವರಾಜ್ಯದ ಪರಿಕಲ್ಪನೆಯನ್ನು ಸಂವಿಧಾನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಶಾಸಕಾಂಗ ವ್ಯವಸ್ಥೆಯನ್ನು ರೂಪಿಸಿತು. ಶಾಸಕಾಂಗ ವ್ಯವಸ್ಥೆ ತಳಸಮುದಾಯಗಳ ರಾಜಕೀಯ ಆಸೆ ಚಿಗುರೊಡೆಯುವಂತೆ ಮಾಡಿತು. ಶಾಸಕಾಂಗವು ಪ್ರತಿ ಸಮುದಾಯದ ಜನರಿಗೆ ಮೀಸಲಾತಿ ಅನ್ವಯ ಪ್ರತಿನಿಧಿಕತ್ವ ವ್ಯವಸ್ಥೆಯನ್ನು ಕಲ್ಪಿಸಿ ಲೋಕಸಭೆ , ರಾಜ್ಯಸಭೆ, ವಿಧಾನಸಭೆ, ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ, ಗ್ರಾಮ ಪಂಚಾಯತಿ, ಪುರಸಭೆ, ಮಹಾನಗರ ಸಭೆ, ಮಹಾನಗರ ಪಾಲಿಕೆ, ಪಟ್ಟಣ ಪಂಚಾಯತಿ ಈ ವ್ಯವಸ್ಥೆಗಳಲ್ಲಿ ಕೆಳಸಮುದಾಯಗಳ ಜನ ಸಂಖ್ಯೆಯ ಆಧಾರದ ಮೇಲೆ ತಳ ವರ್ಗದವರಿಗೆ ಸ್ಥಾನಮಾನಗಳನ್ನು ಮೀಸಲಿರಿಸಿತ್ತು. ಈ ಮೀಸಲು ಸ್ಥಾನಗಳಲ್ಲಿ ಸ್ಪರ್ಧಿಸುವ ಕೆಳಸಮುದಾಯಗಳಲ್ಲಿ ಸಾಮಾಜಿಕ ಪರಿಸ್ಥಿತಿ ಸುಧಾರಿಸುವ ನಿಟ್ಟಿನಲ್ಲಿ ಅನುಕೂಲ ಕಲ್ಪಿಸಿಕೊಡಲಾಯಿತು.

ಪ್ರಸ್ತುತ ಸಂದರ್ಭದಲ್ಲಿ ರಾಜಕೀಯ ವ್ಯವಸ್ಥೆಯೊಂದು ಶಾಸನಗಳನ್ನು ರಚಿಸುವಾಗ ಪರಿಶಿಷ್ಟ ಪಂಗಡಗಳಿಗೆ ಅನ್ಯಾಯವಾಗದಂತೆ ಮೀಸಲಾತಿ ವ್ಯವಸ್ಥೆಯ ಕಲ್ಪಿಸಲಾಗಿದೆ. ''ರಾಜಕೀಯ ರಕ್ಷಣೆ ಇಲ್ಲದೇ ಸಂವಿಧಾನದಲ್ಲಿ ಕೊಡಲಾಗಿರುವ ಹಕ್ಕುಗಳ ಸೌಲಭ್ಯ ತೊರೆಯಲಾರವು.'' ಸಂವಿಧಾನ ಮತ್ತು ಸರ್ಕಾರದ ಪ್ರಯತ್ನಗಳ ಫಲವಾಗಿ ಹಸಲರ ಹಾಡಿಗಳಲ್ಲಿ ಇಂದು ಸಾಕಷ್ಟು ಅವಕಾಶಗಳು ದೊರೆಯುತ್ತಿವೆ. ಈ ಸೌಲಭ್ಯಗಳ ಫಲವಾಗಿ ಹಸಲರಲ್ಲಿ ಸ್ವಲ್ಪ ಮಟ್ಟಿಗೆ ಆದರೂ ಪಂಚಾಯತ್ ರಾಜ್ಯ ವ್ಯವಸ್ಥೆಗಳಲ್ಲಿ ಸ್ಪರ್ಧಿಸುವಂತ ಅವಕಾಶ ಪಡೆದಿದ್ದಾರೆ. ಇತ್ತೀಚಿನ ದಿನಗಳವರೆಗೂ ಕೂಡ ಪಂಚಾಯತ್ ಸಂಸ್ಥೆಗಳಲ್ಲಿ ಮೇಲ್ಜಾತಿಯವರ ಮುಂದುವರಿದ ಸಮುದಾಯದವರ ಪ್ರಾಬಲ್ಯ ಇತರೆ ಸಮುದಾಯಗಳ ಮೇಲೆ ಏಕಸ್ವಾಮ್ಯ ಹೊಂದಿರುವದು ಕಂಡುಬರುತ್ತದೆ. ಸರ್ಕಾರವು ಮೀಸಲಾತಿ ನಿಯಮಗಳು ಜಾರಿಗೆ ತಂದಿದೆ ಎಂಬ ಕಾರಣಕ್ಕಾಗಿ ಹಸಲರ ಸಮುದಾಯವು ಗ್ರಾಮ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗಳ ಪ್ರವೇಶ ಪಡೆದಿದ್ದಾರೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ರಾಜಕೀಯದಿಂದಾಗುವ ಸಮಸ್ಯೆಗಳ ಕುರಿತು ಯುವಕರಿಂದಿಡಿದು ವೃದ್ಧರವರೆಗೆ ವಿವರ ನೀಡಿದರು. ೧೯೭೦ರಲ್ಲಿಯೇ ರಾಜಕೀಯವನ್ನು ಪ್ರವೇಶಿಸಿದ ಹಸಲರ ಮುಖಂಡರಾದ ಚೌಡಪ್ಪನವರ ಮಾತುಗಳಲ್ಲಿ ವ್ಯಕ್ತವಾದಂತೆ ರಾಜಕೀಯ ಎನ್ನುವುದು ನಮಗೆ ಒಗ್ಗುವಂತದಲ್ಲ. ಏನೊ ಸರ್ಕಾರ ಮೀಸಲಾತಿ ನೀಡಿದೇ ಎನ್ನುವ ಕಾರಣಕ್ಕಾಗಿ ರಾಜಕೀಯ ಪ್ರಾತಿನಿಧ್ಯ ಸಿಗುತ್ತೆ. ವಿನಃ ಯಾರ ಪ್ರಯತ್ನದ ಫಲವಾಗಿ ಪ್ರತಿನಿಧಿಸುತ್ತಿಲ್ಲ. ನಮ್ಮಗೆ ಸಿಗುವಂತ ರಾಜಕೀಯ ಸೌಲಭ್ಯಗಳನ್ನು ಸಿಗದಂತೆ ಮಾಡುವ ಹಿನ್ನೆಲೆಯಲ್ಲಿ ಮೇಲ್ವರ್ಗದ ಜನರು ಕಡ್ಡಿ ಆಡಿಸುವಂತ ಕೆಲಸ ಮಾಡುತ್ತಾರೆ. ಮೀಸಲಾತಿ ಸೌಲಭ್ಯ ಸಿಗದಂತೆ ತೊಡರಾಗುವುದೇ ಅವರ ಕಾರ್ಯವಾಗಿ ಬಿಟ್ಟಿದೆ. ಹಿಂದುಳಿದ ಹಸಲರು ಮೇಲೆ ಬಂದರೇ ನಮ್ಮ ಮಗ್ಗಲು ಮುಳ್ಳು ಆಗುತ್ತಾರೆ ಎಂಬ ಲೆಕ್ಕಾಚಾರ ಮೇಲ್ವರ್ಗದ ಬುದ್ಧಿಜೀವಿಗಳ ಬಾವನೆ, ರಾಜಕೀಯ ಪ್ರಾರಂಭಕ್ಕೆ ಹಂತದಲ್ಲಿಯೆ ಹಸಲರನ್ನು ನಿಯಂತ್ರಿಸಬೇಕು ಹಾಗೆ ನಿಯಂತ್ರಿಸಬೇಕಾಗದರೆ ನಮ್ಮ ಪ್ರಭಾವ ಬಳಸಿ ಅವರ ರಾಜಕೀಯ ಪರಿಜ್ಞಾನಕ್ಕೆ ಕಡಿವಾಣ ಹಾಕಬೇಕು.

ಅವರ ರಾಜಕೀಯವನ್ನು ಕೊನೆಗಾಣಿಸಬೇಕು ಎನ್ನುವ ಮನೋಭಿಲಾಷೆ ಹೊಂದಿರುವ ಜನರೇ ಜಾಸ್ತಿ ನಮಗೆ ಸಿಗುವ ಅಧಿಕಾರವನ್ನ ಮೊಟಕುಗೊಳಿಸುವಲ್ಲಿ ಮೇಲ್ವರ್ಗದ ಕೈಗಳು ಸದಾ ಕಾರ್ಯ ನಿರ್ವಹಿಸುತ್ತವೆ. ಈ ಭಾಗದ ವಿಷಯಕ್ಕೆ ಬಂದಾಗ ಸಮುದಾಯದಲ್ಲಿ ರಾಜಕೀಯ ಪ್ರಾತಿನಿಧ್ಯ ತುಂಬಾ ಕಡಿಮೆ ಮತ್ತು ಸಾಗರ ತಾಲೂಕಿನಲ್ಲಿ ಕಂಡುಬರುವಂತೆ ಮಹಿಳೆ ಮೀಸಲಾತಿಯೆ ಜಾಸ್ತಿಯಾಗಿದೆ. ಪುರುಷ ಮೀಸಲಾತಿ ತುಂಬಾ ಕಡಿಮೆ ಸ್ವತಃ ಚೌಡಪ್ಪನವರು ಕಳೆದ ತಾಲೂಕು ಪಂಚಾಯತ್ ತಲವಾಟ್ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತಿರುವುದನ್ನು ನೆನಪಿಸಿಕೊಂಡರು. ತಮ್ಮ ಸೋಲಿಗೆ ಹಣ ಬಲ, ತೋಳ್ ಬಲ ಕಾರಣವಾಗಿತ್ತು ಅದರ ಜೊತೆಯಲ್ಲಿ ರಾಜಕೀಯ, ಅಧಿಕಾರ, ಅಂತಸ್ತುಗಳನ್ನು ಬಳಸಿದ ಶ್ರೀಮಂತ ವರ್ಗ ಸಮುದಾಯದವರನ್ನೆ ಎತ್ತಿ ಕಟ್ಟುವ ಮೂಲಕ ನಮ್ಮಲ್ಲಿ ಓಟ್ ಬ್ಯಾಂಕ್‌ನ್ನು ಛಿದ್ರ ಮಾಡುವಂತ ಕೆಲಸ ಮಾಡಿದರು. ಇಲ್ಲಿ ಹಸಲರು ಹಸಲರ ನಡುವೇ ಸ್ಪರ್ಧೆ ಏರ್ಪಡಿಸುವ ಮೂಲಕ ಶ್ರೀಮಂತ ಬಲಿತ ಜನ ನಮ್ಮನ್ನು ವ್ಯವಸ್ಥಿತವಾಗಿ ತುಳಿಯುತ್ತಾರೆ. ಎನ್ನುವ ನೋವು ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು.

ಹಸಲರಲ್ಲಿ ಪ್ರಸ್ತುತ ರಾಜಕೀಯ ಮೀಸಲಾತಿ ಇದೆ ಎನ್ನುವ ಕಾರಣಕ್ಕೆ ಆಶ್ಚರ್ಯವೆಂಬಂತೆ ಸ್ತ್ರೀಯರು ಸಹ ಭಾಗವಹಿಸುವಂತಾಗಿದ್ದಾರೇ, ಒಂದು ವೇಳೆ ರಾಜಕೀಯ ಮೀಸಲಾತಿ ಇಲ್ಲದೆ ಹೋಗಿದ್ದಾರೇ ಮೇಲ್ಜಾತಿಯವರು ನಮ್ಮ ಸಮುದಾಯಗಳನ್ನ ಬದುಕಲು ಬಿಡುತ್ತಿರಲಿಲ್ಲ. ಎಲ್ಲ ಹಕ್ಕುಗಳಿಂದ ನಮ್ಮನ್ನು ವಂಚಿತರನ್ನಾಗಿ ಮಾಡಿ ಗುಲಾಮ ಬದುಕಿಗೆ ನಮ್ಮನ್ನ ದೂಡುತ್ತಿದ್ದರು. ಎನ್ನುವ ಅಳಲು ಪ್ರಸ್ತುತ ಮರತೂರು ಗ್ರಾಮ ಪಂಚಾಯತ್ ಸದಸ್ಯೆಯಾದ ಇಂದಿರಮ್ಮ ಹೊಸಗದ್ದೆಯವರದ್ದಾಗಿತ್ತು. ರಾಜಕೀಯಕ್ಕೆ ಅಗತ್ಯವಾದಂತೆ ಶಿಕ್ಷಣ ಪಡೆದಿದ್ದೇನೆ. ರಾಜಕೀಯ ಅನುಭವ ನನಗಾಗಿದೆ, ನನ್ನ ವ್ಯಾಪ್ತಿಯೊಳಗೆ ಬರುವ ಕೆಲಸಗಳನ್ನ ಮತ್ತು ಸೌಲಭ್ಯಗಳನ್ನ ನಮ್ಮ ಸಮುದಾಯಕ್ಕೆ ತಲುಪಿಸುವ ಪ್ರಾಮಾಣಿಕ ಪ್ರಯತ್ನಮಾಡುತ್ತೇನೆ ಎಂದೇಳುವ ಮೂಲಕ ರಾಜಕೀಯ ಪ್ರಭುದ್ಧತೆಯನ್ನು ಮೆರೆದರು.

ಹಸಲರ ಕಾಲೋನಿಗಳಲ್ಲಿ ರಾಜಕೀಯ ಪ್ರಗತಿ ಸಾಕಷ್ಟು ಕಂಡುಬರುತ್ತದೆ. ಹಿರೇಮನೆಯ ಲಕ್ಷ್ಮಮ್ಮ ಕಳೆದ ಸಾಲಿನ ಗ್ರಾಮ ಪಂಚಾಯತಿ ಸದಸ್ಯರಾಗಿದ್ದರು. ಗೀತಮ್ಮ ಗ್ರಾಮ ಪಂಚಾಯತಿ ಸದಸ್ಯೆ, ಮಾಲತಿ ಗ್ರಾಮ ಪಂಚಾಯತಿ ಸದಸ್ಯೆ, ಇವರು ಸದಸ್ಯೆ ಮತ್ತು ಅಧ್ಯಕ್ಷರಾಗಿ ಕೂಡ ಕಾರ್ಯನಿರ್ವಹಿಸಿದ್ದಾರೆ, ಲಕ್ಷ್ಮಮ್ಮನವರ ರಾಜಕೀಯ ನಂಟು ಇವತ್ತಿಗೂ ಮುಂದುವರೆದಿದೆ. ಕಳೆದ ಸಾಲಿನಲ್ಲಿ ನಡೆದ ತಾಲೂಕು ಪಂಚಾಯತ್‌ನಲ್ಲಿ ಬಿ.ಜೆ.ಪಿ.ಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಇವರನ್ನ ಪರಾಭವಗೊಳಿಸಿ ಕಾಂಗ್ರೆಸ್ಸಿನವರಾದ ಹಸಲರ ಮಹಿಳೆಯಾದ ಮತ್ತು ಹೀರೆಮನೆಯವರಾದ ಗೀತಮ್ಮ ಅವರು ಜಯಗಳಿಸುವ ಮೂಲಕ ಲಕ್ಷ್ಮಮ್ಮನವರನ್ನು ಹಿಂದಿಕ್ಕಿದರು. ಲಕ್ಷ್ಮಮ್ಮ ಈಗ ಬಿ.ಜೆ.ಪಿ. ಭೂತ್ ಕಮಿಟಿ ಸದಸ್ಯರು ಕೂಡ ಆಗಿದ್ದಾರೆ. ಮಾಲತಿ ಎನ್ನುವವರು ೧೯೯೪ರಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದರು, ಗಣಪಿ, ರಾಮಣ್ಣ ಮೂಲತ ಕುಡುಗುಂಜಿ ಗ್ರಾಮದ ಮಹಿಳೆ ಈಗ ಕಾರ್ಗಲನಲ್ಲಿ ಕೌನ್ಸಲರ್ ಆಗಿದ್ದಾಳೆ. ಇವರು

ಪ್ರೊ. ಹಿ.ಚಿ. ಬೋರಲಿಂಗಯ್ಯನವರ ''ಗಿರಿಜನ ನಾಡಿಗೆ ಪ್ರಯಾಣ''ದ ಕೃತಿಯಲ್ಲಿ ಕುಡುಗುಂಜಿಗೆ ಪ್ರಯಾಣಕ್ಕೆ ಸಹಾಯಮಾಡಿದ ರಾಮಣ್ಣನ ಹೆಂಡತಿಯಾಗಿದ್ದಾಳೆ. ಗಂಗಮ್ಮ ಎನ್ನುವ ಮಹಿಳೆಯೂ ಕೂಡ ಸಾಗರ ನಗರ ಸಭೆಯ ಕೌನ್ಸಲರ್ ಆಗಿದ್ದಾರೆ. ಇವರು ಮೂಲತಃ ಹೀರೆಮನೆಯವರು. ಮಹಿಳೆಯರಿಗೆ ಹೆಚ್ಚಿನ ಮೀಸಲಾತಿ ಸಿಕ್ಕಿತು ಎನ್ನುವ ಕಾರಣಕ್ಕೆ ಅವರೇ ಹೆಚ್ಚಿನ ಪ್ರಮಾಣದಲ್ಲಿ ರಾಜಕೀಯದಲ್ಲಿ ಗುರುತಿಸಿಕೊಂಡರು. ಅದರ ಜೊತೆಯಲ್ಲಿಯೆ ಪುರುಷರು ಸಹ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದಾರೆ. ಚೌಡಪ್ಪ, ಹೊಸಗದ್ದೆ ರಾಮಣ್ಣ ಕುಡಗುಂಜಿ ಇವರು ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದರು. ಈಗ ರಾಜಕೀಯದಲ್ಲಿ ಸ್ತ್ರೀ ಪುರುಷರೆಂಬ ಬೇದವಿಲ್ಲದೇ ಸಮಾನವಾಗಿ ಗುರುತಿಸಿಕೊಳ್ಳುವ ಮೂಲಕ ರಾಜಕೀಯವಾಗಿ ಪರಿವರ್ತನೆಯಾಗಿದ್ದಾರೆ.

ರಾಜಕೀಯವಾಗಿ ಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ಸಮುದಾಯವು ಅಭಿವೃದ್ಧಿ ಮತ್ತು ರಾಜಕೀಯ ಪ್ರಜ್ಞೆ ಬೆಳೆಯಲು ಸರಕಾರ ನಿರ್ಮಿತ ಸಂವಿಧಾನದ ಪಾತ್ರ ಮಹತ್ತರವಾದದ್ದು. ಒಂದು ವೇಳೆ ಸಂವಿಧಾನವೆನ್ನವುದು ಇಲ್ಲದೇ ಹೋದಲ್ಲಿ ಸಮುದಾಯಗಳು ಇವತ್ತಿಗೂ ಅನಾಗರೀಕವಾಗಿ ಬದುಕಲೇ ಬೇಕಾಗಿತ್ತು. ಸಂವಿಧಾನವು ಅಥವಾ ರಾಜಕೀಯ ವ್ಯವಸ್ಥೆ ಇವರನ್ನು ಸಂಪೂರ್ಣವಾಗಿ ಬದಲಾಯಿಸಿದೆ ಎಂಬರ್ಥವಲ್ಲ ರಾಜಕೀಯದಲ್ಲಿ ಗುರುತಿಸಿಕೊಂಡ ಚೌಡಪ್ಪ ರಾಮಣ್ಣ ಲಕ್ಷ್ಮಮ್ಮನಂತ ಹಸಲರ ರಾಜಕಾರಣಿಗಳಾದರು ಮೇಲ್ವರ್ಗದ ನಾಯಕರು ತಮ್ಮ ರಾಜಕೀಯ ಪ್ರಭಾವ ಬಳಸಿ, ಇವರನ್ನು ಮೂಲಗುಂಪು ಮಾಡುವಂತ ಪ್ರಯತ್ನಮಾಡಿತು. ಸ್ವತಃ ಇವರು ಬೆಳೆಯದೇ ಕಾಲೋನಿಯನ್ನ ರೂಪಿಸುವಲ್ಲಿ ಸಹ ವಿಫಲರಾಗಿದ್ದರು. ಇವರಿಗೆ ಮೀಸಲಾತಿ ದೊರೆತಿದೆ ಎನ್ನುವ ಕಾರಣಕ್ಕೆ ರಾಜಕೀಯ ಪ್ರವೇಶಿಸಿದರೇ ವಿನಃ ತಮ್ಮ ಆಶಯಗಳನ್ನ ಈಡೇರಿಸಿಕೊಳ್ಳುವಲ್ಲಿ ಸಫಲರಾಗಲೇ ಇಲ್ಲ. ರಾಜಕೀಯವಾಗಿ ಗುರುತಿಸಿಕೊಳ್ಳಲು ಪ್ರಮುಖವಾಗಿ ವಿದ್ಯಾಭ್ಯಾಸ ಹಾಗೂ ಮತದಾನದ ಹಕ್ಕು ಹಸಲರಿಗೆ ಇಂದು ಲಭ್ಯವಾಗುತ್ತಿರುವುದರಿಂದ ರಾಜಕೀಯ ಕ್ಷೇತ್ರದಲ್ಲಿ ಅವರು ಭಾಗವಹಿಸಲು ಸಾಧ್ಯವಾಗಿದೆ. ಆದರೂ ಸರ್ಕಾರದ ಕೆಲವು ನಿಲುವುಗಳನ್ನು ಮೇಲ್ವರ್ಗ ಜನರಪರ ತಾಳುತ್ತದೆ. ಇಂತಹ ಸಂದರ್ಭದಲ್ಲಿ ರಾಜಕೀಯ ಎನ್ನುವುದು ಒಂದು ಸವಾಲೇ ಆಗಿರುತ್ತದೇ ವಿನಃ ಅವರನ್ನ ಬದಲಾಯಿಸುವ ಕಡೆ ಸರ್ಕಾರಗಳು ಗಮನ ಹರಿಸದೇ ನಿರ್ಲಕ್ಷಿಸಲಾಗಿದೆ. ಇವತ್ತು ಸೌಲಭ್ಯಗಳನ್ನು ತಮ್ಮ ಹೋರಾಟದಿಂದ ಗಳಿಸುವ ಪ್ರಯತ್ನಗಳು ಆಗುತ್ತಿವೆ. ಆದರೂ ಅವುಗಳು ಆಧುನಿಕ ಸಂದರ್ಭದಲ್ಲಿ ಎಷ್ಟು ಯಶಸ್ವಿಯಾಗಿವೇ ಎಂಬುದು ಚರ್ಚಿಸಲೇಬೇಕಾದ ವಿಷಯವಾಗಿದೆ.

೩.೫. ಧಾರ್ಮಿಕತೆಯ ಬದಲಾವಣೆ

ಧರ್ಮವು ಪ್ರಾಥಮಿಕವಾಗಿ ದೇವಾಂಶದ ಬಗೆಗಿನ ಒಂದು ನಂಬಿಕೆ ಧರ್ಮದ ಉಗಮವನ್ನು ಕುರಿತು ವಿವಿಧ ಬಗೆಯ ವಿವರಗಳೂ ಕಾಣಸಿಗುತ್ತವೆ. ಒಂದು ಮಹತ್ವದ ಸೈದ್ಧಾಂತಿಕ ದೃಷ್ಟಿಕೋನವೆಂದರೇ

[illegible]

ನಿಸರ್ಗವನ್ನು ಬಹುತೇಕ ವಿಷಯ ವಿಚಾರಗಳಲ್ಲಿ ನಂಬಿಕೊಂಡಿದ್ದ ಜನತೆಗೆ ಆ ನಿಸರ್ಗದ ವೈಚಿತ್ರಗಳನ್ನು ಅರ್ಥಮಾಡಿಕೊಳ್ಳಲು ಒಂದು ವ್ಯವಸ್ಥಿತ ಹಾಗೂ ತರ್ಕಬದ್ಧ ವಿವರಣೆ ಅಗತ್ಯವಾಗಿದ್ದರಿಂದ ಧರ್ಮವೆಂಬ ಪರಿಕಲ್ಪನೆ ಉದಯವಾಯಿತು. ಇನ್ನೊಂದು ಸೈದ್ಧಾಂತಿಕ ದೃಷ್ಟಿಕೋನವು ಧರ್ಮವನ್ನು ಸಾಮಾಜಿಕ ಐಕ್ಯತೆಗೆ ಸಾಧನವಾಗಿ ಬಳಸಲ್ಪಡುವ ಒಂದು ಸಾಮಾಜಿಕ ಸಂಸ್ಥೆ ಎಂದು ವಿವರಿಸುತ್ತಿದೆ. ಸಮಾಜದಲ್ಲಿ ಅಪರಾಧಗಳನ್ನ, ಅನ್ಯಾಯಗಳನ್ನು ವಂಚನೆಗಳನ್ನು ಮೋಸಗಳನ್ನು, ತಡೆಗಟ್ಟಿ, ಸದಸ್ಯರೆಲ್ಲರೂ ಸಾಮಾಜಿಕ ಮೌಲ್ಯ ನಿಯಮಗಳಿಗೆ ಬದ್ಧರಾಗಿದ್ದು ಸಾಮಾಜಿಕರಣ ಪ್ರಕ್ರಿಯೆಯು ಸುಗಮವಾಗಿ ಸಾಗುವಂತೆ ನೋಡಿಕೊಳ್ಳುವ ಕಾರ್ಯಕ್ಕೆಂದು 'ಧರ್ಮವು' ಹುಟ್ಟಿತೆಂದು ಕೆಲವು ಸಮಾಜವಿಜ್ಞಾನಿಗಳು ತರ್ಕಿಸಿದ್ದಾರೆ. ಒಟ್ಟಿನಲ್ಲಿ ಧರ್ಮವು ಸಾಮಾಜಿಕ ಸ್ಥಿರತೆ ಮತ್ತು ಐಕ್ಯತೆಗಳನ್ನು ಕಾಪಾಡುವಲ್ಲಿ, ಹಾಗೂ ಸಾಮಾಜಿಕ ಬದಲಾವಣೆಯನ್ನು ನಿಯಂತ್ರಿಸುವಲ್ಲಿ ನಿರ್ದೇಶಿಸುವಲ್ಲಿ ಮಹತ್ವದ ಪಾತ್ರ ವಹಿಸುವದೆಂಬ ಅಂಶವನ್ನು ಇಲ್ಲಿ ಗಮನಿಸುವ ಅಗತ್ಯತೆ ಇದೆ.

ಧರ್ಮವು ಮಾನವನ ಅಂತರಂಗಿಕ ಭಾವನೆಗಳ ಅಭಿವ್ಯಕ್ತಿಗೆ ಒಂದು ಹೆದ್ದಾರಿ ಅವನನ್ನು ಸನ್ಮಾರ್ಗದಲ್ಲಿ ಕರೆಯೊಯ್ಯುವ ಓಯಾಸಿಸ್ಸು ಜಗತ್ತಿನ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಮಾನವನಿಗೆ ತನ್ನ ದಿನ ನಿತ್ಯದ ಜೀವನ ನಿರ್ವಹಣೆಯಲ್ಲಿ ವಿನಾಶದ ಭೀತಿ ಬೆಂಬತ್ತಿ ಅವನನ್ನ ಕಾಡಿಸುತ್ತಲೇ ಇರುತ್ತದೆ. ಈ ಭಯದಿಂದ ಪಾರಾಗಿ, ತನ್ನ ಮಾನಸಿಕ ಸಮತೋಲನವನ್ನುಳಿಸಿಕೊಳ್ಳಲು ಮಾನವನು ತನಗಿಂತ ಹೆಚ್ಚು ಶಕ್ತ ಹಾಗೂ ಶ್ರೇಷ್ಟ ಶಕ್ತಿಗಳನ್ನು ಪೂಜಿಸಿ ಅವುಗಳ ಮೊರೆಹೊಕ್ಕಿದ್ದಾನೆ. ಫ್ರೆಂಚ್ ಸಮಾಜಶಾಸ್ತ್ರಜ್ಞ ಡರ್ಕ್‌ಹ್ಯಾಮ್ ವಿಚಾರಗಳು ಧರ್ಮವೆಂಬ ಪರಿಕಲ್ಪನೆಯ ವಿಶ್ಲೇಷಣೆಯಲ್ಲಿ ಮಹತ್ವವಾಗಿದೆ. ಮನುಷ್ಯನ ಜೀವನದಲ್ಲಿ ಸಾಮಾನ್ಯ ಮತ್ತು ಅಸಾಮಾನ್ಯ ಎಂಬ ಪರಿಭೇಧಗಳು ಮಹತ್ವವಾಗಿದ್ದು 'ಸಾಮಾನ್ಯ' ಸಾಮಾಜಿಕ ಸಂಗತಿಗಳನ್ನು ದಿನಿತ್ಯದ ಜೀವನದಲ್ಲೂ ಅಸಾಮಾನ್ಯವಾದ ಪವಿತ್ರ ಸಂಗತಿಗಳನ್ನು ನಿತ್ಯ ಜೀವನಕ್ಕೆ ಹೊರತಾದ ಸಾಮಾಜಿಕ ಸಂಗತಿಗಳನ್ನು ವಿಶ್ಲೇಷಿಸಲು ಬಳಸುವ ಪರಿಕಲ್ಪನೆ ಆಗಿದೆ. ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಮಾನವ ದೇವರು ಮತ್ತು ಧರ್ಮಗಳನ್ನು ಸೃಷ್ಟಿಸಿಕೊಂಡ ನಂತರ ದೈವಿ ಶಕ್ತಿಯ ಮೇಲೆ ನಂಬಿಕೆ ಗಟ್ಟಿಗೊಳ್ಳುತ್ತದೆ. ಎನ್ನುವ ವಾದ ಡರ್ಕ್‌ಹ್ಯಾಮ್‌ನದಾಗಿತ್ತು. ನಿಸರ್ಗದ ವಿರಾಟ ಶಕ್ತಿಗಳನ್ನು ದೇವತೆಗಳೆಂದು ಕರೆದು ಪೂಜಿಸಿ ತನ್ನ ರಕ್ಷಕರನ್ನಾಗಿಸಿಕೊಳ್ಳುವಲ್ಲಿ ಮಾನವನು ಪ್ರಯತ್ನಶೀಲನಾದ, ಈ ಹಿನ್ನೆಲೆಯಲ್ಲಿ ದೇವರು ಪೂಜೆ ದೇವಮಂದಿರ ಮುಂತಾದ ಕಲ್ಪನೆಗಳ ಹುಟ್ಟಿಗೆ ಕಾರಣವಾಯಿತು.

ಮನುಷ್ಯನು ತನ್ನ ಕೆಟ್ಟ ಗುಣಗಳ ನಿರ್ಮೂಲನೆಯ ಪ್ರಯತ್ನದಲ್ಲಿ ಬೇಕಾದ ಕ್ರಿಯೆ ಆದರ್ಶಗಳ ನಿಯಮ ಮೌಲ್ಯಗಳ ವ್ಯವಸ್ಥಿತ ತಿಳುವಳಿಕೆಗಾಗಿ ಧರ್ಮ ಗ್ರಂಥಗಳನ್ನು ಕಟ್ಟಿದನೆಂಬ ವಾದ

ಬಹುಜನರದ್ದಾಗಿತ್ತು, ಧರ್ಮದ ರಕ್ಷಾಕವಚ ಮಾನವನಿಗೆ ಅನಿವಾರ್ಯ, ಎಂಬುವುದು ಧಾರ್ಮಿಕ ವಿದ್ವಾಂಸರ ವಾದವಾಗಿತ್ತು. 'ಧರ್ಮೋ ರಕ್ಷತಿ ರಕ್ಷಿತಾಃ!' ಭಾರತೀಯ ಪಾರಂಪರಿಕ ಸಂಸ್ಕೃತಿಯಲ್ಲಿ ಹೇಳಲಾಗಿದೆ. ಯಾರು ಧರ್ಮವನ್ನು ಸಂಕ್ಷೇಪಿಸುತ್ತಾರೋ, ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ. ಅಂದರೆ ಅವನಿಗೆ ಯಾವುದೆ ತೊಂದರೆಗಳಾಗದಂತೆ ತಡೆಯುತ್ತದೆ ಎನ್ನುವ ನಂಬಿಕೆ ಭಾರತೀಯ ಸಮಾಜದಲ್ಲಿ ಕಂಡುಬರುತ್ತದೆ. ಇನ್ನೊಂದು ಕಡೆ ಧಾರಣಾತ್ ಧರ್ಮಮ್ ಎಂದು ಹೇಳಲಾಗಿದೆ. ಧರ್ಮವು ಮನುಷ್ಯನನ್ನು ಧರಿಸುತ್ತದೆ. ಮಾನವನನ್ನು ಅಪೂರ್ಣತೆಯಿಂದ, ಸೀಮಿತ ಭಾವನೆಗಳಿಂದ ಪೀಡನೆಯಿಂದ ಮುಕ್ತವಾಗಿಸುವ ಮೂಲಕ ರಕ್ಷಿಸುತ್ತದೆ. 'ಯತಃ ಅಭ್ಯುದಯ ನಿ:ಶ್ರೆಯಸ್ ಸಿದ್ಧಿಃ ಸ ಧರ್ಮ' ಎನ್ನುವವರು ಇದ್ದಾರೆ. ಯಾವುದರಿಂದ ಶ್ರೇಯಸ್ಸು ಸಿಗುವುದೆ ಅದೇ ಧರ್ಮ ಎನ್ನುವುದು ಕೆಲವರ ವಾದ, ಧರ್ಮವು ಜೀವನಕ್ಕೆ ವಿಮುಖವಾಗದೇ ಬದುಕಿನಲ್ಲಿ ಶ್ರದ್ದೆಯನ್ನು ಮೂಡಿಸುವಂತಾಗಬೇಕು ಮನುಷ್ಯನ ಜೀವನಕ್ಕೊಂದು ಬೆಲೆತೆರುವ ಹೋರಾಟಕ್ಕೊಂದು ಅರ್ಥಕೊಡುವ ಜೀವನವನ್ನು ವ್ಯವಸ್ಥೆಗೊಳಿಸಿ ಸಕಲ ಜೀವಿಗಳೂ ಸುವ್ಯವಸ್ಥೆಯಿಂದ ಬಾಳಲು ಅಣಿಗೊಳಿಸುವ ಶಕ್ತಿ ಧರ್ಮಕ್ಕಿದೆ ಅನ್ನುವ ನಂಬಿಕೆ ಬಹುಜನರದ್ದು ಅದಕ್ಕೆಂದೆ ಧರ್ಮವು ಇಂದಿಗೂ ಜೀವಂತವಾಗಿದೆ.[೧೪]

ಧರ್ಮದವು ಬುಡಕಟ್ಟುಗಳಲ್ಲಿ ಹೇಗೆ ಪ್ರವೇಶವಾಯಿತು ಮೊದಲಿಗೆ ಧರ್ಮ ಪದವು ಹೇಗೆ ಹುಟ್ಟಿಕೊಂಡಿತು. ಅದರ ಅರ್ಥವ್ಯಾಪ್ತಿ ಎಷ್ಟಿದೆ. ಸಾಮಾಜಿಕವಾಗಿ ಅದು ಹೇಗೆ ಬದಲಾಗುತ್ತ ಬಂದಿದೆ ಎಂಬುದರ ವಿಶ್ಲೇಷಣೆ ಅಗತ್ಯತೆ ಇದೆ. ಡೊಮನಿಕ್‌ರವರು ಜಾಗತೀಕರಣ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು ಎಂಬ ಗ್ರಂಥದಲ್ಲಿ ಜಾಗತೀಕರಣ ಮತ್ತು ಧರ್ಮ ಎಂಬ ಲೇಖನದಲ್ಲಿ

''ದೇವರು ಶ್ರೀಮಂತರಿಗೆ ಸುಖಭೋಗ

ದೇವರು ಮಧ್ಯಮ ವರ್ಗದವರಿಗೆ ಒಂದು ಸರಕು

ದೇವರು ಬಡವರಿಗೆ ಒಂದು ಜೀವನೋಪಾಯ''[೧೫] ಎಂಬರ್ಥದಲ್ಲಿ ದೇವರನ್ನು ಸೃಷ್ಟಿಸಲಾಯಿತು ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಹೀಗೆ ಧರ್ಮದ ಮೂಲಕ ಸಮಗ್ರತೆಯನ್ನು ಕಂಡುಕೊಂಡಿದ್ದ ಮಾನವ ಏಕ ದೈವ ಕಲ್ಪನೆಯನ್ನು ದುಡ್ಡು ಆಹುತಿ ತೆಗೆದುಕೊಂಡಿದೆ. ಏಕದೈವ ನಿಷ್ಠೆಯೆಂದರೆ ವೈದಿಕತೆಗೆ ನಿಷ್ಠೆಯಾಗಿದೆ. ದೇವರ ಮೂಲಕ ಜನಸಾಮನ್ಯರ ಭಾವನೆಗಳನ್ನು ಕೆದಕಿ ಅದರ ರೂಪವನ್ನು ಕ್ರಿಯಾಶೀಲತೆಯನ್ನು ವೈದಿಕ ಧರ್ಮ ನಿರಸಗೊಳಿಸಿದೆ. ಅಲ್ಲಿಯವರೆ ಸ್ವಚ್ಛಂಧ ಜೀವನ ನಡೆಸುತ್ತಿದ್ದ ಬುಡಕಟ್ಟುಗಳು ಆರ್ಯವೈದಿಕರು ಹುಟ್ಟು ಹಾಕಿದ ಧರ್ಮ ಎಂಬ ವಂಚನೆಯ ಪರಿಕಲ್ಪನೆ ಮತ್ತು ಪರಂಪರೆ ನಿರಾತಂಕವಾಗಿ ಸಮುದಾಯಗಳ ಮೇಲೆ ದಬ್ಬಾಳಿಕೆ ಹೇರಿದೆ. ಆ ಮೂಲಕ ತನ್ನ ಸುತ್ತಲಿನ ಜನಸಾಮಾನ್ಯರ ಬದುಕನ್ನು ಕಡೆಗಣ್ಣಿನಲ್ಲಿ ಕೂಡ

[illegible]

ನೋಡದೇ ನಿರ್ಲಕ್ಷಿಸಿದ ವೈದಿಕ ಧೋರಣೆ ಇತಿಹಾಸಕಾರದ ಮತ್ತು ಪಂಡಿತರು ಗಿರಿಜನರ ಬದುಕಿಗೆ ಕಣ್ಣು ತೆಗೆಯದೇ ಇಲ್ಲಿ ತಮ್ಮದೆ ಭೂಮಿಯಲ್ಲಿರುವ ಅರಣ್ಯ, ಕಣಿವೆ, ಕಂದರಗಳನ್ನು ವರ್ಣಿಸಿದ ಅವರು ಆ ಒಡಲಲ್ಲಿ ತಮ್ಮಂಥ ಜೀವಿಗಳಿದ್ದಾರೆ ಎಂಬ ಬಗ್ಗೆ ಸಂಪೂರ್ಣತತ್ವಪರರಾದರು.[೧೬] ಇಡಿ ವೈದಿಕ ಪರಂಪರೆಯ ಗಾಢ ಆಲಿಂಗನದಲ್ಲಿ ಬೆಳೆದ ಆಗಿನ ನಮ್ಮ 'ನಾಗರೀಕ' ಸಂತಾನ ಅಡವಿಯ ಬಗ್ಗೆ ಮತ್ತು ಯಾವ ಧೋರಣೆ ತಳೆದಿದೆ. ವೈದಿಕತನದಿಂದ ದೂರವಿದ್ದೇವೆ ಎಂದು ಹೇಳಿಕೊಳ್ಳುವ ನಮ್ಮ ಹೊಸ ಬುದ್ಧಿ ಜೀವಿ ವರ್ಗ ಯಾವ ದೃಷ್ಟಿಯಿಂದ ಈ ಜನವನ್ನು ಕಾಣತೊಡಗಿದೆ? ಎಂಬುವುದನ್ನ ತಿಳಿಯುವುದು ಜಾಗತೀಕರಣದಲ್ಲಿ ಈ ಸಂದರ್ಭದಲ್ಲಿ ಅಗತ್ಯವಾಗಿದೆ.[೧೭]

ಬುಡಕಟ್ಟುಗಳು ಮೊದಲು ವರ್ಣ ಮತ್ತು ಧರ್ಮದ ಲವಲೇಶವೂ ಗೊತ್ತಿಲ್ಲದ ಸಂಘಜೀವಿಗಳಾಗಿದ್ದರು. ಮತ್ತು ಭೌಗೋಳಿಕವಾಗಿ ಗುರುತಿಸಿಕೊಳ್ಳಲು ಸಂಕೇತಗಳನ್ನು ಇಟ್ಟುಕೊಂಡಿದ್ದರು. ಹಸಿವು ಮತ್ತು ಕಾಮ ಮಾತ್ರ ಅವರಲ್ಲಿ ದ್ವೇಷ ಹುಟ್ಟಿಸುತ್ತಿದ್ದವಾದರೂ ಅದು ತಾತ್ಕಾಲಿಕವಾಗಿರುತ್ತಿತ್ತು. ಯಾವಾಗ 'ಆರ್ಯರು' ಅನ್ನುವ ಬಿಳಿಯ ಜನ ಈ ಭೂ ಖಂಡದ 'ಮಾನವರ' ಕುಲಕ್ಕೆ ಕಾಲಿಟ್ಟರೂ, ಆಗ ಪ್ರಥಮ ಬಾರಿಗೆ ಈ ನೆಲ ಅವರ ವಸಾಹತುಶಾಹಿ ಬಿಗಿ ಮುಷ್ಟಿಗೆ ಸಿಲುಕಿಕೊಂಡಿತು. ಇವರ 'ಮಾನವ'ರಾಗಿದ್ದವರನ್ನು ಜನರನ್ನಾಗಿಸಿ ವರ್ಣೇತರರಾಗಿದ್ದವರನ್ನು ವರ್ಣಛಿದ್ರಿತರನ್ನಾಗಿ ಮಾಡಿದಲ್ಲದೆ. ಬಣ್ಣದ ಕಾರಣಕ್ಕಾಗಿ ಮತ್ತು ಅಕ್ಷರದ ಕಾರಣಕ್ಕಾಗಿ ಈ ನೆಲದವರನ್ನು ಅಸ್ಪೃಶ್ಯರನ್ನಾಗಿಸಿ ಬಿಟ್ಟರು, ಕ್ರಮೇಣ ನಿಸರ್ಗ ಹಿಂದೇ ಸರಿದು, ಆರ್ಯರು ಹೊತ್ತು ತಂದ ಮನುಷ್ಯರೂಪದ ಅತಿಮಾನುಷ್ಯ ದೇವರುಗಳು ನಿಸರ್ಗವನ್ನೆ ನಿಯಂತ್ರಿಸಲು ಹೊರಟುಬಿಟ್ಟವು,[೧೮] ಬುಡಕಟ್ಟುಗಳನ್ನು ದೇವರು ಎಂಬ ಅಮೂರ್ತ ಕಲ್ಪನೆಯನ್ನು ಹುಟ್ಟುಹಾಕುವ ಮೂಲಕ ಅವರಲ್ಲಿ ಭ್ರಾಮಕ ಕಲ್ಪನೆ, ಭೀತಿಯ ಮೊದಲಾದ ವಿಚಾರಗಳು ಬೆಳೆಯುವಂತೆ ನೋಡಿಕೊಳ್ಳಲಾಯಿತು. ಹೀಗೆ ಧರ್ಮ ಎನ್ನುವುದು ಬುಡಕಟ್ಟುಗಳಲ್ಲಿ ಪ್ರವೇಶ ಪಡೆಯಿತು.

ಧರ್ಮದ ಪ್ರವೇಶದೊಂದಿಗೆ ಅನೇಕ ಸ್ಥಿತ್ಯಂತರಕ್ಕೆ ಒಳಗಾದ ಬುಡಕಟ್ಟುಗಳು ಧಾರ್ಮಿಕವಾಗಿ ಕಾಣದ ಶಕ್ತಿಯು ಅಮೂರ್ತ ಕಲ್ಪನೆಯ ಮೊರೆ ಹೋದವು. ಸಾಮಾನ್ಯವಾಗಿ ಪರಿಸರ, ಪ್ರಾಣಿಗಳನ್ನು ದೈವಗಳೆಂದು ನಂಬಿ ಪೂಜಿಸುವವರ ನಡುವೆ ಮಾರಿಯಮ್ಮ, ಚೌಡಿ, ಎಲ್ಲಮ್ಮ, ಗುತ್ತೆಮ್ಮ, ಸಂಕಲಮ್ಮ ಹೋಗಿ ಅವರೇ ಸಂಸ್ಕೃತಿಕರಣಗೊಂಡು ನೂತನ ರೂಪತಳೆದು ಭವಾನಿ, ದುರ್ಗಾದೇವಿ, ಅನ್ನಪೂರ್ಣೇಶ್ವರಿ ಚೌಡೇಶ್ವರಿ ರೇಣುಕಮ್ಮನಾಗಿ ಹೊರಹೊಮ್ಮಿದರು. ಹೀಗೆ ಬುಡಕಟ್ಟುಗಳು ಧಾರ್ಮಿಕ ಸ್ಥಿತ್ಯಂತರಕ್ಕೆ ಒಳಗಾದವು.

*** ಹಸಲರಲ್ಲಿ ಧಾರ್ಮಿಕ ಬದಲಾವಣೆ**

ಹಸಲರು ಆರ್ಯರ ಪ್ರಭಾವಕ್ಕೆ ಒಳಗಾಗಿದ್ದು ಅವರ ಹಬ್ಬಗಳು ಆಚರಣೆಗಳು ಬಹಳಷ್ಟು ಬದಲಾಗಿವೆ. ಹೆಚ್ಚಾಗಿ ಸ್ತ್ರೀದೇವರನ್ನ ಪೂಜಿಸುವ ಹಸಲರು ತಮ್ಮಲ್ಲಿ ಹಲವಾರು ರೀತಿಯ ಬದಲಾವಣೆ ಮಾಡಿಕೊಂಡಿದ್ದಾರೆ.

ಇವರು ಚೌಡಿ ಗುತ್ತೆಮ್ಮ ಚಾಮುಂಡಿಯನ್ನು ಆರಾಧಿಸುತ್ತಾರೆ. ಬಹುತೇಕ ಹಬ್ಬಗಳು ಅವರ ಮನೆಯ ದೈವದ ಮೇಲೆಯ ಅವಲಂಬಿಸಿವೆ. ಹಸಲರು ಹೇಳುವ ಪ್ರಕಾರ ಅವರಿಗೆ ಇತ್ತೀಚಿನವರೆಗೂ ಹಿಂದೂ ದೇವಾಲಯಗಳ ಒಳಗೆ ಪ್ರವೇಶವಿರಲಿಲ್ಲ. ಹೋರಾಟ ಮಾಡುವ ಮೂಲಕ ಹಿಂದೂ ದೇವಾಲಯಗಳ ಪ್ರವೇಶಕ್ಕೆ ಅನುಮತಿ ದೊರಕಿದೆ. ವೈದಿಕೀಕರಣ ಮತ್ತು ಆರ್ಯರ ಪ್ರಭಾವ ಅವರ ಮೇಲಾಗಿರುವದು ಅವರ ಮೂಲಪುರುಷ ರಾಮ ರಾಮನ ವಂಶದವರೆಂದು ಕರೆದುಕೊಳ್ಳುವುದು ಸೂಚಿಸುತ್ತದೆ. ಯಾವುದೇ ಧರ್ಮದ ಪ್ರಭಾವಕ್ಕೆ ಒಳಗಾಗದೆ ಬುಡಕಟ್ಟು ಧರ್ಮವನ್ನು ಪಾಲಿಸುತ್ತಿದ್ದ ಬುಡಕಟ್ಟುಗಳು ಸಾಕಷ್ಟು ಮಟ್ಟಿಗೆ ಪ್ರಸ್ತುತ ಹಲವು ಧರ್ಮಗಳ ಪ್ರಭಾವಕ್ಕೆ ಒಳಗಾಗಿವೆ ಅಂತವುಗಳಲ್ಲಿ ಹಸಲ ಸಮುದಾಯವು ಕೂಡ ಒಂದಾಗಿದೆ. ಹಸಲರು ಇಂದು ಯಾವುದೇ ಒಂದು ವರ್ಗ ಹಿಂದೂ ಧರ್ಮವನ್ನು ಆಳುತ್ತದೆ ಎನ್ನುವ ಕಾರಣಕ್ಕೆ ಹಿಂದೂ ಧರ್ಮದ ಲೋಪ ಎಂದು ಹೇಳುವುದು ತಪ್ಪಾಗುತ್ತದೆ. ಹಿಂದೂ ಧರ್ಮ ಪವಿತ್ರ ಧರ್ಮ, ಆ ಧರ್ಮ ಪುರಾತನವಾದದ್ದು. ಆ ಧರ್ಮಕ್ಕೆ ಸರಿಸಮಾನವಾದ ಧರ್ಮ ಈ ಪ್ರಪಂಚದಲ್ಲಿಯೆ ಇಲ್ಲ. ಆ ಕಾರಣಕ್ಕಾಗಿ ನಾವು ಹಿಂದೂ ಧರ್ಮದ ಆಧ್ಯಾತ್ಮಿಕತೆ ತಳಹದಿಯ ಮೇಲೆ ನಮ್ಮ ಜೀವನವನ್ನು ರೂಪಿಸಿಕೊಂಡಿದ್ದೇವೆ. ಆ ಧರ್ಮದಲ್ಲಿ ಹುಟ್ಟಿದ ನಾವು ಆ ಧರ್ಮದಲ್ಲಿಯೇ ಮೋಕ್ಷ ಸಾಧಿಸುವುದು ನಮ್ಮ ಕರ್ತವ್ಯ ಹಿಂದೂ ಧರ್ಮ ಯಾರಪ್ಪನ ಆಸ್ತಿಯಲ್ಲ ಅದು ಎಲ್ಲರು ಪರಿಪಾಲಿಸುವ ಮುಕ್ತಿ ಮಾರ್ಗ, ಸನಾತನ ವೈದಿಕ, ಧರ್ಮ ಎಂದು ಕರೆಸಿಕೊಳ್ಳುವ ಧರ್ಮ ಎಂದಿಗೂ ಒಂದು ವರ್ಗದ ಸ್ವತ್ತಾಗಲಾರದು ಒಂದು ವರ್ಗದ ಆಸ್ತಿಯಾಗಲಿಕ್ಕೆ ಸಾಧ್ಯವೆ ಇಲ್ಲ. ಹುಟ್ಟಿನಿಂದ ಹಿಂದೂವಾದ ನಾವು ಸಾಯುವಾಗಲು ಹಿಂದೂಗಳಾಗಿಯೆ ಸಾಯುತ್ತೇವೆ ಎನ್ನುವ ಮಾತು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸುರೇಶ ಹೀರೆಮನೆ, ಗುರಮೂರ್ತಿ ಹಲವಾರು ಯುವಕರ ಅಭಿಪ್ರಾಯವಾಗಿತ್ತು. ಇದು ಅವರಲ್ಲಿನ ದೈವನಿಷ್ಠೆಯನ್ನು ಧರ್ಮ ನಿಷ್ಠೆಯನ್ನು ಸೂಚಿಸುವಂತದಾಗಿತ್ತು.

ಹಸಲರ ಬುಡಕಟ್ಟು ಪ್ರಸ್ತುತ ಆಚರಣೆಗಳನ್ನ ನೆರವೇರಿಸುವಾಗ ಬದಲಾದ ಸಾಮಾಜಿಕ ಪರಿಸರಕ್ಕೆ ತಕ್ಕಂತೆ ಮಾಡುತ್ತವೆ. ಅವರಲ್ಲಿನ ಅನೇಕ ಜನಪದ ಆಚರಣೆಗಳು ಕಾಲಕ್ಕೆ ಅನುಗುಣವಾಗಿ ಬದಲಾಗಿವೆ. ಅವರು ಮಾಡುವ ಆಚರಣೆಗಳು ಇಂದು ಸಾಂಕೇತಿಕವಾಗಿ ಉಳಿದಿರುವದು ಕಂಡುಬರುತ್ತದೆ. ಆಧುನಿಕತೆಯ ಪರಿಸರ ಅವರಲ್ಲಿನ ಸಾಂಪ್ರದಾಯಿಕ ನಂಬಿಕೆಗಳನ್ನು ಉಳಿಸಿಕೊಂಡ ನಾವಿನ್ಯತೆಯನ್ನು ಪಡೆದುಕೊಡಿವೆ. ಅವರ ನಂಬಿಕೆ ಘಾಸಿಯಾಗದಂತೆ ಪಾರಂಪರಿಕ ಆಚರಣೆಗಳು, ಸಂಪ್ರದಾಯಗಳ, ಪದ್ಧತಿಗಳು, ಹಬ್ಬ-ಹರಿದಿನಗಳು ಹಳೇ ಕುಲದೈವಗಳಾದ ಚೌಡಿ, ಗುತ್ತೆಮ್ಮ ಮಾಸ್ತಿ ಇವರ ಮೇಲೆ ನಂಬಿಕೆ ಉಳಿಯುವದರ ಜೊತೆಗೆ ರಾಘುವೇಂದ್ರಸ್ವಾಮಿ ಅಯಪ್ಪಸ್ವಾಮಿ, ಧರ್ಮಸ್ಥಳ ಮಂಜುನಾಥ, ತಿರುಪತಿ ತಿಮ್ಮಪ್ಪ, ಅನ್ನಪೂರ್ಣೇಶ್ವರಿ ನಂತಹ ಆಧುನಿಕ ದೇವರುಗಳು ಹಸಲರ ಮನೆ ಮನೆ ಹೊಕ್ಕಿವೆ. ಹಸಲರು ಇಂದು ತಿರುಪತಿ ತಿಮ್ಮಪನಿಗೆ ಹರಕೆ ಹೊರವ ಮೂಲಕ, ವ್ರತಗಳನ್ನು ಮಾಡುವ ಮೂಲಕ ಕೆಲವು ಕುಟುಂಬಗಳು ತಿರುಪತಿ ತಿಮ್ಮಪ್ಪನನ್ನು

[illegible]

[illegible]

ಮನೆದೇವರಾಗಿ ಮಾರ್ಪಡಿಸಿಕೊಂಡಿವೆ. ತಿರುಪತಿ ಇಂದು ಅನೇಕ ಹಸಲರ ಕುಟುಂಬಗಳಿಗೆ ಪವಿತ್ರ ಕ್ಷೇತ್ರವೇ ಆಗಿಹೋಗಿದೆ. ಹಸಲರು ಇಂದು ಪ್ರತಿ ಆಚರಣೆಯ ಸಂದರ್ಭದಲ್ಲಿ ದೇವರುಗಳಿಗೆ ಮುಡುಪನ್ನ ತೆಗೆದಿಡುತ್ತಾರೆ ಸಮಾರಂಭಗಳಲ್ಲಿ ಕುಲದೇವರಿಗೆ ಮತ್ತು ಮಂಜುನಾಥ ತಿರುಪತಿಗೆ ನಡೆದುಕೊಳ್ಳುತ್ತಾರೆ. ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಅಂಶಗಳೆಂದರೇ ಹಸಲರು ಇಂದು ನಗರಗಳ ಮಾದರಿಗಳಲ್ಲಿ ಮತ್ತು ಮೇಲ್ವರ್ಗದ ಜನರು ಆಚರಿಸುವ ಆಚರಣೆಗಳನ್ನ ಅನುಕರಿಸುವ ಮೂಲಕ ಗಣೇಶ ಚತುರ್ಥಿ, ಷಷ್ಟಿಪೂರ್ತಿ, ಏಕಾದಶಮಿ, ಲಕ್ಷ್ಮಿ ವ್ರತಗಳನ್ನು ಮಾಡುತ್ತಾರೆ. ಪ್ರತಿ ಸಮಾರಂಭಕ್ಕೂ ಅಲ್ಲಿನ ಪ್ರಮುಖ ಹವ್ಯಕ ಬ್ರಾಹ್ಮಣ ಪುರೋಹಿತನ ನೇತೃತ್ವದಲ್ಲಿಯೆ ಮಾಡುತ್ತಾರೆ. ಬ್ರಾಹ್ಮಣರ ಮನೆಯ ಕೆಲಸ ಮಾಡುತ್ತ ಅವರ ಪ್ರಭಾವಕ್ಕೆ ಒಳಗಾಗುವ ಮೂಲಕ ಪ್ರತಿ ಆಚರಣೆಗಳಲ್ಲಿಯೂ ಬ್ರಾಹ್ಮಣರ ಮಾದರಿ ಪೂಜೆ ಸಾಮಾನ್ಯವಾಗಿರುತ್ತದೆ. ದೀಪಾವಳಿ, ಯುಗಾದಿ, ಗಣೇಶ ಚತುರ್ಥಿ ದಸರಾ ಮುತಾದ ಹಿಂದೂ ಹಬ್ಬಗಳನ್ನು ಚಾಚು ತಪ್ಪದೇ ಸಿಹಿ ತಿಂಡಿಯನ್ನು ತಯಾರಿಸಿ ದೇವರಿಗೆ ಅರ್ಪಿಸುವ ಮೂಲಕ ಆಚರಣೆ ಮಾಡುತ್ತಾರೆ. ದೀಪಾವಳಿ ಸಂದರ್ಭದಲ್ಲಿನ ಅಂಟಿಕೆ ಪಿಂಟಿಕೆ ಹಬ್ಬವನ್ನು ಈಗಲೂ ಮಾಡುತ್ತಾರೆ. ಕುಂಕುಮಾರ್ಚನೆ, ಸಹಸ್ರದೀಪಾರ್ಚನೆ, ಪುಷ್ಪಾರ್ಚನೆಗಳು ಹಬ್ಬಗಳ ಮತ್ತು ದೇವಾಲಯಗಳಲ್ಲಿ ಪೂಜೆ ಏರ್ಪಡಿಸುವ ಸಂದರ್ಭದಲ್ಲಿ ಇವು ಹೊಸದಾಗಿ ಸೇರ್ಪಡೆಗೊಂಡಿವೆ. ಹಬ್ಬಗಳ ಸಂದರ್ಭದಲ್ಲಿ ಹಿಂದೆ ನಡೆಯುತ್ತಿದ್ದ ಜನಪದ ಗೀತೆಗಳು ಹಾಡಿಯ ವಿವಿಧ ಹಾಡುಗಳು ಸಮೂಹಗಾನ ಮೆರವಣಿಗೆ ಮಾಯವಾಗಿವೆ. ಅಂತಹ ಎನಿಸಿದರೂ ಸಂಪೂರ್ಣವಾಗಿ ಮಾಯವಾಗದೆ. ಹಿರಿಯ ತಲೆಮಾರುಗಳಲ್ಲಿ ಉಳಿದುಕೊಂಡಿವೆ. ಹಿರಿಯರನ್ನು ಅನುಕರಿಸುವ ಆಸಕ್ತಿಯುತ ಯುವ ವರ್ಗ ಇಂದಿಗೂ ಕೂಡ ಆ ಛಾಯೆಗಳನ್ನು ಉಳಿಸಿಕೊಂಡಿದೆ. ಆಧುನಿಕತೆಯ ಪ್ರತಿಬಿಂಬಕಗಳಾದ ಧ್ವನಿವರ್ಧಕಗಳ. ಸಾಹಿತ್ಯವಿಲ್ಲದ ಆಧುನಿಕ ಸುಪ್ರಭಾತಗಳ ಎಲ್ಲೆಲ್ಲಿಯೂ ರಂಪ ಮಾಡುತ್ತಿವೆ.[೫] ಬೆಳದಿಂಗಳ ತಂಪು ಬೆಳಕಿನಲ್ಲಿ ಜರಗುತ್ತಿದ್ದ ಹಬ್ಬ ಈಗ ವಿದ್ಯುತ್ ದೀಗಳ ಚಿಣಿಮಿಣದಲ್ಲಿ ಹೊಸ ರಾಗ ಪಡೆದುಕೊಂಡಿವೆ, ಇಷ್ಟೆಲ್ಲದರ ನಡುವೆಯೂ ಜನಸಾಮಾನ್ಯರ ದೃಷ್ಟಿಯಲ್ಲಿ, ಮುಗ್ದ ಹಸಲರ ಭಾವನೆಗಳಲ್ಲಿ ಚೌಡಮ್ಮ, ಹೆಬ್ಬಾರಮ್ಮ ಹಾಗೂ ಚನ್ನಗುತ್ತಿ ಹಬ್ಬ-ಆಚರಣೆಗಳನ್ನು ಕುರಿತಾದ ನಂಬಿಕೆಗಳು ಯಾವ ರೀತಿಯಲ್ಲಿ ಬದಲಾಗಿಲ್ಲ. ಆಧುನಿಕತೆಯ ಪ್ರವೇಶ ದಿನದಿಂದ ದಿನಕ್ಕೆ ಆಗುತ್ತಿದೆ. ಆಧುನಿಕತೆಯ ಅನಿವಾರ್ಯತೆಗೆ ಹಸಲರು ಹೊಂದಿಸಿಕೊಳ್ಳುವ ಅನಿವಾರ್ಯತೆ ಸೃಷ್ಟಿಯಾಗಿದೆ.

ವೈದಿಕ ಧರ್ಮವು ಹಸಲರನ್ನು ಸಂಪೂರ್ಣವಾಗಿ ಬುಡಕಟ್ಟು ಧರ್ಮದಿಂದ ಹಿಂದೂ ಧರ್ಮಕ್ಕೆ ರೂಪಾಂತರಿಸಿದೆ, ಅವರ ಜೀವನ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗೆ ಕಾರಣೀಭೂತವಾಗಿದೆ. ಈ ನಿಟ್ಟಿನಲ್ಲಿ ಮಾತೃದೇವತೆ ಆರಾಧಕರಾಗಿದ್ದ ಅವರು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಿರುಪತಿ ತಿಮ್ಮಪ್ಪ ರಾಘವೇಂದ್ರ, ಅಯ್ಯಪ್ಪಸ್ವಾಮಿ, ಮಂಜುನಾಥನ ಆರಾಧಕರಾಗಿದ್ದಾರೆ. ದೇವರುಗಳು ಪ್ರಭಾವದಿಂದ ಅವರ ಆಚರಣೆಗಳಲ್ಲಿ ಸ್ತ್ರೀ ಪುರುಷ ಸಮಾನ ಭಾಗಹಿಸುವಿಕೆಗೆ ಅವಕಾಶ ದೊರಕಿದೆ. ಧರ್ಮ ಎನ್ನುವದು ಹಸಲ

ಸಮುದಾಯಕ್ಕೆ ಮೇಲ್ ಅಂತಸ್ತಿನ್ನ ಗೌರವ ಪಡೆಯಬೇಕೆಂಬ ಬಯಕೆಯನ್ನು ಮತ್ತು ಮನೋಭಾವನೆಯನ್ನು ಬೆಳೆಸುತ್ತಿದೆ. ತನ್ನಸುತ್ತ-ಮುತ್ತಲಿನ ಮೇಲ್ವರ್ಗ ಹಿಂದೂ ಜನರ ಪ್ರಭಾವದಿಂದಾಗಿ ಸಮಾಜದಲ್ಲಿ ಧರ್ಮವು ಉತ್ತಮ-ಸ್ಥಾನ ಮಾನ ಹೊಂದುವ ಪ್ರವೃತ್ತಿ ಬೆಳೆಸುತ್ತಿದೆ, ಉನ್ನತ ಜಾತಿಗಳ ರೀತಿ ನೀತಿಗಳ-ಆಚಾರ-ವಿಚಾರಗಳು ಸಂಪ್ರದಾಯ ಆಚರಣೆ ಜೀವನ ಕ್ರಮ ಹಸಲರಲ್ಲಿ ಧಾರ್ಮಿಕ ಬದಲಾವಣೆಗೆ ಪ್ರಮುಖ ಕಾರಣವಾಗಿದೆ. ಆಧುನಿಕರಣದ ಪ್ರಭಾವಗಳಾದ ಸಮೂಹ ಮಾಧ್ಯಮಗಳು ಪ್ರಗತಿಪರ ಚಿಂತನೆಗಳು ಹಸಲರನ್ನು ಹೊಸತನದ ದಿಕ್ಕಿನಲ್ಲಿ ತಂದು ನಿಲ್ಲಿಸಿವೆ ಹಿಂದೆ ಇದ್ದ ದೈವಾರಾಧನೆ ಭೂತರಾಧನೆಗಳನ್ನ ಉಳಿಸಿಕೊಳ್ಳುವ ಜೊತೆಗೆ ಆಧುನಿಕವಾಗಿ ನಾಗರೀಕ ಸಮಾಜ ಆಚರಿಸುವ ಪ್ರತಿ ಹಬ್ಬ ಆಚರಣೆಗಳನ್ನು ಆಚರಿಸುವ ಮೂಲಕ ನಾಗರೀಕ ಸಮಾಜದೊಂದಿಗೆ ಸಂಪೂರ್ಣವಾಗಿ ಬೆರೆತುಹೋಗಿದೆ.

ಭಾರತದಲ್ಲಿ ಯಾವುದೇ ಸಮುದಾಯವು ತನ್ನತನವನ್ನು ಉಳಿಸಿಕೊಳ್ಳಲು ಸಾಮಾಜಿಕ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಲೇ ಇರುತ್ತವೆ. ಈ ನಿಟ್ಟಿನಲ್ಲಿ ಹಸಲರು ಕೂಡ ನಿಯಮಗಳನ್ನು ಪಾಲಿಸುತ್ತ ಆಧುನಿಕ ಸಂದರ್ಭಕ್ಕೆ ತಕ್ಕಂತೆ ಮಾರ್ಪಾಡಿಸಿಕೊಳ್ಳುವ ಮೂಲಕ ಹಿಂದಿನ ಕಟ್ಟಳೆಗಳನ್ನು ಸಡಿಲಗೊಳಿಸಿದೆ. ವಿಧವೆಯರಿಗೆ, ವೃದ್ದರಿಗೂ ಪವಿತ್ರ ಕಾರ್ಯಗಳಲ್ಲಿ ಸ್ವಲ್ಪ ಮಟ್ಟಿಗೆ ಭಾಗವಹಿಸುವಿಕೆಗೆ ಅವಕಾಶ ನೀಡಿದೆ. ಹಸಲರ ಮಹಿಳೆಯರು ಧಾರ್ಮಿಕ ಸ್ವತಂತ್ರ ಪಡೆದು ಲಕ್ಷ್ಮಿವೃತ, ಗಣೇಶನ ಪೂಜೆ, ಸಂಕಷ್ಟಮಿ, ಜಾಗರಣೆ. ಸಂಕ್ರಮಣ ಹಬ್ಬಗಳನ್ನು ಆಚರಿಸುತ್ತಾರೆ. ಆಚರಣೆಗಳ ವಿಷಯದಲ್ಲಿ ಮೂಡನಂಬಿಕೆ ಅಂತ ಅನಿಸಿದರು ಅದರ ಹಿಂದಿನ ನೋವು ಬಿತ್ತರಿಸುವಂತೆ ಚಿತ್ರಣವಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹಸಲ ಸಮುದಾಯ ಆಧುನಿಕ ಧಾರ್ಮಿಕ ಚಿಂತನೆಗೆ ಒಗ್ಗಿಸಿಕೊಂಡು ಸಮಾಜದಲ್ಲಿನ ಇತರ ವರ್ಗಗಳಂತೆ ಜೀವನ ವಿಧಾನವನ್ನು ಕಂಡುಕೊಂಡಿದೆ.

ಸಮುದಾಯವು ಇತ್ತೀಚೆಗೆ ಹಿಂದೂ ಧರ್ಮದ ಪ್ರಭಾವಕ್ಕೆ ಅಲ್ಲದೇ ಜೈನಧರ್ಮದ ಪ್ರಭಾವಕ್ಕೆ ಸಿಲುಕಿರುವದು. ಸೂಕ್ಷ್ಮವಾಗಿ ಗಮನಿಸಿದಾಗ ಕಂಡುಬರುವ ಮಹತ್ವದ ಅಂಶವಾಗಿದೆ. ಸಮುದಾಯದಲ್ಲಿ ವ್ಯಾಜ್ಯಗಳನ್ನು ಧರ್ಮಸ್ಥಳದ ವೀರೇಂದ್ರ ಹೆಗಡೆ ಪರಿಹಾರಿಸುವ ಜೊತೆಗೆ ಸಮುದಾಯದ ಬಗೆಗಿನ ಕಾಳಜೀ ಜೈನ ಧರ್ಮದತ್ತ ಒಲವು ಮೂಡಿಸಿರುವದು ಕಂಡುಬರುತ್ತದೆ. ಧರ್ಮಸ್ಥಳ ಮಂಜುನಾಥನನ್ನು ಆರಾಧಿಸುವ ಜನರು ಕೂಡ ಜಾಸ್ತಿಯಾಗುತ್ತಿದ್ದಾರೆ. ಏನೇ ಆದರೂ ಧಾರ್ಮಿಕವಾಗಿ ಹಸಲರು ಬದಲಾಗಿದ್ದರ ಹಿಂದೆ ಇದ್ದ ದೇವಾಲಯಗಳ ಪ್ರವೇಶದ ಮೇಲಿನ ನಿರ್ಬಂಧಗಳು ಇವತ್ತು ಇಲ್ಲ. ಅಸ್ಪೃಶ್ಯತೆ ಮಾಯವಾಗಿದೆ. ಪ್ರತಿ ಸಮಾರಂಭಕ್ಕೆ ಹವ್ಯಕ ಬ್ರಾಹ್ಮಣರ ಪುರೋಹಿತ ಅಥವಾ ಭಟ್ಟನ ಮಾರ್ಗದರ್ಶನದಲ್ಲಿ ಮತ್ತು ನೇತೃತ್ವದಲ್ಲಿಯೆ ನಡೆಯುತ್ತವೆ. ಬ್ರಾಹ್ಮಣರು ಕೂಡ ಹಸಲರ ಮನೆಯ ಊಟ ಸೇವಿಸುವಷ್ಟರ ಮಟ್ಟಿಗೆ ಧರ್ಮ ಹಸಲರಲ್ಲಿ ಪರಿವರ್ತನೆ ತಂದಿದೆ. ಹಿಂದೆ ಇದ್ದ ಕಟ್ಟಳೆಗಳು ಮೂಡನಂಬಿಕೆಗಳು ಮಾಯವಾಗಿವೇ ಆಚರಣೆಗಳ ವಿಷಯದಲ್ಲಿ ಇತರ ಮೇಲ್ವರ್ಗದ ಜನರಿಗಿಂತ ನಾವೇನು ಕಡಿಮೆ ಇಲ್ಲ ಅನ್ನುವಂತೆ

[illegible]

[illegible]

[illegible]

[illegible]

[illegible]

ವಿಜೃಂಭಣೆಯಿಂದ ಆಚರಿಸುತ್ತಾರೆ. ಪ್ರತಿ ಆಚರಣೆಗಳೂ ಹಿಂದೂ ಶೈಲಿಯಲ್ಲಿಯೆ ಮಾಡುವ ಮೂಲಕ ಧಾರ್ಮಿಕ ಸ್ಥಿತ್ಯಂತರಕ್ಕೆ ಒಳಗಾಗಿದ್ದಾರೆ.

ಧಾರ್ಮಿಕ ಬದಲಾವಣೆಗೆ ಕಾರಣವಾದ ಆರ್ಥಿಕತೆ

ಧಾರ್ಮಿಕ ಅಧ್ಯಯನವು ಪುರುಷರ ಹಾಗೂ ಮಹಿಳೆಯರ ಧಾರ್ಮಿಕ ಜೀವನ ಚಕ್ರದ ವಿಶಿಷ್ಟ ವಿಧಿ ವಿಧಾನಗಳನ್ನು ಆಚರಣೆಗಳನ್ನು ಮಾತ್ರವಲ್ಲದೇ ಸಂಸ್ಕೃತಿಯ ಭಾಗವಾದ ಜನರ ಜೀವನ ದೃಷ್ಟಿಯನ್ನು ಕೂಡ ಬಿಂಬಿಸುತ್ತದೆ ಅತಿಮಾನುಷ ಶಕ್ತಿಗೆ ಬಗ್ಗೆ ನಂಬಿಕೆ ಧಾರ್ಮಿಕ ಆಚರಣೆ, ಮಂತ್ರ ಮತ್ತು ಮಾಟ, ಸಾಂಸ್ಕೃತಿಕ ಅನನ್ಯತೆ ಮೊದಲಾದವುಗಳು ಜನರ ಜೀವನ ದೃಷ್ಟಿಯ ಕೆಲವು ಮಹತ್ವದ ಅಂಶಗಳಾಗಿವೆ. ಈ ಅಂಶಗಳು ಒಬ್ಬ ವ್ಯಕ್ತಿಯನ್ನು ಒಂದು ನಿರ್ಧಿಷ್ಟ ಸಂಸ್ಕೃತಿಯ ಸದಸ್ಯನಾಗಿ ಮಾರ್ಪಡಿಸುವಲ್ಲಿ ಹಾಗೂ ಆ ವ್ಯಕ್ತಿಯನ್ನು ಪರಿಪಕ್ವಗೊಳಿಸುವಲ್ಲಿ ನೆರವಾಗಿ ಪ್ರಭಾವಬೀರುತ್ತಿವೆ. ಬದಲಾಗುತ್ತಿರುವ ಆರ್ಥಿಕತೆಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಸಲರ ಧಾರ್ಮಿಕ ನಂಬಿಕೆಗಳನ್ನು ಮತ್ತು ಅವರ ಜೀವನ ಶೈಲಿಯನ್ನು ಪ್ರಭಾವಿಸಿವೆ, ಧಾರ್ಮಿಕರ ಅಂಶಗಳು ಎಷ್ಟರ ಮಟ್ಟಿಗೆ ಆರ್ಥಿಕತೆಯನ್ನು ಪ್ರಭಾವಿಸಿವೆ ಎಂಬುವುದನ್ನು ತಿಳಿಸಿಕೊಡುವ ಅಗತ್ಯತೆ ಇದೆ.[೯]

ಇತ್ತೀಚಿನ ಶತಮಾನಗಳಲ್ಲಿ ಹಸಲರ ಜೀವನಶೈಲಿ ಭೌತಿಕ ಪರಿಸರ, ತಾಂತ್ರಿಕತೆ ಹಾಗೂ ಆರ್ಥಿಕ ಬದಲಾವಣೆ ಅವರ ಕ್ರಮಬದ್ಧವಿಲ್ಲದ ಚರಿತ್ರೆ, ವಸಾಹತು ಆಳ್ವಿಕೆ ಒಳಪಟ್ಟ ಪರಿಣಾಮ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರಂಭಿಸಿದ ಕೆಲವು ಅಭಿವೃದ್ಧಿ ಯೋಜನೆಗಳು ಅಥವಾ ಕಲ್ಯಾಣ ಕಾರ್ಯಕ್ರಮಗಳು ನಗರ ಸಂಪರ್ಕಗಳಿಂದ ಉಂಟಾದ ಬದಲಾವಣೆಯ ಸ್ವರೂಪ, ಮೊದಲಾದ ಇತಿಮಿತಿಗಳಿಂದ ಪ್ರತಿಬಂಧಿಸಲ್ಪಟ್ಟಿದೆ.

ಸಾಂಪ್ರದಾಯಿಕವಾದ ಆಚರಣೆಗಳಲ್ಲಿ ಸಮೂಹದ ಹಿರಿಯನಾದ ವ್ಯಕ್ತಿಯೊಬ್ಬ ಪುರೋಹಿತನಂತೆ ಕಾರ್ಯನಿರ್ವಹಿಸುತ್ತಿದ್ದನು. ಆಯಾ ಭಾಗಕ್ಕೆ ಅನುಗುಣವಾಗಿ ಅವನ ಕಾರ್ಯವ್ಯಾಪ್ತಿ ಸೀಮಿತವಾಗಿರುತ್ತಿತ್ತು. ಹಸಲರು ಇಂದು ಸಾಂಪ್ರದಾಯಿಕ ಆಚರಣೆಗಳಲ್ಲಿ ಭಟ್ಟರು. ಬ್ರಾಹ್ಮಣರು ಭಾಗವಹಿಸುವಿಕೆ ಕಂಡುಬರುತ್ತದೆ. ಪಾರಂಪರಿಕ ವೈದಿಕ ಧಾರ್ಮಿಕ ನಂಬಿಕೆ ವ್ಯವಸ್ಥೆಗಳು ಹಿಂದೂ ಧಾರ್ಮಿಕ ನಂಬಿಕೆ ವ್ಯವಸ್ಥೆಗಳೊಂದಿಗೆ ಸಮ್ಮಿಲನಗೊಂಡಿವೆ. ಆ ಕಾರಣಕ್ಕಾಗಿ ತಮ್ಮ ಸಾಂಪ್ರದಾಯಿಕ ಆಚರಣೆಗಳಿಗಿಂತ ಬಿನ್ನವಾದ ರೀತಿ ನಿಲುವುಗಳು, ಸಂಪ್ರದಾಯಗಳ ಪ್ರತ್ಯೇಕವಾದ ಧಾರ್ಮಿಕತೆ, ಹಾಗೂ ಆಚರಣೆಗಳ ಹಸಲರಲ್ಲಿವೆ.

ಪ್ರಾಕೃತಿಕವಾಗಿ ಸಂಭವಿಸಬಹುದಾದ ದೈವಿ ಕಲ್ಪನೆಗಳಾದ ಮಿಂಚು, ಗುಡುಗು, ಮಳೆ, ಬಿರುಗಾಳಿ, ದುರ್ದೈವದ ಬಗೆಗಿನ ಗಾಢ ನಂಬಿಕೆ. ಆತಂಕ, ವಿಪತ್ತು, ಸಾಂಕ್ರಾಮಿಕ ರೋಗ ರುಜಿನಗಳ ಸಾವು, ಭಯ ಹುಟ್ಟಿಸುವ ನೈಸರ್ಗಿಕ ದುರಂತಗಳ ನಿಸರ್ಗದ ಬಗೆಗಿನ ಅವರ ಪ್ರವೃತ್ತಿಯನ್ನು ವಿವರಿಸುವಂತದ್ದು. ಜೀವನ

ವ್ಯವಸ್ಥೆ ಕಷ್ಟಗಳಿಂದ ಕೂಡಿರುವಂತದ್ದು ಬರಗಾಲ, ಸಾಂಕ್ರಮಿಕ ರೋಗಗಳ ಮೊದಲಾದ ಅತಿಮಾನುಷ ಶಕ್ತಿಗಳಿಂದ ತುಂಬಿ ಹೋಗಿರುತ್ತೆ, ದುಷ್ಟಶಕ್ತಿಗಳಿಂದ ಮುಕ್ತಿಹೊಂದಲು, ಅವುಗಳಿಂದ ರಕ್ಷಣೆ ಪಡೆಯಲು ಅವುಗಳನ್ನು ಪೂಜಿಸಿ ಆರಾಧಿಸಿ ಗೌರವಿಸಬೇಕು ಎಂಬುದು ಅವರ ನಿತ್ಯದ ಹವಣಿಕೆಯಾಗಿರುತ್ತದೆ. ಆದ ಕಾರಣ ಅವರಿಗೆ ಮಾಟ-ಮಂತ್ರ-ಮದ್ದು-ತಂತ್ರ ಮೊದಲಾದ ಧಾರ್ಮಿಕ ವಿಧಿಗಳ ಆಚರಣೆಗಳ ಜೊತೆ ಬಲವಾದ ನಂಬಿಕೆ ಹೊಂದಿದ್ದರು. ಅವರು ಆಗಾಗ್ಗೆ ಅವುಗಳ ಮೊರೆ ಹೋಗುತ್ತಿದ್ದರು, ಅವರಲ್ಲಿನ ಎಲ್ಲ ಬದಲಾವಣೆಗಳಿಗೂ ಆರ್ಥಿಕತೆ ಪ್ರಮುಖ ಕಾರಣವಾಗಿದೆ.

ಅಡಿ ಟಿಪ್ಪಣಿಗಳು

೧. ಸುಬ್ರಮಣ್ಯ.ಜಿ., ಭಾರತೀಯ ಸಮಾಜದ ಸಮಾಜಶಾಸ್ತ್ರ, ೨೦೦೩, ಪುಟ೧೬೦

೨. ಅದೇ ಪುಟ ೧೬೧

೩. ಲಕ್ಷ್ಮಿಪತಿ.ಜಿ., ಕರ್ನಾಟಕ ಸಾಮಾಜಿಕ ಬದಲಾವಣೆ ಸಮಾಜಶಾಸ್ತ್ರ ಮತ್ತು ಸಾಹಿತ್ಯ ನೋಡಿರುವ ಬಗೆ, ಪಿಎಚ್.ಡಿ ಪ್ರಬಂಧ, ೨೦೦೨, ಪುಟ.೧೨

೪. ಅದೇ ಪುಟ

೫. ಅದೇ ಪುಟ.೧೩

೬. ಪ್ರೊ.ನಾರಾಯಣ.ಎಂ., ಸಮಾಜಶಾಸ್ತ್ರದ ಪರಿಚಯ, ೨೦೦೪, ಪುಟ.೮೫

೭. ಅದೇ ಪುಟ.೮೬

೮. ಅದೇ ಪುಟ.೮೭

೯. ವಿಜಯಲಕ್ಷ್ಮಿ.ಆರ್., ಲಮಾಣಿಗರ ಸಾಮಾಜಿಕ ಆರ್ಥಿಕ ಸ್ಥಿಗತಿಗಳು, ೨೦೦೪, ಪುಟ.೨೪

೧೦. ಪ್ರಭಾಕರ್.ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ೨೦೦೦ ಪುಟ.೦೧

೧೧. ಪ್ರಭಾಕರ್.ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ೨೦೦೪, ಪುಟ.೧೧

೧೨. ದೇಜಗೌ, ರಾಜಕೀಯ ಚಿಂತನೆ, ಪುಟ.೩೧

೧೩. ಅದೇ ಪುಟ.೩೨

೧೪. ಪೂಣಚ್ಚ ವಿಜಯ, ಚರಿತ್ರೆ ವಿಶ್ವಕೋಶ, ೨೦೦೧, ಪುಟ.೧೧೯

೧೫. ಡೊಮನಿಕ್, ಜಾಗತೀಕರಣ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು, ಪುಟ.೨೭

೧೬. ಬೋರಲಿಂಗಯ್ಯ.ಹಿ.ಚಿ.,ಉಜ್ಜಯನಿ ಚೌಡಮ್ಮ, ೧೯೯೧, ಪುಟ.೨೩

೧೭. ಬೋರಲಿಂಗಯ್ಯ.ಹಿ.ಚಿ., ಕಾಡು ಕಾಂಕ್ರಿಟ್ ಮತ್ತು ಜಾನಪದ ಪುಟ.೨೫

೧೮. ಬೋರಲಿಂಗಯ್ಯ.ಹಿ.ಚಿ.,ಉಜ್ಜಯನಿ ಚೌಡಮ್ಮ, ೧೯೯೧, ಪುಟ.೨೩

೧೯. ಪ್ರಶಾಂತ್.ಎಚ್.ಡಿ., ಲಂಬಾಣಿಗಳಲ್ಲಿ ಸಾಮಾಜಿಕ ಬದಲಾವಣೆ, ಪಿಎಚ್.ಡಿ ಪ್ರಬಂಧ, ೨೦೦೨

* * *

ಅಧ್ಯಾಯ ನಾಲ್ಕು

ಸಾಮಾಜಿಕ ಬದಲಾವಣೆಗೆ ಕಾರಣವಾದ ಅಂಶಗಳು

೪.೧ ಶಿಕ್ಷಣ

೪.೨. ಸಾಮಾಜಿಕ ಚಳವಳಿಗಳು

೪.೩. ಆಧುನೀಕರಣ

೪.೪. ಮಾಹಿತಿ ತಂತ್ರಜ್ಞಾನ

೪.೫. ಸ್ವಯಂಸೇವಾ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳು

೪.೧. ಶಿಕ್ಷಣ

ಭಾರತದ ಎಲ್ಲ ನಾಗರೀಕರಿಗೆ ಪ್ರಾಥಮಿಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಗುರುತಿಸಲಾಗಿದೆ. ಸಮಾಜದಲ್ಲಿನ ಅಜ್ಞಾನ ಮತ್ತು ಅಸಮಾನತೆಯನ್ನು ಹೋಗಲಾಡಿಸಲು ಶಿಕ್ಷಣ ಬಹುಮುಖ್ಯ ಸಾಧನ ಬಯಸಿದ ಜೀವನ ಮಟ್ಟವನ್ನು ಪಡೆಯುವ ಪ್ರಕ್ರಿಯೆಯಲ್ಲಿ ಜ್ಞಾನ ಕೌಶಲ್ಯಗಳು ಮೌಲ್ಯಗಳು ಮತ್ತು ನಡಾವಳಿಗಳನ್ನು ರೂಢಿಸಿಕೊಳ್ಳುತ್ತವೆ. ಶಿಕ್ಷಣ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿನ ನಿಶ್ಚಿತ ಪ್ರಗತಿಯನ್ನುಂಟು ಮಾಡಿ ಜೀವನದ ಗುಣಮಟ್ಟವನ್ನು ಎತ್ತರಕ್ಕೇರಿಸುವಲ್ಲಿ ಪ್ರಮುಖಪಾತ್ರ ನಿರ್ವಹಿಸುತ್ತದೆ. ಶೋಷಿತರನ್ನು ಮೇಲಕ್ಕೆತ್ತುವ ನಿಟ್ಟಿನಲ್ಲಿ ಶಿಕ್ಷಣದ ಪಾತ್ರ ಗಮನಾರ್ಹವಾದದ್ದು, ಮಾನವನ ಪರಿವರ್ತನ ಜೀವನ ವ್ಯವಸ್ಥೆಗೆ ಶಿಕ್ಷಣ ಅತ್ಯಮೂಲ್ಯವಾದ ಸಾಧನವಾಗಿದೆ. ಮಾನವನ ದಿನನಿತ್ಯದ ಪರಿವರ್ತನೆ ಬದುಕಿನಲ್ಲಿ ಪ್ರಾಪಂಚಿಕ ತಿಳವಳಿಕೆಗೆ ಶಿಕ್ಷಣದ ಅವಶ್ಯಕತೆ ಬೇಕೆ ಬೇಕು. ಶಿಕ್ಷಣ ಮಾನವನ ಜೀವನದಲ್ಲಿ ಕ್ರಾಂತಿಯುಂಟು ಮಾಡುವಂತದ್ದು, ಶಿಕ್ಷಣ ಎನ್ನುವದು ಒಂದು ನಿಮಿಷದ ಅಥವಾ ಒಂದು ಘಂಟೆಯಲ್ಲಿ ಒಂದು ಹಾಳೆಯ ಮೇಲೆ ಮೂಡಿಸುವಂತ ಮಸೂದೆಯಲ್ಲ ಅದು ಪಾರಂಪರಿಕವಾಗಿ ರೂಡಿಸಿಕೊಂಡು ಬಂದಂತ ಒಂದು ಪದ್ಧತಿ. ಈ ಪದ್ಧತಿಯಲ್ಲಿ ಸಮುದಾಯವೊಂದರ ಸರ್ವತೋಮುಖ ಬೆಳವಣಿಗೆ ಅಡಗಿರುತ್ತದೆ. ಅದು ಮೌಲ್ಯಯುತವಾದ ಜೀವನ ವ್ಯವಸ್ಥೆಯನ್ನು ಕಲ್ಪಿಸಿ ಜೀವನದಲ್ಲಿ ಎದರುಗೊಳ್ಳುವ ಸಮಸ್ಯೆಗಳನ್ನು ನಿವಾರಿಸಿ ಮುನ್ನೆಡೆಯುವ ಮನಸ್ಥಿತಿಯನ್ನು ಕಲ್ಪಿಸಿಕೊಡುತ್ತದೆ. ಇಂತಹ ಮಹತ್ವಾಕಾಂಕ್ಷೆಯನ್ನು ವಿದ್ಯೆ ಹೊಂದಿದೆ.

ಶಿಕ್ಷಣ ತಳಹದಿ ದುರ್ಬಲವಾಗಿದ್ದರೂ ಅದರ ಮೇಲೆ ದೊಡ್ಡ ಕಟ್ಟಡ ಕಟ್ಟಿದರೂ ಅದು ದುರ್ಬಲವೇ ಆಗಿರುತ್ತದೆ. ಶಿಕ್ಷಣ ಕ್ರಾಂತಿಯ ಪ್ರಯೋಗ ಇಲ್ಲಿ ಜೀವಿಗಳ ಮೇಲೆ ನಡೆಯುತ್ತದೆ. ಒಮ್ಮೆ ಹೋದ ಕಾಲ ಮತ್ತೆ ಮರಳಿ ಬರುವುದಿಲ್ಲ. ಶಿಕ್ಷಣ ವ್ಯವಸ್ಥೆ ಧನಾತ್ಮಕ ಪರಿಣಾಮ ಬೀರುವಂತೆ ಇರಬೇಕು ಇಲ್ಲದೇ ಹೋದಲ್ಲಿ ಯುವಶಕ್ತಿ ಮುಂದಿನ ಪ್ರಜೆಗಳ ಪೀಳಿಗೆ ಆಳಾಗುತ್ತದೆ. ಆ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆ

[illegible]

ಎನ್ನುವದು ಪರಿಸರಕ್ಕೆ ಮತ್ತು ಮಾನಸಿಕ ವೃದ್ಧಿಗೆ ಪೂರಕವಾಗಿರುವಂತೆ ರೂಪಿಸುವದು ಅತ್ಯವಶ್ಯಕವಾಗಿರುತ್ತದೆ. ಶಿಕ್ಷಣ ವ್ಯವಸ್ಥೆ ಎನ್ನುವುದು ಮಕ್ಕಳಲ್ಲಿ ಬೇದಭಾವ ಸೃಷ್ಟಿಸಿದೆ. ಎಲ್ಲ ಶಾಲೆಗಳಲ್ಲಿ ದಾಖಲೆಗೆ ಅವಕಾಶ ಕಲ್ಪಿಸಿಕೊಡಲೇಬೇಕು. ಏಕೆಂದರೆ ಶಿಕ್ಷಣ ಎನ್ನುವುದು ಬರಿ ಅಕ್ಷರ ಜ್ಞಾನವಾಗಿರದೇ ಭವಿಷ್ಯದ ಸರ್ವತೋಮುಖ ಬೆಳವಣಿಗೆ ಆಗಿರುತ್ತದೆ. ಪೂರಕವಾದಂತ ಶಿಕ್ಷಣ ನೀಡಿದಲ್ಲಿ ಭವಿಷ್ಯದ ಯುವಕರ ಹಾದಿ ಪ್ರಗತಿಯತ್ತ ಸಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರಗಳು ಶಿಕ್ಷಣ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಶಿಕ್ಷಣ ಪಡೆದವರನ್ನು ಇಂದು ಹೆಚ್ಚು ಗೌರವದಿಂದ ಕಾಣಲಾಗುತ್ತದೆ. ಆ ನಿಟ್ಟಿನಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆ ಬುಡಕಟ್ಟುಗಳಲ್ಲಿ ಹೊಸ ಬಗೆಯ ಜೀವನಕ್ಕೆ ನಾಂದಿ ಹಾಡಿದೆ. ಬುಡಕಟ್ಟುಗಳಲ್ಲಿ ಮಾನಸಿಕವಾದ ಧೈರ್ಯತುಂಬಿ ಅವರ ಹಕ್ಕುಗಳನ್ನು ನೆನಪಿಸುವಲ್ಲಿ ಶಿಕ್ಷಣದ ಪಾತ್ರ ಹಿರಿದಾಗಿದೆ. ಶಿಕ್ಷಣ ಹೋರಾಟ ಮನೋಭಾವನೆಯನ್ನು ಬೆಳಸಿ ತಿರಸ್ಕೃತರೆಂದು ಭಾವಿಸಿದ ಜನಕ್ಕೆ ಸಂಜೀವಿನಿಯಾಗಿ ಶಕ್ತಿ ತುಂಬುವಂತ ಕೆಲಸ ಮಾಡಿದೆ. ಪ್ರಸ್ತುತ ಶೈಕ್ಷಣಿಕ ರೂಪಾಂತಗಳಿಗೆ ಸಮುದಾಯಗಳು ಒಳಗಾಗುತ್ತಿವೆ. ಶಿಕ್ಷಣದ ರೂಪ-ಸ್ವರೂಪ-ಗುಣಮಟ್ಟದ ಬೆಳವಣಿಗೆಗೆ ಅವಕಾಶವಿರುತ್ತದೆ. ನಾಗರೀಕ ಸ್ವಾತಂತ್ರ ನೀಡುವ ಮೂಲಕ ಶಿಕ್ಷಣ ಬುಡಕಟ್ಟುಗಳಲ್ಲಿ ಪರಿವರ್ತನೆಗೆ ನಾಂದಿಹಾಡಿದೆ.

ಪ್ರಸ್ತುತ ಹಸಲರ ಶೈಕ್ಷಣಿಕ ಮಟ್ಟ ಸುಧಾರಿತ ಮಟ್ಟದಲ್ಲಿದೆ. ಪ್ರಾರಂಭದಲ್ಲಿ ಶಿಕ್ಷಣದಿಂದ ವಂಚಿತರಾದ ಇವರು ಈಗ ಶೇ.೮೦ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿದ್ದರೆ, ಪ್ರಾಥಮಿಕ ಹಂತದಲ್ಲಿ ಅನೇಕ ಹಸಲರ ಮಕ್ಕಳಿಗೆ ಶಿಕ್ಷಣವನ್ನು ಒಂದು ಸಂವಿಧಾನಬದ್ಧ ಹಕ್ಕು ಎಂಬ ಯಾದಿಯಲ್ಲಿ ನೀಡಲಾಗುತ್ತಿದೆ. ಹುಟ್ಟಿದ ಮಗು ಶಿಕ್ಷಣ ಪಡೆಯಲೇ ಬೇಕು ಎಂಬ ಆಶಾಭಾವನೆ ಹಸಲರಲ್ಲಿ ಮೊಳಕೆಯೊಡೆಯುತ್ತಿದೆ. ಪ್ರತಿ ಹಸಲ ಕುಟುಂಬವು ಮಕ್ಕಳನ್ನು ಶಾಲೆಗೆ ಕಳಿಸಲು ತುಂಬಾ ಆಸಕ್ತರಾಗಿದ್ದಾರೆ. ತಾವು ಪಡೆಯದ ಶಿಕ್ಷಣ ಮಕ್ಕಳಿಗೆ ಸಿಗಲಿ, ಮಕ್ಕಳಿಗೆ ಉನ್ನತ ಸ್ಥಾನ ಮಾನ ದೊರೆಯುವಂತಾಗಲಿ ನಮ್ಮ ಮಕ್ಕಳು ದೊಡ್ಡವರಾಗಲಿ ಎಂದು ಬಯಸುವದು ಸಾಮಾನ್ಯವಾಗಿದೆ. ನಮ್ಮಂತೆ ನಮ್ಮ ಮಕ್ಕಳು ಶ್ರೀಮಂತರ ಧನಿಕರ ಮನೆ ಕೆಲಸ, ಕೂಲಿಕೆಲಸ ಮಾಡದೇ ಸ್ವಉದ್ಯೋಗಿಗಳಾಗಲಿ ಅವರದೇ ಆದ ಜೀವನ ರೂಪಿಸಿಕೊಳ್ಳಲಿ ಎನ್ನುವ ಆಕಾಂಕ್ಷೆ ಬಹುಜನರದ್ದಾಗಿದೆ.

ಆದಿವಾಸಿಗಳು ಅರಣ್ಯದಿಂದ ಹೊರಬಂದ ಮೇಲೆ ತಮ್ಮ ಬದುಕನ್ನ ಮೂಲ ಬದುಕಿನ ಸಂಸ್ಕೃತಿ, ಭಾಷೆ, ಮೌಲ್ಯಗಳನ್ನು ಗೌರವಿಸುವ ಹಾಗೂ ಸಮಾಜದ ಅವತರಣಿಕೆಯಲ್ಲಿ ನವ ಮೌಲ್ಯಗಳನ್ನು ಪ್ರಶ್ನಿಸುವ ಮೂಲಕ ಬದುಕಿಗೆ ಅಗತ್ಯವಾದವುಗಳನ್ನು ಅಳವಡಿಸಿಕೊಳ್ಳುವಲ್ಲಿ ಶಿಕ್ಷಣ ಅವಕಾಶಗಳನ್ನು ಸೃಷ್ಟಿಸುತ್ತದೆ. ಹಿಂದೆ ಆದಿವಾಸಿಗಳಲ್ಲಿ ಈ ಜಗತ್ತಿಗೆ ಮಾದರಿಯಾಗುವಂತ ಮೌಲ್ಯಗಳಿದ್ದವು. ಅವರ ಸರಳಬದುಕು, ಸಹಬಾಳ್ವೆ, ಹಂಚಿ ತಿನ್ನುವದು ಗಂಡು-ಹೆಣ್ಣು ತಾರತಮ್ಯ ಇಲ್ಲದೇ ಇರುವುದು ಇಂತಹ ನಾಗರೀಕ ಸಮಾಜಕ್ಕೆ ಮಾದರಿಯಾಗುವಂತ ಗುಣಗಳು ಕಾಣಬಹುದಾಗಿತ್ತು. ಪ್ರಸ್ತುತ ಸಮಾಜದಲ್ಲಿ ಈ ಮೌಲ್ಯಗಳ

[illegible]

ಅಸ್ತಿತ್ವವೇ ಇಲ್ಲ. ಅವರ ಮೌಲ್ಯಗಳ ರಕ್ಷಿಸುವಂತ ಶಿಕ್ಷಣದ ಅವಶ್ಯಕತೆ ಪ್ರತಿಸಮುದಾಯಕ್ಕೆ ಇದ್ದೇ ಇರುತ್ತದೆ. ಈ ನಿಟ್ಟಿನಲ್ಲಿ ಹಸಲರ ಬುಡಕಟ್ಟು ಕೂಡ ಇದೆ. ಈಗಿನ ಶಿಕ್ಷಣ ಪದ್ಧತಿ ಹಸಲರ ಮಕ್ಕಳನ್ನು ರೂಪಿಸುವಲ್ಲಿ ಮತ್ತು ಮೌಲ್ಯಗಳ ರಕ್ಷಣೆ ಮಾಡುವಂತ ವ್ಯವಸ್ಥೆ ಅಗತ್ಯವಾಗಿದೆ. ಆ ನಿಟ್ಟಿನಲ್ಲಿ ಪ್ರತಿ ಹಸಲ ಮಕ್ಕಳಿಗೆ ಶಿಕ್ಷಣ ದೊರಕುವಂತಾಗಬೇಕು. ಇದ್ದವರು ಶಿವಾಲಯ ಮಾಡುವರು ನಾನೇನು ಮಾಡಲಯ್ಯ ಬಡವನು ಎನ್ನು ಉಕ್ತಿಯಂತೆ ಇದ್ದವರು ವೈದ್ಯಕೀಯ, ಇಂಜಿನಿಯರ್ ಪದವಿ ಪಡಿಯುತ್ತಾರೆ. ಇಲ್ಲದವರು ೮-೯ನೇ ತರಗತಿಯಲ್ಲಿ ಆರ್ಥಿಕ ತೊಂದರೆಯಿಂದ ಶಾಲೆಗಳಿಗೆ ಸಲಾಮು ಒಡೆದು ಕೂಲಿ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಶಿಕ್ಷಣದ ವ್ಯಾಪಾರೀಕರಣ ಖಾಸಗೀಕರಣ ಪ್ರಮಾಣ ಪತ್ರಗಳ ಮಾರಾಟ, ಶೈಕ್ಷಣಿಕ ವ್ಯವಸ್ಥೆಯಲ್ಲಿನ ದೋಷಗಳು ಪ್ರಮುಖ ಕಾರಣವಾಗಿವೆ. ಈ ಕಾರಣಕ್ಕೆ ಅನೇಕ ಕುಟುಂಬಗಳು ಉನ್ನತ ಮಟ್ಟದ ಶಿಕ್ಷಣದಿಂದ ವಂಚಿತವಾಗಿವೆ. ಸರ್ಕಾರವೂ ಮುಂದೆ ನಿಂತು ಅವರನ್ನು ರೂಪಿಸುವ ಕೆಲಸ ಮಾಡದೇ ಅವರನ್ನ ವಿರೂಪಗೊಳಿಸುವ ಕೆಲಸಗಳು ಮಾಡುತ್ತವೆ. ಬಹುಸಂಖ್ಯಾತ ರಾಜಕಾರಣಿಗಳು ತಮ್ಮ ಬೇಳೆಬೇಯಿಸಿಕೊಳ್ಳಲು ತಾವು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳ ರಕ್ಷಣೆಗಾಗಿ ಅತಿಯಾದ ಫೀಸ್, ಡೊನೇಷನ್ ಹೆಚ್ಚಿಸುವ ಮೂಲ ಶ್ರೀಮಂತರಿಗೆ ವರವಾಗಿ ಪರಿಣಮಿಸಿವೆ. ಸರ್ಕಾರವು ಕೂಡ ರಾಜಕಾರಣಿಗಳ ಹಿತರಕ್ಷಣೆಗೆ ಮುಂದಾಗುವ ಮೂಲಕ ಬಡವರಿಗೆ ಶಿಕ್ಷಣ ದೊರೆಯದಂತ ವ್ಯವಸ್ಥೆಯನ್ನು ಸೃಷ್ಟಿಸಿವೆ.

ಗಿರಿಜನ ಆಶ್ರಯ ಶಾಲೆಗಳು

ಪ್ರಸ್ತುತವಾಗಿ ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಂಡಿರುವ ಸಾಗರದ ಹೀರೆಮನೆಯಲ್ಲಿ ಒಂದು ಗಿರಿಜನ ಆಶ್ರಮಶಾಲೆ ಇದೆ. ಈ ಶಾಲೆಯು ೧೯೫೭ರಲ್ಲಿ ಆದಿವಾಸಿ ಮತ್ತು ಶೈಕ್ಷಣಿಕ ಸುಧಾರಣೆಗಾಗಿ ಸ್ಥಾಪನೆಯಾಗಿರುವಂತದ್ದು. ಅಂದಿನಿಂದ ಹಸಲರು ಎದುರಿಸುತ್ತಿದ್ದ ನಾನಾ ಸಮಸ್ಯೆಗಳು ದೂರವಾಗಿ ಅವರ ಶಿಕ್ಷಣ ಪಡೆಯಲು ಪ್ರಾರಂಭಿಸಿದರು. ೧೯೫೫ಕ್ಕಿಂತ ಹಿಂದೆ ಹಸಲರ ಮಕ್ಕಳಿಗೆ ಶಿಕ್ಷಣ ಕೊಡಿಸುವ ಆಸೆ ಇದ್ದರು ಅದು ಕೈಗೂಡಿರಲಿಲ್ಲ. ಹಸಲರು ಅಸ್ಪೃಶ್ಯರು ಶೂದ್ರರರು ಎಂಬ ಕಾರಣಕ್ಕೆ ಅವರಿಗೆ ಶಿಕ್ಷಕರು ಸಾಕ್ಷರರನ್ನಾಗಿ ಮಾಡಲು ಹಿಂದೇಟು ಹಾಕುತ್ತಿದ್ದರು. ಎಲ್ಲಿ ಹಸಲರು ಶಿಕ್ಷಣ ಪಡೆದರೆ ಮೇಲ್ವರ್ಗದ ಜನರ ವಿರುದ್ಧ ತಿರುಗಿಬಿಳುತ್ತಾರೆ ಎಂಬ ಕಾರಣ ನೀಡಿ ಅವರನ್ನ ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತಿದ್ದರು. ಶಿಕ್ಷಣದ ವಿಷಯದಲ್ಲಿ ತುಂಬಾ ಕಟ್ಟುನಿಟ್ಟಿನ ನಿಯಮಗಳನ್ನು ಹೇರುವ ಮೂಲಕ ಹಸಲರನ್ನ ಶಾಲೆಯ ಮೆಟ್ಟಲು ತುಳಿಯದಂತೆ ನೋಡಿಕೊಳ್ಳಲಾಗುತ್ತಿತ್ತು. ಮಡಿವ್ಯವಸ್ಥೆ, ಪ್ರತ್ಯೇಕ ಆಸನಗಳು, ಸೃಷ್ಟಿಸುವ ಮೂಲಕ ಹಸಲರ ಮೇಲೆ ಪ್ರತ್ಯೇಕ ನೀತಿಯನ್ನು ಅನುಸರಿಸಲಾಗುತ್ತಿತ್ತು. ಮೊದಲೇ ಆರ್ಥಿಕವಾಗಿ ಸಬಲರಲ್ಲದ ಹಸಲರು ಉಡುಪುಗಳು ತೀರಾ ಕಳಪೆಮಟ್ಟದಲ್ಲಿರುತ್ತಿದ್ದವು. ಇದನ್ನು ಮೇಲ್ವರ್ಗದವರು ಒಂದು ಅಸ್ತ್ರವನ್ನಾಗಿ ಬಳಸುವ ಮೂಲಕ ಶಿಕ್ಷಣ ಸಿಗದಂತೆ ನೋಡಿಕೊಳ್ಳುತ್ತಿದ್ದರು.

[illegible]

ಸರ್ಕಾರಿ ಶಾಲೆಗಳು ಬಂದಾಗಲೂ ಕೂಡ ಅಲ್ಲಿಯೂ ಮಡಿ, ಮೈಲಿಗೆಯ ಹೆಸರಿನಲ್ಲಿ ತುಂಬಾ ಕೀಳು ಭಾವನೆಯಿಂದ ನೋಡುತ್ತಿದ್ದರು. ಹಸಲರು ಶಾಲೆ ಪ್ರವೇಶಿಸಿದರೆ ಅಪಚಾರ ಶಾಲೆ ಮೈಲಿಗೆ ಆಗುತ್ತದೆ ಎನ್ನುವಂತ ನಾನಾ ಡೊಂಕು ನೆಪಗಳ ಮೂಲಕ ಅವರಿಗೆ ಶಾಲೆಗೆ ಪ್ರವೇಶಿಸದಂತೆ ನೋಡಿಕೊಳ್ಳಲಾಗುತ್ತಿತ್ತು.

ಗಿರಿಜನ ಆಶ್ರಮ ಶಾಲೆಯ ಪ್ರಾರಂಭದಲ್ಲಿ ಹಸಲರು ಶಾಲೆಗೆ ಮಕ್ಕಳನ್ನು ಕಳುಹಿಸಲು ಹಿಂದೇಟು ಹಾಕುತ್ತಿದ್ದರು. ಮಕ್ಕಳನ್ನು ಬಿಟ್ಟಿರುವದು ಸಾಧ್ಯವಾಗದ ಕೆಲಸ ನಮ್ಮ ಮಕ್ಕಳು ನಮ್ಮ ಜೊತೆಯೆ ಇರಲಿ ಎನ್ನುವ ಹಂಬಲ ಅವರದಾಗಿತ್ತು. ಸರ್ಕಾರವೇ ಸ್ವಃತ ಮುಂದೆ ನಿಂತು ಅನೇಕ ಸೌಲಭ್ಯಗಳನ್ನ ಕಲ್ಪಿಸಿಕೊಟ್ಟಾಗಲೂ ಹಸಲರು ಶಾಲೆಯ ಕಡೆ ತಿರುಗಿಯೂ ನೋಡಲಿಲ್ಲ. ೧೯೫೫ರಲ್ಲಿ ಯುವ ನೇತಾರನ ರೂಪದಲ್ಲಿ ಗಿರಿಜನ ಆಶ್ರಮಶಾಲೆಗೆ ಉತ್ಸಾಹಿ ಶಿಕ್ಷಕರೊಬ್ಬರ ಆಗಮನವಾಯಿತು. ಅದೇ ಶಿಕ್ಷಕರು ಮುಂದೆ ಹಸಲರಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದರು. ಆರಂಭದಲ್ಲಿ ತಮ್ಮ ಸೇವೆ ಸಲ್ಲಿಸಲು ಮತ್ತ ಹಸಲರ ಮನವೊಲಿಸುವ ಪ್ರಯತ್ನಕ್ಕೆ ಸೋಲಾಯಿತು. ಆದರೆ ಛಲ ಬಿಡದೆ ತ್ರಿವಿಕ್ರಮನಂತೆ ನಿರಂತರವಾಗಿ ಹಸಲರ ಮನೆ, ಮನೆಗೆ ತೆರಳಿ ಸುಮಾರು ೨೫ ಮಕ್ಕಳನ್ನು ಶಾಲೆಗೆ ಸೇರಿಸುವಲ್ಲಿ ಯಶಸ್ವಿಯಾದರು. ಆರಂಭದಲ್ಲಿ ಕಾಯಿಲೆ ಕಜ್ಜಿಗಳಿಂದ ನರಳುತ್ತಿದ್ದ ಮಕ್ಕಳಿಗೆ ಚಿಕಿತ್ಸೆ ನೀಡುವ ಮೂಲಕ ಅವರ ಮನವೊಲಿಸುವ ಪ್ರಯತ್ನದಲ್ಲಿ ಯಶಸ್ವಿಯಾದರು. ಹೀಗೆ ಶಿಕ್ಷಣದ ಬಗ್ಗೆ ಆರಂಭಿಕ ಜ್ಞಾನ ಒದಗಿಸಿದ ಆ ಉತ್ಸಾಹಿ ಯುವಕ ಮುಂದೆ ಬಗ್ಗಿ ಬಾಗಿದ ಹಸಲರನ್ನು ಜವಾಬ್ದಾರಿಗಳನ್ನು ಗುರುತಿಸುವ ಮೂಲಕ ನಾಗರೀಕ ಪ್ರಪಂಚಕ್ಕೆ ನವ ನಾಗರೀಕರನ್ನಾಗಿ ಸಿದ್ಧಪಡಿಸುವ ಕಾರ್ಯಕ್ಕೆ ಧುಮಕಿದರು ಹಸಲರ ಪ್ರತಿ ಆಗು ಹೋಗುಗಳಿಗೆ ಪ್ರತಿ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಅವರಲ್ಲಿ ತಾವೊಬ್ಬರಾಗಿ ನಿರಂತರವಾಗಿ ಶ್ರಮಿಸಿ ಹಸಲರಿಗೆ ಶಿಕ್ಷಣವನ್ನು ಕೊಡಿಸಿದರು.

ಹಿರೇಮನೆ ಪ್ರಾರಂಭದಲ್ಲಿ ಮಹಾತ್ಮಗಾಂಧಿ ಗಿರಿಜನ ಆಶ್ರಯ ಶಾಲೆ ಕುಂಟುತ್ತ ಸಾಗಿತ್ತು. ಸುಮಾರು ಆರು ವರ್ಷದವರೆಗೂ ವಿದ್ಯಾರ್ಥಿಗಳ ಸಂಖ್ಯೆ ಇಪ್ಪತ್ತೈದು ಮೀರಿರಲಿಲ್ಲ. ಶಾಲೆ ಪ್ರಾರಂಭದಲ್ಲಿ ಮಕ್ಕಳು ಹೆದರಿಕೊಂಡು ಓಡಿಹೋಗುವುದು, ಬರುವುದು ನಡದೇ ಇತ್ತು. ಇವು ಆರಂಭದ ಸಮಸ್ಯೆಗಳಾಗಿದ್ದವು. ೧೯೬೫ರ ಬಳಿಕ ಹಸಲರ ಮಕ್ಕಳು ಶಾಲೆಗೆ ದಾಖಲಾಗವುದು ಹೆಚ್ಚಾಯಿತು. ೧೯೬೭-೬೮ರಲ್ಲಿ ಮಕ್ಕಳ ಸಂಖ್ಯೆ ೭೫ಕ್ಕೆ ಏರಿತು. ೧೯೭೯-೭೦ರಲ್ಲಿ ೧೦೦ಕ್ಕೆ ಏರಿತು. ಪ್ರಾರಂಭದಲ್ಲಿ ಹಿರೇಮನೆ ಗಿರಿಜನ ಆಶ್ರಮಶಾಲೆ ಕೇವಲ ನಾಲ್ಕನೇ ತರಗತಿವರೆಗೆ ಮಾತ್ರ ಇತ್ತು. ಇಲ್ಲಿಯವರೆಗೆ ಶಿಕ್ಷಣ ಪಡೆಯುವ ಅವಕಾಶ ಪಡೆದ ಹಸಲರು ಮುಂದಿನ ತರಗತಿಗೆ ಹೋಗಲಿಕ್ಕೆ ಸಮಸ್ಯೆಗಳು ಸೃಷ್ಟಿಯಾದವು. ಸರ್ಕಾರದ ಪ್ರಯತ್ನ ಇಲ್ಲಿ ವಿಫಲವಾಯಿತು. ಆ ಕಾರಣಕ್ಕೆ ಸರ್ಕಾರವು ತನ್ನ ವೈಫಲ್ಯವನ್ನು ಅರಿತು ಹಸಲರ ಮಕ್ಕಳಿಗೆ ಮುಂದಿನ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿಕೊಡುವ ದೃಷ್ಟಿಯಿಂದ ತಾಳಗುಪ್ಪದಲ್ಲಿ ಗಿರಿಜನ ವಸತಿ ಗೃಹ ಪ್ರಾರಂಭಿಸಿತು.

[illegible]

ಈ ಅನುಕೂಲತೆಯ ಲಾಭ ಪಡೆದ ಹಸಲರ ಮಕ್ಕಳು ತಮ್ಮ ಪ್ರೌಢ ಶಾಲಾ ಶಿಕ್ಷಣ ಮುಂದುವರಿಸಲು ಸಾಧ್ಯವಾಯಿತು. ಆಶ್ರಮ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ವೃದ್ಧಿಯಾಯಿತು.

ಹಸಲರ ಸಾಮಾಜಿಕ ಬದಲಾವಣೆಯಲ್ಲಿ ಎನ್.ಹುಚ್ಚಪ್ಪ ಮಾಸ್ತರರ ಪಾತ್ರ

ಹಸಲರ ಬದುಕಿನಲ್ಲಿ ಆಶಾದೀಪವಾಗಿ ೧೯೫೫ರಲ್ಲಿ ಗಿರಿಜನ ಆಶ್ರಮಶಾಲೆಗೆ ಸಾಮಾನ್ಯ ಶಿಕ್ಷಕರಾಗಿ ಬಂದ ಎನ್.ಹುಚ್ಚಪ್ಪ ಮಾಸ್ತರ ಎಂಬ ಜನಪದ ವಿದ್ವಾಂಸ ಹಸಲರ ಮಕ್ಕಳಿಗೆ ವಿದ್ಯಾಭ್ಯಾಸ ಮತ್ತು ಅವರ ಪುನರ್ವಸತಿ ಯೋಜನೆ ಕಲ್ಪಿಸುವಲ್ಲಿ ಮಾಸ್ತರರ ಪಾತ್ರ ಅವಿಸ್ಮರಣೀಯವಾದದ್ದು. ಸಾಗರ ತಾಲೂಕಿನ ಪ್ರತಿ ಹಸಲ ಕುಟುಂಬದ ಶೈಕ್ಷಣಿಕ, ಸಾಮಾಜಿಕ ಪರಿವರ್ತನೆಗೆ ಕಾಣದ ಶಕ್ತಿಯಾಗಿ ಮಾಸ್ತರರ ಪಾತ್ರ ಗಮನಾರ್ಹವಾದದ್ದು. ಹಲಸರಿಗೂ ಮತ್ತು ಮಾಸ್ತರಿಗೂ ತುಂಬಾ ಅವಿನಾಭಾವ ಸಂಬಂಧದ ಕುರಿತು ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ ಸಾಕ್ಷಿಯಾಗಿದೆ. ಹಸಲರು ಹೇಳುವಂತೆ ಆಶ್ರಮ ಶಾಲೆಗಳಲ್ಲಿ ಸಮುದಾಯದವರೇ ಶಿಕ್ಷಕರಿರಬೇಕು. ಎನ್ನುವ ವಾದ ತಪ್ಪು. ಶಿಕ್ಷಕರು ಯಾರಾಗಿದ್ದರೂ ಪರವಾಗಿಲ್ಲ ಅವರು ನಮ್ಮನ್ನು ಉದ್ಧಾರ ಮಾಡುವಂತ ಶಿಕ್ಷಣ ನೀಡಲು ಸಮರ್ಥರಾಗಿದ್ದಾರೆ. ಸಾಕು. ಹುಚ್ಚಪ್ಪ ಮಾಸ್ತರರಂತ ದೀವರ ಸಮುದಾಯದ ವ್ಯಕ್ತಿ ಒಬ್ಬ ವಿದ್ವಾಂಸ ಸಮುದಾಯದ ಉದ್ಧಾರಕ್ಕೆ ಮಾಡಿದ ಹೋರಾಟ ಅಷ್ಟಿಷ್ಟಲ್ಲ. ಅವರಿಂದ ಇವತ್ತು ಸಮುದಾಯದಲ್ಲಿನ ಯುವಕರು ಬಿ.ಎ., ಬಿ.ಎಸ್ಸಿ., ಬಿ.ಕಾಂ., ಎಂ.ಎ., ಮಾಡುವಷ್ಟು ಬೆಳೆದಿದ್ದಾರೆ. ೧೯೭೫ರಲ್ಲಿ ಎಸ್.ಎಸ್.ಎಲ್.ಸಿ. ಪಾಸ್ ಮಾಡಿದ ಅನೇಕರು ಇಂದು ಸರ್ಕಾರಿ ಉದ್ಯೋಗಗಳಲ್ಲಿದ್ದಾರೆ. ಇದರಲ್ಲಿಯೂ ಎನ್.ಹುಚ್ಚಪ್ಪ ಮಾಸ್ತರರ ಶ್ರಮಕ್ಕೆ ದೊರೆತ ಪ್ರತಿಫಲ. ನಾವು ಬದಲಾಗಿದ್ದೇವೆ ಅಂತ ಹೇಳುವದಾದರೆ ಅದರ ಹಿಂದಿನ ಪ್ರೇರಕ ಶಕ್ತಿ ಮಾಸ್ತರರೇ ಆಗಿದ್ದಾರೆ. ಮಾಸ್ತರಂತ ಶಿಕ್ಷಕರು ಸಿಕ್ಕಿರುವುದು ನಮ್ಮ ಪೂರ್ವ ಜನ್ಮ ಸುಕೃತವೆಂದು ಹಲವಾರು ಹಸಲರ ಹಿರಿಯ ಕಿರಿಯರು ಮಾಸ್ತರನ್ನು ಕೊಂಡಾಡಿದರು. ಅಂತಹ ಮಾದರಿ ವ್ಯಕ್ತಿತ್ವ ಅವರದಾಗಿತ್ತು. ಅವರು ಎಂದು ಗಿರಿಜನ ಆಶ್ರಮ ಶಾಲೆಗೆ ಬಂದರೋ ಅಂದೇ ನಮ್ಮಲ್ಲಿನ ಅನಿಷ್ಟಗಳು, ಅಸ್ಪೃಶ್ಯತೆಯ ಭಾವನೆಯನ್ನು, ಮೂಢನಂಬಿಕೆಯನ್ನು ಹೋಗಲಾಡಿಸಿದರು. ಅವರಂಥ ಆದರ್ಶ ಶಿಕ್ಷಕರು ಗಿರಿಜನ ಆಶ್ರಮಶಾಲೆಗಳಲ್ಲಿ ಇರಬೇಕು ಆಗ ಮಾತ್ರ ಸಾಮಾಜಿಕ ಸ್ಥಾನ ಮಾನದಲ್ಲಿ ಬದಲಾವಣೆ ಸಾಧ್ಯವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಗಮನಿಸಿದರೆ ಅವರ ಸ್ಥಿತ್ಯಂತರಕ್ಕೆ ಎನ್.ಹುಚ್ಚಪ್ಪ ಮಾಸ್ತರ ಮಹತ್ವ ತಿಳಿಯುತ್ತದೆ. ಗಿರಿಜನ ಆಶ್ರಮ ಶಾಲೆಗೆ ಹುಚ್ಚಪ್ಪ ಮಾಸ್ತರ ಬಂದ ಮೇಲೆಯೆ. ಹಸಲರು ಶಿಕ್ಷಿತರಾಗಿರುವುದು ಮತ್ತು ಸ್ತ್ರೀ ಪುರುಷ ಎನ್ನದೇ ಎಲ್ಲರೂ ಶಾಲೆಗೆ ಹೋಗುವ ಅವಕಾಶ ದೊರೆತಿದ್ದು, ಅವರ ಪ್ರಯತ್ನದ ಫಲವಾಗಿ ಹಸಲರಿಗೆ ದೊರೆತ ಶಿಕ್ಷಣ ಮುಂದೆ ಎಲ್ಲಿ ಬದಲಾವಣೆಗಳಿಗೆ ಕಾರಣಿಭೂತವಾಯಿತು. ಗಿರಿಜನ ಆಶ್ರಮಶಾಲೆಗಳು ಹಸಲರ ಮೇಲೆ ತುಂಬಾ ಗಾಢವಾದ ಪರಿಣಾಮ ಬೀರಿದವು. ೫೦ ವರ್ಷಗಳಿಂದಲೂ ಸಮುದಾಯದ ಎಲ್ಲರು ಶಿಕ್ಷಣದ ವಿಷಯದಲ್ಲಿ ಬಲಿಷ್ಟವಾಯಿತು. ಶಿಕ್ಷಣ ವ್ಯವಸ್ಥೆಯನ್ನು ಸಮಾಜದಿಂದ

[illegible]

ಸಮಾಜಕ್ಕೆ ಪೀಳಿಗೆಯಿಂದ ಪೀಳಿಗೆಗೆ ಕೊಂಡೊಯ್ಯುವಂತ ಕಾರ್ಯವನ್ನು ಎನ್.ಹುಚ್ಚಪ್ಪ ಮಾಸ್ತರ ಮಾಡಿದರು. ತನ್ಮೂಲಕ ಸಮಾಜದಲ್ಲಿ ಕಾಲಕಾಲಕ್ಕೆ ಬದಲಾವಣೆ ತರಲು ಹಾಗೂ ಬದಲಾವಣೆಯನ್ನು ಸ್ವೀಕರಿಸಲು ಪ್ರೇರಣೆ ಮಾಡುವ ಪ್ರಬಲ ಶಕ್ತಿಯಾಗಿ ಶಿಕ್ಷಣ ಹಸಲರನ್ನು ರೂಪಿಸಿತು. ಹೀಗಾಗಿ ಹಸಲರು ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಸಬಲರನ್ನಾಗಿ ಮಾಡಿದ ಶ್ರೇಯಸ್ಸು ಅವರದಾಗಿತ್ತು. ಪ್ರಾರಂಭದಲ್ಲಿ ಹಸಲರ ವಿರೋಧವನ್ನು ಕಟ್ಟಿಕೊಂಡು ನಂತರದಲ್ಲಿನ ಅವರ ವಿಶ್ವಾಸಗಳಿದ್ದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಹುಚ್ಚಪ್ಪ ಮಾಸ್ತರರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಈ ರೀತಿಯಲ್ಲಿ ಮಾಸ್ತರರು ಹಸಲರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅವರಿಗೆ ಶಿಕ್ಷಣ, ದೈನಂದಿನ ಜೀವನ ಬದುಕು, ನಿರ್ಮಲತೆಗೆ ಸಮಾಜದ ಮುಖ್ಯವಾಹಿನಿಗೆ ಅಜ್ಞಾನ ಹೋಗಲಾಡಿಸಿ ಜ್ಞಾನ ಹೊಸ್ತಿಲಿಗೆ ತಂದು ನಿಲ್ಲಿಸಿದ್ದಾರೆ. ಅವರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಅಧಿಕಾರಿ ಬೇಟಿ ಮಾಡಿಸುವುದರ ಜೊತೆ ಅವರ ಅಭಿವೃದ್ಧಿಗಾಗಿ ಇರುವ ವಿವಿಧ ಯೋಜನೆಗಳು ಪರಿಚಯಿಸಿ ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಅವರನ್ನು ಬೆಳೆಸಿದ ಶ್ರೇಯಸ್ಸು ಮಾಸ್ತರರದ್ದು. ಇದು ಮಾಸ್ತರರು ಹಸಲರ ಬಗೆಗಿನ ತೀವ್ರ ಕಾಳಜಿಯ ಮನೋಭಾವನೆಯನ್ನು ತೋರಿಸುತ್ತದೆ. ಹೀರೆಮನೆ ಹಸಲರ ಶೈಕ್ಷಣಿಕ ಪರಿವರ್ತನೆಗೆ ಹುಚ್ಚಪ್ಪ ಮಾಸ್ತರರ ಪಾತ್ರವಿತ್ತು. ಏಕೆಂದರೆ ಪ್ರಾಂಭದಿಂದಲೂ ಅವರು ಇಲ್ಲಿಯೆ ಸೇವೆ ಸಲ್ಲಿಸುತ್ತಿದ್ದರು ಆ ಕಾರಣಕ್ಕೆ ಅಲ್ಲಿನ ಹಸಲರ ಶಿಕ್ಷಣವನ್ನು ೧೯೫೯ರಿಂದಲೂ ಪಡೆಯುವ ಮೂಲಕ ಕನಿಷ್ಟ ಕುಟುಂಬದಲ್ಲಿ ಒಬ್ಬರಾದರೂ ಶಿಕ್ಷಣ ಪಡೆದಿದ್ದಾರೆ.

ಹಿರೇಮನೆ ಹಸಲರ ಹಿಂದೆ ಹುಚ್ಚಪ್ಪ ಮಾಸ್ತರರು ಇರುವಂತೆ ಅಂತಹ ಪ್ರಭಾವಿ ಉತ್ಸಾಹಿ ಶಿಕ್ಷಕರಾಗಲಿ, ಸಮಾಜ ಸೇವಕರಾಗಿ ಕುಡುಗುಂಜಿ ಹಲಸರಿಗೆ ಸಿಗಲೇ ಇಲ್ಲ. ಒಂದು ಅಜ್ಞಾತ ದ್ವೀಪದಲ್ಲಿ ಕಾಡುವಾಸಿಗಳಾಗಿ ಜೀವನ ಸಾಗಿಸುತ್ತಿದ್ದ ಹಸಲರು ಜೀತ ದಿನಗೂಲಿಯಲ್ಲಿಯೆ ತಮ್ಮ ಜೀವನ ಮುಂದುವರಿಯುವಂತ ಸ್ಥಿತಿ, ಆದರೂ ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಮತ್ತು ಕೇವಲ ಒಂದು ಪ್ರದೇಶಕ್ಕೆ ಸೀಮಿತರಾಗದ ವ್ಯಕ್ತಿಯಾಗಿ ಹುಚ್ಚಪ್ಪ ಮಾಸ್ತರರು ಕುಡುಗುಂಜಿಯ ಹಸಲರ ಶೈಕ್ಷಣಿಕ ರೂಪಾಂತರಕ್ಕೂ ಕೂಡ ಕಾರಣವಾದರು. ಆದರೆ ಹಿರೇಮನೆಗೆ ಮತ್ತು ಕುಡುಗುಂಜಿಗೂ ಹೋಲಿಕೆ ಮಾಡಿನೋಡಿದಾಗ ಕುಡುಗುಂಜಿಯ ಹಸಲರಿಗೆ ಪ್ರಾಥಮಿಕ ಹಂತದಲ್ಲಿಯೆ ಸಾಕ್ಷರರಾಗಿದ್ದಾರೆ. ವಿನಃ ಉನ್ನತ ಮಟ್ಟದ ಶಿಕ್ಷಣ ಪಡೆಯುವರು ತುಂಬಾ ವಿರಳ ಆಗಿದೆ ಕುಡುಗುಂಜಿಯಲ್ಲಿ ಕೇವಲ ಇಬ್ಬರೆ ಪದವೀಧರರು ಮಾತ್ರ ಕಂಡುಬರುತ್ತಾರೆ. ನಾಗರೀಕ ಸಮಾಜಕ್ಕೆ ಹತ್ತಿರವಾಗಿರುವ ಮತ್ತು ಸಮಾಜದ ಪ್ರಭಾವಕ್ಕೆ ಒಳಗಾದ ಹೀರೇಮನೆ ಹಸಲರು ಒಬ್ಬ ಸ್ನಾತಕೋತ್ತರ ಪದವೀಧರ, ೭ ಪದವಿಪೂರ್ವ ೩೩ ಪ್ರೌಢ, ೪೪ ಪ್ರಾಥಮಿಕ ಶಿಕ್ಷಣವನ್ನು ಪಡೆದವರಿದ್ದಾರೆ. ಹೊಸಗದ್ದೆಯೆಂಬ ಕೇವಲ ೪೨ ಜನಸಂಖ್ಯೆಯನ್ನು ಹೊಂದಿರುವ ಹೊಸಗದ್ದೆ ಎಂಬ ಹಸಲರ ಹಾಡಿಯಲ್ಲಿ ಸುಮಾರು ೨೩ ಜನ ಶಿಕ್ಷಣ ಪಡೆದವರು ಸಿಗುತ್ತಾರೆ. ಆದರೆ ಪ್ರಸ್ತುತವಾಗಿ ಶೈಕ್ಷಣಿಕ

ಪರಿವರ್ತನೆಯಾಗಿದೆ. ಕುಡುಗುಂಜಿ, ಹಿರೇಮನೆ ಮತ್ತು ಹೊಸಗದ್ದೆಗಳಲ್ಲಿ ಇಂದಿನ ಪೀಳಿಗೆ ಅಂದರೆ ಮಕ್ಕಳಿಗೆ ಸ್ತ್ರೀ ಪುರುಷ ಬೇಧವಿಲ್ಲದೆ ಶಿಕ್ಷಣ ಕೊಡಿಸುವಂತ ಕಾರ್ಯಕ್ಕೆ ಪ್ರತಿ ಹಸಲ ಕುಟುಂಬವು ಇಳಿದಿದೆ ಇದು ಶಿಕ್ಷಣ ಎನ್ನವದು ಅವರಲ್ಲಿ ಮೂಡಿಸಿರುವ ಪ್ರಜ್ಞೆಯಾಗಿದೆ. ನಾವು ಕ್ಷೇತ್ರಕಾರ್ಯದ ಅಧ್ಯಯನದಲ್ಲಿ ಕಂಡುಕೊಂಡಿರುವಂತೆ ಸಾಗರ ತಾಲೂಕಿನ ಹಸಲರ ಶೈಕ್ಷಣಿಕ ಕ್ರಾಂತಿಗೆ ಹುಚ್ಚಪ್ಪ ಮಾಸ್ತರರು ಕಾರಣಕರ್ತರಾಗಿದ್ದರು. ಅವರ ಹಿಂದಿನ ಪ್ರೇರಕ ಶಕ್ತಿ ಅವರಾಗಿದ್ದರು. ಅವರೇ ಇಲ್ಲದೆ ಹೋಗಿದ್ದರೆ ಅನಾಗರೀಕ ಜೀವನ ನಮ್ಮದಾಗಿರುತ್ತಿತ್ತು ಎನ್ನುವ ಅಭಿಪ್ರಾಯ ಬಹಳಷ್ಟು ಹಸಲರು ವ್ಯಕ್ತಪಡಿಸಿದ್ದರು. ಹುಚ್ಚಪ್ಪ ಮಾಸ್ತರರ ಪ್ರಯತ್ನದ ಫಲವಾಗಿ ಹಸಲರು ಸ್ವಲ್ಪ ಮಟ್ಟಿಗಾದರು ಬದುಕು ಬರಹ ಕಲಿತಿದ್ದಾರೆ. ಸಾಕ್ಷರತೆ ಆಂದೋಲನವಾಗಿದೆ. ಈ ಮೂಲಕ ಹಸಲರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾದ ಬದಲಾವಣೆ ಕಂಡುಕೊಂಡಿದ್ದಾರೆ.

ಪ್ರಚಲಿತ ಸಂದರ್ಭದಲ್ಲಿ ಹಲಸರಿಗೆ ಗುಣಮಟ್ಟದ ಶಿಕ್ಷಣವನ್ನು ಹೆಚ್ಚಿಸಲು ಸರಕಾರ ಅಕ್ಷರ ದಾಸೋಹ, ಪರಿಹಾರ ಬೋಧನೆ ಸರ್ವ ಶಿಕ್ಷಣ ಅಭಿಯಾನ, ಚಿಣ್ಣರ ಅಂಗಳ, ನಲಿಕಲಿ, ಅಶಾಕಿರಣ ಹೀಗೆ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಹೆಚ್ಚಿನ ಹಣಕಾಸು ನೆರವು ನೀಡುವತ್ತ ಗಮನಹರಿಸಿದೆ ಇಷ್ಟಾಗಿಯೂ ಸರಕಾರಿ ಶಾಲೆಗಳು ಮತ್ತು ಗಿರಿಜನ ಆಶ್ರಮ ಶಾಲೆಗಳ ಗುಣಮಟ್ಟದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಂಡುಬರುತ್ತಿಲ್ಲ. ಈ ಯೋಜನೆಗಳು ಸಮರ್ಥವಾಗಿ ಅನುಷ್ಠಾನಗೊಳಿಸಿ ಶಿಕ್ಷಣದ ಗುಣಮಟ್ಟ ಸುಧಾರಿಸುವಲ್ಲಿ ಸರ್ಕಾರದ ಪ್ರಾಮಾಣಿಕ ಪ್ರಯತ್ನಮಾಡಬೇಕಾಗಿದೆ. ಕ್ಷೇತ್ರಕಾರ್ಯದಲ್ಲಿ ಗಿರಿಜನ ಆಶ್ರಮ ಶಾಲೆಯ ಶಿಕ್ಷಕಿಯಾದ ವಿಜಯಲಕ್ಷ್ಮಿ ನಾಯ್ಕ ನೀಡಿರುವ ಮಾಹಿತಿಯನ್ನು ಗಮನಿಸಿದಾಗ ಹಸಲರು ಮಕ್ಕಳಿಗೆ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಉತ್ಸುಕರಾಗಿದ್ದಾರಾದರೂ ಗಿರಿಜನ ಆಶ್ರಮಶಾಲೆಯಲ್ಲಿ ಶಿಕ್ಷಕರ ಕೊರತೆ, ವಸತಿ ನಿಲಯಗಳ ಅಸಮರ್ಪಕ ಕಾರ್ಯನಿರ್ವಹಣೆ ಕಾರಣಕ್ಕೆ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ, ಸರ್ಕಾರಿ ಶಾಲೆಗಳಲ್ಲಿ ಸೇರಿಸುತ್ತಿದ್ದಾರೆ ಏನೇ ಆದರೂ ಶಿಕ್ಷಣ ಎನ್ನವುದು ಹಸಲರನ್ನು ಪರಿವರ್ತನ ಮನ್ವಂತರಕ್ಕೆ ತಂದು ನಿಲ್ಲಿಸಿದೆ. ಅವರಲ್ಲಿ ಏನೇ ಬದಲಾವಣೆಯಾದರು ಅದು ಶಿಕ್ಷಣದಿಂದ ಮಾತ್ರ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲದೆ ಹೇಳಬಹುದಾಗಿದೆ. ಹಿರೇಮನೆ ಮತ್ತು ಕುಡುಗುಂಜಿ ಹಸಲರ ಬದಲಾವಣೆಯಲ್ಲಿ ಶಿಕ್ಷಣ ಬಹುಮುಖ್ಯವಾದ ಪಾತ್ರ ನಿಭಾಯಿಸಿದೆ ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಕುಂಠಿತಗೊಂಡಾಗಲೂ ಅವರು ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಬದಲಾಗಿದ್ದಾರೆ. ಶಿಕ್ಷಣ ಅವರನ್ನು ರಾಜಕೀಯ ಪ್ರಜ್ಞೆಯನ್ನು ಮೂಡಿಸಿದೆ ಎನ್ನುವ ಕಾರಣಕ್ಕೆ ಸ್ಥಳೀಯ ಸಂಸ್ಥೆಗಳಲ್ಲಿ ಗ್ರಾಮಪಂಚಾತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ನಗರಸಭೆಗಳಲ್ಲಿ ಸ್ಪರ್ಧಿಸುತ್ತಿದ್ದಾರೆ. ಸ್ಪರ್ಧಿಸಿ ಸದಸ್ಯರು ಆಗಿದ್ದಾರೆ. ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಿರುವುದು, ಶಿಕ್ಷಣ ಪಾತ್ರ ಅಮೋಘವಾದುದ್ದು. ಇಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪಡೆದ ಹಸಲರು,

ಪರಿಚಾರಕರಾಗಿ, ಅಧಿಕ್ಷರಾಗಿ, ಸೇವಕರಾಗಿ, ಮೆಕಾನಿಕ್‌ರಾಗಿ, ಕ್ಲರ್ಕ್‌ಗಳಾಗಿ ಸೇವೆ ಮಾಡುತ್ತಿದ್ದಾರೆ. ಧಾರ್ಮಿಕವಾಗಿ ಶಿಕ್ಷಣ ಅವರನ್ನು ಆಧುನೀಕರಣಕ್ಕೆ ತಂದು ನಿಲ್ಲಿಸಿದೆ. ಸಮಾಜದಲ್ಲಿ ತಮ್ಮ ಸ್ಥಾನ ಮಾನಗಳನ್ನು ಮತ್ತು ಜಾತಿ ವ್ಯವಸ್ಥೆ ಅಸ್ಪೃಶ್ಯತೆ, ಹೋಗಲಾಡಿಸಿ ಹೋರಾಟ, ಸಂಘ, ಸಂಘಟನೆ ಪ್ರವೃತ್ತಿಯನ್ನು ಶಿಕ್ಷಣ ಬೆಳಸಿದೆ. ಶಿಕ್ಷಣ ಪಡೆದ ಯುವಕರು ತಮ್ಮ ಸಮುದಾಯದ ಹಿತಾಸಕ್ತಿಗಳಿಗೆ ದಕ್ಕೆಯಾದಾಗ ಹೋರಾಟಕ್ಕೆ ಇಳಿಯುವ ಪ್ರವೃತ್ತಿ ಹೆಚ್ಚಾಗತೊಡಗಿದೆ. ಇದೆಲ್ಲದಕ್ಕೂ ಶಿಕ್ಷಣವೇ ಕಾರಣವಾಗಿದೆ. ಹಸಲರ ಪ್ರತಿ ಪರಿವರ್ತನೆಗೆ ಕಾರಣ ಪುರುಷ ಹುಚ್ಚಪ್ಪ ಮಾಸ್ತರರು ಆಗಿದ್ದರು. ಅವರು ಹಸಲರನ್ನು ಬದಲಾಯಿಸಲು ಬಳಸಿದ ಸಾಧನವೇ ಶಿಕ್ಷಣ ಆ ಕಾರಣಕ್ಕಾಗಿ ಇಂದು ಹಸಲರು ಬದಲಾಗಿದ್ದಾರೆ ಎಂಬುವದು ಕ್ಷೇತ್ರಕಾರ್ಯದ ಅಧ್ಯಯನದಲ್ಲಿ ಕಂಡುಕೊಂಡ ಮಾಹಿತಿಯಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಬುಡಕಟ್ಟು ಮಕ್ಕಳಿಗೆ ನೀಡುವ ಶಿಕ್ಷಣ ಬದಲಾಗಬೇಕಿದೆ

ಸಮಾಜದ ಕೊನೆಯ ಸ್ತರದಲ್ಲಿರುವ ವ್ಯಕ್ತಿ ಶಿಕ್ಷಣದ ಬಳಿಗೆ ಬರಲಾಗದಿದ್ದರೆ ಶಿಕ್ಷಣವೇ ನಿರ್ಲಕ್ಷಿತರನ್ನು ಹುಡುಕಿಕೊಂಡು ಹೋಗಬೇಕು. ಇಲ್ಲದೇ ಹೋದರೆ ಶಿಕ್ಷಣ ವ್ಯವಸ್ಥೆ ಎನ್ನುವುದು ನಿಷ್ಪ್ರಯೋಜಕವೆಂದು ಸ್ವಾಮಿ ವಿವೇಕಾನಂದರು ಶತಮಾನದ ಹಿಂದೆಯೆ ಹೇಳಿದ್ದರು. ಈ ಮಾತು ಇಂದಿಗೂ ಪ್ರಸ್ತುತ, ಸನಾತನ ಶಿಕ್ಷಣ ವ್ಯವಸ್ಥೆಯಿದ ಸರ್ವರಿಗೂ ಶಿಕ್ಷಣ, ಸಮಗ್ರ ಶಿಕ್ಷಣ, ಜೀವನ ಶಿಕ್ಷಣ ನೈತಿಕ ಶಿಕ್ಷಣ ವಾಸ್ತವ ಸಾಮಾಜಿಕ ನ್ಯಾಯದೊರಕಿಸುವಂತ ಶಿಕ್ಷಣಬೇಕಾಗಿದೆ. ಹಿಂದೆ ಶಿಕ್ಷಣ ಎನ್ನುವುದು ಬ್ರಾಹ್ಮಣರ ವರ್ಗ ಸ್ವತ್ತಾಗಿತ್ತು. ಪ್ರಸ್ತುತ ಶ್ರೀಮಂತರ, ಬಂಡವಾಳಶಾಹಿಗಳ ಸ್ವತ್ತಾಗಿದೆ. ಯಾರ ದುಡ್ಡಿದೆ ಅವರು ಉದ್ಯೋಗ ಗಿಟ್ಟಿಸುತ್ತಿದಾರೆ. ಇಂದಿನ ಶಿಕ್ಷಣ ಹಣ ಸಂಪಾದಿಸುವ ಸಾಧನ, ಸಾಮಾಜಿಕ ಸ್ಥಾನಮಾನವನ್ನು ಉಳ್ಳವರಿಗೆ ಕಲ್ಪಿಸಿಕೊಡುವ ಸಾಧನವಾಗಿದೆ. ಶಿಕ್ಷಣ ಎನ್ನುವುದು ಜನಸಾಮಾನ್ಯರ ಮೇಲೆ ಯಾವ ರೀತಿಯಾದ ಪರಿಣಾಮ ಬೀರಿದೆ ಎನ್ನುವುದು ಕೂಲಂಕಷವಾಗಿ ಪರಿಶೀಲಿಸುವ ಅಗತ್ಯತೆ ಇದೆ.

ಸರ್ವರಿಗೂ ಶಿಕ್ಷಣ ನೀಡುವುದು ಸರ್ಕಾರದ ಕರ್ತವ್ಯ. ಸಂವಿಧಾನದಲ್ಲಿ ಅದೊಂದು ಹಕ್ಕು ಆದರೆ ಜನಸಾಮಾನ್ಯರ ಜೀವನ ನಿರ್ಮಿಸುವಲ್ಲಿ ಅದು ಎಷ್ಟು ಸಫಲವಾಗಿದೆ. ಸರ್ವಶಿಕ್ಷಣ ಅಭಿಯಾನ ಏಕೆ ಮರೀಚಿಕೆಯಾಗಿದೆ. ಖಾಸಗೀಕರಣಗೊಂಡ ಶಿಕ್ಷಣ ಶೋಷಿತರಿಗೆ, ಬಡವರಿಗೆ ದಿಶೆ ತೋರಿಸುವ ನಿಟ್ಟಿನಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದೆ. ಬುಡಕಟ್ಟು ಮಕ್ಕಳ ಅಭಿವೃದ್ಧಿಗಾಗಿ ತೆರೆಯಲ್ಪಟ್ಟ ಆಶ್ರಮ ಶಾಲೆಗಳು, ಉಚಿತ ವ್ಯವಸ್ಥೆಗಳು ವಸತಿನಿಲಯಗಳು, ಹಸಲರಲ್ಲಿ ಪರಿವರ್ತನೆ ತರುವ ನಿಟ್ಟಿನಲ್ಲಿ ಪ್ರಯತ್ನದಲ್ಲಿ ಯಶ ಸಾಧಿಸಿವೆಯೆ ಎನ್ನುವುದನ್ನು ಪರಿಶೀಲಿಸುವುದು ಪ್ರಸ್ತುತ ಸಂದರ್ಭದಲ್ಲಿ ಅತ್ಯವಶ್ಯಕವಾಗಿದೆ.

ಶಿಕ್ಷಣದ ವಿಷಯದಲ್ಲಿ ತೀರಾ ಹಿಂದುಳಿದ ಹಸಲರು ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಹಂತದಲ್ಲಿ ಶಿಕ್ಷಣವನ್ನು ಕುಂಠಿತಗೊಳಿಸಿದ್ದಾರೆ. ಇದಕ್ಕೆ ಕಾರಣವೇನು? ಎನ್ನುವದನ್ನು ಪತ್ತೆ ಹಚ್ಚುವ ಆಗತ್ಯತೆ ಇದೆ.

ವಸತಿ ನಿಲಯಗಳ, ಸಮರ್ಪಕ ಕಾರ್ಯನಿರ್ವಹಣೆ ವಸತಿ ನಿಲಯಗಳು ಮನೆಯ ವಾತಾವರಣವನ್ನು ಕಲ್ಪಿಸುವ ಕೇಂದ್ರಗಳನ್ನಾಗಿಸುವ ಮೂಲಕ ಮತ್ತು ಉತ್ತಮ ಶಿಕ್ಷಕರನ್ನು ನೇಮಿಸುವುದು ಆದಷ್ಟು ಮಟ್ಟಿಗೆ ಶಿಕ್ಷಕರ ಕೊರತೆ ಎದುರಾಗದಂತೆ ನೋಡಿಕೊಳ್ಳುವದು, ಹಸಲರಿಗೆ ಪ್ರೌಢ ಮತ್ತು ಪದವಿ ಪೂರ್ವ, ಪದವಿ ಹಂತಗಳಲ್ಲಿ ಶಿಕ್ಷಣ ದೊರೆಯುವಂತೆ ಸಹಾಯಧನ, ವಿದ್ಯಾರ್ಥಿ ವೇತನ ದೊರೆಯವಂತೆ ಅವಕಾಶ ಮಾಡಿಕೊಡಬೇಕಾಗಿದೆ, ಅವರ ದೈನಂದಿನ ಬದುಕಿನಲ್ಲಿ ಎದುರುಗೊಳ್ಳವ ಅನೇಕ ಸಮಸ್ಯೆಗಳನ್ನು ನಿವಾರಿಸಿ ಶಿಕ್ಷಣದ ಸಾಮರ್ಥ್ಯಕ್ಕೆ ತಕ್ಕಂತೆ ಉದ್ಯೋಗ ಸೃಷ್ಟಿ, ಸ್ವಉದ್ಯೋಗಗಳನ್ನು ಮಾಡಲು ಸಹಾಯಕವಾಗುವ ಶಿಕ್ಷಣವನ್ನು ಪ್ರಸ್ತುತ ಸಂದರ್ಭದಲ್ಲಿ ನೀಡುವದು ಅತ್ಯವಶ್ಯಕವಾಗಿದೆ.

೪.೨. ಸಾಮಾಜಿಕ ಚಳುವಳಿಗಳು

'ಇತಿಹಾಸದ ಉದ್ದಕ್ಕೂ ಕೆಲವು ಸಮೂಹಗಳು ತಮ್ಮ ಸಮಾಜದ ಪರಂಪರಾಗತ ಸಂಬಂಧಗಳಲ್ಲಿ ನಿಯಮಗಳಲ್ಲಿ ಸಾಮಾಜಿಕ ಸಂಸ್ಥೆಗಳಲ್ಲಿ ಪರಿವರ್ತನೆಯನ್ನು ತರಲು ಅಥವಾ ತಡೆಯಲು ಯತ್ನಿಸಿದನ್ನು ನೋಡಬಹುದು. ಇಂತಹ ಸಾಮಾಜಿಕ ಯತ್ನಗಳನ್ನು ಅಥವಾ ಹೋರಾಟಗಳನ್ನು ಸಾಮಾಜಿಕ ಚಳುವಳಿಗಳೆಂದು ಕರೆಯುತ್ತಾರೆ.'[೧] ಇಂತಹ ಹೋರಾಟಗಳು ಕರ್ನಾಟಕದ ಮಟ್ಟಿಗೆ ತುಂಬಾ ವಿರಳ ಆದರೂ ಇತಿಹಾಸದ ಪುಟಗಳಲ್ಲಿ ರೈತಹೋರಾಟಗಳು, ದಲಿತ ಕಾರ್ಮಿಕ, ಶೈಕ್ಷಣಿಕ, ರಾಜಕೀಯ, ಹೋರಾಟಗಳು ದಾಖಲಾಗಿವೆ. ಈ ಆಧಾರದ ಮೇಲೆ ಕರ್ನಾಟಕದ ಜನರನ್ನು ನಿಷ್ಟುರು ಸಾಂಪ್ರದಾಯವಾದಿಗಳು ಬಲಾಢ್ಯ ಹೀನರು, ವ್ಯವಸ್ಥೆ ಬದಲಾವಣೆಗೆ ಹಿಂಜರಿಯುವರು ಎಂದೆಲ್ಲಾ ಜರಿಯುವಂತಿಲ್ಲ. ಅವರು ಕೂಡ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳಬಲ್ಲರು. ನ್ಯಾಯವನ್ನು ಪಡೆಯಲು ಹೋರಾಟ ಮಾಡುವ ಮನೋಭಾವ ಹೊಂದಿದವರು ಎಂಬುದಾಗಿ ತಿಳುಯುತ್ತದೆ.

'ಸಾಮಾಜಿಕ ಚಳುವಳಿಗೆ ಅಧ್ಯಯನಕ್ಕೆ ನಾಂದಿ ಹಾಡಿದ ಹರ್ಬರ್ಟ್ ಬ್ಲೂಮರ್ ರುಡೊಲ್ಪ ಹರ್ಬಲೇರಂತಹ ಚಿಂತಕರು ಚಳುವಳಿಗಳನ್ನು ಸ್ಥಾಪಿತ ಸಾಮಾಜಿಕ ಸಂಬಂಧಗಳನ್ನು ರೂಪಾಂತರಿಸುವ, ಸಾಮಾಜಿಕ ವ್ಯವಸ್ಥೆಗಳಲ್ಲಿ ಮೂಲಭೂತ ಪರಿವರ್ತನೆಗಳನ್ನು ತರುವ ಪ್ರಯತ್ನಗಳೆಂದು ವರ್ಣಿಸಿದ್ದಾರೆ.[೨] ಬ್ಲೂಮರ್ ಒಂದು ಹೆಜ್ಜೆ ಮುಂದೆ ಹೋಗಿ ಸಾಮಾಜಿಕ ಚಳುವಳಿ ಹೊಸ ಸಮಾಜ ವ್ಯವಸ್ಥೆಯ ಸ್ಥಾಪನೆಗಾಗಿ ನಡೆಯುವ ಸಾಮೂಹಿಕ ಪ್ರಯತ್ನವೆಂದಿದ್ದಾರೆ. ಹೀಗೆ ಚಳುವಳಿಗಳು 'ಪರಿವರ್ತನೆಯ ಪ್ರಯತ್ನಗಳೇ ಹೊರತು, ಪರಿವರ್ತನೆಯನ್ನು ತಡೆಯುವ ಪ್ರಯತ್ನಗಳಲ್ಲ.'[೩]

'ನಂತರದಲ್ಲಿ ನಡೆದ ಅಧ್ಯಯನಗಳು ಪರಿವರ್ತನೆಯನ್ನು ಪ್ರತಿರೋಧಿಸುವ ಅಥವಾ ಪ್ರತಿಬಿಂಬಿಸುವ ಚಳುವಳಿಗಳನ್ನು ಕೂಡ ಗುರುತಿಸಿವೆ. ಒಂದು ಜನ ಸಮೂಸಹವು ತಾನಿರುವ ಸಮಾಜದಲ್ಲಿ ಪರಿರ್ವತನೆಯನ್ನು ತರಲು ಮಾತ್ರವಲ್ಲ ಅಂತಹ ಪರಿವರ್ತನೆಯನ್ನು ತಡೆಯಲೂ ಬಯಸಬಹುದು. ಹೀಗೆ ಪರಿವರ್ತನೆಯನ್ನು ತಡೆಯಲು ನಡೆಸುವ ನಿರಂತರ ಚಟುವಟಿಕೆಗಳು ಕೂಡ ಸಾಮಾಜಿಕ ಚಳುವಳಿಯೆನಿಸುವವು'[೪]

[illegible]

[illegible]

[illegible]

[illegible]

ಸಾಮಾನ್ಯವಾಗಿ ಚಳುವಳಿಗಳ ಗುರಿ ಅಥವಾ ಉದ್ದೇಶಗಳು ಸ್ಥೂಲವಾಗಿ ಎರಡು ಬಗೆಯವು. ಸಮಾಜದಲ್ಲಿ ಸಂಪೂರ್ಣ ಪರಿವರ್ತನೆಯನ್ನು ತರುವ ಉದ್ದೇಶ ಒಂದು ಬಗೆಯಾದರೆ, ಸದ್ಯ ಅಸ್ತಿತ್ವದಲ್ಲಿರುವ ಮೌಲ್ಯ ಮತ್ತು ಸಂಚರಣೆಗಳಲ್ಲಿ ಸುಧಾರಣೆಯನ್ನು ತರುವ ಉದ್ದೇಶ ಎರಡನೇ ಬಗೆಯದು. ಈ ಉದ್ದೇಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮೊದಲ ಬಗೆಯ ಚಳುವಳಿಗಳನ್ನು ಕ್ರಾಂತಿಕಾರಕವೆಂದು ಎರಡನೇಯದನ್ನು ಸುಧಾರಣಾತ್ಮಕವೆಂದೂ ಕರೆಯಬಹುದು. ಕೆಲವು ಚಳುವಳಿಗಳು ಸಮಾಜದಲ್ಲಿ ಪರಿವರ್ತನೆಗಳಾಗುವದನ್ನು ಒಪ್ಪದೇ ಅವುಗಳನ್ನು ಪ್ರತಿರೋಧಿಸುವ ಗುರಿ ಹೊಂದಿರಬಹುದು ಅಥವಾ ಸಾಂಸ್ಥಿಕ ಬದಲಾವಣೆಗಳನ್ನು ಬಯಸದೇ ಅವು ಮಾನವನ ಅಂತರಂಗವನ್ನು ಪರಿವರ್ತಿಸುವ ಗುರಿ ಹೊಂದಿರಬಹುದು.[೫]

ಸಮಾಜದಲ್ಲಿನ ಪ್ರತಿ ಚಳುವಳಿಯು ತತ್ವಾದರ್ಶನಗಳನ್ನು ಪ್ರೇರೇಪಿಸುವಂತದ್ದು. ತತ್ವ ಸಿದ್ಧಾಂತಗಳು ಆದರ್ಶಗಳಿಲ್ಲದ ಚಳುವಳಿಗಳು ಹುಟ್ಟಲಾರವು. ಕ್ರೇನ್ ಬ್ರೆಂಟನ್ ಎಂಬುವವರು ಹೇಳುವಂತೆ ತತ್ವಾದರ್ಶವಿಲ್ಲದಿದ್ದರೆ ಚಳುವಳಿಗಳು ಇಲ್ಲ.[೬] ಚಳುವಳಿಯ ಉದ್ದೇಶವನ್ನು ಮತ್ತು ವ್ಯವಸ್ಥೆಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಉದ್ದೇಶಗಳು, ದೋಷ ರಹಿತ ಸಮಾಜವನ್ನು ನಿರ್ಮಿಸುವಲ್ಲಿ ತತ್ವಾದರ್ಶಗಳು ಜನರಿಗೆ ಸೂಕ್ತವಾದ ಮಾರ್ಗದರ್ಶನ ನೀಡುತ್ತವೆ. ಚಳುವಳಿಗಳಿಗೆ ಧುಮುಕಿದ ಚಳುವಳಿಕಾರರನ್ನು ತತ್ವದಾರ್ಶಗಳಿಂದ ಬಂಧಿಸಿ ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತದೆ. ಭಾರತೀಯ ಸಮಾಜದಲ್ಲಿನ ಚಳುವಳಿಗಳ ವಿಷಯದಲ್ಲಿ ಈ ವಿಧವಾದ ತತ್ವದಾರ್ಶಗಳಿಂದ ಪ್ರೇರಣೆಪಡೆದ ಚಳುವಳಿಗಳು ಯಶಸ್ವಿಯಾಗಿವೆ. ಆದರ್ಶ ಮತ್ತು ನಂಬಿಕೆಗೆ ಅರ್ಹವಾದ ವಿಚಾರಗಳ ಬಲದಿಂದಲೇ ಜನರು ಚಳುವಳಿಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಸಾಮಾಜಿಕ ಚಳುವಳಿಗಳು ಪೂರ್ಣವಾಗಿ ಸಂಘಟಿತವಾದ ಸಂಘಗಳಲ್ಲಿ ಆದರೇ ಸಂಘಟನೆಯಿಲ್ಲದ ಚಳುವಳಿಗಳು ಮುಂದುವರೆಯಲಾರವು, ಯಾರು ನಾಯಕರು. ಯಾರು ಹಿಂಬಾಲಕರು ಯಾರು ಏನು ಕೆಲಸ ಮಾಡಬೇಕು. ಎಂದು ನಿರ್ಧರಿಸುವ ಕೆಲವು ಸಂಘಟನೆ ಇದ್ದರೆ ಮಾತ್ರ ಸಾಧ್ಯ. ಎಲ್ಲಾ ಚಳುವಳಿಗಳು ತಮ್ಮ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಕೆಲವು ಕಾರ್ಯ ತಂತ್ರಗಳನ್ನು ರೂಪಿಸಿಕೊಳ್ಳುತ್ತದೆ. ವಿವಿಧ ಚಳುವಳಿಗಳು ಭಿನ್ನ ಭಿನ್ನವಾದ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳುತ್ತವೆ. ಸತ್ಯಾಗ್ರಹ, ಸಂಧಾನ, ಶಿಕ್ಷಣ, ಪ್ರಚಾರ, ವಶೀಲಿ ಮಾಡುವುದು. ಒತ್ತಡ ಹೇರುವದು ಬಹಿಷ್ಕಾರ ಹಾಕುವುದು. ಕರ ನಿರಾಕರಣೆ, ಮುಷ್ಕರ ಲಾಕ್‌ಔಟ್, ಉಪವಾಸ, ಧರಣಿ, ಮೋರ್ಚಾ, ಮೆರವಣಿಗೆ ಬಹಿಷ್ಕಾರ ಹಾಕುವುದು, ಆಸ್ತಿ ಪಾಸ್ತಿ ಲೂಟಿ, ಶಾಂತಿ, ಭಂಗ ಇವೆಲ್ಲ ಸುಪರಿತವಾದ ಕೆಲವು ಕಾರ್ಯತಂತ್ರಗಳ ಈ ಕಾರ್ಯತಂತ್ರಗಳು ಫಲವಾಗಿ ಸಾಮಾಜಿಕ ಪರಿವರ್ತನೆ[೭] ಬಂದೆ ಬರುತ್ತದೆಂದು ಬರಲೇಬೇಕು ಎಂಬ ನೀರಿಕ್ಷೆಯ ಭಾವನೆ ಜನರಲ್ಲಿ ಮೂಡುವುದು, ಚಳುವಳಿಗಳು ಜನರನ್ನು ಎಷ್ಟರ ಮಟ್ಟಿಗೆ ಬೆಳಸಿವೇ ಅವರ ಸಮಸ್ಯೆಗಳಿಗೆ ಸ್ಪಂದಿಸಿವೆಯಾ? ಚಳುವಳಿಗಳು ಬಡವರ ಪರ ಇವೆಯಾ?

ಶ್ರೀಮಂತರ ಪರ ಇವೆಯಾ? ಸಮಾಜವಾದಿ ನೆಲೆಯಲ್ಲಿ, ಸುಧಾರಣೆ ಹೆಸರಿನಲ್ಲಿ ಹೋರಾಟಕ್ಕೆ ಪ್ರೇರೇಪಿಸುವ ಮತ್ತು ದರಿದ್ರರ ಪರವಾದ ಧೋರಣೆ ಹೊಂದಿರುವ ಚಳುವಳಿಗಳ ನೇತೃತ್ವವಹಿಸಿದ ಜನರು ಯಾರ ಪರ ಕೆಲಸ ಮಾಡುತ್ತಿದ್ದಾರೆ ಎನ್ನುವ ಪರಿಶೀಲನೆಯು ಅಗತ್ಯವಾಗಿದೆ.

ಈ ನಿಟ್ಟಿನಲ್ಲಿ ಪ್ರಸ್ತುತ ಚಳುವಳಿಗಳು ಹಸಲರ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿವೆ. ಹಸಲರ ಸಂಘಟನಾತ್ಮಕ ನೆಲೆಗೆ ಬುನಾದಿಯನ್ನು ಕಲ್ಪಿಸಿಕೊಟ್ಟಿದೆಯಾ? ನಿಜವಾಗಿಯೂ ಹಸಲರು ಬದಲಾಗಿದ್ದಾರೆಯೇ ಆ ಬದಲಾವಣೆ ಚಳುವಳಿಗಳು ಎಷ್ಟರ ಮಟ್ಟಿಗೆ ಸ್ಪಂಧಿಸಿವೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸಂಘಟನೆಗಳಿಗೆ ಚಳುವಳಿಗಳು ಅವರನ್ನು ಎಷ್ಟರಮಟ್ಟಿಗೆ ರೂಪಿಸಿವೆ ಮತ್ತು ಚಳುವಳಿಗಳ ಪ್ರಭಾವಕ್ಕೆ ಒಳಗಾದ ಹಸಲರ ಜೀವನ ವಿಧಾನದಲ್ಲಿ ಆದ ಬದಲಾವಣೆ ಕುರಿತು ಚರ್ಚಿಸುವ ಪ್ರಯತ್ನ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಚಳುವಳಿಗಳ ಅಂಶ ಹಸಲರ ಪರಿವರ್ತನೆಯ ಮೇಲೆ ಬೆಳಕು ಚೆಲ್ಲಿದೆ, ಅದಕ್ಕಿಂಥ ಪೂರ್ವಬಾವಿಯಾಗಿ ಚಳುವಳಿಗಳ ಸಿದ್ಧತೆ, ಪರಿಕಲ್ಪನೆ, ಚಳುವಳಿ ಏರ್ಪಡುವ ಪರಿಸ್ಥಿತಿಗಳ ಪುನರಾವಲೋಕನ ಮಾಡುವ ಅಗತ್ಯತೆ ಇರುವುದರಿಂದ ಮೊದಲು ಅಂಶಗಳ ಬಗ್ಗೆ ಚರ್ಚಿಸಲಾಗುವುದು.

ಚಳುವಳಿಯ ಪ್ರಕಾರಗಳು

ಸಮಾಜ ವಿಜ್ಞಾನಿಗಳು ಸಾಮಾಜಿಕ ಚಳುವಳಿಗಳನ್ನು ಹಲವಾರು ರೀತಿಯಲ್ಲಿ ವರ್ಗಿಕರಿಸಿದ್ದಾರೆ. ಪ್ರಸ್ತುತ ಹಸಲರ ಸಾಮಾಜಿಕ ಬದಲಾವಣೆ ಕಾರಣವಾದ ಮತ್ತು ಅವರ ಮೇಲೆ ಪ್ರಭಾವ ಬೀರಿದ ಚಳುವಳಿಗಳ ಕುರಿತು ವಿವರಿಸಲಾಗಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೇ ವಚನ ಚಳುವಳಿ, ಭಕ್ತಿ ಚಳುವಳಿ ಸ್ವಾತಂತ್ರ ಚಳುವಳಿಯಿಂದಿಡಿದು ಕರನಿರಾಕರಣ ಚಳುವಳಿ, ರೈತ ಚಳುವಳಿ, ಸಹಕಾರ ಚಳುವಳಿ, ಅಬ್ರಾಹ್ಮಣ ಚಳುವಳಿ ದಲಿತ ಚಳುವಳಿ, ವಿದ್ಯಾರ್ಥಿ ಚಳುವಳಿ, ಪರಿಸರ ಚಳುವಳಿ, ಭೂ ವಿಮೋಚನಾ ಚಳುವಳಿ ಮುಂತಾದವುಗಳು ಕರ್ನಾಟಕದ ಮತ್ತು ಜನಸಮುದಾಯದ ಬಗೆಗೆ ಹೊಂದಿರುವ ಸಾಮಾಜಿಕ ಪರಿವರ್ತನೆಯ ವಿವಿಧ ಕಾಳಜಿಗಳನ್ನು ಪ್ರತಿಬಿಂಬಿಸುವಂತವು. ಪ್ರಾರಂಭದಲ್ಲಿ ಚಳುವಳಿಗಳು ಕ್ರಾಂತಿಕಾರಕ ಮಾಧರಿ, ಸುಧಾರಣವಾದಿ ನೆಲೆಗಳಲ್ಲಿ ಹುಟ್ಟಿರುವವು. ಸಧ್ಯದಲ್ಲಿ ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮೂಲನಗೊಳಿಸಿ ಹೊಸ ವ್ಯವಸ್ಥೆಯನ್ನು ತರುವ ಉದ್ದೇಶ ಹೊಂದಿದ್ದವು. ವರ್ಗ ರಚನೆ, ರಾಜಕೀಯ ಸ್ವಾಯತ್ತತೆ, ಸುಧಾರಣೆ, ವಿಮೋಚನೆ, ಪರಿಸರ ಸಂರಕ್ಷಣೆಯಂತ ಉದ್ದೇಶಗಳನಿಟ್ಟುಕೊಂಡು ನಡೆಯುತ್ತಿದ್ದವು. ಪ್ರಸ್ತುತ ಆಧುನಿಕ ಸಮಾಜಗಳಲ್ಲಿ ಚಳುವಳಿಗಳ ಹೋರಾಟ ರೂಪ ಬದಲಾಗಿದೆ. ಗಿಡಿನ್ಸ್ ಎಂಬ ಸಮಾಜಶಾಸ್ತ್ರಜ್ಞ ಹೇಳುವಂತೆ ಆಧುನಿಕ ಸಮಾಜದಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಿವೆ. ೧. ಪ್ರಜಾಪ್ರಭುತ್ವವಾದಿ ಚಳುವಳಿ ೨. ಕಾರ್ಮಿಕ ಚಳುವಳಿ, ಪರಿಸರವಾದಿ ಚಳುವಳಿ ಹುಟ್ಟಿಕೊಂಡವು. ಜನರ ರಾಜಕೀಯ ಹಕ್ಕುಗಳನ್ನು ಸ್ಥಾಪಿಸುವ ಅಥವಾ ಅವುಗಳನ್ನು ನಿರ್ವಹಿಸುವ ಅವಕಾಶ ಕೋರಿ ಪ್ರಜಾಪ್ರಭುತ್ವವಾದಿ ಚಳುವಳಿ ನಡೆದರೇ ದುಡಿಯುವ ಜನರಿಗೆ ಆರ್ಥಿಕ ಅಧಿಕಾರವನ್ನು ಹೆಚ್ಚು ಸಮನಾಗಿ ಹಂಚಿಕೆ ಆಗಬೇಕೆಂದು

ಮತ್ತು ಸ್ಥಿತಿಗತಿಗಳನ್ನು ತಾವೇ ನಿರ್ವಹಿಸುವ ಅವಕಾಶ ಕೋರಿ ಕಾರ್ಮಿಕ ಚಳುವಳಿಗಳು ನಡೆದವು. ನಿಸರ್ಗಕ್ಕೆ ಆಗುವ ಪರಿಸರ ಮತ್ತು ಸಾಮಾಜಿಕ ಗಂಡಾಂತರಗಳನ್ನ ನಿರ್ಭಂಧಿಸಬೇಕು ಎಂಬ ಕಾರಣಕ್ಕೆ ಪರಿಸರ ಚಳುವಳಿಗಳು ಸಾಮಾಜಿಕ ಮತ್ತು ಪ್ರಕೃತಿ ಸಮತೋಲನವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಚಳುವಳಿಗಳು ಪ್ರಾರಂಭವಾದವು. ರೈತ ಚಳುವಳಿಗಳು ರೈತರ ಹಿತರಕ್ಷಣೆಗಾಗಿ ಮತ್ತು ಸ್ವಾವಲಂಬನೆ ಜೀವನ ನಿರ್ವಹಿಸುವ ಉದ್ದೇಶಕ್ಕಾಗಿ ರೈತಾಪಿ ವರ್ಗದಲ್ಲಿ ಹೋರಾಟಗಳು ಪ್ರಾರಂಭವಾದವು. ಈ ಎಲ್ಲ ಹೋರಾಟಗಳು ತನ್ನದೇ ವಿಶಿಷ್ಟ ರೂಪ, ಉದ್ದೇಶ ಲಕ್ಷಣಗಳೊಂದಿಗೆ ವಿವಿಧ ರೀತಿಯಲ್ಲಿ ತುಲನಾತ್ಮಕವಾಗಿ ಸಮ್ಮಿಳಿತಗೊಂಡು ಅನೇಕ ಚಳುವಳಿಗಳ ಹುಟ್ಟಿಗೆ ಕಾರಣವಾದವು.

ಹಸಲರ ಬದಲಾವಣೆಗೆ ಅನುಕೂಲಕರವಾದ ಸಾಮಾಜಿಕ ಚಳುವಳಿಗಳು

ಕ್ರಾಂತಿಗಳು ಅಥವಾ ಕಾರ್ಮಿಕರು ರೈತಾಪಿ ಚಳುವಳಿಗಳನ್ನು ಸೃಷ್ಟಿಸುವ ಸಾಮಾಜಿಕ ಪರಿಸ್ಥಿತಿಗಳು ಹಲವು ಜನರ ನೊಂದ ಮನಸ್ಸಿನಲ್ಲಡಗಿರುವ ಅತೃಪ್ತಿ ಭಾವನೆ ಆ ಅತೃಪ್ತಿ ಬಹುವ್ಯಾಪಕವಾಗಿ ಜನತೆಯ ಗಮನಕ್ಕೆ ಬಂದಾಗ ಪರಿವರ್ತನೆ ಬಂದೇ ಬರುವುದು ಅದು ಬರಲೇಬೇಕು ಎಂಬ ನಿರೀಕ್ಷೆಯ ಭಾವನೆ ಜನರ ಮನಸ್ಸುಗಳಲ್ಲಿ ಹುಟ್ಟುವುದು ಸರ್ವೇಸಾಮಾನ್ಯವಾಗಿರುತ್ತದೆ. ಆ ಸಂದರ್ಭದಲ್ಲಿ ಜನರು ತಮ್ಮ ಉದ್ದೇಶಗಳನ್ನು ಸಾಧಿಸುವ ಹೊಣೆಯತ್ತ ಒಂದು ಸಂಘಟನೆ ಅಸ್ತಿತ್ವದಲ್ಲಿ ತಮ್ಮ ಅಸ್ತಿತ್ವಕ್ಕೆ ಮುಂದಾಗುತ್ತಾರೆ. ಸದ್ಯದಲ್ಲಿ ಅವರು ಎದುರುಗೊಂಡ ಅತೃಪ್ತಿಕರ ಪರಸ್ಥಿತಿಗಳನ್ನು ಪ್ರಯತ್ನಿಸಬೇಕಾದ ಹೋರಾಟ ಮಾಡಬೇಕಾದ ಅಥವಾ ಪರಸ್ಥಿತಿ ನಿರ್ಮಾಣವಾಗುತ್ತದೆ. ಜನರ ಮನಸ್ಸಿನಲ್ಲಿ ಅನ್ಯಾಯವಾಗುತ್ತಿದೆಯೆಂಬ ಗ್ರಹಿಸಿದಾಗ ಮಾತ್ರ ಚಳುವಳಿಗಳು ಹುಟ್ಟಿಕೊಂಡವು ಇಂಥ ಅತೃಪ್ತಿಯ ಜೊತೆಗೆ ತಮಗೆ ನ್ಯಾಯವಾಗಿ ಸಿಗಬೇಕಾದ್ದು ಸಿಕ್ಕಿಲ್ಲ ಇತರರನ್ನು ಹೋಲಿಸಿ ನೋಡಿದರೆ ತಾವು ವಂಚಿತರಾಗಿದ್ದೆವೆ ಎನ್ನುವ ಭಾವನೆ ಜನರಲ್ಲಿ ಬೆಳೆದರೆ ಕ್ರಾಂತಿ ಮತ್ತು ಚಳುವಳಿಗಳು ಸುಲಭ ಸಾಧ್ಯ. ಹಾಗೆಯೆ ಜನರ ಆರ್ಥಿಕ ಮತ್ತು ಸಾಮಾಜಿಕ ಪರಸ್ಥಿತಿಗಳು ಸುಧಾರಿಸದೇ ಹೋದರೆ ಅವರ ಅತೃಪ್ತಿ ಹೊಗೆಯಾಡುತ್ತದೆ. ಕೊನೆಗೆ ಅದು ಕ್ರಾಂತಿ ಅಥವಾ ಉಗ್ರಚಳುವಳಿಯಾಗಿ ಪರಿಣಮಿಸಬಹುದು.[೮]

ಚಳುಳಿಗಳು ಹಸಲರ ದೈನಂದಿನ ಜೀವನವನ್ನು ಪ್ರಭಾವಿಸುಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಆ ಚಳುವಳಿಗಳ ಮೂಲಕ ಪರಿವರ್ತನೆ ಕೆಲಸ ಸುಗಮವಾಗಬೇಕಾದರೆ ಚಳುವಳಿಗಳ ದಿಕ್ಕು ದಿಸೆಗಳನ್ನು ನಿರ್ಧರಿಸುವ ಜನರಿಗೆ ತಾತ್ಕಾಲಿಕ ಪರಿಹಾರ ಕೊಡುವ ಕೆಲಸವಾಗಬೇಕು. ಚಳುವಳಿಗಳ ಅವರ ಕಷ್ಟಗಳಿಗೆ, ಹತಾಶೆಗೆ, ಆತ್ಮಗೌರವಕ್ಕೆ, ಆರ್ಥಿಕತೆ ಭದ್ರತೆಗೆ ಸಾಮಾಜಿಕ ಭದ್ರತೆಗೆ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿರಬೇಕು. ಆ ಪ್ರಯತ್ನವು ಸಂಘರ್ಷಾತ್ಮಕ ಧೋರಣೆ ಮೂಲಕ ಆಗಬೇಕಾಗಿರುತ್ತದೆ. ಒಂದು ಕಾಲದಲ್ಲಿ ಸಂಪೂರ್ಣ ಅರಣ್ಯವಾಸಿಗಳಾಗಿ ಅರಣ್ಯದ ನಡುವೆ ಸ್ವಚ್ಛಂಧ ಜೀವನ ನಡೆಸುತ್ತಿದ್ದ ಹಸಲರ

[illegible]

ಜೀವನ ವಿಧಾನ ಹೇಗಿದೆ. ಜೀವನದ ವಿಧಾನದಲ್ಲಿ ಬದಲಾಗಿದೆಯೆ ಎನ್ನುವುದನ್ನು ನೋಡಬೇಕಾದರೆ ಕರ್ನಾಟಕದ ಮಟ್ಟಿಗೆ ಆದ ಚಳುವಳಿಗಳ ಕುರಿತು ಪ್ರಾಥಮಿಕ ಮಾಹಿತಿ ಅಗತ್ಯವಾಗಿದೆ.

ಕರ್ನಾಟಕದಲ್ಲಾದ ಅನೇಕ ಹೋರಾಟಗಳು, ಚಳುವಳಿಗಳು ಸಮಾಜವಾದಿ ಧೋರಣೆ ಜನ ಸಮುದಾಯದ ಮೇಲೆ ಘಾಢವಾದ ಪರೋಕ್ಷ ಪರಿಣಾಮ ಬೀರಿದೆ. ಆ ನಿಟ್ಟಿನಲ್ಲಿ ಯೋಚಿಸಿದಾಗ ಕರ್ನಾಟಕದಲ್ಲಿನ ನಡೆದ ಅನೇಕ ರೈತಪರ ಚಳುವಳಿಗಳು ಮತ್ತು ಪರಿಸರ ಚಳುವಳಿ ಹಸಲರ ಜೀವನ ರೂಪಿಸುವಲ್ಲಿ ಪರೋಕ್ಷ ಪರಿಣಾಮ ಬೀರಿವೆ. ಒಂದು ಕಾಲದಲ್ಲಿ ಚಳುವಳಿ ಹೋರಾಟ ಎಂದರೆ ಏನು ಎಂದು ಅರಿಯದ ಅವರು ಪ್ರಸ್ತುತ ಆ ಭಾಗದಲ್ಲಾದ ಕಾಗೋಡು ಚಳುವಳಿಗೆ ಪ್ರಭಾವಕ್ಕೆ ತೀವ್ರವಾಗಿ ಒಳಗಾಗಿರುವುದು ಕಂಡುಬರುತ್ತದೆ. ಕಾಗೋಡು ಚಳುವಳಿ ಒಂದು ರೀತಿಯಲ್ಲಿ ಸಮಾಜದಲ್ಲಿ ಒಂದು ವರ್ಗದ ಪ್ರಾಬಲ್ಯ ಪ್ರಭುತ್ವದ ವಿರುದ್ಧ ಶೋಷಿತರ ವಿರೋಧ ಧೋರಣೆಗೆ ಹುಟ್ಟುಕೊಂಡಿದ್ದಾಗಿತ್ತು. ದೀವರ ಸಮುದಾಯವು ಆರ್ಥಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯವಾಗಿತ್ತು ಆ ಸಮುದಾಯವು ಸಮಾಜದಲ್ಲಿನ ಬ್ರಾಹ್ಮಣ ಅಥವಾ ಮೇಲ್ವರ್ಗದ ಜನರ ಕಿರುಕುಳಕ್ಕೆ ಒಳಗಾಗಿತ್ತು. ಕೃಷಿ ಭೂಮಿ ಆರ್ಥಿಕತೆಯ ಮೇಲೆ ಸಂಪೂರ್ಣ ನಿರ್ಬಂಧವಿತ್ತು. ಉಳ್ಳವರ ಪರವಾದ ವಾದ ಪರವಾಗಿಯೇ ಇತ್ತು. ಉಳ್ಳವರು ಜಮೀನ ಮಾಡುವ ಪ್ರಯತ್ನದಲ್ಲಿ ಇತರ ಕೆಳಸಮುದಾಯಗಳನ್ನು ನಿರ್ಲಕ್ಷಿಸುವ ಧೋರಣೆಯನ್ನು ಪಾಲಿಸಿಕೊಂಡು ಬರುತ್ತಿದ್ದವು ಆ ಕಾರಣಕ್ಕಾಗಿ ಶ್ರೀಮಂತ ವರ್ಗಗಳ ವಿರುದ್ಧ ಸಿಡಿದುನಿಂತ ಸಾಗರ ತಾಲೂಕಿನ ಕಾಗೋಡು ಎಂಬ ಗ್ರಾಮದ ಜನರು ಸಮಾಜದಲ್ಲಿನ ಅನ್ಯಾಯ ಅಸಮಾನತೆ ಅತೃಪ್ತಿಯನ್ನು ಕ್ರಾಂತಿಯ ಮೂಲಕ ಹೊರಹಾಕಿದರು. ಇದು ಮುಂದೇ ಕರ್ನಾಟಕದಲ್ಲಿ ಶೋಷಿತರ ಮತ್ತು ಇಲ್ಲದವರ ಪರ ಧ್ವನಿಯಾಗಿ ಹೊರಹೊಮ್ಮಿತು. ಈ ಕಾಗೋಡು ಚಳುವಳಿ ಜನಪರ ಧೋರಣೆಗಳು ಸಮಾಜದಲ್ಲಿನ ನಿರಂತರ ಬದಲಾವಣೆಗೆ ಕಾರಣವಾಯಿತು.

ಕಾಗೋಡು ಚಳುವಳಿ ಕೇವಲ ಹೋರಾಟ ರೂಪದ ಚಳುವಳಿಯಾಗಿರಲಿಲ್ಲ. ಅದು ಉಳ್ಳವರ ವಿರುದ್ಧದ ದಂಗೆಯಾಗಿತ್ತು. ಇತಿಹಾಸದ ಮಟ್ಟಿಗೆ ನೋಡುವುದಾದರೆ ಈ ಚಳುವಳಿ ಅತ್ಯಂತ ಪ್ರಬಲ ತೀಕ್ಷ್ಣ ಹಾಗೂ ವಿಶಾಲವಾಗಿತ್ತು. ಇದು ವಸಾಹತು ಶಾಹಿ ಮತ್ತು ಪ್ರಾಂತೀಯವಾಗಿ ಕ್ರಾಂತಿಯ ಕಿಡಿ ಹೊತ್ತಿಸಿತು. ಇದು ಕೇವಲ ಶಿವಮೊಗ್ಗ ಜಿಲ್ಲೆಗೆ ಮಾತ್ರ ಸೀಮಿತವಾಗಿರಲಿಲ್ಲ ಇಡೀ ಭಾರತದಾದ್ಯಂತ ವ್ಯಾಪಿಸಿತು. ಭಾರತದಾದ್ಯಂತ ಅನೇಕ ಚಳುವಳಿಗಳ ಮರು ಹುಟ್ಟುವಿಗೆ ಕಾರಣವಾಯಿತು. ಅರ್ಧ ಶತಮಾನದವರೆಗೆ ಮುಂದುವರೆದ ಈ ಚಳುವಳಿ ಹಸಲರ ಸಾಮಾಜಿಕ ಬದಲಾವಣೆಯಲ್ಲಿ ಮಹತ್ತರವಾದ ಪಾತ್ರವಹಿಸಿದೆ. ಅವರ ಪ್ರತಿ ಸಂಘಟನಾತ್ಮಕ ಗುಣಗಳ ಹಿಂದೆ ಕಾಗೋಡು ಚಳುವಳಿಯ ಘಾಢ ಪರಿಣಾಮವಾಗಿದೆ. ಭೂಮಿ ಪಡೆಯುವ ನಿಟ್ಟಿನಲ್ಲಿ ಹೋರಾಟಕ್ಕೆ ಅಣಿಗೊಳಿಸುವಲ್ಲಿ ಕಾಗೋಡ ಚಳುವಳಿ ಅವರಿಗೆ ಮಾರ್ಗದರ್ಶಕವಾಗಿದೆ. ಮೇಲ್ವರ್ಗದ ಬಲಿಷ್ಠರ ವಿರುದ್ಧ ಹೋರಾಡಲು ಮತ್ತು ಭೂಮಿ, ನೀರಾವರಿ, ವಿದ್ಯುತ್, ಶೋಷಣೆ, ಕೃಷಿ,

[illegible]

ಆಹಾರ ಉತ್ಪಾದನೆಯಲ್ಲಿ ತಾರತಮ್ಯ ಧೋರಣೆಯ ನೀತಿಯ ವಿರುದ್ಧ ಹೋರಾಟಕ್ಕೆ ಕಾಗೋಡು ಚಳುವಳಿ ಪ್ರೇರಣೆಯಾಯಿತು. ಇದು ಕೇವಲ ಹೋರಾಟವಾಗಿರದೆ ಅನೇಕ ವರ್ಚಸ್ವಿ ನಾಯಕರಾದ ಶಾಂತವೇರಿ ಗೋಪಾಲ ಗೌಡರು, ಕಡಿದಾಳ ಮಂಜಪ್ಪ, ಗರುಡಶಮ್ಮ, ಗಣಪತಿಯಪ್ಪ, ಬಾಸು ಕೃಷ್ಣಮೂರ್ತಿ, ಸದಾಶಿವರಾಯರಂತ ಪ್ರಮುಖರು ಪಾಲ್ಗೊಂಡಿದ್ದರು. ಅಷ್ಟೆ ಅಲ್ಲದೇ ದೇಶ ವ್ಯಾಪಿ ನಾಯಕರಾದ ರಾಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣರು ಕೂಡ ಭಾಗವಹಿಸಿದ್ದರು. ಇವರೆಲ್ಲರ ಭಾಗವಹಿಸುವಿಕೆಯ ಹೊರತಾಗಿಯೂ ಕಾಗೋಡು ಚಳುವಳಿ ಯಶಸ್ವಿಯಾಗಲಿಲ್ಲ. ಅದು ಬೇರೆಮಾತು ಆದರೇ ಈ ಚಳುವಳಿ ಸಮಾಜದಲ್ಲಿನ ವ್ಯವಸ್ಥೆಯಲ್ಲಿನ ಸಾಂಪ್ರದಾಯಿಕ ಆರ್ಥಿಕ ವ್ಯವಸ್ಥೆಗೆ ಉತ್ಪಾದನೆ ವ್ಯವಸ್ಥೆಗೆ ಅಸಮಾನತೆ ಹಂಚಿಕೆ ವ್ಯವಸ್ಥೆಗೆ ಕೃಷಿ ಭೂಮಿ, ಅಸ್ಪೃಶ್ಯತೆಗಳಿಂದ ಮುಕ್ತಗೊಳಿಸುವಲ್ಲಿ ಸಹಾಯಕವಾಯಿತು. ರಾಜ್ಯವ್ಯಾಪ್ತಿ ಹೆಸರುಗಳಿಸಿದ ಈ ಚಳುವಳಿಯ ಪ್ರೇರಣೆಯಿಂದ ಹಸಲರು ಕೂಡ ಜಮೀನು, ವಿದ್ಯುತ್, ನೀರಾವರಿ, ಅಸ್ಪೃಶ್ಯತೆಯಂತ ಅನೇಕ ಬೇಡಿಕೆಗಳನ್ನು ಇಟ್ಟುಕೊಂಡು ಹೋರಾಟ ಮಾಡಿದ ಉದಾಹರಣೆಗಳಿವೆ. ಒಟ್ಟಾರೆಯಾಗಿ ಕಾಗೋಡು ಚಳುವಳಿಯು ಸಮಾಜದಲ್ಲಿನ ಸಾಂಪ್ರದಾಯಿಕ ವ್ಯವಸ್ಥೆಯನ್ನು ಬದಲಾಯಿಸಲು ಆ ಸಂದರ್ಭದಲ್ಲಿ ತೆಗೆದುಕೊಂಡ ದಿಟ್ಟ ನಿರ್ಧಾರವಾಗಿತ್ತು. ಸಂಪೂರ್ಣವಾಗಿ ರೈತಾಪಿ ಅಸಹಾಯಕ ವರ್ಗದ ಪರ ಧ್ವನಿಯಾಗಿ ಹೊರ ಹೊಮ್ಮಿದ ಈ ಚಳುವಳಿಯ ಹಸಲರು ಸಾಮಾಜಿಕ ರೂಪಾಂತರಕ್ಕೆ ಕಾರಣವಾಯಿತು. ಎಂದರೇ ತಪ್ಪಾಗಲಾರದು ಶಿಕ್ಷಣ ವ್ಯವಸ್ಥೆ ಅವರಲ್ಲಿ ಮಾನಸಿಕ ಪರಿವರ್ತಿತ ಸಾಧನೆಯಾಗಿ ಹೊರಹೊಮ್ಮಿದರೆ ಜನಸಮುದಾಯದ ಸಮಸ್ಯೆಗಳನ್ನು ಕೂಡ ನಡೆದ ಅನೇಕ ಹೋರಾಟಗಳು ಚಳುವಳಿಗಳು ಸಂಪೂರ್ಣವಾಗಿ ಅವ್ಯವಸ್ಥೆಯನ್ನು ಬದಲಾಯಿಸಲಾಗದಿದ್ದರು ಸ್ವಲ್ಪ ಮಟ್ಟಿಗೆ ಆದರೂ ಬದಲಾಯಿಸಿವೆ ಎಂಬುವುದು ಹಸಲರನ್ನು ನೋಡಿದಾಗ ತಿಳಿಯುವ ಸತ್ಯ ಸಂಗತಿಯಾಗಿದೆ.

ಕಾಗೋಡು ಚಳುವಳಿಯ ನೆರಳಲ್ಲಿಯ ತಮ್ಮ ಅನೇಕ ಹೋರಾಟಗಳನ್ನು ರೂಪಿಸಿಕೊಂಡ ಹಸಲರು ತಮ್ಮ ಸಮಸ್ಯೆಗಳನ್ನು ತಾವು ಹೋರಾಟದ ಮೂಲಕ ಪರಿಹರಿಸಿಕೊಳ್ಳುವ ಪ್ರಯತ್ನಕ್ಕೆ ಇಳಿದರು ಆ ನಿಟ್ಟಿನಲ್ಲಿ ಹಸಲರು ತಮ್ಮ ನಾಯಕರ ನೇತೃತ್ವದಲ್ಲಿ ಮುಖ್ಯವಾಗಿ ಎನ್. ಹುಚ್ಚಪ್ಪ ಮಾಸ್ತರರ ನೇತೃತ್ವದಲ್ಲಿ ವ್ಯವಸ್ಥೆ ವಿರುದ್ಧ ಹೋರಾಟಕ್ಕೆ ಇಳಿದು, ಆ ಹೋರಾಟಗಳಲ್ಲಿ ಯಶಸ್ಸುಗಳಿಸುವ ಜೊತೆಗೆ ಅವರಿಗೆ ಅಗತ್ಯವಾದ ಜಮೀನು, ಇನ್ನಿತರ ಮೂಲಭೂತ ಸೌಲಭ್ಯಗಳು ಪಡೆದರು. ಇವೆಲ್ಲ ಹೋರಾಟಗಳು ಕಾಗೋಡು ಮತ್ತು ಇತರ ರೈತಪರ ಹೋರಾಟಗಳ ಕಾರ್ಮಿಕ ಚಳುವಳಿ, ದಲಿತ ಚಳುವಳಿಗಳ ಪ್ರೇರಣೆಯಿಂದ ನಡೆದಂತವಾಗಿದ್ದವು. ಮಾನವ ಸಮಾಜದಲ್ಲಿ ಪ್ರತಿ ಅಗತ್ಯಗಳ ಇಡೇರಿಕೆಗಾಗಿ ನಿರಂತರವಾಗಿ ಹೋರಾಟಮಾಡುತ್ತ ತನ್ನಗೆ ಬೇಕಾದದ್ದನ್ನು ಪಡೆಯುತ್ತಾನೆ. ಆ ಪಡೆಯುವಿಕೆ ಹಿಂದಿನ ಅವನ ಶ್ರಮ ಅವನಿಗೆ ತಾತ್ಕಾಲಿಕವಾದ ನೆಮ್ಮದಿ ನೀಡುತ್ತದೆ. ಅದು ಶಾಶ್ವತವಾಗಿಯೂ ಇರಬಹುದು. ಈ ನಿಟ್ಟಿನಲ್ಲಿ ಹೋರಾಟಗಳು ಆಂದೋಲನಗಳು ಮಾನವನನ್ನು ನೂತನ ವಸ್ತುಸ್ಥಿಗೆ ಮತ್ತು ವ್ಯವಸ್ಥೆಗೆ ಅನಿವಾರ್ಯವಾಗಿ

[illegible]

ಹೊಂದಿಕೊಳ್ಳುವಂತೆ ನೋಡುತ್ತದೆ. ಹೀಗಾಗಿ ಹಸಲ ಸಮುದಾಯವು ತಾನು ಪಾರಂಪರಿಕವಾಗಿ ಅಥವಾ ಸಾಂಪ್ರದಾಯಿಕವಾಗಿ ಮಾಡುತ್ತ ಬಂದ ಜೀತ ಪದ್ಧತಿ ಅಸ್ಪೃಶ್ಯತೆ ಕೂಲಿಗಳಿಂದ ಮುಕ್ತಿ ಪಡೆಯುವತ್ತ ಮುನ್ನುಗ್ಗುತ್ತಿದೆ. ಇವೆಲ್ಲವಕ್ಕೂ ಅವರು ಕಾಲದಿಂದ ಕಾಲಕ್ಕೆ ಕಂಡುಕೊಂಡ ಹೋರಾಟದ ಪ್ರತಿಫಲ, ಹಾಗಾಗಿ ಸಮುದಾಯವು ಚಳುವಳಿಗಳ ಪ್ರಭಾವದಿಂದಾಗಿ ಮತ್ತು ಆಧುನಿಕ ಸಮುದಾಯವಾಗಿ ಸ್ಥಿತ್ಯಂತರಗೊಂಡಿದನ್ನು ಕಾಣಬಹುದಾಗಿದೆ.

ಭಾರತದ ಸಮುದಾಯಗಳ ಇಪ್ಪತ್ತನೆ ಶತಮಾನದ ದ್ವಿತಿಯ ಅರ್ಧದಲ್ಲಿ ಮತ್ತೊಂದು ಸಾಮಾಜಿಕ ಪ್ರಭಾವಕ್ಕೆ ಒಳಗಾಗಿದ್ದರು. ಬ್ರಿಟೀಷ ಭಾರತವು ಎಲ್ಲವನ್ನು ವಾಣಿಜ್ಯ ಮತ್ತು ವ್ಯಾಪಾರ ದೃಷ್ಟಿಕೋನದಲ್ಲಿ ನೋಡುತ್ತಿತ್ತು. ಕಾಡಿನಲ್ಲಿ ಸಿಗುವ ಕಾಡಿನಲ್ಲಿಸಿಗುವ ಉತ್ಪನ್ನಗಳ ಪಡೆಯುವಿಕೆಗಾಗಿ ಕಾಡಿಗೆ ಸಂಪರ್ಕ ಸಾಧಿಸುವ ಮೂಲಕ ಆದಿವಾಸಿಗಳ ಸ್ವಚ್ಛಂದ ಜೀವನಕ್ಕೆ ಪೆಟ್ಟು ನೀಡಿತು. ಅಭಿವೃದ್ಧಿ ಮತ್ತು ಸುಧಾರಣೆಯ ಹೆಸರಲ್ಲಿನ ಜಾರಿಗೊಂಡ ಯುರೋಪಿಯನ್ನರ (ಬಿಳಿಯರ) ಅನೇಕ ಯೋಜನೆಗಳು ಆದಿವಾಸಿಗಳನ್ನು ಅತಂತ್ರಗೊಳಿಸುವ ಉದ್ದೇಶವಾಗಿತ್ತು. ಪರಿಸರ ಸಂರಕ್ಷಣೆ ಶಾಸನಗಳ ಹೆಸರಿನಲ್ಲಿ ಆದಿವಾಸಿಗಳ ಮೇಲೆ ನಿರ್ಬಂಧ ಹೆರುವ ಮೂಲಕ ಅವರು ಕಾಡಿನ ಪರಿಸರ ಸಂರಕ್ಷಣೆ ಹಕ್ಕನ್ನು ಕಸಿದುಕೊಳ್ಳಲಾಯಿತು. ಅವರು ಪ್ರಕೃತಿ ಆರಾಧನೆಯನ್ನು ಕಡೆಗಣಿಸಿ ಉರುವಲುಕಟ್ಟಿಗೆ ಬಳಸುವಿಕೆಗಾಗಿಯೇ ನಿರ್ಬಂಧ ಹೇರಲಾಯಿತು. ಅವರು ಪ್ರಕೃತಿಯನ್ನು ಆರಾಧಿಸುತ್ತಿದ್ದ ಗಿಡ, ಮರಗಳಲ್ಲಿ ದೈವಗಳನ್ನು ಕಂಡುಕೊಂಡ ಸಮುದಾಯಗಳು ಬ್ರಿಟೀಷರ ಇಬ್ಬಗೆಯ ನೀತಿಗೆ ಬಲಿಯಾಗಿ ಒತ್ತಾಯ ಪೂರ್ವಕವಾಗಿ ಕಾಡಿನಿಂದ ನಾಡಿಗೆ ಅಟ್ಟಲಾಯಿತು. ಕೆಲವು ಆದಿವಾಸಿಗಳು ಕಾಡಿನಲ್ಲಿಯೇ ತಮ್ಮ ಜೀವನ ಕಂಡುಕೊಂಡ ಕಾರಣಕ್ಕೆ ಬ್ರಿಟೀಷ ಸರಕಾರದ ವಿರುದ್ಧ ಹೋರಾಟಕ್ಕೆ ಇಳಿದವು. ಆ ಹೋರಾಟಗಳ ಉದಾಹರಣೆಗೆ ಬಿರ್ಸಾಮುಂಡಾನ ಹೋರಾಟ ಕಣ್ಣು ಮುಂದೆ ನಿಲ್ಲುತ್ತದೆ.

ಈ ನಿಟ್ಟಿನಲ್ಲಿ ತಮ್ಮ ಪರಿಸರದ ಮೇಲೆ ಪ್ರೀತಿಗೆ ಘಾಸಿಯಾದಾಗ ಮತ್ತು ಸ್ವಚ್ಛಂದ ಜೀವನಕ್ಕೆ ಕಡಿವಾಣ ಹಾಕಿದಾಗ 'ಪರಿಸರ ರಕ್ಷಣೆ' ಹೋರಾಟಗಳು ಹುಟ್ಟಿಕೊಂಡವು. ಹೋರಾಟಗಳ ಮೂಲಕ ಸಮುದಾಯಗಳು ಸ್ವತಂತ್ರ ಜೀವನ ಬಯಸಿದವರಾದರು ಆಳುವ ವರ್ಗ ಅವರು ಮೇಲೆ ಕಾಯ್ದೆ ಕಾನೂನುಗಳನ್ನು ಹೇರುವ ಮೂಲಕ ಒತ್ತಾಯದಿಂದ ನಾಡಿಗೆ ಹೊಂದಿಸಿಕೊಳ್ಳುವಂತೆ ನೋಡಲಾಯಿತು. ನಾಡಿಗೆ ಬಂದ ಸಮುದಾಯಗಳು ಕಾಡಿನಿಂದ ನಾಡಿನ ಜೀವನಕ್ಕೆ ಹೊಂದಿಕೊಳ್ಳುವ ನಿಟ್ಟಿನಲ್ಲಿ ಅನೇಕ ಸ್ಥಿತ್ಯಂತರಗಳಿಗೆ ಒಳಗಾಯಿತು. ಮಾನವ ಮತ್ತು ಪ್ರಕೃತಿ ನಡುವಿನ ಮಾನವ ಸಂಬಂಧ ಚಳುವಳಿಗಳ ವಸ್ತುವಾಗಿಲ್ಲ.[೯] ಪರಿಸರ ಪ್ರಜ್ಞೆ ಹೊಂದಿರುವ ಆದಿವಾಸಿಗಳು ತಾವು ತಮ್ಮ ರಕ್ಷಣೆಗಾಗಿಯೇ ಪರಿಸರ ರಕ್ಷಣೆಯಂತ ಚಳುವಳಿಗಳಿಗೆ ಇಳಿದರು. ಈ ಚಳುವಳಿಗಳ ರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಯಿತು. ಆಧುನಿಕ ಸರ್ಕಾರಗಳು ಯೋಜನೆಗಳ ಹೆಸರಿನಲ್ಲಿ ಆದಿವಾಸಿಗಳಿಗೆ ಹಾಡಿಗಳನ್ನು ಪ್ರವೇಶಿಸಿದ ಮೇಲೆ ಸಮುದಾಯಗಳು ಬದಲಾವಣೆಗೆ ಒಳಗಾದವು.

೪.೩. ಆಧುನೀಕರಣ

ಆಧುನೀಕರಣದಿಂದ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳಲ್ಲಿ ಮೇಲ್ಮುಖ ಹಾಗೂ ಕೆಳಮುಖ ಗತಿಶೀಲತೆಗಳು ಕಾಣಬಹುದು. ಆಧುನೀಕರಣ ಎಂಬ ಶಬ್ಧ ಸಮಾಜಶಾಸ್ತ್ರದಲ್ಲಿ ಸಾಂಪ್ರದಾಯಿಕ ಜೀವನಕ್ರಮ ಮತ್ತು ಚಿಂತನೆಗಳಿಗೆ ವ್ಯತಿರಿಕ್ತವಾಗಿ ಆಗುವ ಸಾಮಾಜಿಕ ಬದಲಾವಣೆಯ ಜಟಿಲ ಪ್ರಕ್ರಿಯೆಗೆ ಅನ್ವಯಿಸುತ್ತದೆ. ಅಖಿಲೇಶ್ವರ ಜ್ಹಾ ಅವರು ತಿಳಿಸುವಂತೆ ‘‘ಆಧುನೀಕರಣವು ಐತಿಹಾಸಿಕವಾಗಿ ತಪ್ಪಿಸಿಕೊಳ್ಳಲಾಗದ ಹಾಗೂ ಬಿಡಿಸಿಕೊಳ್ಳಲಾಗದ ಸಾಮಾಜಿಕ ಬದಲಾವಣೆಯ ಸಂಬಂಧವಾದ ಪ್ರಕ್ರಿಯೆ ಈ ಪ್ರಕ್ರಿಯೆ ಮಾನವ ಹುಟ್ಟಿದಾಗಿನಿಂದಲೂ ನಡೆಯುತ್ತಿದೆ.[೧೨](ಎಂ.ನಂಜಮ್ಮಣ್ಣಿ)

ಆಧುನೀಕರಣವನ್ನು ಶಾಪವೆಂದೂ, ವರವೆಂದೂ ಎರಡು ಪಾತಾಳಿಗಳಲ್ಲಿ ಒಂದೊಂದು ಸಮುದಾಯಗಳ ಸಂದರ್ಭದಲ್ಲಿ ಲೆಕ್ಕ ಹಾಕಬಹುದಾದರು ಅಂತಿಮವಾಗಿ ಆಧುನೀಕರಣಾಂತರವು ಇವೆರಡನ್ನು ಮೀರಿ ಕಾಲದ ಪ್ರವಾಹದಲ್ಲಿ ಜನಾಂಗಗಳ ಮನಸ್ಸಿನ ಪ್ರವೃತ್ತಿ ಸಮಷ್ಠಿ ಬದುಕಿನ ವಿಕಾಸವಾಗಿ ಘಟಿಸಿರುತ್ತದೆ. ಈ ಆಧುನಿಕತೆ ಬೇಡವೆಂದೂ ಅವು ಇನ್ನು ಅಂತಹುದಕ್ಕೆ ಪಕ್ವವಾಗಿಲ್ಲವೆಂದು ಹೇಳುವುದುಂಟು ಹಾಗೆಯೇ ಕೆಳಜಾತಿಗಳಿಗೆ ಆಧುನಿಕರಣವನ್ನು ಅರಗಿಸಿಕೊಳ್ಳುವ ಚಾಣ್ಮೆ, ಅರ್ಹತೆ, ಪ್ರಭುದ್ದತೆ ಸಾಕಷ್ಟು ಬಂದಿಲ್ಲ ಎಂಬ ಮಾತುಗಳು ಇವೆ, ಹಾಗೆ ನೋಡಿದರೇ ಎಲ್ಲ ಬಗೆಯ ಬದಲಾವಣೆಯ ಪ್ರತಿಬಿಂಬವೇ ಆಧುನೀಕರಣಾಂತರ, ನಾಗರೀಕತೆಗಳ ವಿಕಾಸ ಪ್ರಕ್ರಿಯೆ, ಆಧುನಿಕರಣ.[೧೩] ಸಮುದಾಯಗಳು ಹಿತಕ್ಕಾಗಿ ಹುಟ್ಟಿಕೊಳ್ಳುವ ನೂತನ ಚಿಂತನೆ ಕ್ರಮಗಳು ಸ್ಫುರದ್ರೂಪಿಯಾಗಿ ಇರಬೇಕೆಂದು ನಿಯಮಗಳೇನಿಲ್ಲ. ಅವು ಪರಿವರ್ತನೆ ದಿಸೆಯಲ್ಲಿ ಸಮುದಾಯಗಳು ಸಾಗುವಂತೆ ನೋಡಿಕೊಳ್ಳುತ್ತವೆ. ಸಾಮಾಜಿಕ ಪ್ರತಿರೋದವನ್ನು ತಂದು ಕೊಡುವಷ್ಟು ಆಧುನೀಕರಣ ಸತ್ವವಾಗಿರುತ್ತದೆ. ವ್ಯಕ್ತಿ ಸಮುದಾಯಗಳ ನಡುವಿನ ಬೌದ್ಧಿಕ ವೈಚಾರಿಕ ಕ್ರಾಂತಿಗೆ ಕಾರಣವಾಗಿರುತ್ತದೆ. ಇಂದು ನಮ್ಮ ಆಧುನಿಕ ಸಂಕಥನಗಳಲ್ಲಿ ಅನೇಕ ಬಗೆಯ ರೂಪಾಂತರಗಳನ್ನು ಕಾಣುತ್ತ ಬಂದಿರುವುದನ್ನು ಕಾಣಬಹುದು.[೧೪] ಇವತ್ತಿನ ಕೆಳಜಾತಿಗಳ ದಲಿತರ, ಅಲೆಮಾರಿ ಸಮುದಾಯಗಳ ಬಹಳಷ್ಟು ಆಚರಣೆಗಳಲ್ಲಿ, ಯೋಚನೆ ವಿಧಾನದಲ್ಲಿ ಈ ಬುಡಕಟ್ಟು ಬದುಕಿನ ವಾಸನೇ ಇರುವುದನ್ನು ಕಾಣುತ್ತೇವೆ. ಅನೇಕ ಸ್ಥಿತ್ಯಂತರಗಳ ಮೂಲಕ ವರ್ತಮಾನದಲ್ಲಿ ಕೆಳವರ್ಗಗಳು, ದಲಿತರು ಅಲೆಮಾರಿಗಳ ಸಮುದಾಯಗಳು ಇನ್ನೂ ಆಲೋಚನೆ ಮಟ್ಟದಲ್ಲಿ ಆದಿಮ ಸಂಸ್ಕೃತಿಗಳನ್ನು ಬಿಟ್ಟುಕೊಟ್ಟಿಲ್ಲ. ಆದರೆ ಇವು ಎಲ್ಲೋ ಒಂದು ಕಡೆ ಆಧುನಿಕ ಜನಗತ್ತಿನ ಹಕ್ಕುಗಳ ಕುರಿತು ಎಚ್ಚರಗೊಂಡಿವೆ.[೧೫]

ಕರ್ನಾಟಕದ ಮಟ್ಟಿಗೆ ಹೇಳುವುದಾದರೇ ಕಂಪ್ಯೂಟರ ಯುಗಕ್ಕೆ ಹೊಸ ಶತಮಾನದ ಸಂದರ್ಭದಲ್ಲಿ ಆಧುನಿಕತೆ ಸಂಪೂರ್ಣವಾಗಿ ಬುಡಕಟ್ಟುಗಳು ಆವರಿಸಿಕೊಂಡಿವೆ. ಆಧುನಿಕತೆ ರೂಪಗಳಾದ ತಂತ್ರಜ್ಞಾನ, ವಿದ್ಯುನ್ಮಾನ ಆರ್ಥಿಕತೆ, ರಾಜಕೀಯ ಚಿಂತನೆ ಪ್ರಜಾಪ್ರಭುತ್ವ ವ್ಯವಸ್ಥೆ ಆಳುವ ವ್ಯವಸ್ಥೆಗಳು ಬುಡಕಟ್ಟುಗಳನ್ನು

ಬದಲಾವಣೆ ತರುವ ನಿಟ್ಟಿನಲ್ಲಿ ಪ್ರಯತ್ನಿಸಿವೆ. ಆದರೆ ಆ ಬದಲಾವಣೆ ಎಷ್ಟರ ಮಟ್ಟಿಗೆ ಅವರ ಅನನ್ಯತೆಯನ್ನು ಉಳಿಸುವಲ್ಲಿ ಯಶಸ್ವಿಯಾಗಿದೆ ಎನ್ನುವುದು ತಿಳಿಯಬೇಕಾಗಿದೆ. ಇವತ್ತಿನ ಸಮಾಜದಲ್ಲಿ ಕೈಗಾರೀಕರಣ ಆಧುನೀಕರಣ ಖಾಸಗೀಕರಣ ಉದಾರೀಕರಣ, ಇವೆಲ್ಲವು ಒಂದೊಂದು ಹಂತವಾಗಿ ಮನುಷ್ಯನನ್ನು ಆವರಿಸಿವೆ. ಇವುಗಳಿಂದ ಬಿಡಿಸಿಕೊಳ್ಳುವ ಮಾತಿನ ಅಗತ್ಯವೇ ಇಲ್ಲದಂತೆ ಅವನು ಬಂಧಿಯಾಗಿದ್ದಾನೆ, ಇವುಗಳಿಂದ ಹೊರತಾಗಿ ಮಾನವ ಬದುಕುತ್ತಾನೆ ಎಂಬುವುದು ಕೇವಲ ಧಿಮಾಕಾಗುತ್ತದೆ. ಹೀಗಾಗಿ ಆಧುನೀಕರಣ ಬದಲಾವಣೆಯ ಸ್ಥಿತಿ ಆಧುನಿಕತೆಗೆ ಮುಖಾಮುಖಿಯಾಗಿದೆ. ಜಗತ್ತಿನ ಬೇರೆಲ್ಲ ಬುಡಕಟ್ಟುಗಳು ಈಗಾಗಲೇ ಸ್ವತಃ ತಮ್ಮ ಮೂಲ ಬುಡಕಟ್ಟಿನ ಮೂಲ ಸ್ವರೂಪವನ್ನೆ ಕಳೆದುಕೊಂಡಿವೆ. ಆಧುನಿಕರಣದ ಪ್ರಭಾವದಿಂದಾಗಿ ಅವರ ಸಂಸ್ಕೃತಿಯೆ ಪಲ್ಲಟಗೊಂಡಿದೆ. ಸಂಸ್ಕೃತಿಯ ವಿನಾಶದಲ್ಲಿಯೂ ಬುಡಕಟ್ಟುಗಳ ವ್ಯಥೆಪಡುವ ಸ್ಥಿತಿಯಲ್ಲಿಲ್ಲ ಏಕೆಂದರೇ ಆ ಸಂದರ್ಭಕ್ಕೆ ಅದರ ಅನಿವಾರ್ಯತೆ ಇರುತ್ತದೆ. ಅಂತಹ ಅನಿವಾರ್ಯಕ್ಕೆ ಸಿಕ್ಕ ಹಸಲರು ಆಧುನೀಕರಣ ಲೋಕದ ಆವಿಷ್ಕಾರಗಳ ಪ್ರಭಾವಕ್ಕೆ ಒಳಗಾದರು. ಆಧುನಿಕತೆಯ ಪರಿಕರಗಳ ಸಂಪತ್ತಿನ ವಿವಿಧ ಮೂಲಗಳು ಹಸಲರನ್ನು ರೂಪಿಸಿವೆ. ಜಗತ್ತಿನ 'ಯಾವುದೇ ಸಮುದಾಯ ಸಂಸ್ಕೃತಿ ವಿಕಾಸವಾಗುತ್ತ ಅನೇಕ ಕಾಲಘಟ್ಟಗಳ ಜೊತೆ ಮುಖಾಮುಖಿಯಾಗುವತ್ತ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತದೆ. ಸಾಂಸ್ಕೃತಿಕ ಪ್ರತಿರೋಧ ಶಕ್ತಿಯ ಬಹುರೂಪಗಳು ಯಾವ ಸಂಸ್ಕೃತಿಯಲ್ಲಿ ಜೀವಂತಿಕೆಯನ್ನು ವಿಸ್ತರಿಸುತ್ತವೆಯೋ ಅಂತಹ ಯಾವ ಸಮುದಾಯವು ಮುಳಗಿ ಹೋಗುವುದಿಲ್ಲ. ವೈಚಾರಿಕ ಅನ್ವೇಷಣೆಗಳು ಅಂತಹ ಸಂಸ್ಕೃತಿಯಲ್ಲಿ ನಿರಂತರವಾದ ಬದಲಾವಣೆಯನ್ನು ಅಪೇಕ್ಷಿಸುತ್ತಾ ನಾಗರೀಕತೆಯ ಕಡೆಗೆ ಬಹುರೂಪಿ ವೇಗ-ಲಯಗಳಲ್ಲಿ ಪಯಣಿಸುತ್ತಿರುತ್ತವೆ.' ಕೆಳಜಾತಿಗೆ ಬೌದ್ಧಿಕ ಪರಂಪರೆ ದಾಹ ಈ ಬಗೆಯ ಸಾಂಸ್ಕೃತಿಕ ಗರ್ವದಿಂದಲೇ ತನ್ನ ರೂಪಾಂತರಗಳನ್ನು ಆಧುನಿಕತೆಯ ಜೊತೆ ಬೆಸೆಯಲು ತೀವ್ರವಾಗಿ ತವಕಿಸುತ್ತಿವೆ.[೧೬] ಅಂತಹ ತವಕಕ್ಕೆ ಒಳಗಾದ ಹಸಲ ಸಮುದಾಯವು ಸ್ಥಿತ್ಯಂತರಕ್ಕೆ ಒಳಗಾಗಿಯಿತು. ವಿಜ್ಞಾನ, ತಂತ್ರಜ್ಞಾನ, ರಾಜಕಾರಣ ಮತ್ತು ಸಂಸ್ಕೃತಿ ಇದೆಲ್ಲವುಗಳ ಜೊತೆ, ಸಂಯೋಗಗೊಂಡು ಅನನ್ಯತೆಯ ಜೊತೆಗೆ ನಾವಿನ್ಯತೆಯ ರೂಪವನ್ನು ಪಡೆದುಕೊಂಡಿತು. ಇವತ್ತಿನ ಬಹುಪಾಲು ಬುಡಕಟ್ಟುಗಳು ಕಂಡುಕೊಂಡಂತೆ ಹಳೆಯ ಸಾಂಪ್ರದಾಯಿಕ ಕಟ್ಟಳೆಗಳು ನಿಯಮಗಳನ್ನು ಬಳಸಿಕೊಳ್ಳುವ ಜೊತೆಗೆ ಜಾತಿಯ ಚಹರೆಗಳಾಗಿ ಗುರುತಿಸಲಾಗುತ್ತಿದ್ದ ಹೀನ ವೃತ್ತಿಗಳು, ವಸ್ತ್ರ-ಉಡುಪುಗಳು ವಿನ್ಯಾಸದಲ್ಲಿ ಬದಲಾವಣೆ ಕಂಡುಕೊಂಡಿವೆ.

ಹೀಗಾಗಿ ಆಧುನಿಕತೆಯ ಸುಲಭವಾಗಿ ಒಂದು ಸಂಸ್ಕೃತಿಯನ್ನು ಪ್ರಭಾವಿಸಿತು. ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಸಮುದಾಯ ತೀವ್ರವೇಗದ ಗಡಿಯಲ್ಲಿ ಬದಲಾಗದು ಅದು ಶತ-ಶತಮಾನಗಳವರೆಗೂ ಮುಂದುವರಿಯುವಂತದ್ದು, ಸುಧೀರ್ಘಾವಧಿಯಲ್ಲಿ ಆಧುನಿಕ ಕೇವಲ ಏಕಮುಖದಲ್ಲಿ ಸಾಗುವುದಿಲ್ಲ. ಅದು ಸಮಾಜದಲ್ಲಿ ಬೇರೆ ಬೇರೆ ರೂಪಾಂತರಗಳಿಗೂ ಕಾರಣವಾಗುತ್ತದೆ; ಆಧುನಿಕತೆ ''ತಿರಸ್ಕೃತ ಸಮುದಾಯಗಳ

ಬಗ್ಗೆ ಕೇಂದ್ರೀಕರಿಸಿದಂತಹ ಈ ಬಗೆಯ ಆಶಯಗಳು ಕಳೆಜಾತಿ ಬುಡಕಟ್ಟುಗಳ ಹಾಗೂ ಮಹಿಳೆಯರ ಏಳಿಗೆಯನ್ನು ಸಮಾನವಾಗಿ ಕಾಣುವುದನ್ನು ಆಧುನಿಕತೆ'' ಎಂದು ಕರೆಯಲಾಗುತ್ತದೆ. ಮನುಷ್ಯನ ಬೌದ್ಧಿಕ ವಿಕಾಸದ ಜೊತೆಗೆ ತಂತ್ರಜ್ಞಾನವನ್ನು ಸಾಂಸ್ಕೃತಿಕ ವಿಶಿಷ್ಟತೆಯನ್ನು ಬೆಳೆಸುತ್ತದೆ. ಆಧುನಿಕತೆ ಹಸಲರಲ್ಲಿ ವಿಭಿನ್ನವಾದ ಹೊಸ ವಿಚಾರ, ತಂತ್ರಜ್ಞಾನ, ಆಧುನಿಕತೆಯ ಶಿಕ್ಷಣ, ಹಾಗೂ ಜಾಗತೀಕರಣ ಪರಿಕಲ್ಪನೆಗಳು ಸಾಂಸ್ಕೃತಿಕ ಪಾರಂಪರಿಕ ಜೀವನದಿಂದ ಆಧುನಿಕ ಶೈಲಿಗೆ ರೂಪಾಂತರಿಸಿದೆ. ಆ ಕಾರಣಕ್ಕಾಗಿ ಅವರ ಜೀವನ ಮೌಲ್ಯಗಳು; ನಂಬಿಕೆ, ಸಂಪ್ರದಾಯ-ಆಚರಣೆ ಆಧುನಿಕವಾಗಿ ಬದಲಾಗಿವೆ.

ಆಧುನಿಕ ಪ್ರಭಾವಕ್ಕೆ ಒಳಗಾದ ಹಸಲರ ಬುಡಕಟ್ಟು ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಸಮುದಾಯ, ಬಣ, ಜಾತಿ ಹಾಗೂ ಉಪಜಾತಿಗಳಾಗಿ ಮಾರ್ಪಡುತ್ತಿವೆ. ರಾಜಕೀಯ ಧಾರ್ಮಿಕ, ಸಾಮಾಜಿಕ ವರ್ಗಗಳು, ಕೈಗಾರಿಕ ಸಂಸ್ಥೆಗಳು, ಸಂಪರ್ಕ ಸಾಧನಗಳು, ಸಮೂಹ ಮಾಧ್ಯಮ ಕಾರ್ಮಿಕ ವರ್ಗದಂತಹ ಸಂಸ್ಥೆಗಳ ಬದಲಾಗಿವೆ, ಇಂತಹ ಬೃಹತ್ ಸಂಸ್ಥೆಗಳು ಆಧುನಿಕರಣಕ್ಕೆ ತಕ್ಕ ಸಾಮಾಜಿಕ ಪ್ರಜ್ಞೆಯನ್ನು ಹಸಲರಲ್ಲಿ ಮೂಡಿಸುತ್ತವೆ. ಹೀಗೆ ಆಧುನೀಕರಣ ಹಳೆಯ ಪದ್ಧತಿಗಳಿರುವ ಸಮಾಜದಲ್ಲಿ ನೂತನವಾದುದನ್ನು ರೂಢಿಸಿ ಆ ಸಮಾಜದ ಮುನ್ನಡೆಗೆ ನೆರವಾಗುತ್ತದೆ.[೭] ಅವರ ಮನೋಭಾವನೆಗಳು, ಮೌಲ್ಯಗಳು ಕಟ್ಟಳೆಗಳು ವಿಚಾರಗಳು ನೂತನ ಚಿಂತನ ಕ್ರಮಗಳು ಹುಟ್ಟುವಿಗೆ ಆಧುನೀಕರಣ ಕಾರಣವಾಯಿತು. ಸಮಾಜದಲ್ಲಿನ ದಿನನಿತ್ಯದ ಜೀವನಕ್ಕೆ ಅಗತ್ಯವಾದ ಅಗತ್ಯತೆಗಳು ಪಡೆಯುವ ನಿಟ್ಟಿನಲ್ಲಿ ಸ್ಪರ್ಧೆಗಳು ಏರ್ಪಟ್ಟವು ಈ ಸ್ಪರ್ಧಾ ಮನೋಭಾವನೆ ಹಸಲರನ್ನು ಬದಲಾಯಿಸುಲ್ಲಿ ಪ್ರಮುಖ ಪಾತ್ರವಹಿಸಿತು. ವರ್ತಮಾನದ ಬದುಕಿಗೆ ಆಧುನಿಕ ರೂಪದಲ್ಲಿ ಪರಿಚಯಸಲ್ಪಟ್ಟ ವಿಜ್ಞಾನ, ಆಧುನೀಕರಣ, ಕೈಗಾರೀಕರಣ, ಮಾದ್ಯಮಗಳು ಸಂಪರ್ಕ ಮಾದ್ಯಮಗಳು ಹಸಲರಲ್ಲಿ ಬದಲಾವಣೆಯ ಲಯಕ್ಕೆ ಒಗ್ಗಿಸಿಕೊಳ್ಳುವಂತೆ ಪ್ರೇರೆಪಿಸಿದವು. ಆ ಪ್ರೇರಣೆಯಿಂದ ಹಸಲರು ಸಾಮಾಜಿಕ ಸ್ಥಾನಮಾನ ಅಂತಸ್ತು ಧಾರ್ಮಿಕ ಸಾಂಪ್ರದಾಯಿಕ ವಿಧಿ-ವಿಧಾನಗಳಲ್ಲಿ ಬದಲಾವಣೆಗಳಾದವು.

೪.೪. ಮಾಹಿತಿ ತಂತ್ರಜ್ಞಾನ

ನಾವು ೨೦ನೇ ಶತಮಾನದಿಂದ ೨೧ನೇ ಶತಮಾನದಲ್ಲಿ ಕಾಲಿಡುತ್ತಿರುವ ಈ ಸಂದರ್ಭದಲ್ಲಿ[೮] ಈ ಶತಮಾನದ ಅತ್ಯಂತ ರೋಚಕವಾದ ತಿರುವುಗಳಿಗೆ ಕಾರಣವಾಯಿತು. ಮಾಹಿತಿ ಕ್ರಾಂತಿಯೆಂಬ ಮಾಯಜಾಲ ಜಗತ್ತನ್ನು ಆವರಿಸಿತು. ಇಡೀ ವಿಶ್ವದ ಕ್ಷಣಾರ್ಧದಲ್ಲಿ ಕಣ್ಣಮುಂದೆ ಗೋಚರಿಸುವ ವೀಕ್ಷಿಸುವ ಅವಕಾಶ ದೊರೆಯಿತು. ಪೃಥ್ವಿಯನ್ನು ಪ್ರಯೋಗ ಶಾಲೆಯನ್ನು ಮಾಡಿಕೊಂಡ ವಿಜ್ಞಾನಿಗಳು ಮಂಗಳ ಗ್ರಹ, ಚಂದ್ರನ ಮೇಲೆ ಹೆಜ್ಜೆ ಇಟ್ಟರು. ಯಂತ್ರಮಾನವನಿಂದ ಕೆಲಸ ತೆಗೆದುಕೊಳ್ಳುವಷ್ಟರ ಮಟ್ಟಿಗೆ ತಂತ್ರಜ್ಞಾನ ವಿದ್ಯುನ್ಮಾನ ಲೋಕ ಸೃಷ್ಟಿಯಾಯಿತು. ಕೇವಲ ಅರ್ಧ ಶತಮಾನದ ಹಿಂದೇ ಪ್ರತಿಸತ್ಯವು ಭ್ರಮಾಲೋಕದ

ಕಟ್ಟುಕಥೆಗಳೇ ಆಗಿದ್ದವು. ಪ್ರತಿ ಅವಿಷ್ಕಾರವನ್ನು ಜನರು ತಿರಸ್ಕಾರ ಮನೋಭಾವನೆಯಿಂದ ಕಾಣುತ್ತಿದ್ದರು. ಸಾರಾಸಗಟಾಗಿ ತಿರಸ್ಕಾರ ಕೂಡ ಮಾಡುತ್ತಿದ್ದರು. ಆದರೆ ಅದನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಜನರು ವಿಫಲರಾದರು, ನೂತನ ಅವಿಷ್ಕಾರಗಳ ಮೋಹಕತೆಗೆ ಒಳಗಾದ ಸಮುದಾಯಗಳು, ಜನಾಂಗಗಳು ಅನಿವಾರ್ಯವಾಗಿ ತಂತ್ರಜ್ಞಾನವನ್ನು ಸ್ವೀಕರಿಸಲೇ ಬೇಕಾಯಿತು. ಪ್ರಸ್ತುತ ಇಂತಹ ವಿದ್ಯುನ್ಮಾನಗಳ ಮತ್ತು ತಂತ್ರಜ್ಞಾನಗಳ ಪ್ರಭಾವದಿಂದಾಗಿ ಇಡಿ ಜಗತ್ತು ತುಂಬಾ ಚಿಕ್ಕದಾಗಿದೆ. ಜಗತ್ತನ್ನು ಒಂದು 'ವಿಶ್ವಗ್ರಾಮ' (Global village) ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿದ 'ಮಾರ್ಶಲ್ ಮಿಕ್ಲುಹಾನ್'ನ ಭಾವನೆ ಸತ್ಯವೆನಿಸುತ್ತಿದೆ. ಮಾಹಿತಿ ತಂತ್ರಜ್ಞಾನ ಎನ್ನುವುದು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ವಿಸ್ತಾರವಾಗಿದೆ ಭೂಮಿಯ ಮೇಲೆ ಎಲ್ಲೊ ಒಂದೆಡೆ ನಡೆದ ಘಟನೆ ಸಂಶೋಧನೆಗಳು ಮಾಹಿತಿಗಳು ಜನರಿಗೆ ಕ್ಷಣಾರ್ಧದಲ್ಲಿ ವೀಕ್ಷಣೆಗೆ ಅವಕಾಶವಿದೆ. ಮಾಹಿತಿ ತಂತ್ರಜ್ಞಾನ ಎನ್ನುವುದು ಪ್ರಸ್ತುತವಾಗಿ ಒಂದು ಜ್ಞಾನ ಪ್ರಸರಣ ಕಾರ್ಯವೊಂದಕ್ಕೆ ಸೀಮಿತವಾಗಿರದೇ ಅದು ಅಧಿಕಾರ, ಅಂತಸ್ತು, ಸಂಪತ್ತು ಸಾಮಾಜಿಕ ಸ್ಥಾನ ಮಾನಗಳನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಅದು ಸಮುದಾಯಗಳ ನಡುವಿನ ಶಾಂತಿಗೂ ಮತ್ತು ಕ್ರಾಂತಿಗೂ ಕಾರಣವಾಗಿದೆ.

ಮಾಹಿತಿ ತಂತ್ರಜ್ಞಾನವು ದಿನದಿಂದ ದಿನಕ್ಕೆ ನಿಮಿಷದಿಂದ ನಿಮಿಷಕ್ಕೆ ಬದಲಾಗುತ್ತಿರುವ ಜೀವನ ಸಂಬಂಧಿ ಮಾಹಿತಿ ವ್ಯಕ್ತಿಯನ್ನು ಸದಾ ಬದಲಾವಣೆಯ ಹೊಸ ಕಲಿಕೆಯ ಯುಗ ಮಾನವನ ಇತಿಹಾಸದಲ್ಲಿ ಹೊಸ ದಾಖಲೆಗಳನ್ನು ಸೃಷ್ಟಿಸಿದ ಅದ್ಭುತ ಯುಗ. ಈ ಯುಗದಲ್ಲಿ ನಡೆದ ಮತ್ತು ನಡೆಯುತ್ತಿರುವ ವೈಚಾರಿಕ ಕ್ರಾಂತಿ, ಬುದ್ಧಿ ಪರಿಶ್ರಮಕ್ಕೆ ಸರಿಸಾಟಿಯಲ್ಲದ್ದು, ಭೌತಿಕ ಸಾಧನೆಗಳಾದ ಕಂಪ್ಯೂಟರ್ ಕೃತ್ರಿಮ ಉಪಗ್ರಹಗಳು, ಅಥವಾ ಅತಿ ವೇಗದ ಕೇಬಲ್ ಹಾಗೂ ಇಂಥ ಅನೇಕ ಸಂಶೋಧನೆಗಳನ್ನು ಜಗತ್ತಿನ ಮೂಲೆ ಮೂಲೆಗಳಲ್ಲಿಯೂ ಆಧುನಿಕತೆಯ ಸಂದೇಶವನ್ನು ಪ್ರಚಾರ ಮಾಡಿ ವೈಚಾರಿಕವಾಗಿ ಎಲ್ಲ ಸಮುದಾಯಗಳು ಇನ್ನೆಲ್ಲ ಸಮುದಾಯಗಳನ್ನು ಗುರುತಿಸುಲ್ಲಿ ಮಾಡಿದ ಕಾರ್ಯ ಪ್ರಮುಖವಾದದ್ದು. ಆದರೇ ಇದಕ್ಕಿಂತ ಮುಖ್ಯವಾಗಿ ಆಧುನಿಕೋತ್ತರ ಸಮಾಜ ನಿರ್ಮಾಣದ ಈ ಹಂತದಲ್ಲಿ ವ್ಯಕ್ತಿಯ ಸಾಮಾಜಿಕ ಜೀವಿಯಾಗಿ ವಿಶಾಲ ಜಾಗತಿಕ ವ್ಯವಸ್ಥೆಯಲ್ಲಿ ಉಳಿದವರಿಗೆ ಸಂಬಂಧಿಸಿದಂತೆ ತನ್ನ ಪಾತ್ರವನ್ನು ಗುರುತಿಸಿಕೊಳ್ಳುವಲ್ಲಿ ನಡೆಸಿದ ವೈಚಾರಿಕ ಕ್ರಾಂತಿಯೆ ಆಗಿದೆ.[೧೧]

ವೈಚಾರಿಕ ಕ್ರಾಂತಿಯಲ್ಲಿ ಹೊಸ ಕಲಿಕೆಯನ್ನು ಆರಂಭಿಸಿದ ಮಾನವ ಸಮಾಜ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬದಲಾಗುತ್ತ ಹೋಯಿತು. ಈ ತಂತ್ರಜ್ಞಾನ ಹಾಗೂ ಮೌಲ್ಯಗಳ ನಿರಂತರ ಬದಲಾವಣೆಯಿಂದಾಗಿ ಪ್ರಸ್ತುತ ಅಧ್ಯಯನ ಕೈಗೊಂಡಿರುವ ಹಸಲರು ಕೂಡ ಸ್ಥಿತ್ಯಂತರಕ್ಕೆ ಒಳಗಾದರು. ಮಾಹಿತಿ ತಂತ್ರಜ್ಞಾನದ ಫಲವಾಗಿ ಹಾಡಿಗಳಲ್ಲಿ ದೂರದರ್ಶನ ಟೇಪರೆಕಾರ್ಡ್‌ರ್ ಸಮೂಹ ಮಾಧ್ಯಮಗಳು, ಟೆಲಿಫೋನ್, ಮುಬೈಲ್, ಮೋಟಾರ ಸೈಕಲ್, ವಾಹನಗಳ ಪ್ರವೇಶವಾಯಿತು. ಪ್ರಾರಂಭದಲ್ಲಿ ಹಸಲರು ಕೂಡ

ಇವುಗಳನ್ನು ತಿರಸ್ಕಾರ ಮನೋಭಾವನೆಯಿಂದ ನೊಡಿದರು. ಆದರೆ ಸಮೂಹ ಮಾಧ್ಯಮಗಳ ಪ್ರಭಾವ. ಸಾರಿಗೆ ಸಂಪರ್ಕಗಳ ಪ್ರಭಾವ ದಟ್ಟವಾದ ಕಾರಣ ನೂತನ ಸಾಮಾಜಿಕ ಕ್ರಾಂತಿಗೆ ಪೂರಕವಾಗಿ ಬದಲಾಗಲೇಬೇಕಾಯಿತು. ಆದರೆ ಇವತ್ತಿಗೂ ಹಸಲರ ಸಮುದಾಯವು ನವ ತಂತ್ರಜ್ಞಾನವನ್ನು ತಿರಸ್ಕಾರ ಮನೋಭಾವನೆಯಿಂದ ನೋಡುತ್ತಿದೆ. ಅವರಿಗೆ ಇದರಿಂದ ಸಂಪತ್ತಿಗಿಂತ ಆಪತ್ತೆ ಹೆಚ್ಚು ಎನ್ನುವ ಭಾವನೆ ಅವರಲ್ಲಿ ಬೆಳೆಯುತ್ತಿದೆ. ಹೊಸ ಸಮಾಜಕ್ಕೆ ಇದು ಪೂರಕವೇ ನಮ್ಮ ಸಂಸ್ಕೃತಿಯನ್ನು ಎಷ್ಟರ ಮಟ್ಟಿಗೆ ಉಳಿಸಿದೆ. ಸಾಂಸ್ಕೃತಿಕ ಮೌಲ್ಯಗಳು ಏನಾಗಿವೆ. ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಶಿಕ್ಷಣ, ವಿವಾಹ, ರಕ್ತಸಂಬಂಧ ಬಂಧನಗಳು ಶಿಥಿಲಕ್ಕೆ ಕಾರಣವಾಗುತ್ತಿವೆ ಎಂಬ ಕಾರಣಗಳನ್ನು ನೀಡುತ್ತಾರೆ. ಆದರೂ ಕೂಡ ತಂತ್ರಜ್ಞಾನವನ್ನು ಇಡಿ ಜಗತ್ತೆ ಸ್ವೀಕರಿಸಿದೆ ದೈನಂದಿನ ಜೀವನದಲ್ಲಿ ತಂತ್ರಜ್ಞಾನವು ಯಾವುದೇ ಒಂದು ರೂಪದಲ್ಲಿ ನಮ್ಮ ನಡುವೆ ಇರುತ್ತದೆ. ಒಂದು ಕ್ಷಣ ವಿದ್ಯುತ್ ಹೋದರೇ ಪರದಾಡುವ ಪರಿಸ್ಥಿತಿ ಏರ್ಪಡುತ್ತಿದೆ. ಫ್ಯಾನ್ ತಿರುಗದೇ ಹೋದರೆ ತೋಳಲಾಡುತ್ತೇವೆ. ಮುಬೈಲ್ ಸಂಪರ್ಕ ಒಂದು ಕ್ಷಣ ಕಡಿತಗೊಂಡರೆ ಅಧೀರರಾಗುತ್ತೇವೆ. ಇಂತಾ ಅನೇಕ ರೂಪಗಳ ಮುಖಾಂತರ ತಂತ್ರಜ್ಞಾನ ಹಸಲರನ್ನು ಸುತ್ತುವರಿದಿದೆ. ಇಡಿ ಜಗತ್ತಿನ ಒಂದು ಗ್ರಾಮವನ್ನಾಗಿಸುವ ಪರಿಕಲ್ಪನೆಯನ್ನು ಹಸಲರು ಸ್ವೀಕರಿಸಿದ ಕಾರಣಕ್ಕೆ ಹಸಲರಲ್ಲಿ ಬದಲಾವಣೆಯಾಯಿತು. ಮಾಹಿತಿ ತಂತ್ರಜ್ಞಾನವು ಹಸಲರ ಸಮುದಾಯವನ್ನು ಬಹುಪಾಲು ಬದಲಾವಣೆ ಪ್ರಕ್ರಿಯೆಗೆ ಒಳಗಾಗಿರುವುದು ಕಂಡುಬರುತ್ತದೆ.

೪.೫. ಸ್ವಯಂಸೇವಾ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳು

ಸದೃಢ ಸಮಾಜದ ರಚನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಪಾತ್ರ ಗಮನಾರ್ಹವಾಗಿರುತ್ತದೆ. ಒಂದು ವರ್ಗದ ಏಳಿಗೆಗೆ ಅಭಿವೃದ್ಧಿಗೆ ಕಲ್ಯಾಣಕ್ಕೆ ಸಂಘಸಂಸ್ಥೆ ಅಗತ್ಯವೆನಿಸುತ್ತದೆ ಮಾನವನು ಮೂಲತಃ ಸಂಘಜೀವಿ ಅವನು ಪ್ರತಿಯೊಂದನ್ನು ಸಾಂಘಿಕ ಪ್ರಯತ್ನದ ಮೂಲಕ ಮಾಡುತ್ತಾನೆ. ಸಂಘ ಸಂಸ್ಥೆಗಳು ಅವನ ನೈಸರ್ಗಿಕ ಜೈವಿಕ ಆಶೋತ್ತರಗಳನ್ನು ಇಡೇರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಒಂದು ನಿರ್ಧಿಷ್ಟ ಪ್ರದೇಶದ ನಿವಾಸಿಗಳ ಕಲ್ಯಾಣ ಮತ್ತು ರಕ್ಷಣೆಯ ಜವಾಬ್ದಾರಿ ಹೊತ್ತುಕೊಳ್ಳುವ ಸಂಸ್ಥೆಯ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತಿದೆ. ಜನರನ್ನು ಸಂಘಟಿಸಿ ಪ್ರಬಲವಾದವನು ಗುಂಪುಗಳ ನಾಯಕನಾಗುತ್ತಿದ್ದಾನೆ. ನಾಯಕನಾದವನು ಸಮುದಾಯದ ಏಳಿಗೆಗೆ ಪ್ರಯತ್ನಿಸುತ್ತಿದ್ದಾನೆ. ಈ ಪ್ರಯತ್ನಗಳು ಮುಂದುವರೆದಂತೆಲ್ಲ ಸಮುದಾಯಗಳು ಪರಿವರ್ತನೆಯಾಗುತ್ತಿವೆ. ಅಸ್ತಿತ್ವದಲ್ಲಿರುವ ಒಂದು ವ್ಯವಸ್ಥೆ ಸದಾಕಾಲವು ಪರಿವರ್ತನೆ ಬಗ್ಗೆ ಯೋಚಿಸುತ್ತ ಇರುತ್ತದೆ. ತನ್ನ ಕಾರ್ಯಯೋಜನೆಗಳು ತಂತ್ರಗಳನ್ನು ರೂಪಿಸುವ ಮೂಲಕ ತನ್ನ ವ್ಯಾಪ್ತಿಯೊಳಗೆ ವಾಸಿಸುವ ಮಾನವ ಅಭಿವೃದ್ಧಿಗೆ ನೂತನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಹೊಣೆ ಸರ್ಕಾರದಾಗಿರುತ್ತದೆ. ತನ್ನ ವ್ಯಾಪ್ತಿಗೆ ಒಳಪಡುವ ಸಮುದಾಯಗಳನ್ನು

ಸಂಸ್ಥೆಗಳ ಅಥವಾ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅಭಿವೃದ್ಧಿಗೊಳಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತಲೆ ಇರುತ್ತದೆ.

ಪ್ರಸ್ತುತ ಈ ಅಂಶದಲ್ಲಿ ಹಸಲರು ಬದಲಾವಣೆಗೆ ಸರ್ಕಾರಿ ಸಂಸ್ಥೆಗಳ ಪಾತ್ರ ಕುರಿತು ಚರ್ಚಿಸಲಾಗಿದೆ. ಸ್ವಾತಂತ್ರ ಪೂರ್ವದಿಂದಲೂ ಒಂದೊಂದು ಘಟ್ಟದ ಒಬ್ಬೊಬ್ಬರ ಆಳ್ವಿಕೆಗೆ ಒಳಪಟ್ಟು ಅನೇಕ ಬುಡಕಟ್ಟುಗಳ ಇತಿಹಾಸವು ಚಿಂತಾಜನಕವಾದದ್ದು, ಸ್ವಾತಂತ್ರ ಪೂರ್ವದಲ್ಲಿ ಭಾರತೀಯ ಸಮಾಜ ಸುಧಾರಕರಾಧ ರಾಜರಾಮ್ ಮೋಹನರಾಮ್, ಕೇಶವ ಚಂದ್ರಸೇನ ರಾನಡೆ, ದಯಾನಂದ ಸರಸ್ವತಿ, ಲಾಲಾ ಲಜಪತರಾಯ, ಈಶ್ವರಚಂದ್ರ ವಿದ್ಯಾಸಾಗರ, ಗೋಪಾಲಕೃಷ್ಣ ಗೋಖಲೆ, ರಾಮಕೃಷ್ಣ, ಪರಮಹಂಸ, ದೇವೇಂದ್ರನಾಥ ಠಾಕೂರ್, ಸ್ವಾಮಿ ವಿವೇಕಾನಂದ, ಪಂಡಿತ ರಮಾಬಾಯಿಯಂತ ಮುಂತಾದವರು ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿ ಜನರ ಮನಸ್ಸಿಗೆ ಹತ್ತಿರವಾದರು ಸ್ವಾತಂತ್ರ ನಂತರ ಭಾರತವು ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಹೊರಹೊಮ್ಮಿತು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಆಳ್ವಿಕೆಗೆ ಬಂದ ಸರಕಾರಗಳು ಬುಡಕಟ್ಟುಗಳ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಕಾರ್ಯಕ್ರಮಗಳನ್ನು ಶಿಕ್ಷಣ, ರಾಜಕೀಯ, ಧಾರ್ಮಿಕ ಸಂಸ್ಥೆಗಳನ್ನು ನವಭಾರತಕ್ಕೆ ಪರಿಚಯಿಸುವ ಮೂಲಕ ಬದಲಾವಣೆಯನ್ನು ಮಾಡಲು ಪ್ರಯತ್ನಿಸಿದರು, ಪಂಚವಾರ್ಷಿಕ ಯೊಜನೆಗಳು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಪಂಚಾಯತ್ ರಾಜ್ ವ್ಯವಸ್ಥೆ ಅಧಿಕಾರದ ವಿಕೇಂದ್ರೀಕರಣಗೊಳಿಸುವ ಮುಖಾಂತರ ಬುಡಕಟ್ಟುಗಳಲ್ಲಿ ಸುಧಾರಣೆ ತರುವ ಪ್ರಯತ್ನ ಮಾಡಲಾಯಿತು.

ಸರಕಾರಗಳು ಯೋಜನೆ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಸದುಪಯೋಗಪಡಿಸಿಕೊಂಡು ಕೆಲವು ಬುಡಕಟ್ಟುಗಳು ತೀವ್ರಗತಿಯಲ್ಲಿ ಬದಲಾಗುತ್ತ ಹೋದವು. ಆದರೆ ಹಸಲರ ವಿಷಯಕ್ಕೆ ಬಂದಾಗ ಅವರ ಸರ್ಕಾರದ ಅಭಿವೃದ್ಧಿ ನೀತಿ ನಿಧಾನಗತಿಯಲ್ಲಿ ಪ್ರಸರಣವಾಯಿತು. ಸರ್ಕಾರಿ ಸಂಸ್ಥೆಗಳಾದ ಶಿಕ್ಷಣ, ಕಾನೂನು, ಮತದಾನ, ಪ್ರಭುತ್ವ, ಕೋರ್ಟು, ನ್ಯಾಯ ಪಂಚಾಯತಿ ಕಛೇರಿಗಳು ರಾಜಕೀಯ ಆರೋಗ್ಯ ವೈದ್ಯಕೀಯ ಇವೆಲ್ಲವುಗಳ ನಿರಂತರ ಸಂಪರ್ಕ ಹಸಲರ ಸಾಮಾಜಿಕ ಜೀವನ ವಿಧಾನದಲ್ಲಿ ಬದಲಾವಣೆಗೆ ಕಾರಣವಾಯಿತು.

ಹಸಲರ ಬದಲಾವಣೆಗೆ ಸರಕಾರಿ ಸಂಸ್ಥೆಗಳು ಎಷ್ಟು ಕಾರಣವಾಗಿದ್ದವೊ ಸರ್ಕಾರೇತರ ಸಂಸ್ಥೆಗಳು ಕೂಡ ಅಷ್ಟೆ ಕಾರಣವಾಗಿದ್ದವು. ಅಸ್ಪೃಶ್ಯತೆ, ಅಸಮಾನತೆ, ಅಸಹಕಾರವನ್ನು ಜಾತಿ ನಿಂದನೆಯನ್ನು ಹೋಗಲಾಡಿಸಲಿಕ್ಕೆ ಅನೇಕ ಸಂಸ್ಥೆಗಳು ಹುಟ್ಟುಕೊಂಡುವು ಮುಖ್ಯವಾಗಿ ಬುಡಕಟ್ಟುಗಳು ಅರಣ್ಯಗಳನ್ನು ಪ್ರವೇಶಿಸಿದ ಕ್ರೈಸ್ತಮಿಷನರಿಗಳು, ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಸಮಾಜಸೇವೆ ಸಂಸ್ಥೆಗಳು, ಹಸಲರ ಮಟ್ಟಿಗೆ ಹೇಳುವುದಾದರೆ ಪಶ್ಚಿಮ ಘಟ್ಟದಲ್ಲಿನ ಪ್ರಕೃತಿಯ ಸೌಂದರ್ಯವನ್ನು ಮತ್ತು ಅಲ್ಲಿ ಸಿಗುವ

ಅಮೂಲ್ಯವಾದ ಉತ್ಪನ್ನಗಳನ್ನು ಕದಿಯುವ ಉದ್ದೇಶವನ್ನಿಟ್ಟುಕೊಂಡು, ನಿಮ್ಮ ಸುಧಾರಣೆ ನಾವು ಪ್ರಯತ್ನಿಸುತ್ತವೆ. ನಿಮಗೆ ಕೂಲಿ ಕೊಡುತ್ತೇವೆ ಎಂಬ ನೆಪದಲ್ಲಿ ಅರಣ್ಯಗಳನ್ನು ಪ್ರವೇಶಿಸಿದವು, ಇವು ಬುಡಕಟ್ಟುಗಳನ್ನು ಸುಧಾರಿಸುವಲ್ಲಿ ಅಷ್ಟರಲ್ಲಿಯೇ ಇರಲಿ ಅವರಿಂದ ಅಮೂಲ್ಯವಾದ ಕಾಡೋತ್ಪನ್ನಗಳನ್ನು ಸಂಗ್ರಹಿಸಿ ಅವರ ಮೂಲಕವೇ ಪರಿಷ್ಕರಿಸಿ ಮಾರಾಟ ಮಾಡುತ್ತಿದ್ದರು ಕೇವಲ ದಿನಕ್ಕೆ ೧೦೦ ರಿಂದ ೧೫೦ ಕೂಲಿ ನೀಡುವ ಆ ಸಂಸ್ಥೆಗಳು ತಾವು ಅತ್ಯಧಿಕ ಗಳಿಕೆ ಮಾಡಿಕೊಳ್ಳುತ್ತಿದ್ದವು ಏನೇ ಆದರೂ ಖಾಸಗಿ ಸಂಘಸಂಸ್ಥೆಗಳು ಸ್ವಲ್ಪಮಟ್ಟಿಗೆ ಸಂಪರ್ಕದಿಂದ ಹಸಲರು ತೀರವಲ್ಲದಿದ್ದರು ಸ್ವಲ್ಪಮಟ್ಟಿಗಾದರು ಬದಲಾಗಿದ್ದಾರೆ.

ಯಾವುದೇ ಸಮುದಾಯ ಅಥವಾ ಸಮಾಜದ ರಚನೆಯಲ್ಲಿ ಸ್ವಯಂ ಸೇವಾಸಂಸ್ಥೆಗಳ ಪಾತ್ರ ಗಮನಾರ್ಹವಾದುದಾಗಿರುತ್ತವೆ. ಒಂದು ಹಿಂದುಳಿದ ವರ್ಗದ ಏಳಿಗೆಗಾಗಿ ಅಭಿವೃದ್ಧಿಗಾಗಿ ಕಲ್ಯಾಣಕ್ಕಾಗಿ ಸಂಘಗಳು ಅಗತ್ಯವೆನಿಸುತ್ತದೆ. ಈ ನಿಟ್ಟಿನಲ್ಲಿ ಸಮಾಜಕ್ಕೆ ದೇಶಕ್ಕೆ ಮೇರಾಡ್ ಡೀಡ್, ಲ್ಯಾಂಪ್ಸ್, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿಯೋಜನೆ, ಅಕ್ಷಯ ಯೋಜನೆ, ಇವೆಲ್ಲವು ಅವರ ಬದಲಾವಣೆಯಲ್ಲಿ ಅವಸ್ಮರಣೀಯವಾದ ಸೇವೆ ಸಲ್ಲಿಸಿವೆ. ಆ ನಿಟ್ಟಿನಲ್ಲಿ ಯೋಚನೆ ಮಾಡಿದಾಗ ಪ್ರಸ್ತುತ ಹಸಲರ ಸುಧಾರಣೆಗಾಗಿ ಧರ್ಮಸ್ಥಳ ಡಾ. ವಿರೇಂದ್ರ ಹೆಗಡೆಯವರ ಗ್ರಾಮೀಣಾಭಿವೃದ್ಧಿ ಮತ್ತು ಸ್ವ ಉದ್ಯೋಗ ತರಬೇತಿ ಕೆಂದ್ರಗಳು ಮತ್ತು ಗ್ರಾಮಾಭಿವೃದ್ಧಿ ಯೋಜನೆ (SKDRDP) ಈ ಎರಡು ಪ್ರಯೋಗಗಳ ಮೂಲಕ ಹಸಲರಲ್ಲಿ ಕ್ರಾಂತಿಕಾರಕ ಬದಲಾವಣೆ ತೆಗೆದುಕೊಂಡು ಬಂದರು. ೧೯೮೩ ಇತ್ತೀಚೆಗೆ ಪ್ರಾರಂಭವಾದರು ಹಸಲರ ಪ್ರಗತಿಗೆ ಸ್ಪಂಧಿಸಿದ ನೀತಿ ಅಮೋಘವಾದದ್ದು, ಈ ಎರಡು ಸಂಸ್ಥೆಗಳು ಅವರನ್ನು ಬದಲಾಯಿಸುವ ನಿಟ್ಟಿನಲ್ಲಿ ಕಾರ್ಯಗತವಾಗಿವೆ.

ಯುವ ಜನತೆ ಮತ್ತು ಬುಡಕಟ್ಟುಗಳ ಅಭಿವೃದ್ಧಿ ವಿಷಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಮಾದರಿಯಾಗಿ ಭವಿಷ್ಯದಲ್ಲಿ ಅಭಿವೃದ್ಧಿಗೆ ಮತ್ತು ಬದಲಾವಣೆಗೆ ಹೊಸ ದಿಕ್ಕುದಿಸೆ ತೋರಿಸುವಲ್ಲಿ ಯಶಸ್ವಿಯಾಗಿವೆ. ಹಸಲರಲ್ಲಿ ಸ್ವ ಸಹಾಯ ಸಂಘಗಳ ಸ್ಥಾಪನೆಗೆ ಕಾರಣವಾದ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಸರ್ಕಾರಿ ಸ್ತ್ರೀ ಶಕ್ತಿ ಗುಂಪುಗಳಿಗೆ ಪ್ರೇರಣೆ ನೀಡುತ್ತಿದೆ. ಕರ್ನಾಟಕ ಸರ್ಕಾರವು ಇದರಿಂದ ಪ್ರೇರಣೆ ಪಡೆದು ೨೦೦೩-೦೪ ಬಜೆಟ್‌ನಲ್ಲಿ ಜಿಲ್ಲೆಗೊಂದರಂತೆ ರುಡ್‌ಸೆಟ್ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಆಶಿಸಿತು. ಸಂಘ-ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಗ್ರಾಮೀಣ ಭಾಗದ ಬುಡಕಟ್ಟುಗಳ ರೈತರ ಬಡತನ ರೇಖೆಗಿಂತ ಕೆಳಗಿನವರ ಬದುಕಿಗೆ ಆಶ್ರಯ ಕಲ್ಪಿಸುವ ಆಶಾದೀಪವಾಗಿ ಜೀವನ ನಿರ್ವಹಣೆಗೆ ಅವಕಾಶ ಕಲ್ಪಿಸಿತು. ಕಾರ್ಮಿಕರಾಗಿದ್ದ ಅನೇಕರಿಗೆ ಕೃಷಿ ಮಾಡುವಂತೆ ಪ್ರೇರಣೆ ನೀಡುವ ಮೂಲಕ ಹಸಲರ ಬದುಕಿಗೆ ಅಗತ್ಯವಾದ ಮೂಲಭೂತ ಸುಧಾರಣೆಗಳು ಯೋಜನೆಗಳ ಕಲ್ಪಿಸಿ ಅವರ ಸುಧಾರಣೆ ತರುವಂತ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಲೇ ಬಂದಿದ್ದವು.

ಜ್ಞಾನ ವಿಕಾಸ ಗ್ರಾಮೀಣ ಸಬಲೀಕರಣಕ್ಕಾಗಿ ಶ್ರೀಮತಿ ಹೆಗಡೆಯವರು ರೂಪಿಸಿದ ಒಂದು ವಿಶಿಷ್ಟವಾದ ಕಾರ್ಯಕ್ರಮವಾಗಿತ್ತು ಬುಡಕಟ್ಟು ಬಡಮಹಿಳೆಯರು ಎದುರಿಸುತ್ತಿರುವ ಆತ್ಮ ವಿಶ್ವಾಸದ ಕೊರತೆ, ಅಜ್ಞಾನ, ಅಂಧ ಶ್ರದ್ಧೆಗಳನ್ನು ಹೊರದೂಡಿಸಿ ಆರೋಗ್ಯ ನೈರ್ಮಲ್ಯ, ಶಿಕ್ಷಣ ಸಮತೋಲನ ಆಹಾರ ತಯಾರಿ ಗೃಹ ನಿರ್ಮಾಣದ ಕಾರ್ಯಕ್ರಮಗಳನ್ನು ಪರಿಚಯಿಸುವ ಮೂಲಕ ಬುಡಕಟ್ಟು ಬದುಕಿನಲ್ಲಿ ನೂತನ ಚಿಂತನಲಹರಿಯನ್ನು ಹುಟ್ಟುಹಾಕುತ್ತಿದೆ ಸ್ವಸಹಾಯ ಸಂಘಗಳು ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳು ಸರ್ಕಾರೇತರ ಸಂಸ್ಥೆಗಳು ಅನೇಕ ಯೋಜನೆಯ ಫಲವಾಗಿ ಹಸಲರಲ್ಲಿ ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ಸ್ಥಾನಮಾನದಲ್ಲಿನ ಬದಲಾವಣೆ ಸ್ವ-ಉದ್ಯೋಗ ಸಮಸ್ಯೆಗಳನ್ನು ಚರ್ಚಿಸುವ ಮೂಲಕ ಪರಿಹರಿಸಿಕೊಳ್ಳುವ ಕ್ರಮಗಳ ಸ್ವ ನಿರ್ಧಾರ ತೆಗೆದುಕೊಳ್ಳುವಂತ ತೀರ್ಮಾನಗಳನ್ನು ಮಾಡುವಷ್ಟರ ಮಟ್ಟಿಗೆ ಬದಲಾಯಿಸಿವೆ. ಇವೆಲ್ಲ ಅಂಶಗಳು ಪುರುಷ ಮಹಿಳೆಯ ವಾದ ಅಸಮಾನತೆ ದೂರಮಾಡಿ ಜೀವನ ವಿಧಾನ ಪರಿವರ್ತನೆಗೆ ಕಾರಣವಾಗಿವೆ.

ಅಡಿ ಟಿಪ್ಪಣಿಗಳು

೧. ನಾಗೇಶ ಎಚ್.ವಿ., ಸಾಮಾಜಿಕ ಚಳುವಳಿಗಳು ಪುಟ.೦೧

೨. ಅದೇ, ಪುಟ

೩. ಅದೇ, ಪುಟ

೪. ಅದೇ, ಪುಟ

೫. ಅದೇ, ಪುಟ.೦೩

೬. ಅದೇ, ಪುಟ

೭. ಅದೇ, ಪುಟ.೦೪

೮. ಅದೇ, ಪುಟ.೧೯

೯. ವಿಜಯ್ ಪೂಣಚ್ಚ ತಂಬಂಡ, ಪರಿಸರ ಚಳುವಳಿ, ಚರಿತ್ರೆ ವಿಶ್ವಕೋಶ, ೨೦೦೧, ಪುಟ.೯೦೧

೧೦. ನಂಜಮ್ಮಣ್ಣಿ, ಎಂ.ಭಾರತೀಯ ಸಾಮಾಜಿಕ ಸಂಸ್ಥೆಗಳು ಪುಟ.೩೪೭

೧೧. ಅದೇ ಪುಟ

೧೨. ಅದೇ ಪುಟ.೩೪೨

೧೩. ಗಣೇಶ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ಪುಟ.೧೧೨

೧೪. ಪ್ರಭಾಕರ್.ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು,ಪುಟ.೧೨

೧೫. ಅದೇ ಪುಟ

೧೬. ಗಣೇಶ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ಪುಟ.೦೧

೧೭. ನಂಜಮ್ಮಣ್ಣಿ.ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ಪುಟ.೩೪೨

* * *

ಸಮಾರೋಪ

ಸಮಾರೋಪ

ಚಲನಶೀಲತೆ ಜೀವಂತ ಸಮುದಾಯದ ಬಹುಮುಖ್ಯ ಲಕ್ಷಣ ಇಂತ ಚಲನಶೀಲತೆಯನ್ನು ಅಂತರಗತವಾಗಿರಿಸಿಕೊಂಡ ಸಮುದಾಯಗಳು ಬದಲಾಗುವ ಕಾಲಮಾನದ ಲಯಕ್ಕೆ ವಿಸ್ತರಿಸಿಕೊಳ್ಳುವ ಅಥವಾ ತನ್ನ ಸಂವೇದನೆಗಳನ್ನು ಆ ಬದಲಾದ ಲಯಕ್ಕೆ ಹೊಂದಿಸಿಕೊಳ್ಳುವ ಪ್ರಯತ್ನವನ್ನು ಯಾವತ್ತೂ ಜೀವಂತವಾಗಿಟ್ಟುಕೊಂಡಿರುತ್ತದೆ.[೧] ಅವು ಬದಲಾವಣೆಗೆ ಅರ್ಥಪೂರ್ಣವಾಗಿ ಅನ್ವಯಿಸುವ ಬೆಸೆಯುವ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ.[೨] ಹೀಗೆ ಬದಲಾವಣೆಗೆ ಪ್ರಕ್ರಿಯೆಗೆ ಹಸಲರ ಸಮುದಾಯವು ಒಳಗಾಗಿದ್ದು ಗಮನಾರ್ಹ ಸಂಗತಿ. ಹಸಲರ ಸಮುದಾಯವು ಬದಲಾವಣೆಗೆ ತನ್ನ ಪಾರಂಪರಿಕ ಸಂಪ್ರದಾಯ ಸಾಂಸ್ಕೃತಿಕ ಚಹರೆಗಳನ್ನು ತನ್ನೊಳಗೆ ಸಂಯೋಜಿಸಿಕೊಳ್ಳುವ ನಮ್ಯತೆಯನ್ನು ಹೊಂದಿದೆ. ವರ್ತಮಾನದಲ್ಲಿ ಎದುರುಗೊಳ್ಳುವ ಅನೇಕ ಸವಾಲುಗಳಿಗೆ ತನ್ನ ಪಾರಂಪರಿಕವಾದ ಸಾಂಪ್ರದಾಯಿಕ ಗುಣದ ಮೂಲಕ ಪ್ರತಿಸ್ಪಂದಿಸುವ ದಿಟ್ಟ ನಿರ್ಧಾರಗಳನ್ನು ಸಮುದಾಯವು ತೆಗೆದುಕೊಂಡಿದೆ. ಪ್ರಸ್ತುತ ಅಧ್ಯಯನವು ಹಸಲರ ಸಮುದಾಯ ಎದುರುಗೊಳ್ಳುವ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಬದಲಾವಣೆ ಕುರಿತು ವಿವರಿಸುವ ನಿಟ್ಟಿನಲ್ಲಿ ಕಿರು ಪ್ರಯತ್ನವಾಗಿದೆ.

ಈ ದೇಶದಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಸಾಂಸ್ಕೃತಿಕ ರಕ್ಷಣೆಯ ನೆಪದಲ್ಲಿ ಹಸಲರಂತ ಅನೇಕ ಸಮುದಾಯಗಳನ್ನು ಒಕ್ಕಲೆಬ್ಬಿಸುವಂತ ಕಾರ್ಯಗಳು ಕಾಲದಿಂದ ಕಾಲಕ್ಕೆ ಸಂಭವಿಸುತ್ತಲೆ ಬಂದಿವೆ. ಯಾವುದೇ ದೇಶವು ಬುಡಕಟ್ಟುಗಳಿಗೆ ಧರ್ಮವನ್ನು, ರಾಜಕೀಯವನ್ನು ಒತ್ತಾಯ ಪೂರ್ವಕವಾಗಿ ಹೇರುತ್ತವೆ. ಅವರಿಗೆ ಅಗತ್ಯವಾದ ಮಾನವ ಹಕ್ಕುಗಳು, ಸಾಮಾಜಿಕ, ಆರ್ಥಿಕ ಸ್ವಾತಂತ್ರವನ್ನು ಕಿತ್ತುಕೊಂಡು ಜೀವನ ಪರ್ಯಂತ ಸಂಘರ್ಷಗಳನ್ನು ಎದುರಿಸುಂತ ವಾತಾವರಣವನ್ನು ಸೃಷ್ಟಿಸುತ್ತವೆ. ಆಳುವ ವರ್ಗಗಳ ನೂತನ ಪಿತೂರಿಗಳ ಜೊತೆಯಲ್ಲಿ ಆಂತರಿಕ ಬಿಕಟ್ಟುಗಳಿಗೆ ಮುಖಾ-ಮುಖಿಯಾಗಬೇಕಾಗುತ್ತದೆ. ಈ ಬಗೆಯ ಪಿತೂರಿಗಳು ಬಿಕ್ಕಟ್ಟುಗಳು ಚಾರಿತ್ರಿಕವಾಗಿ ಎಲ್ಲಾ ಸಮುದಾಯಗಳನ್ನು

[illegible]

ಬೆನ್ನಟ್ಟಿ ಬಂದಿವೆ. ಸುಮಾರು ಶತ ಶತಮಾನಗಳ ಶೋಷಣೆ-ಅಂಧಕಾರ ಬದುಕಿನಲ್ಲಿ ಜೀವನ ಸವೆಸಿರುವ ಇತಿಹಾಸವೊಂದಿರುವ ಅನೇಕ ಬುಡಕಟ್ಟುಗಳು ಈ ದೇಶದಲ್ಲಿವೆ. ಹೀಗೆ ಶೋಷಣೆಗೆ ಒಳಗಾದ ಸಮುದಾಯಗಳಲ್ಲಿ ಹಸಲರ ಸಮುದಾಯವು ಒಂದು ಆ ನಿಟ್ಟಿನಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳುವಳಿಕೆದಾರರು ಬಿಡಿಸಿಟ್ಟ ಒಂದೊಂದು ಸಮಸ್ಯೆಯ ಹಿಂದೆ ಅವರ ಬದುಕಿನ ಕರಾಳ ರೂಪವಿದೆ. ನೋವಿನ ವ್ಯಥೆ ಇದೆ. ಸಮಸ್ಯೆಗಳು ಅವರನ್ನು ಶೋಷಣೆಗೆ ಗುರಿಪಡಿಸಿವೆ. ಅಲ್ಲಿ ಅವರ ಸಾಂಸ್ಕೃತಿಕ, ಸಾಮಾಜಿಕ ಜೀವನದ ಮೇಲೆ ಘಾಸಿಗಳಾಗಿವೆ. ಆಧುನಿಕ ಸಂದರ್ಭದಲ್ಲಿ ಎದುರುಗೊಂಡ ಅನೇಕ ಸಮಸ್ಯೆಗಳ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿವೆ. ಆದರೂ ಬದಲಾಗುವ ವರ್ತಮಾನದ ಬದುಕು ನೂತನ ಚಲನಶೀಲತೆಯತ್ತ ವಿಸ್ತರಿಸಿಕೊಳ್ಳುವದು ಅನಿವಾರ್ಯತೆಯನ್ನು ಸೃಷ್ಟಿಸಿದೆ. ಪ್ರತಿ ಪ್ರಯತ್ನದ ಹಿಂದೆ ಸಮುದಾಯದ ಬಾಹ್ಯ ಒತ್ತಡಗಳು ಮತ್ತು ಆಂತರಿಕ ಒತ್ತಡಗಳು ಕಾರಣವಾಗಿರುತ್ತವೆ. ಈ ನಿಟ್ಟಿನಲ್ಲಿ ಹಸಲರು ಕಾಲದಿಂದ ಕಾಲಕ್ಕೆ ಸ್ಥಿತ್ಯಂತರಕ್ಕೆ ಒಳಗಾಗಿದ್ದಾರೆ. ಅಲ್ಲಿ ಸ್ಥಿತ್ಯಂತರ ಸಂಪೂರ್ಣವಾಗಿ ತೀವ್ರಗತಿಯಲ್ಲಿ ಬದಲಾಗದೆ ನಿಧಾನಗತಿಯಲ್ಲಿ ಬದಲಾಗುತ್ತದೆ. ಅದು ತನ್ನ ಪೂರ್ವದ ಸಾಂಸ್ಕೃತಿಕ ಚಹರೆಗಳನ್ನುಳಿಸಿಕೊಂಡು ಬದಲಾಗುತ್ತದೆ. ಇದು ನೈಜ ಸಮುದಾಯ ಬಯಸುವ ರೂಪಾಂತರಗಳ ತವಕವಾಗಿರುತ್ತದೆ. ಇಂತಹ ಅನೇಕ ರೂಪಾಂತರಗಳನ್ನು ಸ್ಥಿತ್ಯಂತರಗಳನ್ನು ಆಹ್ವಾನಿಸುವ ಪರಿತಪಿಸುವ ಮನೋಭಿಲಾಷೆಯನ್ನು ಸಮುದಾಯಗಳು ಹೊಂದಿರುತ್ತವೆ.

ಕರ್ನಾಟಕದಲ್ಲಿ ಸುಮಾರು ೫೦ ಬುಡಕಟ್ಟುಗಳು, ೨೧ಕ್ಕಿಂತ ಹೆಚ್ಚು ಅಲೆಮಾರಿ ಬುಡಕಟ್ಟುಗಳಿವೆ ಅವುಗಳಲ್ಲಿ ಹಸಲರ ಬುಡಕಟ್ಟು ಒಂದಾಗಿದೆ. ಹಸಲರ ಬುಡಕಟ್ಟು ಜಾಗತೀಕರಣದ ಈ ಸಂದರ್ಭದಲ್ಲಿ ಚಲನಶೀಲತೆಯ ಗುಣವನ್ನು ಹೊಂದಿರುವುದರಿಂದ ಇವರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಧಾರ್ಮಿಕ ರಾಜಕೀಯ ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಬದಲಾವಣೆಗಳನ್ನ ಇಂದಿನ ಆಧುನೀಕರಣ ಜಾಗತೀಕರಣ, ಕೈಗಾರೀಕರಣ, ವಿಜ್ಞಾನ ತಂತ್ರಜ್ಞಾನಗಳ ಪ್ರಭಾವದಿಂದ ಆಗಿರುವುದು ಈ ಅಧ್ಯಯನದಿಂದ ಸ್ಪಷ್ಟವಾಗುವದು. ಅಲ್ಲದೆ ಆ ಪರಿಸರದಲ್ಲಿನ ಇತರ ಸಮುದಾಯಗಳಾದ ದೀವರು, ಉಪ್ಪಾರರು, ಮೇದರ ಮತ್ತು ಮೇಲ್ಜಾತಿಗಳಾದ ಹವ್ಯಕ ಬ್ರಾಹ್ಮಣರ ಪ್ರಭಾವ ಇತರ ಧರ್ಮದ ಪ್ರಭಾವವನ್ನು ಕೂಡ ಕಡೆಗಣಿಸುವಂತಿಲ್ಲ. ಈ ಎಲ್ಲ ಬದಲಾವಣೆಯ ಅಂಶಗಳನ್ನು ಸಮುದಾಯದ ಅಧ್ಯಯನ ವಿಧಾನಗಳಾದ ಅವಲೋಕನ ವಿಧಾನ, ಪ್ರಶ್ನಾವಳಿ, ಸಂದರ್ಶನ, ಕ್ಷೇತ್ರಕಾರ್ಯ ಮಾಹಿತಿ ಸಮೀಕ್ಷೆಯ ವಿಧಾನಗಳನ್ನು ಬಳಸಿ ಅಧ್ಯಯನ ಕೈಗೊಳ್ಳಲಾಗಿದೆ.

ಪ್ರಸ್ತುತ ಈ ನಿಬಂಧವು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಮೂರು ಕೇರಿಗಳನ್ನು ಮತ್ತು ಕಾಲೋನಿಗಳನ್ನು ಆಯ್ದುಕೊಳ್ಳಲಾಗಿದೆ. ಅಲ್ಲಿ ನೆಲೆಗೊಂಡಿರುವ ಹಸಲರ ಬದುಕಿನ ಬವಣೆಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಸಾಮಾಜಿಕ ಸ್ವಾವಲಂಬನೆ. ಆರ್ಥಿಕ ಸುಭದ್ರತೆ ರಾಜಕೀಯ ಸ್ಥಾನಮಾನಗಳನ್ನು ಪಡೆಯುವ ನಿಟ್ಟಿನಲ್ಲಿ ಹಸಲರ ಹಲವು ಪ್ರಯತ್ನಗಳನ್ನು ಮಾಡಿದ್ದಾರೆ. ಕೆಲವು

[illegible]

ಪ್ರಯತ್ನಗಳಲ್ಲಿ ಯಶ ಕಂಡಿದ್ದಾರೆ. ಹಲವು ಕಡೆ ಪ್ರಯತ್ನಕ್ಕೆ ಸೋಲಾಗಿದೆ. ಸೋಲಿಗೆ ನಿರ್ದಿಷ್ಟವಾದ ಕಾರಣಗಳಿರಬಹುದು. ಹೀಗೆ ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ ಹಸಲರು ಕೈಗೊಂಡ ಪ್ರಯತ್ನಗಳು ಸಂಪೂರ್ಣ ಸೋತುಹೋಗಿಲ್ಲ ಅಲ್ಲಿ ಸಮುದಾಯವೊಂದು ನೂತನ ಮನ್ವಂತರಕ್ಕೆ ಕಡೆ ಸಾಗುವ ನಿಟ್ಟಿನಲ್ಲಿ ಇಟ್ಟ ಎಚ್ಚರಿಕೆಯ ಹೆಜ್ಜೆಗಳೇ ಆಗಿರುತ್ತವೆ ಎಂದೇಳಬೇಕಾಗುತ್ತದೆ.

ಹಸಲರ ಸಮುದಾಯವು ಪುರಾತನತೆ ಆಧುನಿಕ ಮೌಲ್ಯಗಳೊಂದಿಗೆ ಸಮ್ಮಿಲನಗೊಂಡಿವೆ. ಸಮುದಾಯದ ಜನ ಜೀವನದಲ್ಲಿಕಂಡುಬರುವ ವೈವಿಧ್ಯತೆ ಹಾಗೂ ಭಿನ್ನತೆ ಅವರಲ್ಲಿನ ವೈಶಿಷ್ಯವನ್ನು ಗುರುತಿಸುತ್ತದೆ. ಹಸಲರು ಪಾರಂಪರಿಕವಾಗಿ ಅನುಭವಿಸುತ್ತ ಬಂದು ಶೋಷಣೆಯ ರೂಪ ಬದಲಾಗಿದೆ. ಆದರೆ ಸಮಾಜದಲ್ಲಿ ಅಸಮಾನತೆ ಎನ್ನುವುದು ಒಂದು ಜಾತಿ ಸೂಚಕವಾಗಿದೆ. ಅಸ್ತಿತ್ವದಲ್ಲಿರುವ ಕಾಯ್ದೆ, ಕಾನೂನುಗಳು ಅದರ ನಿರ್ಮೂಲನೆ ಮಾಡುವಲ್ಲಿ ವಿಫಲವಾಗಿವೆ. ಏಣಿ, ಶ್ರೇಣಿ ವ್ಯವಸ್ಥೆಯ ಆಧಾರದ ಮೇಲೆ ಸಾಮಾಜಿಕ ಸ್ಥಾನ ಮಾನವನ್ನು ನಿರ್ಧರಿಸುವ ಹಳೆಯ ಚಾಳಿ ಮುಂದುವರಿದಿದೆ. ನಂತರ ಜಾತಿ ಎಂಬುವದು ಹುಟ್ಟಿನಿಂದಲೇ ಅಂಟಿಕೊಂಡ ಶಾಪವಾಗಿ ಮುಂದುವರಿದಿದೆ. ಆಧುನಿಕತೆ ಎನ್ನುವುದು ಅವರ ಉಡುಪುಗಳನ್ನು ಒಡವೆಗಳನ್ನು ಬದಲಾಯಿಸಿದೆ. ಹೊರತು ಸಾಮಾಜಿಕ ಸ್ಥಾನಮಾನವನ್ನು ಬದಲಾಯಿಸುವಲ್ಲಿ ವಿಫಲವಾಗಿದೆ. ಈ ದಿಸೆಯಲ್ಲಿ ಆಧುನಿಕ ಪ್ರಕ್ರಿಯೆ ಎನ್ನುವುದು ಅಣುಕು ಚಿತ್ರವಾಗಿದೆ.

ಇಂದು ಆರ್ಥಿಕ ಭದ್ರತೆ ಎನ್ನುವುದು ಸಮುದಾಯವೊಂದರ ಸಾಮಾಜಿಕ ಸ್ಥಾನ ಮಾನವನ್ನು ನಿರ್ಧರಿಸುತ್ತದೆ. ಆರ್ಥಿಕತೆ ಪ್ರಸ್ತುತ ಮುಂದುವರಿಕೆ ಹಾಗೂ ಹಿಂದುಳಿದಿರುವಿಕೆಯ ಮೇಲೆ ಪ್ರಭಾವ ಬೀರುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಂಡಂತೆ ಹಸಲರು ಆರ್ಥಿಕ ಅಧಿಕಾರ ನಿರ್ಧರಿಸುವ ಫಲವತ್ತಾದ ಭೂಮಿ ಸಿಗದೇ ಇರುವ ಕಾರಣಕ್ಕೆ ಆ ರೀತಿಯಾದ ಅಧಿಕಾರಗಳಿಂದ ದೂರ ಉಳಿದಿವೆ. ಭೂಮಿ ಇದ್ದರು ನೀರಾವರಿ ಸೌಲಭ್ಯಗಳು ಸಿಗದ ಅಸಹಾಯಕ ಪರಿಸ್ಥಿತಿ ಅವರಾದಾಗಿದೆ. ಸುತ್ತ ಮುತ್ತಲಿನ ಪ್ರಭಾವಿ ವ್ಯಕ್ತಿಗಳ ಅಥವಾ ಮೇಲ್ವರ್ಗ ಜನರು ಬಲಿಷ್ಠರ ಇಂತಹ ಅನೇಕ ಸೌಲಭ್ಯಗಳ ಕಬಳಿಕೆ ದಶಕಗಳಿಂದಲೂ ಮುಂದುವರಿಯುತ್ತಲೇ ಇದೆ. ನಿತ್ಯವೂ ದುಡಿದೇ ತಿನ್ನಬೇಕಾದ ಪರಿಸ್ಥಿತಿ ಹಸಲರದ್ದು, ಇಲ್ಲಿ ಬದಲಾವಣೆ ಕೇವಲ ಒಂದು ಒಪ್ಪತ್ತಿನ ಊಟದ ಪ್ರಶ್ನೆಯೆ ಆಗಿದೆ. ಸಾಂಪ್ರದಾಯಿಕ ಕೂಲಿ, ಆಧುನಿಕ ಕೃಷಿ ವ್ಯವಸ್ಥೆ ಅವರ ಜೀವನ ವಿಧಾನವನ್ನು ಮತ್ತು ಆರ್ಥಿಕ ಬದುಕನ್ನು ಸಾಮಾಜಿಕ ಸ್ಥಾನ ಮಾನವನ್ನು ನಿರ್ಧರಿಸುವಲ್ಲಿ ವಿಫಲವಾಗಿದೆ.

ಹಸಲರು ಜೀವನಕ್ಕಾಗಿ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆ ವ್ಯಕ್ತಿ ಬಹುಪಾಲು ಜನರ ಆರ್ಥಿಕತೆಯನ್ನು ಅಲ್ಪಸಂಖ್ಯಾತ ಬಂಡವಾಳ ಶಾಹಿಗಳ ಮೇಲೆ ನಿರ್ಧಾರಿತವಾಗುತ್ತವೆ. ದುಡಿದರೆ ಕೂಲಿ ಇಲ್ಲದೆ ಹೋದರೆ ಉಪವಾಸ. ಇಂದಿಗೂ ಮುಂದುವರಿದಿದೆ. ದುಡಿತ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವ ಬಹುಮುಖ್ಯ ಅಂಶವಾಗಿದೆ. ಹಸಲರ ಸಾಕ್ಷರತೆ ಪ್ರಮಾಣ ಪ್ರಾರಂಭದಲ್ಲಿ ತುಂಬ ಕಡಿಮೆಯಾಗಿತ್ತು. ಪ್ರಸ್ತುತ ಸಾಕ್ಷರತೆ ಪ್ರಮಾಣ ಗಣನೀಯ ಸುಧಾರಣೆಯಾಗಿದೆ. ಆದರೂ ಮುಂದಿನ

[illegible]

[illegible]

[illegible]

ಹಂತದ ಉನ್ನತ ಶಿಕ್ಷಣ ಪಡೆಯುವಲ್ಲಿ ಯಶಸ್ವಿಯಾಗುತ್ತಿಲ್ಲ. ಇದಕ್ಕೆ ಬಡತನವು ಪ್ರಮುಖ ಕಾರಣವಾಗಿದೆ. ಅದರ ಜೊತೆಗೆ ಗಿರಿಜನ ಆಶ್ರಮಶಾಲೆಗಳ, ಶಿಕ್ಷಕರ ಕೊರತೆಯಿಂದ ಕುಂಟುತ್ತ ಸಾಗಿವೆ. ಪ್ರಾಥಮಿಕ ಹಂತದ ಶಿಕ್ಷಣ ಹಸಲರ ಕೇರಿಗಳಲ್ಲಿ ಸಿಗುವ ವ್ಯವಸ್ಥೆ ಇದೇ ಆದರೂ ಮುಂದಿನ ಹಂತದ ಶಿಕ್ಷಣಕ್ಕೆ ಸಾರಿಗೆ ಸಂಪರ್ಕ ಬಸ್ ಸೌಕರ್ಯ ಸುತ್ತ-ಮುತ್ತಲಿನ ಹತ್ತಿರದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಇಲ್ಲದೇ ಇರುವುದು ಕಾರಣವಾಗಿದೆ. ವಸತಿ ನಿಲಯಗಳು ಪ್ರೌಢ ಮತ್ತು ಉನ್ನತ ಶೈಕ್ಷಣಿಕ ಸಂಸ್ಥೆಗಳ ಸರ್ಕಾರಗಳು ಧನ ಸಹಾಯ ವಿದ್ಯಾರ್ಥಿ ವೇತನದಂತ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಅವರಿಗೆ ಮುಂದಿನ ಹಂತದ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಅವಶ್ಯಕತೆ ಇದೆ.

ಕಾಲ ಬದಲಾದಂತೆ ಶಿಕ್ಷಣದ ಕೈಗಾರಿಕೀಕರಣದ ಪ್ರಭಾವದಿಂದಾಗಿ ಹಸಲರ ಆಚರಣೆಗಳು ರೂಢಿ ಸಂಪ್ರದಾಯಗಳು ಬದಲಾಗುತ್ತಾ ಹೊಸ ರೂಪವನ್ನು ಪಡೆದಿವೆ. ಕೆಲವು ಸಂಪ್ರದಾಯಗಳು ಆಚರಣೆಗಳು ಮಾಯವಾಗಿವೆ. ಆಧುನಿಕ ಶಿಕ್ಷಣ ವ್ಯವಸ್ಥೆ ಉದ್ಯೋಗ ಆಸ್ತಿ ಅಂತಸ್ತು ಪಡೆಯಬೇಕೆಂಬ ಮನೋಭಾವನೆ ಬೆಳೆದಿದೆ. ಆದರೂ ಸಾಮಾಜಿಕ ಸ್ಥಾನ ಮಾನವನ್ನು ನಿರ್ಧರಿಸುವ ಆಸ್ತಿ-ಜಮೀನು ಇದುವರಿಗೆ ಎಲ್ಲರಿಗೂ ದೊರೆಯದೇ ಇರುವುದು ಕಂಡುಬರುತ್ತದೆ. ಸರ್ಕಾರದ ಯೋಜನೆಗಳ ಅನ್ವಯ ಹಸಲರಿಗೆ ಸಿಗಬೇಕಾದ ಭೂಮಿ ನೀರಾವರಿ ಸೌಲಭ್ಯ ಪಂಪ್‌ಹೌಸ್, ಪುನರ್‌ವಸತಿಯೋಜನೆ ಆಶ್ರಯಯೋಜನೆ, ಜನತಾ ಯೋಜನೆಗಳು ಯೋಜನೆಗಳಾಗಿ ಉಳಿದಿವೆ. ವಿನಃಹ ಕಾರ್ಯರೂಪಕ್ಕೆ ಬರದೆ ಇರುವುದು ಕಂಡುಬರುತ್ತದೆ.

ಕೆಳ ಸಮುದಾಯಗಳಿಗೆ ಶತಮಾನಗಳಿಂದ ಇಂಡಿಯಾದ ಸಾಮಾಜಿಕ ವ್ಯವಸ್ಥೆಯು ಜೀವನದ ವಿವಿಧ ರಂಗಗಳಲ್ಲಿ ಸಮಾನ ಅವಕಾಶಗಳನ್ನು ನಿರಾಕರಿಸುತ್ತಲೇ ಬಂದಿದೆ. ಸಂವಿಧಾನಾತ್ಮಕವಾಗಿರುವ ಹಕ್ಕುಗಳು ಬಹುತೇಕ ಹಸಲರ ಸಾಮಾಜಿಕ ಸ್ಥಾನಮಾನದಲ್ಲಿ ಗಮನಾರ್ಹವಾದ ಬದಲಾವಣೆಗೆ ತಂದಿಲ್ಲ. ವೇದಗಳ ಕಾಲದಿಂದಲೂ ಅಸ್ಪೃಶ್ಯತೆ, ಅಸಮಾನತೆಯನ್ನು ನಿರ್ಮೂಲನೆ ಮಾಡಲು ಸಾಧ್ಯವಾಗಿಲ್ಲ. ಅನೇಕ ದಶಕಗಳಿಂದಲೂ ತುಳಿತಕ್ಕೆ ಒಳಗಾದ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯನ್ನು ನೀಡಬೇಕು. ಶೈಕ್ಷಣಿಕ ಮತ್ತು ಆರ್ಥಿಕ ಸ್ವಾಲಂಬನೆ ರೂಪಿಸುವಲ್ಲಿ ಸರ್ಕಾರಿ ಯೋಜನೆಗಳು ಸೂಕ್ತವಾಗಿ ಸ್ಪಂಧಿಸಬೇಕು. ಶೈಕ್ಷಣಿಕ ಕ್ಷೇತ್ರದಲ್ಲಿ ಹಸಲರ ಸ್ತ್ರೀ-ಪುರುಷರಿಗೆ ಮೀಸಲಾತಿಯನ್ವಯ ಮುಂದಿನ ಶಿಕ್ಷಣಕ್ಕೆ ಅಗತ್ಯವಾಗಿ ಸಹಕಾರ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಸರ್ಕಾರಿ ಯೋಜನೆಗಳು ಪುನರ್ ವಸತಿ ಯೋಜನೆಗಳು ಅಭಿವೃದ್ಧಿ ಹೆಸರಿನಲ್ಲಿ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸುವ ಕಾರ್ಯನಿಲ್ಲಿಸುವಂತಾಗಬೇಕು. ಯೋಜನೆಗಳು ಅವರಿಗೆ ಪೂರಕವಾದ ರೀತಿಯಲ್ಲಿ ಜಾರಿಗೊಳಿಸಬೇಕು. ಇಷ್ಟೆ ಅಲ್ಲದೇ ಹಸಲರು ತಮ್ಮ ಸ್ವ ಪ್ರಯತ್ನದಿಂದ ತಮ್ಮ ಹಕ್ಕು-ಭಾದ್ಯತೆಗಳನ್ನು ಪಡೆಯುವ ದಿಸೆಯಲ್ಲಿ ಹೋರಾಟಮಾಡಬೇಕು. ಹೋರಾಟಕ್ಕೆ ಕೊರತೆಯನ್ನು ನೀಗಿಸಲು ಸಂಘ-ಸಂಸ್ಥೆಗಳ ಸ್ಥಾಪನೆ ಮಾಡಿಕೊಳ್ಳಬೇಕು. ಎಲ್ಲ ಪರಿವರ್ತನೆಗೆ ಕಾರಣವಾಗಿರುವ ಸಾಧನವಾಗಿ ಶಿಕ್ಷಣವನ್ನು ಪಡೆಯುವಂತ ಪ್ರಯತ್ನ ಮಾಡಿದಾಗ ಮಾತ್ರ ಸಮುದಾಯವು ಬದಲಾಗುತ್ತವೆ ಎನ್ನುವ ಆಶಯ ಈ ನಿಬಂಧದಾಗಿದೆ.

ಅಧ್ಯಯನದ ಫಲಿತಗಳು

ಹಸಲರ ಸಮುದಾಯವು ಪ್ರಸ್ತುತ ಸಾಮಾಜಿಕ ಆರ್ಥಿಕ, ಶೈಕ್ಷಣಿಕವಾಗಿ ಸುಧಾರಣೆಯತ್ತ ಮುನ್ನುಗ್ಗುತ್ತಿರುವ ಸಂದರ್ಭದಲ್ಲಿ ಸಾಮಾಜಿಕ ರಚನೆಯಲ್ಲಿ ಉನ್ನತಿಗೊಂಡಿದೆ. ಈ ಅಧ್ಯಯನವು ವ್ಯಕ್ತಿ ಅಧ್ಯಯನ ಮಾಡುವ ಸಂಧರ್ಭದಲ್ಲಿ ಸ್ತ್ರೀ-ಪುರುಷ, ಹಿರಿಯ ಕಿರಿಯ ಸಂದರ್ಶಿಸುವ ಮೂಲಕ ಅವರು ಒಟ್ಟಾರೆ ವ್ಯಕ್ತಪಡಿಸಿದ ಒಮ್ಮತದ ಅಭಿಪ್ರಾಯಗಳು ಆಧಾನದ ಮೇಲೆ ಕೆಲವು ಫಲಿತತೆಗಳನ್ನು ಈ ಕೆಳಗಿನಂತೆ ಸಂಗ್ರಹಿಸಿ ನೀಡಲಾಗಿದೆ.

೧. ಹಸಲರು ಬುಡಕಟ್ಟು ಪ್ರಸ್ತುತ ಬುಡಕಟ್ಟು ಲಕ್ಷಣಗಳನ್ನು ಕೊಂಚ ಮಟ್ಟಿಗೆ ಕಳೆದುಕೊಂಡಿದೆ. ಆದರೇ ತನ್ನ ಪಾರಂಪರಿಕವಾದ ಚಹರೆಗಳನ್ನು, ಸಾಂಸ್ಕೃತಿಕ ಅನ್ಯನತೆಗಳನ್ನು ಸಂಪ್ರದಾಯ, ಸಂಸ್ಕಾರ, ಆಚರಣೆ, ಪದ್ಧತಿಗಳಲ್ಲಿ ಉಳಿಸಿಕೊಂಡಿದೆ.

೨. ಹಿಂದಿನಿಂದಲೂ ಮಾಡುತ್ತ ಬಂದ ಕೂಲಿ ಅವರ ಆರ್ಥಿಕತೆಯನ್ನು ನಿರ್ಧರಿಸುತ್ತದೆ. ಆದರೆ ಇತ್ತೀಚಿಗೆ ಸರ್ಕಾರ ನೀಡಿದ ತುಂಡು ಭೂಮಿಗಳು ಅವರ ಆರ್ಥಿಕತೆಯನ್ನು ನಿರ್ಧರಿಸುವಲ್ಲಿ ವಿಫಲವಾಗಿದೆ. ಈಗಲೂ ಕೂಲಿಯನ್ನು ನಂಬಿ ಬದುಕುವಂತ ಅನಿವಾರ್ಯತೆ ಇದೆ.

೩. ಕೃಷಿಯನ್ನು ನಂಬಿ ಬದುಕುವದು ಈ ಸಂದರ್ಭದಲ್ಲಿ ಅಪ್ರಸ್ತುತವೆನಿಸುತ್ತದೆ. ಕೃಷಿಭೂಮಿ ಮೇಲ್ವರ್ಗದ ಜನರ ಪಾಲಾಗಿದೆ. ಬೆಳೆ ಬಳೆಯಲು ಪೋಷಕವಾದ ನೀರಾವರಿ ವ್ಯವಸ್ಥೆ, ಪಂಪ್‌ಹೌಸ್, ಬೆಳೆರಕ್ಷಣೆಗಾಗಿ ಸಿಗುವ ತಂತಿ ಬೇಲಿ ಆಧುನಿಕವಾಗಿ ಸಿಗುವ ಔಷದ, ರಸಾಯನ ಗೊಬ್ಬರಗಳು ಇವರಿಗೆ ಸಿಗುವಲ್ಲಿ ವಿಳಂಬವಾಗುತ್ತದೆ.

೪. ಸೇವಾವಲಯ, ರಾಜಕೀಯ, ಶೈಕ್ಷಣಿಕ ಕ್ಷೇತ್ರದಲ್ಲಿ ಮೀಸಲಾತಿ ಇಲ್ಲದೇ ಇರುವದು ಅವರ ಹಿಂದುಳಿದಿರುವಿಕೆಗೆ ಕಾರಣ ಎಂದು ಬಹುತೇಕ ಹಸಲರು ಅಭಿಪ್ರಾಯ ಪಡುತ್ತಾರೆ.

೫. ರಾಜಕೀಯ ಮಹಿಳೆಯ ಮೀಸಲಾತಿ ಹಸಲರಿಗೆ ಸಿಗುವ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಮಹಿಳೆಯರು ದುರ್ಬಲರು ಎನ್ನುವ ಕಾರಣಕ್ಕೆ ಮೇಲ್ವರ್ಗದ ಪುರುಷ ಪ್ರಧಾನ ಸಮಾಜ ಮಹಿಳೆ ಮೀಸಲಾತಿಯನ್ನು ಸೃಷ್ಟಿಸುತ್ತಿದೆ. ಇದರಿಂದ ಸಮುದಾಯ ಕೆಲವು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂದು ಬಹುಜನರು ಭಾವಿಸುತ್ತಾರೆ.

೬. ಶೇ.೮೦ರಷ್ಟು ಜನರು ಇಂದಿಗೂ ದುಡಿಮೆಯಲ್ಲಿಯೆ ತಮ್ಮ ಜೀವನ ಕಂಡುಕೊಂಡಿದ್ದಾರೆ. ಆದರೆ ಕೆಲಸಕ್ಕೆ ಸರಿಯಾದ ಸಂಬಳ ಅಥವಾ ಕೂಲಿ ಸಿಗದ ಕಾರಣಕ್ಕೆ ಆರ್ಥಿಕ ಅಭದ್ರತೆಯನ್ನು ಎದುರಿಸುತ್ತಾರೆ.

೭. ಪಾರಂಪರಿಕ ವೃತ್ತಿಯಿಂದ ಆಧುನಿಕವಾಗಿ ಸೃಷ್ಟಿಯಾದ ನೂತನ ವೃತ್ತಿಗಳ ಕಡೆ ಸಮುದಾಯ ಮುಖಮಾಡಿ ನಿಂತಿದೆ.

೮. ಶೈಕ್ಷಣಿಕವಾಗಿ ಪುರುಷರಿಗಿಂತ ಸ್ತ್ರೀಯರ ಶೈಕ್ಷಣಿಕ ಪ್ರಮಾಣ ಶೇ.೧೦ರಷ್ಟು ಹೆಚ್ಚಿದೆ. ಆದರೆ ಶಿಕ್ಷಣ ಮುಂದುವರಿಕೆಗೆ ತೊಡಕಾಗಿ ಬಡತನ ಕಾಡುತ್ತಿದೆ. ಶಿಕ್ಷಣದ ಅರ್ಹತೆಗೆ ತಕ್ಕಂತೆ ಖಾಸಗಿ ಅಥವಾ ಸರ್ಕಾರಿ ವಲಯಗಳಲ್ಲಿ ನೌಕರಿಯಿಂದ ವಂಚಿತರಾಗುತ್ತಿದ್ದಾರೆ.

ಅಧ್ಯಯನದ ಆಶಯಗಳು

ಹಸಲರ ಸಮುದಾಯವು ಪ್ರಸ್ತುತ ಸಾಮಾಜಿಕ ಬದಲಾವಣೆಯ ಅಂಶಗಳನ್ನು ಅಧ್ಯಯನದ ಮೂಲಕ ಕಂಡುಕೊಂಡಿದ್ದು, ಒಟ್ಟಾರೆ ಅಧ್ಯಯನದ ಭಾಗವಾಗಿ ಹೊರ ಹೊಮ್ಮಿದ ಆಶಯಗಳಾಗಿವೆ.

೧. ಹಸಲರ ಸಮುದಾಯದ ಸಾಮಾಜಿಕ ಸ್ಥಾನ-ಮಾನದಲ್ಲಿ ಸುಧಾರಣೆ ಆಗಬೇಕು.

೨. ಆರ್ಥಿಕತೆಯ ನಿರ್ಧರಿಸುವ ಅಂಶಗಳಾದ ಕೂಲಿಗೆ ಉತ್ತಮ ಸಂಬಳ ಸಿಗುವಂತಾಗಬೇಕು ಜೀತ ಪದ್ಧತಿಯಂತ ಅನಿಷ್ಟತೆಯಿಂದ ಮುಕ್ತಿ ಸಿಗಬೇಕು.

೩. ಕೃಷಿಗೆ ತಕ್ಕುದಾದ ಫಲವತ್ತಾದ ಭೂಮಿ, ಸರ್ಕಾರಿ ಸಹಾಯ ಹಸ್ತ ಕೃಷಿ ಇಲಾಖೆಗಳು, ಕೈಗಾರಿಕೆಗಳು ಅವರಿಗೆ ನೆರವಾಗಿಬೇಕು.

೪. ಸರ್ಕಾರ ಘೋಷಿಸುವ ಯೋಜನೆಗಳು ನೇರವಾಗಿ ಹಸಲರಿಗೆ ತಲುಪಿಸುವಂತಾಗಬೇಕು. ಮಧ್ಯ ವರ್ತಿಗಳಿಂದ ಮುಕ್ತಿ ಸಿಗಬೇಕಾಗಿದೆ.

೫. ಬದಲಾವಣೆಗೆ ಪುರಕವಾದ ಶಿಕ್ಷಣ ಪ್ರತಿಯೊಬ್ಬರು ಪಡೆಯಬೇಕು. ಶಿಕ್ಷಣ ಅವರ ಅಭಿವೃದ್ಧಿಗೆ ಪೂರಕವಾಗುವಂತಿರಬೇಕು. ಗಿರಿಜನ ಆಶ್ರಮಶಾಲೆ, ಸರ್ಕಾರಿಶಾಲೆಗಳು ಹಲವು ಸೌಲಭ್ಯಗಳನ್ನು ಒದಗಿಸುವ ಮೂಲಕ ಎಲ್ಲರಿಗೂ ಸಮೂನ ಶಿಕ್ಷಣ ಸಿಗುವಂತಾಗಬೇಕು.

೬. ಸ್ವಂತ ಹಸಲರೇ ಜಾಗೃತರಾಗಬೇಕು. ಸಮುದಾಯಕ್ಕೆ ಅನ್ಯ ವರ್ಗಗಳಿಂದಾಗು ಮೋಸ, ವಂಚನೆ, ಅಸ್ಪೃಶ್ಯತೆ, ಜಾತಿ ನಿಂದನೆ, ಶಿಕ್ಷಣ, ರಾಜಕೀಯಗಳ ವಿರುದ್ದ ಹೋರಾಟ ಮಾಡಬೇಕು. ಹೋರಾಟಕ್ಕೆ ಅಗತ್ಯವಾದ ನಾಯಕತ್ವ, ಸಂಘ-ಸಂಸ್ಥೆಗಳು ಸ್ಥಾಪಿಸಿಕೊಳ್ಳವ ಮೂಲಕ ಅವರ ಉದ್ದಾರಕ್ಕೆ ತಾವೇ ಕಾರಣರಾಗಬೇಕಾಗಿದೆ.

೭. ಹಸಲರು ಪಾರಂಪರಿಕವಾಗಿ ಆಚರಿಸುತ್ತ ಬರುವ ಕೆಲವು ಮೌಢ್ಯವಾದ ನಂಬಿಕೆಗಳನ್ನು ತ್ಯಜಿಸಬೇಕು.

೮. ಹಸಲರಿಗೆ ಅಗತ್ಯವಾದ ಮೀಸಲಾತಿಗಳನ್ನು ಸರಕಾರಗಳು ಕಾಲದಿಂದ ಕಾಲಕ್ಕೆ ಘೋಷಿಸುತ್ತ ಬರಬೇಕಾಗಿದೆ. ಯೋಜನೆಗಳ ಹೆಸರಿನಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಅವರ ಒಕ್ಕಲೆಬ್ಬಿಸುವದನ್ನು ನಿಲ್ಲಿಸಬೇಕು, ಒಟ್ಟಾರೆ ಅವರ ಸಾಮಾಜಿಕ ಬದಲಾವಣೆಗೆ ಅಗತ್ಯವಾದ ಯೋಜನೆಗಳನ್ನು ಸೇರಿಸುವುದು ಈ ನಿಬಂಧದ ಉದ್ದೇಶವಾಗಿದೆ ಮತ್ತು ಸಮುದಾಯವು ಕೂಡ ಅದನ್ನೇ ಬಯಸುತ್ತದೆ.

* * *

ಅನುಬಂಧ

೧. ಕೋಷ್ಟಕಗಳು

೨. ನಕ್ಷೆಗಳು

೩. ಪರಾಮರ್ಶನ ಗ್ರಂಥಗಳು

೪. ತಿಳುವಳಿಕೆದಾರರ ವಿವರ

೫. ಛಾಯಾಚಿತ್ರಗಳು

ಕೋಷ್ಟಕ-೧

ಸಾಗರ ತಾಲ್ಲೂಕಿನ ಕ್ಷೇತ್ರಕಾರ್ಯಕ್ಕೆ ಆಯ್ದುಕೊಂಡ ಕಾಲೋನಿಗಳು ಕುಟುಂಬ, ಲಿಂಗಾವಾರು ಜನಸಂಖ್ಯೆ ಮತ್ತು ವಯೋಗುಂಪು

ನೆಲೆಗಳು	ಕುಟುಂಬ	ಜನಸಂಖ್ಯೆ			೦-೫			೬-೧೪			೧೫-೪೦			೪೧-೬೦			೬೧ ಮೇಲ್ಪಟ್ಟು		
		ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
ಹೊಸಗದ್ದೆ	೧೨	೨೩	೨೩	೪೬	೦೨	೦೨	೦೪	೦೨	೦೩	೦೫	೧೨	೧೦	೨೨	೦೩	೦೧	೦೪	೦೪	೦೫	೦೯
ಹಿರೇಮನೆ	೨೮	೪೬	೬೫	೧೧೧	೦೧	೦೩	೦೪	೦೫	೧೧	೧೬	೨೩	೩೪	೫೭	೧೩	೧೧೧	೨೭	೦೩	೦೪	೦೭
ಕುಡುಗುಂಜಿ	೪೦	೯೦	೬೮	೧೫೮	೦೯	೦೪	೧೩	೨೫	೧೭	೪೨	೩೫	೪೦	೭೫	೧೩	೦೫	೧೮	೦೮	೦೨	೧೦

ಕೋಷ್ಟಕ-೨

ಹಸಲರ ಭೂ ಹಿಡುವಳಿ		
	ಗುಂಟೆಗಳಲ್ಲಿ	ಕುಟುಂಬಗಳು
ಹೊಸಗದ್ದೆ	೧೦ ಗುಂಟೆಯಿಂದ ೧ ಎಕರೆ	೧
	೦೨ ರಿಂದ ೫ ಎಕರೆ	೦೭
	ಭೂ ರಹಿತರು	೦೪
		೧೨
ಹಿರೇಮನೆ	೧೦ ಗುಂಟೆಯಿಂದ ೧ ಎಕರೆ	೦೫
	೧ ರಿಂದ ೫ ಎಕರೆ	೧೪
	ಭೂ ರಹಿತರು	೦೯
		೨೮
ಕುಡಗುಂಜಿ	೧೦ ಗುಂಟೆಯಿಂದ ೧ ಎಕರೆ	೦೫
	೨ ರಿಂದ ೫ ಎಕರೆ	೧೦
	ಭೂ ರಹಿತರು	೨೫
		೪೦

ಕೋಷ್ಟಕ-೩

ಕೃಷಿ ಕೂಲಿಯಲಿ ತೊಡಗಿಸಿಕೊಂಡಿರುವ ಹಸಲರ ಲಿಂಗವಾರು ಪ್ರಮಾಣ				
ಸಂ	ನೆಲೆಗಳು	ಹೆಣ್ಣು	ಗಂಡು	ಒಟ್ಟು
೧.	ಹೊಸಗದ್ದೆ	೧೪	೧೫	೨೯
೨.	ಹಿರೇಮನೆ	೩೬	೪೮	೮೪
೩	ಕುಡಗುಂಜಿ	೪೭	೪೮	೯೫
		೯೭	೧೧೧	೨೦೮

ಕೋಷ್ಟಕ-೪

ಕ್ಷೇತ್ರಕಾರ್ಯಕ್ಕೆ ಆಯ್ದುಕೊಂಡ ಕಾಲೋನಿಗಳ ಹಸಲರ ಶೈಕ್ಷಣಿಕ ಮಟ್ಟ																					
	ಪ್ರಾಥಮಿಕ			ಪ್ರೌಢ			ಪದವಿಪೂರ್ವ			ಪದವಿ			ಸ್ನಾತಕೋತ್ತರ			ತಾಂತ್ರಿಕ ಶಿಕ್ಷಣ			ಒಟ್ಟು		
	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
ಹೊಸಗದ್ದೆ	೧	೧	೨	೧೧	೪	೫	೧	೨	೩	೨	-	೨	-	-	-	೧	-	೧	೧೬	೭	೨೩
ಹಿರೇಮನೆ	೧೭	೨೭	೪೪	೧೩	೨೦	೩೩	೫	೨	೭	೧	-	೧	೧	-	೧	-	-	-	೩೭	೪೯	೮೬
ಕುಡುಗುಂಜಿ	೩೫	೧೯	೫೪	೧೪	೬	೨೦	-	-	-	೧	೧	೨	-	-	-	-	-	-	೫೦	೨೬	೭೬

Table - 5

Distribution of Individual S.T. Population by Sex (State-Dist) 2001

State / District	Population	Male	Female
Karnataka	3,463,986	1,756,238	1,707,748
Shivamoga	55,967	28,435	27,562
State	**Persons**	**Male**	**Female**
Karnataka	20,820	10,237	10,583
Belgaum	1	1	
Bagalkota	1	1	
Bijapur	4	1	3
Gulbarga	23	12	11
Bider	3	2	1
Raichur	1	-	1
Uttar Karnataka	1,052	493	529
Davanagera	5	2	3
Shivamoga	6,754	3,378	3,376
Udupi	149	72	77
Chikkmagalur	11,949	5,842	6,107
Bengalore	66	35	31
Rural Bengalore	2	-	2
Hassan	775	359	416
Dakshina kannada	65	39	26

S.C. ಯಲ್ಲಿ ಬರುವ ಹಸಲ ಜನಸಂಖ್ಯೆ

Karnataka	692	328	364
Uttar Karnataka	71	35	36
Haveri	4	3	1
Shivmoga	170	76	94
Udupi	429	204	225
Chikkmaglur	8	4	4
Bengalore	5	3	2
Dakshina Kannada	4	2	2
Kodagu	1	1	2

Distribution of Individual S.T. Population by Sex (State-Dist) 2001

Table - 6

Land & People of Indian States & Union Territories in 36 volumes / S.C. Bhatt & Gopal K. Bhargava Kalpara Publication, Delhi – 2006

Statewise Distribution of Individual S.T. Population by Sex and literacy Rate (2001)

Tribe	Population	Male	Female	Literacy
All S.T.	Total – 3463986 Rural – 2934530 Urban – 529456	1756238 1486073 270165	1707748 1448457 259291	48.27 45.26 64.57
Hasalaru	Total – 20820 Rural – 20330 Urban – 490	10237 10006 231	10583 10324 259	56.62 52.94 79.78


Table - 7

S.T. Population Ratio w.rt Population – 2001

State / Dist, Sub Dist.	Population	Total	Rural	Urban
Shivmoga	1,642.545	3.41	4.07	2.17
Sagar	200.995	1.98	2.30	1.25
Soraba	185.572	3.66	3.71	2.25
Shikaripura	213.590	5.61	6.55	2.21
Hosanagar	115.000	1.68	1.66	2.02
Shivmoga	445.192	3.89	6.07	2.54
Bhardravati	338.989	3.44	4.73	2.00

೨. ನಕ್ಷೆಗಳು


ಕರ್ನಾಟಕ



ಶಿವಮೊಗ್ಗ ಜಿಲ್ಲೆ



ಸಾಗರ ತಾಲ್ಲೂಕು


ಸಿದ್ದಾಪುರ ತಾಲ್ಲೂಕು
ಸೊರಬ ತಾಲ್ಲೂಕು
ಶಿಕಾರಿಪುರ ತಾಲ್ಲೂಕು
ಶಿವಮೊಗ್ಗ ತಾಲ್ಲೂಕು
ಹೊನ್ನಾವರ ತಾಲ್ಲೂಕು
ಹೊಸನಗರ ತಾಲ್ಲೂಕು
ಕುಂದಾಪುರ ತಾಲ್ಲೂಕು

೩. ಪರಾಮರ್ಶನ ಗ್ರಂಥಗಳು

೦೧. ಅಂಬಳಿಕೆ ಹಿಯಣ್ಣ., ಮಲೆನಾಡ ಒಕ್ಕಲಿಗ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು: ೧೯೯೯

೦೨. ಕಾಳೇಗೌಡ ನಾಗವಾರ ಎನ್. ಹುಚ್ಚಪ್ಪ. (ಸಂ), ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು: ೨೦೦೦

೦೩. ಕುಮಾರರ ಕಕ್ಕಯ್ಯ ಪೋಳ., ಚಾತುರ್ವರ್ಣ ಧರ್ಮದರ್ಶನ, ತ್ವರಿತ ಮುದ್ರಣಾಲಯ, ಗದಗ: ೨೦೦೬

೦೪. ಕಮಲೇಶ ಕೆ.ಆರ್. (ಸಂ), ದೇಜಗೌ (ಪ್ರ.ಸಂ) ರಾಜಕೀಯ ಚಿಂತನೆ , ನಿಜಲಿಂಗಪ್ಪ ಪ್ರತಿಷ್ಠಾನ, ಬೆಂಗಳೂರು: ೨೦೦೩

೦೫. ಡೋಮನಿಕ್.ಡಿ., ಜಾಗತೀಕರಣ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು, ಸಖಿ ಪ್ರಕಾಶನ, ಹೊಸಪೇಟೆ: ೨೦೦೭

೦೬. ಕೃಷ್ಣ ಐಯ್ಯಂಗಾರ್.ಡಿ., ಕನ್ನಡ ನಾಡಿನ ಆದಿವಾಸಿಗಳು, ಮೈಸೂರು ರಾಜ್ಯ ವಾರ್ತಾಇಲಾಖೆ, ಮೈಸೂರು: ೧೯೫೧

೦೭. ಕೇಶವನ್ ಪ್ರಸಾದ್.ಕೆ., ಬುಡಕಟ್ಟು ವಿಸ್ಮಯ, ಅಭಿರುಚಿ ಪ್ರಕಾಶನ, ಮೈಸೂರು: ೨೦೦೫

೦೮. ಗಂಗಾಧರ ದೈವಜ್ಞ., ಬುಡಕಟ್ಟು ಹುಟ್ಟು ಸಾವಿನ ನಡುವೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೦

೦೯. ಚಂದ್ರಪ್ಪ ಎನ್., ಭಗವಾನ್ ಬಿರ್ಸ್ ಮುಂಡ, ಮುಂಡ ಪ್ರಕಾಶನ, ಬೆಂಗಳೂರು: ೨೦೦೦

೧೦ ಚೆಲುವರಾಜು., ಜುಂಜಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೧೯೯೮

೧೧. ಜಿ.ವಿ.ಡಿ., ಈಡಿಗರ ವಿವಾಹ ಪದ್ಧತಿ, ತೇಜಶ್ವನಿ ಪ್ರಕಾಶನ, ತುಮಕೂರು: ೧೯೮೩

೧೨. ತಪಸ್ವಿಕುಮಾರ.ನಂ., ಸಂಸ್ಕೃತಿ ವಿಕಾಸ, ಚೇತನ ಬುಕ್‌ಹೌಸ್, ಮೈಸೂರು: ೨೦೦೦

೧೩. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸಂ ರಾಮಕೃಷ್ಣ.ಜಿ (ಅನು), ಭಾರತ ದರ್ಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು: ೧೯೯೫

೧೪. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸಂ ರಾಮಕೃಷ್ಣ.ಜಿ (ಅನು), ಮಾತೆಯರು ಮಾನ್ಯರಾಗಿದ್ದಾಗ, ನವಕರ್ನಾಟಕ ಪ್ರಕಾಶನ, ಬೆಂಗಳೂರು : ೧೯೯೭

೧೫. ನಂಜಮ್ಮಣ್ಣಿ.ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ನಿರ್ದೇಶಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು: ೨೦೦೩

೧೬. ನಾಗಭೂಷಣ.ಟಿ.ಎಸ್.,ಲೋಹಿಯಾ ಸಮಾಜವಾದದ ದರ್ಶನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು: ೨೦೦೪

೧೭. ನಾಗೇಶ್.ಎಚ್.ವಿ., ಸಾಮಾಜಿಕ ಚಳುವಳಿಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ: ೧೯೯೯

೧೮. ನಾಗೇಶಗೌಡ.ಎಚ್.ಎಲ್., ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು: ೨೦೦೪

೧೯. ಪುಟ್ಟಯ್ಯ.ಬಿ.ಎಂ., ಧರ್ಮಾಮೃತ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೮

೨೦. ಪುಟ್ಟಯ್ಯ.ಬಿ.ಎಂ., ದಲಿತರು ಮತ್ತು ಭೂಮಿಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೮

೨೧. ಪ್ರಭಾಕರ್.ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೪

೨೨. ಪ್ರಭಾಕರ್.ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೨

೨೩. ಪ್ರಭಾಕರ್.ಎ.ಎಸ್., ಆದಿವಾಸಿ ಅಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ: ೨೦೦೬

೨೪. ಭಟ್ಟ.ಎಲ್.ಜಿ., ಹಸಲರು, ಐ.ಬಿ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು: ೧೯೮೮

೨೫. ಭಟ್ಟ.ಎಲ್.ಜಿ., ಹಸಲರು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು: ೧೯೯೩

೨೬. ಭಗವಾನ್ ಶರಣ ಉಪಾಧ್ಯಾಯ., ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು: ೨೦೦೪

೨೭. ಬೋರಲಿಂಗಯ್ಯ.ಹಿ.ಚಿ., ಗಿರಿಜನರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೧೯೯೪

೨೮. ಬೋರಲಿಂಗಯ್ಯ.ಹಿ.ಚಿ., ಮಂಟೆಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೧೯೯೭

೨೯. ಬೋರಲಿಂಗಯ್ಯ.ಹಿ.ಚಿ., ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೦

೩೦. ಬೋರಲಿಂಗಯ್ಯ.ಹಿ.ಚಿ., ಕಾಡು ಕಾಂಕ್ರಿಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡ್, ಸಾಗರ: ೧೯೯೫

೩೧. ಬೋರಲಿಂಗಯ್ಯ.ಹಿ.ಚಿ., ಗಿರಿಜನ ನಾಡಿಗೆ ಪಯಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು: ೧೯೯೧

೩೨. ಬೋರಲಿಂಗಯ್ಯ.ಹಿ.ಚಿ., ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ ಪಬ್ಲಿಕೇಷನ್, ಬೆಂಗಳೂರು: ೨೦೦೧

೩೩. ಬೋರಲಿಂಗಯ್ಯ.ಹಿ.ಚಿ., ಹುಚ್ಚಪ್ಪ ಮಾಸ್ತರ.ಎನ್, ಕಾಗೋಡು ಚಳುವಳಿ ಸುವರ್ಣ ಸಂಪುಟ, ವಿನಾಯಕ್ ಪ್ರಿಂಟರ್ಸ್, ಬೆಂಗಳೂರು: ೨೦೦೨

೩೪. ಮಂಜುನಾಥ ಬೇವಿನಕಟ್ಟಿ., ಆದಿವಾಸಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೭

೩೫. ಮೊಗಳ್ಳಿ ಗಣೇಶ್., ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೧೯೯೯

೩೬. ಮೇತ್ರಿ.ಕೆ.ಎಂ., ಬುಡಕಟ್ಟು ಕುಲಕಸಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೨

೩೭. ಮೋಹನ್‌ಕೃಷ್ಣ ರೈ.ಕೆ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೪

೩೮. ಮೋಹನ್‌ಕೃಷ್ಣ ರೈ.ಕೆ., (ಸಂ), ಪರಿಸರ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೨

೩೯. ಲಕ್ಕಪ್ಪಗೌಡ.ಎಚ್.ಜೆ., (ಸಂ), ಕರ್ನಾಟಕದ ಬುಡಕಟ್ಟು ಸಂಪುಟ-೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು: ೧೯೯೪

೪೦. ಶಂಕರ ನಾರಾಯಣ ಎಸ್.ಪಿ., ಸ್ವಾತಂತ್ರ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು : ೨೦೦೩

೪೧. ಸುಬ್ರಮಣ್ಯ.ಜಿ., ಭಾರತೀಯ ಸಮಾಜ, ಸ್ವಪ್ನ ಬುಕ್‌ಹೌಸ್, ಬೆಂಗಳೂರು: ೨೦೦೬

೪೨. ಶಂಕರರಾವ್.ಚ.ನ., ಭಾರತೀಯ ಸಮಾಜಶಾಸ್ತ್ರ ಚಿಂತನೆ, ಸಿದ್ದಲಿಂಗೇಶ್ವರ ಬುಕ್‌ಹೌಸ್, ಗುಲಬರ್ಗಾ: ೨೦೦೩

೪೩. ಹುಚ್ಚಪ್ಪ ಮಾಸ್ತರ್ ಎನ್., ಕಾಳೇಗೌಡ ನಾಗವಾರ, ಗಿರಿಜನ ಸಂಸ್ಕೃತಿ, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ: ೨೦೦೦

ಇಂಗ್ಲಿಷ್ ಗ್ರಂಥಗಳು

1. Abbe.J. Dubais, Hindu maneras, Custums and cermonies, Oxford at thee calarendon press.
2. Iyer L.K.A. The Mysore Trbies and castes, Mysore Govt press, 1978
3. Enthoven R.E.the Tribes and Castes of Bombay, Vol-II, Asian Education on Service New Delhi, 1992
4. Nanjundayya H.V. Iyer The Mysore Tribes and Caste V-II, Mysore Govt Press- 1928
5. Singh K.S. People of India, Nation seeris V-XXVI Part-2, The Seheduled Tribes, Neilobrin Oford University Press-2003

6. Srinivas M.N., Social changs in modern India, Allied Publication Bombay - 1966
7. Srinivas, M.N., Collected Essaya, Oxford University Press, New Delhi-1986

ಗ್ಯಾಜೆಟಿಯರ್

೧. ಸೂರ್ಯನಾಥ ಕಾಮತ್, ಕರ್ನಾಟಕ ಗ್ಯಾಜಿಟೆಯರ್, ಅಭಿಮಾನಿ ಪ್ರಕಾಶನ, ಬೆಂಗಳೂರು, ೧೯೯೬
೨. ಮಾಲತಿದಾಸ್ (ಸಂ), ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೫ ನ್ಯೂಕಾನ್‌ಸೆಪ್ಟ್ ಇನ್‌ಫರ್‌ಮೇಷನ್ ಸಿಸ್ಟಮ್, ನವದೆಹಲಿ, ೨೦೦೬
೩. ಅಭಿಶಂಕರ್.ಕೆ., ಶಿವಮೊಗ್ಗ ಜಿಲ್ಲಾ ಗ್ಯಾಜೆಟಿಯರ್, ಸರಕಾರಿ ಮುದ್ರಣಾಲಯ, ಬೆಂಗಳೂರು, ೧೯೭೫

ಪಿಎಚ್.ಡಿ. ಮತ್ತು ಎಂ.ಫಿಲ್ ಪ್ರಬಂಧಗಳು

೧. ಜಗದೀಶ ಕುಮಾರ, ಬೇಡಬುಡಕಟ್ಟಿನ ಬೇಟೆ ಆಚರಣೆಗಳು, (ಒಂದು ಸಮಾಜಶಾಸ್ತ್ರೀಯ ಅಧ್ಯಯನ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩
೨. ಹನುಮೇಶ.ಎಚ್., ಬದಲಾಗುತ್ತಿರುವ ಸಂದರ್ಭದಲ್ಲಿ ಡೊಂಬರ ಸಾಮಾಜಿಕ ಮತ್ತು ಆರ್ಥಿಕ ಜೀವನ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩. ಪ್ರಭಾಕರ್ ಎ.ಎಸ್., ಕರ್ನಾಟಕದ ಡೊಂಬರು ಒಂದು ಅಲೆಮಾರಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬
೪. ಬಸವರಾಜ ಎ.ಡಿ.ಕುಡುಬಿಯರ ಸಮಾಜಿಕ ಸಾಂಸ್ಕೃತಿಕ ಅಧ್ಯಯನ, (ಎಂ.ಫಿಲ್), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩
೫. ಬೋರಲಿಂಗಯ್ಯ.ಹಿ.ಚಿ., ಒಂದು ಬುಡಕಟ್ಟಿನ ಲೋಕದೃಷ್ಟಿ, (ಪಿಎಚ್.ಡಿ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦
೬. ವಿಜಯಲಕ್ಷ್ಮಿ.ಆರ್., ಲಂಬಾಣಿ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು, (ಎಂ.ಫಿಲ್ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪
೭. ಸುದರ್ಶನ್ ಕುಮಾರ ಎಂ., ಬದಲಾಗುತ್ತಿರುವ ಸಮಾಜದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಆರ್ಥಿಕ ಸ್ಥಿತಿ-ಗತಿ, (ಒಂದು ಸಮಾಜಶಾಸ್ತ್ರೀಯ ಅಧ್ಯಯನ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೮. ಲಕ್ಷ್ಮೀಪತಿ.ಜಿ., ಕರ್ನಾಟಕದ ಸಾಮಾಜಿಕ ಬದಲಾವಣೆ ಸಮಾಜಶಾಸ್ತ್ರೀ ಹಾಗೂ ಸಾಹಿತ್ಯ ನೋಡಿರುವ ಬಗೆ, (ಪಿಎಚ್.ಡಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೯. ಪ್ರಶಾಂತ್.ಎಚ್.ಡಿ., ಲಮಾಣಿಗರ ಸಾಮಾಜಿಕ ಬದಲಾವಣೆ, (ಪಿಎಚ್.ಡಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫. ತಿಳುವಳಿಕೆದಾರರ ವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ
ಹೊಸಗದ್ದೆ			
೧.	ಚೌಡಪ್ಪ ಬೆಳ್ಳೆಣ್ಣೆ	೬೦	ಕೆಲವು ದಿನಗಳ ಸರ್ಕಾರಿ ಸೇವೆ ನಂತರ ವ್ಯವಸಾಯ, ಕೂಲಿ
೨.	ದ್ಯಾವಪ್ಪ	೭೫	ಕೂಲಿ
೩.	ಬಿ.ಸಿ.ಕೃಷ್ಣಮೂರ್ತಿ	೨೪	ಶಿಕ್ಷಣ
೪.	ಕೊಲ್ಲೂರಮ್ಮ	೬೫	ಕೂಲಿ
೫.	ಇಂದಿರಾ	೩೬	ಗ್ರಾಮಪಂಚಾಯತಿ ಸದಸ್ಯೆ ಕೂಲಿ
೬.	ಅನಂತಮೂರ್ತಿ	೪೩	ವ್ಯವಸಾಯ
೭.	ಗಿಳಿಗೇರಾ ಗುತ್ತೆಪ್ಪ	೭೪	ಕೂಲಿ
೮.	ಸಂತೋಷ	೨೦	ಶಿಕ್ಷಣ (ತಾತ್ಕಾಲಿಕ ಕೂಲಿ)
೯.	ಎಂ.ಟಿ.ಮಂಜಪ್ಪ	೪೫	ಪರಿಚಾರಕ
೧೦.	ಭಾರತಿ	೪೦	ಅಂಗನವಾಡಿ ಶಿಕ್ಷಕಿ
ಹಿರೇಮನೆ			
೧೧.	ಎಚ್.ಜಿ.ರಾಜಗೋಪಾಲ	೫೫	ಕೂಲಿ
೧೨.	ಸಾವಿತ್ರಮ್ಮ	೪೯	ಅಂಗನವಾಡಿ ಸಹಾಯಕಿ
೧೩.	ಶ್ರೀಕಾಂತ	೪೦	ಪೋಸ್ಟ್‌ಮ್ಯಾನ್
೧೪.	ಸಾವಿತ್ರಮ್ಮ	೪೫	ಪರಿಚಾರಕಿ
೧೫.	ಉಮಾದೇವಿ	೪೦	ನರ್ಸ್
೧೬.	ಗೀತಮ್ಮ	೪೦	ತಾಲೂಕು ಪಂಚಾಯತ್ ಸದಸ್ಯರು
೧೭.	ಚಂದ್ರಪ್ರಭಾ (ಸುಧಾ)	೨೪	ನರ್ಸ್
೧೮.	ಸುರೇಶ	೨೮	ಕೂಲಿ
೧೯.	ರಾಮಪ್ಪ ಎಂ.ಜಿ.	೫೩	ಕೂಲಿ
೨೦.	ರಾಮಪ್ಪ	೩೮	ಮೆಕಾನಿಕ್
ಕುಡುಗುಂಜಿ			
೨೧.	ಕೃಷ್ಣ ಬಿನ್ ಕೂರಪ್ಪ	೫೪	ಕೂಲಿ
೨೨.	ಕುಮಾರ	೩೨	ಕೂಲಿ
೨೩.	ಗೌರಿ	೨೪	ಕೂಲಿ

೨೪. ಚೌಡ್ದು	೩೫	ಕೂಲಿ
೨೫. ಗಣಪಮ್ಮ	೮೩	ಕೂಲಿ
೨೬. ವಾಸು	೩೬	ವ್ಯವಸಾಯ
೨೭. ಪಾರ್ವತಿ	೩೦	ಮನೆಗೆಲಸ (ಗೃಹಿಣಿ)
೨೮. ರಾಮಣ್ಣ ಕುಡುಗುಂಜಿ	೬೫	ಕೂಲಿ (ಸಕ್ರೀಯ ರಾಜಕಾರಣ)
೨೯. ಗಣಪಿ	೫೫	ನಗರಸಭೆ ಸದಸ್ಯೆ
೩೦. ಕನ್ನಪ್ಪ	೫೦	ಕೂಲಿ

* * *

ಛಾಯಾಚಿತ್ರಗಳು



ಬದಲಾಗದ ಬದುಕು ಮನೆಮುಂದೇ ನಿಂತಿರುವ ಹಸಲರ ವೃದ್ದೆ



ಪಾರಂಪರಿಕವಾದ ಕೂಲಿಯನ್ನೆ ನಂಬಿ ಬದುಕುವ ಅನಿವಾರ್ಯತೆ
ಕೂಲಿ ಮಾಡುತ್ತಿರುವ ಹಸಲರು



ಕೆಲಸಕ್ಕೆ ಹೋಗಿ ಮರಳುತ್ತಿರುವ ಹಸಲರು



ಉದ್ಯೋಗ ಖಾತ್ರಿಯೋಜನೆಯಡಿ ದುಡಿಯುತ್ತಿರುವ ಹಸಲರು



ಆರ್ಥಿಕತೆಯನ್ನು ನಿರ್ಧರಿಸುವ ಭಗರ್ ಹುಕುಂ ಭೂಮಿ



ಅಂಗನವಾಡಿ ಶಾಲೆ ಶಿಕ್ಷಕಿ ಮತ್ತು ಹಸಲರ ಮಕ್ಕಳು



ಬದಲಾದ ಉಡುಪುಗಳಲ್ಲಿ ಹಸಲರ ಮಕ್ಕಳು



ಅಡಿಕೆ ಕೀಳಲು ಸಿದ್ದತೆ



ಬದಲಾಗದ ಕಾಲೋನಿಯ ರಸ್ತೆಯ ಮೇಲೆ ಬದಲಾದ ಹಸಲರ ಯುವತಿ ಸುಧಾ



ನಾನು ಗ್ರಾಮ ಪಂಚಾಯತ್ ಸದಸ್ಯೆ ಎನ್ನುತ್ತ ರಾಜಕೀಯವಾಗಿ ಬದಲಾವಣೆ
ಆಗಿರುವುದನ್ನು ಸೂಚಿಸುವಂತಿರುವ ಇಂದಿರಮ್ಮ



ನಾನು ಮಂಡಲ ಪಂಚಾಯತ್ ಸದಸ್ಯೆಯಾಗಿದ್ದೆ, ಇದು ನಮ್ಮ ಕುಟುಂಬ
ಎನ್ನುತ್ತಿರುವ ಸಾವಿತ್ರಮ್ಮ



ಹಸಲರಲ್ಲಿ ಮೆಟ್ರಿಕ್ ಪಾಸದ ಮೊದಲಿಗ